(*b*) Inamdars	...	10,344
Tenants	...	9,526

Information regarding the nature of tenancy and acreage of inam lands is not readily available.

(*c*) The total area of the inami land coming under the purview of the Hyderabad Abolition of Inams Act—1,12,387 acres.

Occupancy rights have been granted to Inamdars to the extent of 41,743 acres.

Occupancy rights have been granted to Tenants to the extent of 37,128 acres.

All the lands granted to the tenants are under their personal cultivation; but, it cannot be definitely stated whether the lands granted to the inamdars are under their (Inamdars) personal cultivation as there is provision in the Inam Abolition Act to grant patta in the name of the inamdars to the extent of 3 family holdings.

BUDGET ESTIMATES FOR 1963-64—DEMANDS FOR GRANTS

Demand No. 20 AGRICULTURE.

SRI G. NARAYANA GOWDA (Minister for Agriculture).—On the recommendation of the Governor of Mysore, I beg to move :

"That a sum not exceeding Rs 3,14,43,000 be granted to the Government to defray the charges which will come in course of payment during the financial year for the period ending on 31st day of March 1964 in respect of 'Agriculture'."

MR. SPEAKER.—Motion moved :

> "That a sum not exceeding Rs. 3,14,43,000 be granted to the Government to defray the charges which will come in course of payment during the financial year for the period ending on 31st day of March 1964 in respect of 'Agriculture'."

Not only Demand No. 20, but Demands Nos. 22, 38, 51, 21, 25 and 23 shall be deemed to have been moved, and they are all before the House for debate.

1-00 P.M.

Before I call upon anybody, I would like to know how many members would be desirous of participating and whether I should put any time-limit.

SRI C. J. MUCKANNPPA (Sira).—It has started today. Why should the Chair to put a time limit ?

MR. SPEAKER.—We are sitting for the whole of tomorrow also at six hours a day. In all there are twelve hours. This is a popular Demand in which everybody wants to participate Therefore, I must have some assessment.

I will fix 20 minutes and that, I think, would be reasonable.

HON'BLE MEMBERS.—Yes, Sir.

Sri G. V. GOWDA (Palya).—Sir, 30 minutes would be reasonable.

Mr. SPEAKER.—30 minutes means, only 12 speakers will be able to participate. I think 20 minutes should be sufficient.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಬೆಳಗ್ಗೆ 8½ ಯಿಂದಲೇ ಕುಳಿತು ಹಬ್ಬದ ಹಿಂದು ಮುಂದೆ ಟೈಂ ಅಡ್ಜಸ್ಟ್ ಮಾಡಿದರೆ ಅನುಕೂಲ.

Mr. SPEAKER.—I think the matter was considered and we agreed that we should sit for six hours a day, exclusive of the question hour. Originally we had 10½ hours and now we have got 12 hours.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇನ್ನೂ ಸ್ವಲ್ಪ ಜಾಸ್ತಿ ಮಾಡಿ.

Mr. SPEAKER.—More than 12 hours. Why did the members not suggest it yesterday ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬಹಳ ಜನ ಮಾತನಾಡಬೇಕಾಗಿರುವುದರಿಂದ 15 ನಿಮಿಷ ನಿಗದಿಮಾಡಿದರೆ ಒಳ್ಳೆಯದು.

Mr. SPEAKER.—I can't go on accepting every contradictory suggestion. Some Hon'ble Member suggests half-an-hour, when twenty minutes have been agreed to. And, another hon'ble member suggests fifteen minutes. I think 20 minutes is reasonable.

†ಶ್ರೀ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಅಧ್ಯಕ್ಷರೆ, ವರ್ಷಗಳು ಕಳೆದಹಾಗೆಲ್ಲಾ ಭೂಮಿಯು ನಿಸ್ಸಾರವಾಗಿ ಅದರಲ್ಲಿ ಬೆಳೆಯುವ ಬೆಳೆಯಲ್ಲಾ ಕಡಮೆಯಾಗುತ್ತಿರುವುದರ ಜೊತೆಗೆ ಸರಿಯಾದ ಕೃಷಿ ಸಹ ಇಲ್ಲದಂತಾಗಿ, ದನಕರುಗಳಿಗೆಸಹ ಸರಿಯಾದ ಮೇವು ಸಿಕ್ಕದೆ, ಬೆಳೆಯುವ ಮಕ್ಕಳಿಗೆ ಒಳ್ಳೆಯ ಹಾಲು ಸಾಕಾದಷ್ಟು ದೊರೆಯದೆ ದಿನೇದಿನೇ ಜನಾಂಗದ ಆಹಾರ ಸಹ ಕುಗ್ಗುವ ಸ್ಥಿತಿ ಪ್ರಾಪ್ತವಾಗಿದೆ. ನಮಗೆ ಸ್ವಾತಂತ್ರ್ಯ ಬಂದಕೂಡಲೆ ಹೊಟ್ಟೆ ತುಂಬ ಆಹಾರವನ್ನು ಉತ್ಪತ್ತಿ ಮಾಡಬೇಕೆಂಬುದಾಗಿ ಹೇಳಿದೆವು. ಅದಕ್ಕೆ ಮೊದಲನೆಯ ಸ್ಥಾನ ಕೊಡಬಹುದಾಗಿತ್ತು. ಆದರೆ ಹಾಗೆಮಾಡಿಲ್ಲ. ಈಗ ತುರ್ತು ಪರಿಸ್ಥಿತಿಯಲ್ಲಾದರೂ ಮೊದಲನೆಯ ಸ್ಥಾನ ಕೊಡುತ್ತೇವೆಂದು ನಮ್ಮ ಮುಂದೆ 3,14,43,000 ರೂಪಾಯಿಗಳ ಬೇಡಿಕೆಯನ್ನಿಟ್ಟಿದ್ದಾರೆ. ಇಷ್ಟು ಖರ್ಚಿನಿಂದ ಹೆಚ್ಚು ಬೆಳೆಯನ್ನು ಉತ್ಪತ್ತಿಮಾಡಿ ಕೊಡುವುದಾಗಿ ಹೇಳಿದ್ದಾರೆ. ಆದರೆ ಮೊನ್ನೆ ಶ್ರೀ ಕಂಠಿಯವರು ಕೆಲವು ಅಂಕಿ ಅಂಶ ಕೊಟ್ಟಿದ್ದಾರೆ, ಹೋದವರ್ಷ ಮತ್ತು ಈ ವರ್ಷ ಬೆಳೆದಿರುವ ಧಾನ್ಯ ಇಷ್ಟು ಎಂದು ತಿಳಿಸಿದ್ದಾರೆ. ಅದನ್ನು ನೋಡಿದರೆ ಜೋಳ, ಅಕ್ಕಿ, ಬಾಜ್ರ ಮುಂತಾದ ಆಹಾರ ಧಾನ್ಯಗಳ ಉತ್ಪತ್ತಿ ತಿಳಿಯುತ್ತದೆ. ಅದರ ಪ್ರಕಾರ ಒಬ್ಬ ಮನುಷ್ಯನಿಗೆ ವರ್ಷಕ್ಕೆ 145 ಸೇರು ಆಹಾರ ದೊರೆಯುತ್ತದೆ. ನಮ್ಮ ದೇಶಕ್ಕೆ ಅಕ್ಕಿ ಬಹಳವಾಗಿ ಬೇಕು. ಅದು ಅವರ ಲೆಕ್ಕದ ಪ್ರಕಾರ ಒಬ್ಬನಿಗೆ ಒಂದು ವರ್ಷಕ್ಕೆ 45 ಸೇರಿನಂತೆ ದೊರೆಯಬಹುದು. ಎಕರೆಯೊಂದಕ್ಕೆ 9 ಪಲ್ಲ ಬತ್ತ, 2 ಪಲ್ಲ ರಾಗಿ, 1¼ ಪಲ್ಲ ಜೋಳ ಈ ಪ್ರಕಾರ ಬೆಳೆಯಾಗಿದೆ. ಹೊರದೇಶಕ್ಕೆ ಈ ಅಂಕಿ ಅಂಶ ತಿಳಿದರೆ ವ್ಯವಸಾಯವು ಪ್ರಾಧಾನ್ಯವಾಗಿರುವ ನಮ್ಮ ದೇಶದಲ್ಲಿ ಇಷ್ಟುಮಾತ್ರ ಉತ್ಪತ್ತಿಯಾಗಿರುವುದನ್ನು ನೋಡಿ ಆ ದೇಶಗಳವರು ಯಾವ ಭಾವನೆ ತಾಳಬಹುದೆಂಬುದನ್ನು ಗಮನಿಸಬೇಕು. ಮೂರನೆಯದು ಸರ್ವೆ ಸೆಟ್ಲ್‌ಮೆಂಟ್, ಕಂದಾಯ ಹೆಚ್ಚಿಸಲು ಸರ್ವೆ ಮಾಡಿಸುತ್ತಾರೆ. ಅದಾದ ನಂತರ ಸರ್ವೆ ಮಾಡಿದವರು ಒದಗಿಸುವ ಅಂಕಿ ಅಂಶಗಳ ಪ್ರಕಾರ ಕಂದಾಯವನ್ನು ಒಂದಕ್ಕೆ ಎರಡರಷ್ಟು ವಿಧಿಸುತ್ತಾರೆ. ಆದರೆ ಈಗಿರುವ ಅಂಕಿಅಂಶಗಳಿಗೂ ನಾಳೆದಿವಸ ಸರ್ವೆಯಾದನಂತರ ದೊರೆಯುವ ಅಂಕಿಅಂಶಗಳಿಗೂ ವ್ಯತ್ಯಾಸ ಬರುತ್ತದೆ. ಆ ಕಾರಣದಿಂದ ಬೆಳೆಯಾಗುವುದನ್ನು ನೋಡಿ ಕಂದಾಯ ಹೆಚ್ಚುಕಡಮೆ ಮಾಡುವುದು ಸೂಕ್ತ. ನಮ್ಮ ವ್ಯವಸಾಯದ ಇಲಾಖೆ ಯಾವರೀತಿ ಕೆಲಸ ಮಾಡುತ್ತಿದೆಯೆಂಬುದು ಈಗ ದೊರೆತಿರುವ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಶ್ರೀ ನಾರಾಯಣಗೌಡರು ಮಂತ್ರಿಗಳಾದಮೇಲೆ ರೈತರಮೇಲೆ ಕಿರುಗಣ್ಣುಬಿಟ್ಟಹಾಗಾಗಿದೆ. ಪಂಪ್‌ಸೆಟ್ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಎಷ್ಟುಮಟ್ಟಿಗೆ ಕೊಡುತ್ತಾರೋ ಗೊತ್ತಿಲ್ಲ. ಮಾರ್ಚಿ ತಿಂಗಳಲ್ಲಿ ಕೊಡುವುದಾಗಿ ಹೇಳಿದ್ದರು. ಆದರೆ ಪಂಪ್‌ಸೆಟ್ಟುಗಳು ಕಾರ್ಖಾನೆಯಲ್ಲೇ ಇವೆ. ಅಮಲ್ದಾರರು 15 ದಿವಸಗಳಲ್ಲಿ ಒದಗಿಸುವುದಾಗಿ ಹೇಳಿದ್ದಾರೆ. ಎಷ್ಟುಮಟ್ಟಿಗೆ ಒದಗಿಸುತ್ತಾರೋ ಗೊತ್ತಾಗಿಲ್ಲ. ನಿಜವಾಗಿಯೂ ಮನಸ್ಸಿದ್ದರೆ ರೈತರಲ್ಲಿ ನಂಬಿಕೆಯಿಟ್ಟು ಪಂಪ್‌ಸೆಟ್ಟುಗಳನ್ನು ಬೇಗ ಒದಗಿಸಬೇಕು. ರೈತರು ರಾಜ್ಯದ ಬೆನ್ನುಮೂಳೆ ಎಂದು ಹೇಳುವಾಗ ಸಕಾಲದಲ್ಲಿ ಅವರಿಗೆ ಬೇಕಾದ ಪಂಪ್‌ಸೆಟ್ ವಗೈರೆ ಒದಗಿಸದಿದ್ದರೆ ಉದ್ದೇಶ ನೆರವೇರುವುದಿಲ್ಲ. ವ್ಯವಸಾಯ ಚೆನ್ನಾಗಿ

ನಡೆಯಬೇಕು. ಉತ್ಪತ್ತಿ ಹೆಚ್ಚಬೇಕು ಎಂದು ಹೇಳುವಾಗ ಇಲಾಖಾ ಡೈರೆಕ್ಟರುಗಳು ಮತ್ತು ಅಧಿಕಾರಿಗಳನ್ನು ಹೆಚ್ಚಿಸಿದರೆ ಸರ್ಕಾರದ ಹಣ ಖರ್ಚಾಗುವುದೇ ಹೊರತು ಉತ್ಪತ್ತಿ ಮಾತ್ರ ಹೆಚ್ಚುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತೇನೆ.

ಆಮೇಲೆ ಡೈರೆಕ್ಷನ್, ಸೂಪರ್‌ವಿಷನ್ ಸಿಬ್ಬಂದಿ ಮುಂತಾದ್ದಕ್ಕೆ 21,89,000 ರೂಪಾಯಿಗಳನ್ನು ಖರ್ಚುಮಾಡಬೇಕೆಂದಿದ್ದಾರೆ. ಈಗ ಗೊಬ್ಬರದ ಸರಬರಾಯಿ ಮಾಡುತ್ತಿದ್ದಾರೆ. ಆದರೆ ಯಾವ ಗೊಬ್ಬರ ಉಪಯೋಗಿಸಬೇಕೆಂಬುದೇ ತಿಳಿಯದಾಗಿದೆ. ಕೃತಕ ಗೊಬ್ಬರ ಈಗ ದೊರೆಯುತ್ತಿದೆ. ಅದನ್ನು ಫಲವತ್ತಾದ ಭೂಮಿಗೆ ಹಾಕಿದರೆ ಕಣ್ಣಿಗೆ ಮಣ್ಣೆರಚಿದಂತಾಗುತ್ತದೆ. ಒಂದು ವರ್ಷ ಅದನ್ನು ಹಾಕಿದರೆ ಚೆನ್ನಾಗಿ ಬೆಳೆಯಬಹುದು ಮುಂದೆ ಆ ಭೂಮಿ ಏನಾಗುತ್ತದೆಯೋ ಗೊತ್ತಿಲ್ಲ. ಎರಡನೆಯದು ಬೆಳಗೊಳ ಮುಂತಾದ ಕಡೆ ಅಮೋನಿಯಂ ಸಲ್ಫೇಟನ್ನು ತಯಾರಿಸುತ್ತಿದ್ದಾರೆ. ಆದರೆ ಯಾವ ಪರ್ಸೆಂಟೇಜ್ ಸಲ್ಫೇಟ್ ಇರಬೇಕೆಂಬುದನ್ನು ಸರಿಯಾಗಿ ನೋಡಿಲ್ಲ. ಬೆಳಗೊಳದಲ್ಲಿ ತಯಾರಾಗುವ ಗೊಬ್ಬರ ಉಪಯೋಗಿಸಿದರೆ ಇತರ ಕಂಪೆನಿ ಗೊಬ್ಬರಗಳ ಉಪಯೋಗದಿಂದ ಬೆಳೆಯುವಷ್ಟು ಬೆಳೆ ಬರುವುದಿಲ್ಲ. ಇದನ್ನು ಗಮನಿಸಬೇಕು ಅವರೆ ಬೆಳಗೊಳದವರಿಗೆ ಪ್ರೋತ್ಸಾಹ ಮಾಡುತ್ತಿದ್ದಾರೆ. ಅಲ್ಲದೆ ಮೈಸೂರು ದೇಶದಿಂದ ಹೊರಕ್ಕೆ ಗೊಬ್ಬರ ಅತಿಯಾಗಿ ಹೋಗುತ್ತಿದೆ. ಈ ಸಂಬಂಧದಲ್ಲಿ ಕಾಳಸಂತೆಸಹ ಆಗುತ್ತಿದೆ. ಇದರಿಂದ ನಮ್ಮ ದೇಶದ ಉಪಯೋಗಕ್ಕೆ ಹೆಚ್ಚು ಗೊಬ್ಬರ ದೊರೆಯುತ್ತಿಲ್ಲ. ಇದಕ್ಕೆ ಸಹಾಯಕವಾದ ಡೆಮಾನ್‌ಸ್ಟ್ರೇಷನ್, ಪ್ರಾಪಗ್ಯಾಂಡ ಈ ಕೆಲಸಗಳೆಲ್ಲಾ ಬೇಕಾದಷ್ಟು ಆಗುತ್ತಿವೆ ಎಂದು ಹೇಳಬಹುದು. ಬೆಳೆ ನೋಡಿದರೆ ಕ್ರಾಪ್ ಕಾಂಪಿಟೇಷನ್ ಮಾಡುತ್ತೀರಿ. ಅಂಕಿ ಅಂಶ ಹೇಳುವುದಾದರೆ ಒಂದು ಎಕರೆಗೆ 10-50 ಪಲ್ಲಾ ಬತ್ತ, ರಾಗಿ ಬೆಳೆಯುವ ಕಡೆ 15 ಪಲ್ಲಾ ಕೂಡ ಬೆಳೆಯುತ್ತಿಲ್ಲ. ಏಕೆ ಈ ರೀತಿ ಆಗುತ್ತದೆ ಎಂಬುದನ್ನು ತಾವು ನೋಡುವುದಿಲ್ಲ. ಎಷ್ಟುಮಟ್ಟಿಗೆ ಕ್ರಾಪ್ ಕಾಂಪಿಟೇಷನ್ ನಡೆಸುತ್ತೀರಿ. ಯಾವ ರೈತರಿಗೆ ಪ್ರೈಸ್ ಕೊಟ್ಟಿದ್ದೀರಿ, ಎಷ್ಟರಮಟ್ಟಿಗೆ ಉತ್ಸಾಹ ಮಾಡಿದ್ದೀರಿ ಎಂಬುದು ಇದರಿಂದ ಗೊತ್ತಾಗುತ್ತದೆ. ಈ ಇಲಾಖೆಯಲ್ಲಿ ನಾನು ಕಂಡಹಾಗೆ ಪ್ರವೀಣರು ಇದ್ದಾರೆ, ಬುದ್ಧಿವಂತರು ಇದ್ದಾರೆ, ಉತ್ಸಾಹಶಾಲಿಗಳು ಇದ್ದಾರೆ. ಆದರೆ ಅವರು ಯಾವ ರಿಸರ್ಚ್ ಕೆಲಸ ಮಾಡಬೇಕೋ ಅದಕ್ಕೆ ತಾವು ಅವಕಾಶ ಕೊಡುತ್ತಿಲ್ಲ. ನಿಮ್ಮ ಸಂಬಂಧಿಕರು ಯಾರೋ ಇದ್ದಾರೆ ಅವರಿಗೆ ಮುಂದೆ ಗ್ರೇಡು ಕೊಡಬೇಕು ಎಂಬ ದೃಷ್ಟಿಯಿಂದ ಬುದ್ಧಿವಂತರನ್ನು ರಿಸರ್ಚ್ ಕೆಲಸದಿಂದ ತೆಗೆದು ಯಾವುದೋ ಒಂದು ಕಡೆಗೆ ಅಡಿಕೆ ಗಿಡ ಹಾಕಿಸಿ ಎಂದು ಕಳುಹಿಸುತ್ತೀರಿ. ದಡ್ಡರನ್ನು ಎಕ್ಸ್‌ಪರಿಮೆಂಟ್ ಮಾಡಲು ಕಳುಹಿಸುತ್ತೀರಿ ಅವರಿಗೆ ತಿಳಿಯುವುದಿಲ್ಲ. ಅಲ್ಲದೆ ಕೆಲವರು ಒಂದು ಕಡೆ ಮೂರು ತಿಂಗಳು ಇದ್ದವರು ಎಷ್ಟೋ ಜನ ಬೇರೆ ಕಡೆಗೆ ವರ್ಗಮಾಡಿಸಿಕೊಂಡು ಹೋಗುತ್ತಾರೆ. ಇನ್ನು ಕೆಲವರು 4-5 ವರ್ಷ ಆದರೂ ಅಲ್ಲೇ ಇರುತ್ತಾರೆ. ಇದಕ್ಕೆ ಕಾರಣವೇನು ? Soil Conservation ಟ್ರೈನಿಂಗ್‌ಗೆ ಕಳುಹಿಸುತ್ತೀರಿ. ಅವರನ್ನು ನೇಮಕ ಮಾಡುತ್ತೀರಿ. ಮೂರು ಮೂರು ತಿಂಗಳಿಗೆ ವರ್ಗ ಮಾಡುತ್ತೀರಿ. ಇದರಿಂದ ಎಷ್ಟರಮಟ್ಟಿಗೆ ನಿಮ್ಮ ಉದ್ದೇಶ ಸಾಧನೆಯಾಗುತ್ತವೆ ಎಂಬುದನ್ನು ಯೋಚನೆ ಮಾಡಿ.

ಎಕ್ಸ್‌ಪರಿಮೆಂಟಲ್ ಅಂಡ್ ರಿಸರ್ಚ್ ಸ್ಟೇಷನ್ ಅಂತ 58 ಲಕ್ಷದ 76 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇಂಡಿಯಾ ಸರ್ಕಾರದ ದುಡ್ಡು ಬರುತ್ತದೆ ಎಂದು ಹೇಳುತ್ತೀರಿ. ಇಲ್ಲಿ ಏನಾಗಿದೆ ಎಂದರೆ ಎರಡು-ಮೂರು ಉದಾಹರಣೆ ಹೇಳುತ್ತೇನೆ. ನಮ್ಮ ಅರದಾಕೆರೆಯಲ್ಲಿ ಹತ್ತಿ ರಿಸರ್ಚ್ ಮಾಡಿ ಒಳ್ಳೆಯ ಹತ್ತಿ ಕೊಡುತ್ತೇವೆ ಎಂದು ಸರ್ಕಾರಿ ಆರ್ಡರ್ ಮಾಡಿಸಿಕೊಂಡರು. ಹತ್ತಿ ಬೆಳೆ ಹಾಕಿದರು. ಒಂದು ವರ್ಷ ಚೆನ್ನಾಗಿ ಬಂತು. ಒಳ್ಳೆಯ ಬೀಜ ಕೊಟ್ಟರು. ಎರಡು ಮೂರು ವರ್ಷ ಆದಮೇಲೆ ಬೀಜದ ಶಕ್ತಿ ಕಡಿಮೆಯಾಗುತ್ತಾ ಬಂತು. ಒಂದು ಪ್ರೆಸ್ ಅಂತ ಇಟ್ಟುಕೊಂಡರು. ಪ್ರೆಸ್‌ನಲ್ಲಿ ಇದ್ದಾಗ ಹತ್ತಿ ಜೊತೆಗೆ ಬೀಜವನ್ನಿಟ್ಟು ಹಾಗೆಯೇ ಬಿಟ್ಟಿದ್ದರಿಂದ ಬೀಜಕ್ಕೆ ಏಟು ಬಿದ್ದು ರೋಗ ಬಂತು, ಹಿಂದೆ ಹಣಕಾಸಿನ ಸಚಿವರಿಗೆ ಕೇಳಿದ್ದಕ್ಕೆ ಏನೋ ಕಡಿಮೆ ಆಗಿದೆ ಎಂದು ಬಹಳ ಹಗುರವಾಗಿ ಹೇಳಿದರು. ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ ಎಂದು. ಹಾಗಲ್ಲ ರೈತ ತನ್ನ ಭೂಮಿಯನ್ನು ಎರಡು ಮೂರು ಭಾಗ ಮಾಡುತ್ತಾನೆ, ಅವನು ಬೆಳೆಯುತ್ತಾ ಇದ್ದಂತೆ 60 ಮಣ ಹತ್ತಿ ಆಗುತ್ತಾ ಇದ್ದ ಕಡೆ 5 ಮಣ ಕೂಡ ಆಗಲಿಲ್ಲ. ಆದ್ದರಿಂದ ಅವನು ಇದರಿಂದ ಪ್ರಯೋಜನವಿಲ್ಲ. ಬೇಕಾದರೆ challenge ಮಾಡುತ್ತೇನೆ ಎಂದು ಹೇಳಲು ಪ್ರಾರಂಭಮಾಡಿದ. 1 ಲಕ್ಷ 40 ಸಾವಿರ ಮಣ ಹತ್ತಿ ಕಡಿಮೆಯಾಗಿರಬೇಕಾದರೆ ಕಾರಣವೇನು ; ಏನು ದೋಷ ಇದೆ ಎಂದು ಕೇಳುವುದು ನಿಮ್ಮ ಜವಾಬ್ದಾರಿ ಅಲ್ಲವೆ ! ಇದೇ ತರಹ ಅರಸೀಕೆರೆಯಲ್ಲಿ ಕೋಕೋನಟ್ ರಿಸರ್ಚ್ ಸ್ಟೇಷನ್ ಅಂತ ಪ್ರಾರಂಭ ಮಾಡಿದರು. ರಿಸರ್ಚ್ ಚೆನ್ನಾಗಿದೆ. ಹೀಗೆ ಹೀಗೆ ಮಾಡಬೇಕು, ಇಂತಿಂಥ ಬೀಜ ಬರಿಸಬೇಕು ಎಂದು ಹೇಳುತ್ತಾರೆ. ಈ ತರಹ ಕೆಲಸ ನಡೆಯುತ್ತಿದೆ ನೂರಾರು ಮೈಲಿ ಹೋಗಿ ಮರಗಳಿಗೆ ಗುರುತು ಹಾಕಿ ಬರುತ್ತಾರೆ. ಬೀಜದ ಕಾಲದಲ್ಲಿ ಮಾತ್ರ ಆಳುಗಳು ಹೋಗಿ ರಾತ್ರಿ ಹೊತ್ತು

(ಶ್ರೀ ಪಿ. ಬಿ. ಬೊಮ್ಮಣ್ಣ)

ಕಾಯಿ ಕುಯ್ದುಕೊಂಡು ಬರಬೇಕು. ಆ ರೀತಿ ಮಾಡಿದರೆ ಮಾತ್ರ ಬೀಜ ಬದುಕುತ್ತದೆ ಇಲ್ಲದೇ ಇದ್ದರೆ ಬದುಕುವುದಿಲ್ಲ. ಮೊನ್ನೆ ಮಿನಿಸ್ಟರು ಬಂದಾಗ ಈ ವಿಷಯ ಅವರ ಗಮನಕ್ಕೆ ತಂದೆ. 17,000 ಕಾಯಿಗಳನ್ನು ಹಾಕಿದ್ದರು ಅದರಲ್ಲಿ ಎಲ್ಲರಿಗೂ ಗೊತ್ತಿದೆ 200 ಕಾಯಿಗಳಿಗೆ ಮೊಳಕೆ ಬಂದಿದೆ. ತೆಂಗಿನಕಾಯಿ ಮೊಳಕೆ ಬರಬೇಕಾದರೆ ಆರು ತಿಂಗಳು ಬೇಕು ಕೇಳಿದರೆ ಸಮಾಧಾನ ಹೇಳುವುದು ಈ ಸಾರಿ ನೀರು ಇಲ್ಲದೇ ಹಾಗಾಯಿತು ಎಂದು ಹೇಳುತ್ತಾರೆ. ನಮ್ಮ ಅನುಭವದಲ್ಲಿರುವುದು ಅಟ್ಟದಮೇಲೆ ಕಟ್ಟಿ ಮೇಲೆ ನಾತು ಬಿಟ್ಟಿದ್ದರೆ ಮಳೆಗಾಲದಲ್ಲಿ ನೀರು ಬಂದು ಅಷ್ಟರಿಂದಲೇ ಮೊಳಕೆ ಬರುತ್ತದೆ. ಎಂದಮೇಲೆ ನೀರಿಲ್ಲ ಎಂದರೆ ಒಪ್ಪಿಕೊಳ್ಳುತ್ತೀರಾ; ಇಷ್ಟುಮಟ್ಟಿಗೆ ಮಾಡುತ್ತಾ ಇದ್ದಾರೆ ಎಂಬುದನ್ನು ನೀವೇ ತಿಳಿದುಕೊಳ್ಳಿ, ಏನು ಮಾಡಬೇಕೆಂದರೆ ಪೂತನಿ, ಕೃಷ್ಣನ ಕಥೆ ಜ್ಞಾಪಕಕ್ಕೆ ಬರುತ್ತದೆ. ಕೃಷ್ಣ ದೈವಪುರುಷ, ಆಕೆ ತಾಯಿ ವೇಷ ಹಾಕಿಕೊಂಡು ಎದೆ ಹಾಲು ಕೊಡುತ್ತೇನೆ ಎಂದು ಕೃಷ್ಣನನ್ನು ಅಪ್ಪಿಕೊಂಡರೂ ಕೂಡ ದೈವಾಂಶ ಪುರುಷನಾದ್ದರಿಂದ ಅವನಿಗೆ ಏನೂ ಆಗಲಿಲ್ಲ. ಆಕೆಯೇ ಸತ್ತು ಹೋದಳು, ಹಾಗೆ ಬಡವರು ರೈತರು ಕೃಷ್ಣ, ಪೂತನಿ ಆದ ಸರ್ಕಾರ ಕೊಟ್ಟ ತೆಂಗಿನ ಗಿಡವನ್ನು ಪರೀಕ್ಷೆ ಮಾಡಿಸಿ ಕೊಟ್ಟರೂ ಅದರಲ್ಲಿ ದೈವಾಂಶವಿರುವುದರಿಂದ ಅವರೇ ಗಿಡ ಬೆಳೆಸಿ ಕೊಳ್ಳುತ್ತಾರೆ. ಬೇಕಾದರೆ ನಿಮ್ಮ ಗಿಡಗಳನ್ನು ತೆಗೆದುಕೊಂಡುಬಂದು ನಿಮ್ಮ ಮನೆಯಲ್ಲಿ, ಬಂಗಲೆಯ ಮುಂದೆ ಹಾಕಿಕೊಳ್ಳಿ. ಸಿಟಿಗಳಲ್ಲಿ ಅಲಂಕಾರ ಮಾಡಿ ಅಥವಾ ಪಂಚಾಯಿತಿಗಳಿಗೆ ಕೊಡಿ ಖಂಡಿತ ಅವನ್ನು ರೈತರಿಗೆ ಕೊಡದಂತೆ ಏನಾದರೂ ಮಾಡಿ ತಪ್ಪಿಸಿ ಎಂದು ಈ ಸಂದರ್ಭ ದಲ್ಲಿ ಹೇಳುತ್ತೇನೆ.

ಅಗ್ರಿಕಲ್ಚರಲ್ ಎಜುಕೇಷನ್ ವಿಚಾರದಲ್ಲಿ 15 ಲಕ್ಷದ 16 ಸಾವಿರ ರೂಪಾಯಿ ಖರ್ಚು ಮಾಡು ತ್ತೀರಿ. ಬಹಳ ಒಳ್ಳೆಯದು, ಆದರೆ ವಿದ್ಯಾವಂತನಾಗಿ ಸ್ವತಃ ತಾನೇ ವ್ಯವಸಾಯ ಮಾಡಬೇಕೆನ್ನ ತಕ್ಕ ಹುಮ್ಮಸ್ಸು ಬರುವ ಹಾಗೆ ಆ ಎಜುಕೇಷನ್ ಇಲ್ಲ. ಯಾವನು ಬಂದರೂ ಸಹ ಫೀಲ್ಡ್‌ಮನ್ ಕೆಲಸ ಕೊಡಿ, ಇನ್ಸ್‌ಪೆಕ್ಟರ್ ಕೆಲಸ ಕೊಡಿ, ಸರ್ಕಾರಿ ಕೆಲಸ ಮಾಡುತ್ತೇನೆ ಎನ್ನುತ್ತಾನೆಯೇ ಹೊರತು ಸ್ವತಃ ವ್ಯವಸಾಯ ಮಾಡುವುದರ ಕಡೆಗೆ ಗಮನ ಕೊಡುವುದಿಲ್ಲ. ವಿದ್ಯಾವಂತರು ಸ್ವತಃ ವ್ಯವಸಾಯ ಮಾಡುವುದಕ್ಕೆ ಗಮನ ಕೊಡುವಂತೆ ಮಾಡಲು ಸರ್ಕಾರ ಪ್ರೋತ್ಸಾಹಿಸಬೇಕು.

ಅನಿಮಲ್ ಹಸ್ಬೆಂಡರಿ, ರೂರಲ್ ಡೆವಲಪ್‌ಮೆಂಟ್, ಕೋ-ಆಪರೇಷನ್ ಇದೆಲ್ಲಾ ನೋಡಿದರೆ ನಿಜವಾಗಿಯೂ ನಿಮಗೆ ದೇಶದಮೇಲೆ ಪ್ರೇಮ ಇದೆ ಎಂದು ಕಾಣುತ್ತದೆ. ನೀವು ಬಹಳ ಬೇಗ ದೇಶ ವನ್ನು ಮುಂದುವರಿಯುವಂತೆ ಮಾಡಲು ಸ್ಕೀಂಗಳನ್ನು ಹಾಕಿದ್ದೀರಿ. ಅದರಲ್ಲಿ ಲೋಪ ದೋಷ ಇಲ್ಲ. ಆದರೆ ಏಕೆ ಸರಿಯಾಗಿ ನಡೆಯುತ್ತಿಲ್ಲ ಎಂದರೆ ನನಗೆ ಅಮೇರಿಕದ ಇತಿಹಾಸ ಜ್ಞಾಪಕಕ್ಕೆ ಬರುತ್ತದೆ. ಅಮೆರಿಕಾ ದೇಶ ಕಂಡು ಹಿಡಿದ ಮೇಲೆ ಜನರು ಅಲ್ಲಿಗೆ ಹೋಗಿ ಸೇರಿಕೊಂಡರು, ಪ್ರಕೃತಿ ಸಂಪತ್ತು ಚೆನ್ನಾಗಿದೆ ಎಂದು ಅನೇಕ ಸ್ಕೀಂಗಳನ್ನು ಹಾಕಿದರು. ಅದೇ ರೀತಿ ನಾವು ಮಾಡಬೇಕೆಂದರೆ ಪ್ರಕೃತಿ ಸಂಪತ್ತು ನಮಗೆ ಅಷ್ಟು ಇಲ್ಲ. ಆದ್ದರಿಂದ ಒಂದೊಂದು ಸ್ಕೀಂವನ್ನು ಹಾಕಿ ಪೂರ್ತಿ ಮಾಡಿ ಇಲ್ಲದೇ ಇದ್ದರೆ ಇಂಡಸ್ಟ್ರಿಯಲ್ ಸ್ಕೀಂ ಹಾಕುವುದಕ್ಕೆ ಅವಶ್ಯವಿದ್ದರೆ ಅಮೆರಿಕಾಕ್ಕೆ ಹೋಗಿ ಬದುಕುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಾದರ್ೋಲಿ ನಿಮ್ನ ಪಂಗಡ).—ಮಾನ್ಯ ಸಭಾಪತಿಗಳೆ, ಈ ದಿವಸ ನಾನು ಸಭೆಯ ಮುಂದಿರತಕ್ಕ ವ್ಯವಸಾಯ ರೂರಲ್ ಡೆವಲಪ್‌ಮೆಂಟ್ ಮತ್ತು ಫಾರೆಸ್ಟ್ ಈ ಬಾಬಿಗಳ ಮೇಲೆ ಮಾತನಾಡಬೇಕೆಂದು ಇಚ್ಛೆ ಪಟ್ಟಿದ್ದೇನೆ.

ಈಗ ಮೊದಲನೇಯದಾಗಿ ಈ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯನ್ನು ವಿಚಾರ ಮಾಡುವು ದಾದರೆ-ಬಹಳ ಮಟ್ಟಿಗೆ ಈ ಇಲಾಖೆಯಲ್ಲಿ ಯಾವ ಕೆಲಸ ಕಾರ್ಯಗಳೂ ಯಾವ ಒಂದು ವ್ಯವ ಸ್ಥಿತ ರೀತಿಯಲ್ಲೂ ನಡೆಯುತ್ತಿಲ್ಲವೆಂದು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಪಶುಸಂಗೋಪನ ಮಾಡಬೇಕೆಂದು ಮಿಶ್ರತಳಿಯ ಒಂದು ನೂರು ಜರ್ಸಿ ಗೂಳಿಗಳನ್ನು ಅಮೇರಿಕಾದಿಂದ ತರಿಸ ಲಾಯಿತು. ಈ ಒಂದೊಂದು ರಾಸನ್ನು ತರಿಸಲಿಕ್ಕೆ ಸುಮಾರು ಹನ್ನೆರಡು ಸಾವಿರ ರೂ. ಗಳ ಖರ್ಚು ಬಂದಿದೆ. ಈಗ ಈ ರಾಸುಗಳಿಗೆ ರೆಂಡರ್ ಪೆಸ್ಟ್ ಡಿಸೀಜ್ ಬಂದಿದೆ. ಈ ರೋಗವನ್ನು ಹೇಗೆ ತಡಗಟ್ಟಬೇಕು, ಏನು ಕಾರ್ಯಕ್ರಮ ಕೈಗೊಳ್ಳಬೇಕು ಎನ್ನುವುದೊಂದನ್ನು ವಿಚಾರ ಮಾಡದೆ ಆ ಜರ್ಸಿ ದನಗಳ ಖಾಯಿಲೆಗೆ ಸರಿಯಾದ ಮದ್ದು ಕೊಡದೆ ಈಗಾಗಲೇ ಒಂಬತ್ತು-ಹತ್ತು ದನಗಳು ಸತ್ತುಹೋಗಿವೆ. ಇದು ಈ ದಿವಸ ರಾಜ್ಯ ಸರ್ಕಾರ ಒಂದು ಸೀರಿಯಸ್ ರೀತಿಯಲ್ಲಿ ವಿಚಾರ ಮಾಡ ತಕ್ಕದ್ದಾಗಿದೆ. ಇದರ ಬಗ್ಗೆ ಸರ್ಕಾರದವರು ತಕ್ಕ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಈಗ ಇನ್ನು ಆ ಖಾಯಿಲೆಯಿಂದ ಇಪ್ಪತ್ತು-ಮೂವತ್ತು ದನಗಳು ನರಳುತ್ತಿವೆ. ಅವು ಸಾಯುವ ಸ್ಥಿತಿಯಲ್ಲಿರುತ್ತವೆ. ಆದರೆ ಈ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೆಂದು ಆ ಡೈರೆಕ್ಟರರು ತಕ್ಕಕ್ರಮ

ಕೈಕೊಂಡಿಲ್ಲ. ಈ ದನಗಳ ಕಾಯಿಲೆ ನಿವಾರಣೆ ಬಗ್ಗೆ ಮೊದಲು ಏನೇನು ಕ್ರಮ ಕೈಗೊಳ್ಳಬೇಕೋ ಅವನ್ನು ಕೂಡಲೆ ಕೈಗೊಳ್ಳುವಂತೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸು ಬಗ್ಗೆ 1959ರಲ್ಲಿ ಸರ್ಕಾರದವರು ಒಂದು ಗೌರ್ನಮೆಂಟ್ ಆರ್ಡರನ್ನು ಹೊರಡಿಸಿದರು. ಆಗ ಇದನ್ನು ನೌಕರರುಗಳಲ್ಲಿ ಅಪ್ಲೈ ಮಾಡುತ್ತೇವೆಂತ ಹೇಳಿದರು. ಆದರೆ ಇಲ್ಲಿಯವರೆಗೂ ಅದನ್ನು ಅಪ್ಲೈ ಮಾಡಿರುವುದಿಲ್ಲ. ಹೀಗಾಗಿ ಈ ಅಸಿಮಲ್ ಹಸ್‌ಬೆಂಡ್ರಿ ಇಲಾಖೆಯಲ್ಲೂ ಇತರ ಕಡೆಗಳಲ್ಲೂ ಸೀನಿಯಾರ್ಟಿ ವಿಚಾರದಲ್ಲಿ ಬಹಳ ಧಕ್ಕೆ ಬಂದಿದೆ. ಈ ವಿಚಾರದಲ್ಲಿ ಅಸಮಾಧಾನಗೊಂಡ ಕೆಲವರು ಹೈಕೋರ್ಟಿಗೆ ರಿಟ್ ಹೋದದ್ದೂ ಉಂಟು. ಇಂಥಾ ಅಸಮಾಧಾನ ಈ ದಿವಸ ಅನೇಕ ಇಲಾಖೆಗಳಲ್ಲಿ ಉಂಟಾಗಿದೆ. ಆದ್ದರಿಂದ ಇದರ ಅಗತ್ಯತೆಯನ್ನು ಸರ್ಕಾರದವರು ನೋಡಿಕೊಳ್ಳಬೇಕೆಂದು ಸೂಚನೆ ಮಾಡುತ್ತಿದ್ದೇನೆ. ಈ ಸೀನಿಯಾರಿಟಿ ವಿಚಾರದಲ್ಲಿ ಇತ್ತೀಚೆಗೆ ಬಹಳ ಅನ್ಯಾಯವಾಗುತ್ತಿದೆ ಅಂತ ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಅದು ಇಲ್ಲಿ ಚರ್ಚೆಗೆ ಬಂದಿದ್ದಾಗ 1959ನೇ ಆಜ್ಞೆಯನ್ನೇ ನಾವು ಫಾಲೋ ಮಾಡುತ್ತಿದ್ದೇವೆ ಅಂತ ಮಾನ್ಯ ರೆವಿನ್ಯೂ ಮಂತ್ರಿಗಳು ಆ ದಿವಸ ಉತ್ತರ ಕೊಟ್ಟಿದ್ದಾರೆ. ಆದರೆ ಆ ವಿಷಯಕ್ಕೆ ಅವರು ಮನಸ್ಸನ್ನು ಕೊಟ್ಟ ಹಾಗೇ ಕಾಣುತ್ತಿಲ್ಲ. ಇಲ್ಲಿಯವರೆಗೂ ಅದನ್ನು ಇಂಪ್ಲಿಮೆಂಟೇ ಮಾಡಿಲ್ಲ.

ಇನ್ನು ಈ ಕುರಿಸಂಗೋಪನ ಕಾರ್ಯಕ್ಕಾಗಿ ಬೆಳಗಾವ, ಧಾರವಾಡ, ಚಿತ್ರದುರ್ಗ ಇತ್ಯಾದಿ ಕಡೆಗಳಲ್ಲೆಲ್ಲ ಈ ಕುರಿಗಳ ಅಭಿವೃದ್ಧಿಗಾಗಿ ಪ್ರತಿಯೊಂದು ಕಡೆಗೂ ಹತ್ತು ಸಾವಿರ ರೂ. ಗಳನ್ನು ಖರ್ಚುಮಾಡಿ ಅಲ್ಲಲ್ಲಿ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಆದರೆ ಆ ಕಟ್ಟಡಗಳಿರುವಲ್ಲಿ ಎಲ್ಲಿಯೂ ನೋಡಬೇಕೆಂದರೆ ಒಂದು ಕುರಿ ಸಹ ಸಿಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ಉಣ್ಣೆಯ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂತ ಈ ಕುರಿಗಳನ್ನು ಇಡಿರಿ ಎಂದು ಇಂಡಿಯಾ ಸರ್ಕಾರದವರು ಹೇಳಿದರು. ಮೊದಲು ಮೊದಲು ಎಲ್ಲೋ ಅಲ್ಲೊಂದು-ಇಲ್ಲೊಂದು ಕಡೆ ಎರಡು-ಮೂರು ಟಗರುಗಳನ್ನು-ಕುರಿಗಳನ್ನು ಇಟ್ಟರು. ಆದರೆ ಅವುಗಳಿಗೆ ತಕ್ಕ ಆಹಾರ ಇತ್ಯಾದಿಗಳನ್ನು ಒದಗಿಸಲು ಸಾಧ್ಯವಾಗದೆ- ದಿವಸ ಆ ಕಟ್ಟಡಗಳಿರುವ ಕಡೆ ಯಾವ ಕುರಿಗಳೂ ಇರುವುದಿಲ್ಲ. ಸರ್ಕಾರದವರು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಕೂಡಲೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂತ ಹೇಳುತ್ತೇನೆ.

ಇನ್ನು ಈ ಅಗ್ರಿಕಲ್‌ಚರಲ್ ಬಾಬಿಗೆ ಸಂಬಂಧಿಸಿದ ಮಿನಿಮಂ ವೇಜಸ್ ಆಕ್ಟನ್ನು ಎಲ್ಲ ಕಡೆಗಳಲ್ಲೂ ಇಂಪ್ಲಿಮೆಂಟ್ ಮಾಡಬೇಕೆಂತ ಹೇಳಲಾಗಿದೆ. ಆದರೆ ಈ ಬಗ್ಗೆ ಸರಿಯಾಗಿ ಲೆಕ್ಕ ಇಡಲು ಬೇಕಾದ ಖಾತೆ-ಖರದಿ-ಇತ್ಯಾದಿ ಪುಸ್ತಕಗಳನ್ನು ಕೊಳ್ಳಬೇಕೆಂದರೆ ಅವು 36 ರೂ. ಗಳ ಬೆಲೆಯಾಗುತ್ತದೆ. ಆದರೆ ಜನರಿಗೆ ಈ ಲೆಕ್ಕ ಯಾವ ರೀತಿ ಇಡಬೇಕೆಂಬುದು ಸಹ ಗೊತ್ತಿಲ್ಲ. ಆದಾಗ್ಗೂ ಈ ಲೆಕ್ಕದಲ್ಲಿ ತಪ್ಪುಗಳಿದ್ದರೆ ಅಂಥ ಮನುಷ್ಯನಿಗೆ ಶಿಕ್ಷೆ-ದಂಡ ವಿಧಿಸಬೇಕೆಂದು ಕಾನೂನಿನಲ್ಲಿ ಹೇಳಿರುತ್ತದೆ. ಕೇಂದ್ರ ಸರ್ಕಾರದವರೇನೋ ಈ ಮಿನಿಮಂ ವೇಜಸ್ ಆಕ್ಟನ್ನು ಎಲ್ಲ ರಾಜ್ಯಗಳಲ್ಲೂ ಜಾರಿಗೆ ತರಬೇಕೆಂದು ಹೇಳಿದ್ದಾರೆ. ಆದರೆ ಬೊಂಬಾಯಿ ರಾಜ್ಯದಲ್ಲಿ ಈ ಶಾಸನವನ್ನು ಅವರು ಇನ್ನೂ ಜಾರಿಗೆ ತಂದಿಲ್ಲ. ರೈತರಿನ್ನೂ ನಮ್ಮಲ್ಲಿ ಶಿಕ್ಷಣ ಹೊಂದಬೇಕಾಗಿದೆ. ಬೊಂಬಾಯಿ ರಾಜ್ಯದಲ್ಲಿ ಈ ವಿಚಾರವನ್ನು ಅವರು ಮಾಡಲಿಲ್ಲಾ ಅಲ್ಲಿ ಇದನ್ನಿನ್ನು ಅವರು ಜಾರಿಗೆ ತಂದಿಲ್ಲ. ಅದೇ ರೀತಿ ಇಲ್ಲಿಯೂ ನಮ್ಮ ಸರ್ಕಾರ ಇದನ್ನು ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಸಮಾಜ ಕಲ್ಯಾಣ ಖಾತೆಯಲ್ಲಿ ಹೌಸಿಂಗ್ ಗ್ರಾಂಟನ್ನು ಕೊಡುತ್ತಿದ್ದರು 1959ರಲ್ಲಿ ಒಂದೊಂದು ಮನೆಗೂ 400 ರೂ. ಗಳ ಸಬ್‌ಸಿಡಿ ಕೊಡಲಾಗುತ್ತಿತ್ತು. ಆಗ 85 ಸಾವಿರ ಮನೆಗಳಿಗೆ ಪ್ರಾವಿಜನ್ ಮಾಡಲಾಗಿತ್ತು. ಆದರೆ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಹೌಸಿಂಗ್ ಯೋಜನೆಯನ್ನು ತೆಗೆದುಕೊಂಡು ಒಂದು ಲಕ್ಷ 38 ಸಾವಿರ ಚಿಲ್ಲರೆ ರೂ. ಗಳಲ್ಲಿ 42,500 ಮನೆಗಳನ್ನು ಒದಗಿಸಲಾಯಿತು. ಇತ್ತೀಚೆಗೆ ಸರ್ಕಾರದವರು 1959ರಲ್ಲಿ ಒಂದು ಆರ್ಡರನ್ನು ಮಾಡಿ ಆ ಬೊಂಬಾಯಿ ರಾಜ್ಯದಲ್ಲಿ ಹರಿಜನರಿಗಾಗಿ ಏನೊಂದು ಪೋಸ್ಟ್ ವಾರ್ ರಿ ಕನಸ್ಟ್ರಕ್ಷನ್ ಯೋಜನೆಯೆಂದು ಅವರು ಅಲ್ಲಿ ಕೈಗೊಂಡಿದ್ದರೋ-ಹಾಗೆ ಇಲ್ಲಿಯೂ ಮಾಡಬೇಕೆಂತ ಮಾಡಿದರು. ಆದರೆ ಅದು ಯಾವ ರೀತಿಯಲ್ಲೂ ಸಕ್‌ಸಸ್ ಆಗಲಿಲ್ಲ. ಈ ದಿವಸ ಜನರು ಹೌಸಿಂಗ್ ಸೈಟ್ ಸಹ ಸಿಗದೆ ನರಳಬೇಕಾಗಿದೆ. ಆದರೆ ಆ ಆರ್ಡರನ್ನು ಇಲ್ಲಿ ಅಪ್ರೂವ್ ಮಾಡಿದ್ದರೂ ಅದನ್ನು ಜಾರೀಲಿ ಅನ್ವಯಿಸುತ್ತಿಲ್ಲ ಎಂತ ಕಾಣುತ್ತಿದೆ. ಈ ದಿವಸ ಬೊಂಬಾಯಿ ರಾಜ್ಯದಲ್ಲಿ ಪೋಸ್ಟ್ ವಾರ್ ರಿ ಕನ್‌ಸ್ಟ್ರಕ್ಷನ್ ಸ್ಕೀಂ 219 ಪ್ರಕಾರ ಸೈಟುಗಳನ್ನು ಮಾಡಿ ಪ್ರತಿ ಸೈಟಿಗೂ ಮನೆ ಕಟ್ಟಲು 1,500 ರೂ. ಗಳಿಂದ 3 ಸಾವಿರ ರೂ. ಗಳ ಸಾಲವನ್ನು ಮಂಜೂರು ಮಾಡಿ, ಆ ಸಾಲವನ್ನು ಇಪ್ಪತ್ತು ವರ್ಷಗಳಲ್ಲಿ ಸುಲಭ ಕಂತುಗಳ ಮೂಲಕ ಮರುಕಟ್ಟಿಸಬೇಕೆಂದು ಒಂದು ವ್ಯವಸ್ಥೆ ಮಾಡಲಾಗಿದೆ. ಈ ಸಾಲಕ್ಕೆ ಅವರು ಹೊಸದಾಗಿ ಕಟ್ಟತಕ್ಕ ಮನೆಯೇ ಸೆಕ್ಯೂರಿಟಿ ಆಗಿ ಇರುತ್ತದೆ. ಇಂಥ ಒಂದು ಏರ್ಪಾಡನ್ನು ಆ ಮುಂಬೈ ರಾಜ್ಯದಲ್ಲಿ ಮಾಡಿದ್ದುಂಟು. ಆದರೆ ಇಲ್ಲಿ ನಮ್ಮ ಹರಿಜನರಿಗೆ ಹತ್ತು-ಹನ್ನೆರಡು ವರ್ಷಗಳಿಂದ ಯಾವ ಸೌಕರ್ಯವೂ ಸಿಕ್ಕಲಿಲ್ಲ.

(ಶ್ರೀ ಜೆ. ಎಲ್. ಕಬಾಡಿ)

ಇನ್ನು ನಮ್ಮ ರಾಜ್ಯಾಂಗದ ಆರ್ಟಿಕಲ್ 16 (4) ರ ಪ್ರಕಾರ ಪ್ರಮೋಷನಲ್ ಕೇಡರಿನಲ್ಲಿ ವೇಕೆನ್ಸಿಯಿದ್ದರೆ ಹರಿಜನರಿಗೆ ಆ ವೇಕೆನ್ಸಿಗಳಲ್ಲಿ ಪ್ರಮೋಟ್ ಮಾಡಬೇಕೆಂದು ಈಗಾಗಲೆ ಸುಪ್ರೀಂ ಕೋರ್ಟಿನ ಆಜ್ಞೆಯಾಗಿದೆ. ಆಂಧ್ರ ರಾಜ್ಯದಲ್ಲಿ ಸರ್ಕಾರ ಈಗಾಗಲೇ ಈ ಕ್ರಮ ಕೈಗೊಂಡು ಹರಿಜನರಿಗೆ ಪ್ರಮೋಷನ್‌ಗಳನ್ನು ಕೊಡುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಕ್ರಮ ಕೈಗೊಳ್ಳಲು ಅಡ್ಡಿ ಏನಿದೆ ಎಂಬುದನ್ನು ಸರ್ಕಾರ ತಿಳಿಸಬೇಕು. ಸರ್ಕಾರ ಈ ವಿಚಾರದಲ್ಲಿ ಏನೂ ಕ್ರಮ ಕೈಗೊಂಡಿಲ್ಲ. ನಾನೇ ಈ ವಿಚಾರವನ್ನು ಪ್ರಶ್ನೋತ್ತರ ಕಾಲದಲ್ಲಿ ಒಂದು ಉಪ ಪ್ರಶ್ನೆ ಹಾಕಿದ್ದಾಗ ನಮ್ಮ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರಿಂದ ಏನೂ ಆಜ್ಞೆ ಬಂದಿಲ್ಲ ನಿರೀಕ್ಷಣೆ ಮಾಡುತ್ತಿದ್ದೇವೆ ಎಂತ ಉತ್ತರ ಹೇಳಿಬಿಟ್ಟರು. ಈ ಆಜ್ಞೆಯನ್ನು ಕೇಂದ್ರ ಸರ್ಕಾರದವರು ಕ್ಲಾಸ್ ಒಂದು ಮತ್ತು ಕ್ಲಾಸ್ ಎರಡನೆ ದರ್ಜೆ ಹುದ್ದೆಗಳಿಗೆ ಅನ್ವಯಿಸಬೇಕೆಂದು ರಾಜ್ಯ ಸರ್ಕಾರಗಳಿಗೆ ಒತ್ತಾಯ ಮಾಡುತ್ತಿದ್ದರೂ, ರಾಜ್ಯ ಸರ್ಕಾರದವರು ಈ ಬಗ್ಗೆ ಎಫಿಷಿಯನ್ಸಿ ಬಾರ್ ಇದೆ ಎಂತ ಹೇಳುತ್ತಿದ್ದಾರೆ. ಆದರೆ ಆ ಸುಪ್ರೀಂ ಕೋರ್ಟಿನ ತೀರ್ಪನ್ನು ಮೂರು ಮತ್ತು ನಾಲ್ಕನೇ ದರ್ಜೆ ನೌಕರಿಗಳಿಗೆ ಅನ್ವಯಿಸಬಹುದೆಂದು ಇಲ್ಲೀಗ ಹೇಳುತ್ತಿದ್ದಾರೆ. ಹೀಗೆ ಇತ್ತೀಚೆಗೆ ಇಲ್ಲಿ ಕೆಲವೊಂದು ವಿಚಾರಗಳು ನಡೆಯುತ್ತಿವೆ. ಈಗ ಈ ಕ್ಲಾಸ್ ಮೂರಕ್ಕೂ ಮತ್ತು ನಾಲ್ಕಕ್ಕೂ ಕೆಲವು ಕೇಡರುಗಳಲ್ಲಿ ಪೇ ವ್ಯತ್ಯಾಸವಿದೆ. ಅದನ್ನು ನಮ್ಮ ಸರ್ಕಾರದವರಿಗೆ ವಿಚಾರ ಮಾಡಿ ಆ ಕ್ಲಾಸ್ ಮೂರಕ್ಕೂ ಮತ್ತು ನಾಲ್ಕಕ್ಕೂ ಪೇನಲ್ಲಿರತಕ್ಕ ಡಿಫರೆನ್ಸನ್ನು ಸರಿಮಾಡಿದರೆ ಆಗ ಕ್ಲಾಸ್ ನಾಲ್ಕರಿಂದ ಕ್ಲಾಸ್ ಮೂರಕ್ಕೆ ಇವರಿಗೆ ಪ್ರಮೋಷನ್ ಕೊಡಬಹುದೆಂಬ ಒಂದು ವಿಚಾರ ನಡೆಯುತ್ತಿದೆ. ಆದರೆ ಸರ್ಕಾರದವರೇನು ಈಗ ಕ್ಲಾಸ್ ಮೂರರಿಂದ ಕ್ಲಾಸ್ ಎರಡಕ್ಕೂ ಮತ್ತು ಕ್ಲಾಸ್ ಒಂದಕ್ಕೂ ಪ್ರಮೋಷನ್ ಕೊಡಲು ಎಫಿಷಿಯನ್ಸಿ ಬಾರ್ ಇರುತ್ತೆಂದು ಹೇಳುತ್ತಿದ್ದಾರೋ ಅದು ಸರಿಯಾದ್ದಲ್ಲ. ಆ ಆಜ್ಞೆ ಎಲ್ಲ ಕ್ಲಾಸ್ ನೌಕರಿಗಳಿಗೂ ಅನ್ವಯಿಸುತ್ತದೆ. ಆದ್ದರಿಂದ ಈ ವಿಚಾರವನ್ನು ನಮ್ಮ ಸರ್ಕಾರ ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ಸೌಳು ಭೂಮಿ ಜಾಸ್ತಿ ಇರುತ್ತದೆ. ನಮ್ಮ ಬಿಜಾಪುರ ತಾಲ್ಲೂಕದಲ್ಲಿ ಹೊನ್ನವಾಡ ತಿಗಣಿ ಬಂದಿ ಇತ್ಯಾದಿ ಕೆಲವು ಗ್ರಾಮಗಳೂ ಮತ್ತು ಬಾದಾಮಿ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳೂ, ಬಾಗೇವಾಡಿ ತಾಲ್ಲೂಕಿನಲ್ಲಿ ಬದ್ರಿ ಇತ್ಯಾದಿ ಕೆಲವು ಗ್ರಾಮಗಳು ನೀಲಗುಂದ ಇಂಡಿ ತಾಲ್ಲೂಕಿನಲ್ಲಿ ಅಂಜುಟಗಿ ಇತ್ಯಾದಿ ಗ್ರಾಮಗಳಲ್ಲಿ ಈ ಸೌಳು ಭೂಮಿ ಬಹಳ ಹೆಚ್ಚಾಗುತ್ತಿದೆ. ಈ ಬಗ್ಗೆ ಸರ್ಕಾರದವರು ಕೂಡಲೇ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆ ಹೊನವಾಡ ಇತ್ಯಾದಿ ಗ್ರಾಮಗಳ ಕಡೆ ಇರತಕ್ಕ ಜನರು ಈ ಸೌಳು ಭೂಮಿಯನ್ನು ನಿವಾರಿಸಬೇಕಾದರೆ ಈ ಭೂಮಿಯ ಮೇಲೆ ಹೆಚ್ಚು ನೀರು ನಿಲ್ಲದಂತೆ ಮಾಡಬೇಕಾದರೆ ಎತ್ತರವಾಗಿ ಬಿಜಾಪುರ-ಮೀರಜ್ ರೋಡ್ ಮೇಲೆ ಪೂಲ (ಬ್ರಿಡ್ಜ್) ನ್ನು ಕಟ್ಟಿದರೆ ಸವಳು ಎಲ್ಲಿ ಹರಿದು ಹೋಗುತ್ತದೆ. ಈಗ ಬಂದ ನೀರನ್ನು ತಡೆಗಟ್ಟಿ ನಿಲ್ಲುವಂತಾದ್ದರಿಂದ ಹಿಂದಿನ ಭೂಮಿ ಸವಳು ಆಗುತ್ತ ನಡೆದಿದೆ. ಇದನ್ನು ಹೀಗೆ ಎತ್ತರವಾದ ಪೂಲನ್ನು ಕಟ್ಟಿಸಿದರೇನೆ ಕಡಮೆಯಾಗುತ್ತದೆ ಅಂತ ಹೇಳುತ್ತಿದ್ದಾರೆ. ಇದು ಅಲ್ಲದೆ ಸರ್ಕಾರದವರು ಇದಕ್ಕೆ ಸಹಾಯಕವಾಗುವಂತೆ ಬುಲ್‌ಡೋಜರ್ಸ್ ಹಾಗೂ ಟ್ರ್ಯಾಕ್ಟರುಗಳನ್ನು ಅಲ್ಲಿಗೆ ಒದಗಿಸಿ ರಿಕ್ಲಮೇಷನ್ ಕೆಲಸ ಕೈಗೊಂಡರೆ ಒಳ್ಳೆಯದಾಗುತ್ತದೆ. ಈ ಕಾರ್ಯವನ್ನು ಸರ್ಕಾರದವರು ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಅತ್ತಕಡೆ ಈ ಕೋರಿ ಹುಳ ಮತ್ತು ಮಿಡತೆಗಳ ಕಾಟ ಜಾಸ್ತಿಯಾಗಿದೆ. ಅವುಗಳಿಗೆ ಆ ಹುಡಿ ಔಷಧಿ ಹೊಡೆಯುವ ಏರ್ಪಾಡನ್ನು ಮಾಡಬೇಕಾಗಿದೆ. ಈ ರೀತಿ ಹುಡಿ ಔಷಧ ಹೊಡೆಯತಕ್ಕ ಕಾರ್ಯವನ್ನು ಒಂದು ಲಕ್ಷ ಎಕರೆಗಳಿಗೆ ಒದಗಿಸಲಾಗಿದೆ ಎಂಬುದನ್ನು ಮೊನ್ನೆ ಹೇಳಿದ ಭಾಷಣದಲ್ಲಿ ಕೇಳಿದ್ದೇನೆ. ಜಿಲ್ಲೆಗಳಲ್ಲಿ ಈ ಕಾರ್ಯವನ್ನು ಜಾಗ್ರತೆ ಸಾಧಿಸಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

1-30 P. M.

ಸಮಾಜ ಕಲ್ಯಾಣ ಇಲಾಖೆಗೆ 1960-61 ರಲ್ಲಿ 40 ಲಕ್ಷ ಮತ್ತು 1961—62 ರಲ್ಲಿ 50 ಲಕ್ಷ ಹಣವನ್ನು ಕೊಟ್ಟಿದ್ದಾರೆ. ಆದರೆ ಇದರ ಉಪಯೋಗ ಎಷ್ಟರ ಮಟ್ಟಿಗೆ ಆಗಿದೆ ಎಂದು ಕೇಳಬೇಕಾಗಿದೆ. Agriculture scheme ಸಲುವಾಗಿ ನೋಡಿದರೆ 37 ಸ್ಥಳಗಳಲ್ಲಿ ಹೊಸ ಮೈಸೂರಿನಲ್ಲಿ ಕೊಟ್ಟಿದ್ದರೆ, 75 ಸ್ಥಳಗಳಲ್ಲಿ ಹಳೆಯ ಮೈಸೂರಿನಲ್ಲಿ ಕೊಟ್ಟಿದೆ. ಇದರಿಂದ ಎಷ್ಟು ಅನ್ಯಾಯ

ವಾಗುತ್ತದೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ನೋಡಬೇಕಾಗುತ್ತದೆ. ನಾನು ಒಂದು ಸಲ State Level Advisory Committee ಯಲ್ಲಿ ಮಂತ್ರಿಗಳಿಗೆ ವಿನಂತಿ ಮಾಡಿಕೊಂಡಿದ್ದೇನೆ. ಜನಸಂಖ್ಯೆಯ ಆಧಾರದ ಮೇಲೆ ಹಣ ಹಂಚಿದರೆ ನಮ್ಮ ತಕರಾರಿಲ್ಲ. ಯಾವ ಪ್ರಭಾವಕ್ಕೂ ಒಳಗಾಗದೆ ಜನಸಂಖ್ಯೆಯ ಆಧಾರದ ಮೇಲೆ ಎಲ್ಲ ಕಡೆಗೂ ಹಣ ಹಂಚಬೇಕು. ಪ್ರಭಾವಕ್ಕೆ ಒಳಗಾಗಿ ಹಣವನ್ನು ಹಂಚುವುದಾದರೆ ಸಮತೋಲನ ದೃಷ್ಟಿಯಿಂದ ನೋಡಿದ ಹಾಗೆ ಆಗುವುದಿಲ್ಲ, ಆ ದೃಷ್ಟಿಯಿಂದ..............

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು).—ಸ್ವಾಮಿ, ಇದರಲ್ಲಿ rural development ಎಂದು ಇದೆ, Social Welfare Deprtment Miscellaneous ನಲ್ಲಿ ಬರುತ್ತದೆ. ಈ ವಿಚಾರಗಳನ್ನು Social Welfare Department ಬೇಡಿಕೆ ಬಂದಾಗ ಮಾತನಾಡಬಹುದು. ಈಗ ಸಭೆಯ ಮುಂದಿರುವ ಬೇಡಿಕೆಗಳ ವಿಚಾರ ಮಾತನಾಡಿದರೆ ಉತ್ತಮವೆಂದು ಹೇಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.—ಗ್ರಾಮೀಣ ಅಭಿವೃದ್ಧಿಗಳಿಗಾಗಿ ಹೇಳಬೇಕಾದ್ದು ಹೇಳಿದೆ, ತಿಳಿಯಿರಿ. ಸ್ವಾಮಿ, ಅರಣ್ಯಗಳ ವಿಷಯದಲ್ಲಿ ಕೆಲವೊಂದು ಸೂಚನೆ ಮಾಡಲಿಕ್ಕೆ ಇಚ್ಛಿಸುತ್ತೇನೆ. ಈಗ ಅಲ್ಲಲ್ಲಿ ಹವಾಮಾನವನ್ನನುಸರಿಸಿ ಯಾವ ಯಾವ ಗಿಡಗಳನ್ನು ನಡೆಸಬೇಕೋ ಆ ರೀತಿ ಮಾಡುತ್ತಿಲ್ಲ. ಬೆಳಗಾಂವ ಜಿಲ್ಲೆಯಲ್ಲಿ Cashewnut ಬೆಳೆಸುತ್ತೇವೆಂದರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿಯ ಹವೆ ಆ ಬೆಳೆಗೆ ಒಗ್ಗುವುದಿಲ್ಲ. ಈ ರೀತಿ ಬೆಳೆಸಿದರೆ ಗಿಡಗಳು ನಷ್ಟವಾಗಿ ಹೋಗುವುದು. Rules and Regulations ಎಲ್ಲ ಕಡೆಗೂ ಜಾರಿ ಮಾಡಿದರೂ ಸಹಿತ ಒಂದು system of work ಅರಣ್ಯ ಇಲಾಖೆಯಲ್ಲಿಲ್ಲ.

ಅರಣ್ಯ ಇಲಾಖೆಯ ಸಂಬಂಧದಲ್ಲಿ Seniority list ಕೇಂದ್ರ ಸರ್ಕಾರದಿಂದ ಬಂದಿದ್ದರೂ ಕೂಡ ಅದನ್ನು ಹಿಂದಕ್ಕೆ refer ಮಾಡುವಂಥ ಯೋಚನೆ ಏಕೆ ಬಂದಿದೆ, ಏನು ತಕರಾರು ಬಂತು ? ಇದಕ್ಕೆ ಅರಣ್ಯ ಖಾತೆಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Fire fiighters ವಿಚಾರ ಹೇಳುವುದಾದರೆ ಅರಣ್ಯದಲ್ಲಿ ಅನಾಹುತಗಳು ಆಗುವ ಸಂಭವ ವಿರುವುದರಿಂದ fire fighters ಬೇಕು. ಸೇನವಾಳ, ಕಿಬ್ಬಳ್ಳಿ, ಭಾಗಕ್ಕೆ fire fighters ಬೇಕು. ವರ್ಷಕ್ಕೆ ಎರಡು ಸಲ ಟೆಂಡರ್ ಮಾರಾಟ ಮಾಡುತ್ತಾರೆ. ಅದರ ಜೊತೆಯಲ್ಲಿ ಇತರ ಮರಗಳನ್ನು ಹರಾಜು ಮಾಡುವ ಪದ್ಧತಿ ಹಳೇ ಮೈಸೂರಿನಲ್ಲಿದೆ. ಮುಂಬೈ ಕರ್ಣಾಟಕದಲ್ಲಿದ್ದಂಥ ಪದ್ಧತಿ ಏನಿದೆ ಆ ಪ್ರಕಾರ ಮಾಡಿದರೆ ಹೆಚ್ಚಿನ ಫಾಯಿದೆ ನಮ್ಮ ಸರ್ಕಾರಕ್ಕೆ ಆದೀತು ಎಂದು ಸೂಚನೆ ಮಾಡುತ್ತಿದ್ದೇನೆ.

Afforestation scheme ಏನಿದೆ ಅದನ್ನು ಬಯಲು ಸೀಮೆಯಲ್ಲಿ ಕಾರ್ಯಕ್ರಮ ಹಾಕಿಕೊಂಡು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಂಡಿ ತಾಲ್ಲೂಕಿನಲ್ಲಿ afforestation scheme ಹೆಚ್ಚು ಹೆಚ್ಚಾಗಿ ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ವ್ಯವಸಾಯ ಇಲಾಖೆಯಲ್ಲಿ 126 ಜಾಗಗಳನ್ನು ಖಾಲಿ ಇಟ್ಟಿದ್ದರು. ಅದರೊಳಗೆ own pay scalegrade ಮೇಲೆ ಕೆಲವೊಂದು ಜನರನ್ನು ನೇಮಕ ಮಾಡಿದ್ದು ಕೆಲವೊಂದು ಜನರನ್ನು, ಸೀನಿಯಾರಿಟಿ ಮೇಲೆ ಅಲ್ಲ, ತಮಗೆ ಯಾರು ಬೇಕೋ ಅವರನ್ನು ನೇಮಿಸಿರುವುದರಿಂದ ಆ ಇಲಾಖೆಯಲ್ಲಿ ಅಸಂತುಷ್ಟಿ ವಾತಾವರಣ ಉದ್ಭವವಾಗಿದೆ, ಅಗ್ರಿಕಲ್ಚರಲ್ ಖಾತೆಯಿಂದ ಹೆಚ್ಚು ಅನುಕೂಲ ಸಲ್ಲುವ ದೃಷ್ಟಿಯಿಂದ ಇದರ ಅಭಿವೃದ್ಧಿ ಆಗಬೇಕೆಂದು ತಿಳಿದುಕೊಂಡಿದ್ದೇನೆ. ಆದರೆ ಅಧಿಕಾರಿಗಳಲ್ಲಿ discriminatory treatment ನಿಂದ ಅಸಮಾಧಾನವುಂಟಾಗಿ ಅದರಿಂದ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಡೆಯದೆ ರೈತರಿಗೆ ಬಹಳ ಲುಕ್ಸಾನಾಗುತ್ತಿದೆ. ಇದನ್ನು ಸರ್ಕಾರದವರು ತೀವ್ರವಾಗಿ ಗಮನಿಸಿ ಒಂದು ತಿಂಗಳ ಕಾಲದಲ್ಲಿ ಇತ್ಯರ್ಥ ಮಾಡಿದರೆ ಅನುಕೂಲವಾದೀತು. ಇದಕ್ಕೆ ಮಾನ್ಯ ಮಂತ್ರಿಗಳು ಲಕ್ಷ್ಯ ಕೊಡಬೇಕೆಂದು ವಿನಂತಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri N. O. SAMAJI (Belgaum II).

[Spoke in Marathi]

† ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಮಾನ್ಯ ಅಧ್ಯಕ್ಷರೇ, ವ್ಯವಸಾಯ ಗ್ರಾಮಾಭಿವೃದ್ಧಿ ಬೇಡಿಕೆಗಳಿಗೆ ಬೆಂಬಲ ಕೊಡುತ್ತಾ ಸಹಕಾರ ಸಂಘಗಳ ಬಗ್ಗೆ ಕೆಲವು ಸೂಚನೆ ಮಾಡಲು ಬಯಸುತ್ತೇನೆ. 1904 ನೇ ಇಸವಿಯಲ್ಲಿ ಸಹಕಾರ ಸಂಘಗಳ ಕಾನೂನು ಜಾರಿಗೆ ಬಂದ ಮೇಲೆ ನಮ್ಮ ಗದಗ ತಾಲ್ಲೂಕಿನಲ್ಲಿ ಮೊಟ್ಟ ಮೊದಲನೇ ಸಹಕಾರ ಸಂಘ ಸ್ಥಾಪನೆಯಾಯಿತು. ಅಂದಿನಿಂದ ಇಂದಿನವರೆಗೆ ಸಹಕಾರ ಚಳವಳಿ ಅಭಿವೃದ್ಧಿ ಹೊಂದಿದೆ. ಈ ಸಹಕಾರ ಸಂಘಗಳಿಂದ ರೈತರಿಗೆ

(ಶ್ರೀ ಎ. ಎಸ್. ಪಾಟೀಲ್)

ಸಹಾಯವಾಗಿದೆ. 15,000 ಸಹಕಾರಿ ಸಂಘಗಳು ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿವೆ. ಇದರಲ್ಲಿ 10,000 ಸಹಕಾರಿ ಸಂಘಗಳು ಒಕ್ಕಲತನ ಬಗ್ಗೆ ದುಡಿಯುತ್ತಿವೆ. ಒಕ್ಕಲತನ ಮಾಡುವದರಲ್ಲಿ ಒಕ್ಕಲಿಗನಿಗೆ ಅನೇಕ ತೊಂದರೆಗಳಿವೆ. ಹಿಂದಕ್ಕೆ ಸಾಲ ಪಡೆಯಲು ರೈತನು ಸಾಹುಕಾರರ ಕಡೆ ಹೋಗುವ ರೂಢಿಯಿದ್ದಿತು. ಸಾಲ ದೊರೆಯುವುದು ಕಷ್ಟವಾಗಿತ್ತು. ಅದರಲ್ಲಿಯೂ ಬರಗಾಲ ಪೀಡಿತ ಪ್ರದೇಶದಲ್ಲಿ ಸಾಲ ಸಿಕ್ಕದಂತಾಯಿತು. ಇತ್ತೀಚೆಗೆ ನೂರಕ್ಕೆ ನೂರರಷ್ಟು ವಸೂಲ್ಮಾಡಿದ ನಂತರ ಸಾಲ ಕೊಡಬೇಕೆಂಬ ತತ್ವ ಜಾರಿಗೆ ಬಂದು ಬರಗಾಲ ಪ್ರದೇಶದಲ್ಲಿ ಅವರಿಗೆ ಕೊಡುವುದಕ್ಕೆ ಶಕ್ತಿಯಿಲ್ಲದೆ ಸಾಲ ತೆಗೆದುಕೊಳ್ಳಲು ಸಾಧ್ಯವಿಲ್ಲದಾಗಿದೆ. ಆದ್ದರಿಂದ ನೂರಕ್ಕೆ ನೂರರಷ್ಟು ವಸೂಲ್ಮಾಡಬೇಕೆಂಬ ನಿಯಮವನ್ನು ಜನರಿಗೆ ಉಪಯೋಗವಾಗುವ ಹಾಗೆ ಮಾರ್ಪಾಟಪಡಿಸಬೇಕು. ಯಾಕೆಂದರೆ ಅನೇಕ ರೈತರಿಗೆ ಸಾಲ ಸಿಕ್ಕದಂತಾಗಿದೆ. ಸಹಕಾರ ಸಂಘಗಳು ಸಾಲ ಕೊಡದಂತಾಗಿದೆ.

2.00 P.M.

ಅದೂ ಅಲ್ಲದೆ ಈಗ ಸುಮಾರು ನಾಲ್ಕು ವರ್ಷಗಳಿಂದಲೂ ಕೂಡ ಅನೇಕ ತಾಲ್ಲೂಕುಗಳಲ್ಲಿ ಬರಗಾಲ ಇದೆ. ಆದ್ದರಿಂದ ಅಲ್ಲಿ ಬಾಕಿ ಬಹಳ ಉಳಿದಿವೆ. ಅನೇಕ ಕಡೆ ನೆರೆ ಹಾವಳಿಯ ದೆಶೆಯಿಂದ ಜನಗಳಿಗೆ ತುಂಬಾ ನಷ್ಟವುಂಟಾಗಿದೆ. ಅವರಿಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು. ಆದ್ದರಿಂದ ಸಹಕಾರ ಶಾಖೆಯವರು ಆಕಡೆ ಹೆಚ್ಚು ಗಮನಕೊಡಬೇಕು. ವ್ಯವಸಾಯದ ವಿಚಾರದಲ್ಲಿ ರೂರಲ್ ಕ್ರೆಡಿಟ್ ಸರ್ವೆಯವರು ಅನೇಕ ಸೂಚನೆಗಳನ್ನಿಟ್ಟಿದ್ದಾರೆ. ಅದರಂತೆ ಅಗ್ರಿಕಲ್ಚರಲ್ ಕ್ರೆಡಿಟ್ ಸ್ಟೆಬಿಲೈಜೇಷನ್ ಫಂಡ್ ಎನ್ನುವಂಥಾ ಒಂದು ಫಂಡನ್ನು ಮಾಡಬೇಕು. ಬರಗಾಲ ಮತ್ತು ನೆರೆಹಾವಳಿಯ ತ್ರಾಸಿಗೆ ಒಳಪಡತಕ್ಕ ಜನಗಳಿಗೆ ಸಹಾಯ ಮಾಡುವುದಕ್ಕೋಸ್ಕರ ಒಂದು ರೀತಿಯ ಫಂಡ್ ಎಂದು ಅವರಿಗೋಸ್ಕರ ರಿಜರ್ವ್ ಬ್ಯಾಂಕಿನವರು 10 ಕೋಟಿ ರೂಪಾಯಿಗಳನ್ನು ಮೀಸಲಾಗಿಡುತ್ತಾರೆ. ಅದರಂತೆ ನಮ್ಮ ಸರ್ಕಾರದವರೂ ಸಹ ಅಗ್ರಿಕಲ್ಚರಲ್ ರಿಲೀಫ್ ಫಂಡ್ ಮಾಡುವುದು ಅವಶ್ಯ ಇದೆ. ಬರಗಾಲ ಮತ್ತು ನೆರೆಹಾವಳಿಯಿಂದ ಕಷ್ಟಕ್ಕೆ ಒಳಗಾಗಿರತಕ್ಕ ಜನಗಳಿಗೆ ಸಹಾಯ ಮಾಡುವುದಕ್ಕೋಸ್ಕರವಾಗಿ ಸರ್ಕಾರದವರು ಈಗ ನಾಲ್ಕುವರೆ ಲಕ್ಷರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಅದನ್ನು ಇನ್ನೂ ಹೆಚ್ಚು ಬೆಳೆಸಬೇಕು. ಬರಗಾಲ ಮತ್ತು ನೆರೆಹಾವಳಿಗೆ ತುತ್ತಾದ ರೈತರಿಗೆ ಸಹಾಯ ಕೊಡಲಿಕ್ಕೆ ಮತ್ತು ಸಾಲ ಕೊಡುವುದಕ್ಕೋಸ್ಕರವಾಗಿ ಚಾಲ್ತಿ ಸಾಲಗಳನ್ನು ಮಾಧ್ಯಮಿಕ ಸಾಲಗಳಾಗಿ ಪರಿವರ್ತಿಸುವುದಕ್ಕೆ ಅವಕಾಶ ವಿರಬೇಕು. ಈ ಬಗ್ಗೆ ಅನೇಕ ಸಾರಿ ನಾನು ಈ ಸಭೆಯಲ್ಲಿ ಹೇಳಿದ್ದೇನೆ. ಈ ಬಗೆ ಸರ್ಕಾರದವರು ಸೂಚನೆ ಕೊಡುತ್ತಾರೆಂದು ನಾನು ಆಶೆ ಮಾಡುತ್ತೇನೆ.

ಇನ್ನು ಎರಡನೇಯದಾಗಿ ಬರಗಾಲ ಪ್ರದೇಶದಲ್ಲಿ ತಕಾವಿ ಸಾಲ ಕೊಡುವುದು ಹಾಗೆಯೇ ಉಳಿದಿದೆ. ಇದಕ್ಕೆ ಬೇರೆ ಯಾವುದಾದರೂ ಒಂದು ವ್ಯವಸ್ಥೆ ಮಾಡಬೇಕು.

[VICE CHAIRMAN (SRIMATHI BASAVA RAJESWARI) in the Chair.]

ನಮ್ಮ ಭಾಗದಲ್ಲಿ ಹತ್ತಿಬೆಳೆಗೆ ರೋಗ ತಗುಲ ಹತ್ತಿ ಬೆಳೆನಾಶವಾಗಿ ಜನಗಳು ಬರಗಾಲಕ್ಕೆ ಆಹುತಿಯಾಗಿದ್ದಾರೆ. ಧಾರವಾಡ ಜಿಲ್ಲೆ, ಬಿಜಾಪುರ ಜಿಲ್ಲೆ, ಚಿತ್ರದುರ್ಗ ಜಿಲ್ಲೆಯ ಅನೇಕ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಅಲ್ಲಿಯ ಜನಗಳ ಬವಣೆಯನ್ನು ಹೇಳತೀರದು. ಮುಂದಿನ ವರ್ಷದ ಮಟ್ಟಿಗೆ ಯಾವರೀತಿ ಬದುಕಿ ಬಾಳಬೇಕು ಎನ್ನುವುದು ಒಂದು ದೊಡ್ಡ ಪ್ರಶ್ನೆಯಾಗಿದೆ. ಆದ್ದರಿಂದ ಅವರಿಗೆ ಸಹಾಯಮಾಡುವ ಸಲುವಾಗಿ ಅಗ್ರಿಕಲ್ಚರಲ್ ಕ್ರೆಡಿಟ್ ಸ್ಟೆಬಿಲೈಜೇಷನ್ ಫಂಡ್ ಎಂದು ಮಾಡಬೇಕು. ರೈತರಿಗೆ ಬ್ಯಾಂಕುಗಳಲ್ಲಿ ಹಣಕಾಸಿನ ಸಾಲ ಇದ್ದರೆ ಅವುಗಳಿಗೆ ಸಣ್ಣ ಸಣ್ಣ ಕಂತುಗಳನ್ನು ಮಾಡಿಕೊಡಬೇಕು. ಹಾಗೆಯೇ ಅಲ್ಪಾವಧಿ ಸಾಲಕ್ಕೂ ಕೂಡ ಸಣ್ಣ ಸಣ್ಣ ಕಂತುಗಳನ್ನು ಮಾಡಿ ಅವರು ಸಾಲವನ್ನು ಸೇರಿಸುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಬಹಳ ಜರೂರಾಗಿ ಮಾಡಬೇಕು. ಮೀಡಿಯಮ್ ಟರ್ಮ್ ಸಾಲವನ್ನು ಕೊಡುವುದಕ್ಕೆ ಸಾಕಷ್ಟು ಮೊಬಲಗನ್ನು ಮೀಸಲಾಗಿಟ್ಟಿಲ್ಲ. ಮೀಡಿಯಮ್ ಟರ್ಮ್ ಸಾಲವನ್ನು ರೈತರಿಗೆ ಭೂಮಿಯನ್ನು ಸುಧಾರಣೆ ಮಾಡುವುದಕ್ಕೂ, ಒಡ್ಡುಗಳನ್ನು ಹಾಕುವುದಕ್ಕೂ ಪಂಪು ಸೆಟ್ಟುಗಳನ್ನು ಕೊಂಡುಕೊಳ್ಳುವುದಕ್ಕೂ ಸರಿಯಾಗಿ ಹಣವನ್ನು ಉಪಯೋಗಿಸಿಲ್ಲ. ಅಪಿಕ್ಸ್ ಬ್ಯಾಂಕಿನಲ್ಲಿ ಹೆಚ್ಚು ಹಣವನ್ನು ಸಾಲ ಕೊಡುವುದಕ್ಕೆ ಹಣವಿಲ್ಲ. ಆದ್ದರಿಂದ ಮೀಡಿಯಮ್ ಟರ್ಮ್ ಸಾಲವನ್ನು ಕೊಡುವುದಕ್ಕೆ ಹೆಚ್ಚು

ಹಣವನ್ನು ಒದಗಿಸಬೇಕು. ಲಾಂಗ್ ಟರ್ಮ್ ಸಾಲವನ್ನು ಕೊಡುವುದಕ್ಕೆ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಎಂದು ರಾಜ್ಯಕ್ಕೆ ಒಂದು ದೊಡ್ಡ ಬ್ಯಾಂಕ್ ಇದೆ. ಪ್ರಾಥಮಿಕ ಸಂಘಗಳು ಸುಮಾರು 120 ರಷ್ಟು ಪ್ರತಿ ಜಿಲ್ಲೆಗೂ ಸ್ಥಾಪಿತವಾಗಿವೆ. ಹಳೆಯ ಮೈಸೂರು ಬ್ಯಾಂಕಿನಲ್ಲಿ ದೀರ್ಘಾವಧಿ ಸಾಲವನ್ನು ಸಾಕಷ್ಟು ಪಡೆಯಲಿಕ್ಕೆ ಅನುಕೂಲವಾಗಿದೆ. ಸಮನ್ವಯ ಗೊಳಿಸಿದ ಹೊಸ ನಿಯಮವನ್ನು ಕೆಲವು ಬ್ಯಾಂಕುಗಳಿಗೆ ಇದುವರೆಗೂ ಕಳುಹಿಸಿ ಕೊಟ್ಟಿಲ್ಲ. ಅಲ್ಲಿ ಹೊಸ ನಿಯಮದ ಕೊರತೆ ಉಂಟಾಗಿದೆ ಹಳೆಯ ಮೈಸೂರಿಗೆ 10 ಲಕ್ಷರೂಪಾಯಿಗಳ ದೀರ್ಘಾವಧಿಯ ಸಾಲವನ್ನು ಕೊಟ್ಟರೆ ಹೊಸ ಮೈಸೂರಿಗೆ 10 ಸಾವಿರ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಇದೆ. ಈ ವಿಚಾರದಲ್ಲಿ ಸರ್ಕಾರದವರು ಗಮನಕೊಟ್ಟು ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.• ಈಗ ಇಂಟಿಗ್ರೇಟೆಡ್ ಏರಿಯಾದ ಜನಗಳಿಗೆ ದೀರ್ಘಾವಧಿ ಸಾಲ ಸಿಕ್ಕದೆ ಅವರು ಹಿಂದಿನ ಸಾಲವನ್ನು ತೀರಿಸುವುದಕ್ಕೆ ತೊಂದರೆಯಾಗಿದೆ. ಇದು ನಮಗೆ ಗೊತ್ತಿರುವ ಮಾತು. 5 ವರ್ಷಗಳಾದರೂ ಯಾವ ಸಾಲವೂ ರೈತರಿಗೆ ಸಿಕ್ಕದಂತಾಗಿದೆ. ಸೆಂಟ್ರಲ್ ಬ್ಯಾಂಕಿನಲ್ಲೂ ಹಣ ಸಿಕ್ಕುತ್ತಾ ಇಲ್ಲ. ಒಂದು ಕೋಟಿರೂಪಾಯಿಗಳ ಡಿಬೆಂಚರ್ ಮೊತ್ತವನ್ನು ಕೊಟ್ಟರೆ ಸಾಲ ಕೊಡುವುದಕ್ಕೆ ಅದು ಸರಿಹೋಗ ಬಹುದು. ಈಗ ದೀರ್ಘಾವಧಿ ಸಾಲದ ವ್ಯವಸ್ಥೆ ಸರಿಯಾಗಿಲ್ಲ. ಒಂದು ಕೋಟಿ ಡಿಬೆಂಚರ್ ಎರಡು ತಿಂಗಳಲ್ಲಿ ಮುಗಿಯುತ್ತದೆ. ಮತ್ತೊಮ್ಮೆ ಡಿಬೆಂಚರ್ ಶುರು ಮಾಡಿದರೆ ರಿಜರ್ವ್ ಬ್ಯಾಂಕಿನವರು 20 ಪರ್ಸೆಂಟ್ ಪೂರ್ಣವಾಗಿ ಕೊಟ್ಟರೆ ಡಿಬೆಂಚರ್ ಕಾಂಟ್ರಿಬ್ಯೂಷನ್ ಬರುತ್ತದೆ. ಇಲ್ಲವೆ ಹೋದರೆ ದೀರ್ಘಾವಧಿಯ ಸಾಲದ ವ್ಯವಸ್ಥೆ ಇಲ್ಲವಂತಹ ಪ್ರಸಂಗ ಬರುತ್ತದೆ. 30 ಲಕ್ಷರೂಪಾಯಿ ಸ್ಯಾಂಕ್ಷನ್ ಆದಂತ ಸಾಲದ ಹಣವನ್ನು ಕೊಡದೆ ಅದು ಹಾಗೆಯೇ ಉಳಿದಿದೆ. ನಿಯಮಗಳು ಸಮನ್ವಯ ಆಗದೆ ಅವು ಹಾಗೆಯೇ ಉಳಿದಿವೆ. ಬೆಳಗಾಂವ, ಹೈದರಾಬಾದ್ ಭಾಗದ ಅನೇಕ ಸಹಕಾರ ಸಂಘಗಳು 50 ಸಾವಿರ ರೂಪಾಯಿಗಳ ವ್ಯವಹಾರವನ್ನು ಮಾಡಿದ್ದರೂ ಕೂಡ ಸಿಬ್ಬಂದಿ ಖರ್ಚು ಸಹ ಕೊಡದಂತೆ ಅವುಗಳನ್ನು ಮುಚ್ಚುವಂತಾ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಅವರಿಗೆ ಯೋಗ್ಯವಾಗ ಸಾಲದ ಹಣ ಸಿಕ್ಕುವಂಥಾ ವ್ಯವಸ್ಥೆಯನ್ನು ಮಾಡಬೇಕು. ಡಿಬೆಂಚರ್ ಒಂದು ಕೋಟಿ ಕೊಡಬೇಕು. 60 ಲಕ್ಷರೂಪಾಯಿಗಳನ್ನು ಕೊಟ್ಟರೆ ಅವರಿಂದ ಏನೂ ಆಗುವುದಿಲ್ಲ. ಕಂಟಿನ್ಯೂಯಿಂಗ್ ಗ್ಯಾರೆಂಟಿ ಡಿಬೆಂಚರ್ ಫ್ಲೋಟ್ ಮಾಡುವುದು 5–6 ತಿಂಗಳು ಸಾಲವನ್ನು ಕೊಡದ ಪ್ರಸಂಗ ಬರುತ್ತದೆ. 10 ಕೋಟಿ, 5 ಕೋಟಿ ಗ್ಯಾರಂಟಿ ಕೊಡಬೇಕು. ತೀವ್ರವಾಗಿ ಹಣದ ವ್ಯವಸ್ಥೆ ಮುಟ್ಟುವುದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಮತ್ತು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸಹಕಾರ ಸಾಲದವ್ಯವಸ್ಥೆ ಏನಿದೆ ಅದು ಸುಗಮವಾಗಿ ಸಿಕ್ಕ ಬೇಕಾದರೆ ಅದು ತೀವ್ರವಾಗಿ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಜನರಿಗೆ ತೊಂದರೆಯಾಗುತ್ತದೆ. ವ್ಯವಸಾಯಗಾರರಿಗೆ ಸರಿಯಾಗಿ ಸಾಲ ಸಿಕ್ಕುವುದಿಲ್ಲ,

ಸಹಕಾರ ಸಂಘಗಳ ವಿಷಯದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳುತ್ತೇನೆ. ಈಗ ಮೈಸೂರು ರಾಜ್ಯದಲ್ಲಿ ಸಹಕಾರ ಕಾಯಿದೆಯನ್ನು ಏನು ಮಾಡಿದ್ದಾರೆಯೋ ಅದರಲ್ಲಿ ಬೊಂಬಾಯಿ, ಮದರಾಸು ಕಾಯಿದೆಯಲ್ಲಿರ ತಕ್ಕ ಕೆಲವು ಮುಖ್ಯಾಂಶಗಳನ್ನು ತೆಗೆದುಕೊಂಡು ಒಂದು ಕಾಯಿದೆಯನ್ನು ಮಾಡಿದ್ದಾರೆ. ಇದರೊಳಗೆ ಒಂದು ಮಹತ್ವದ ಮಾತು ಇದೆ, ಅದೇನೆಂದರ ಕೆಲವು ಅಪೆಕ್ಸ್ ಬ್ಯಾಂಕುಗಳಿಗೆ ನಾಮಿನೇಷನ್ ಪದ್ಧತಿ ಇದೆ. ಸಾಧಾರಣವಾಗಿ ಹೋದವರ್ಷ 1962 ನೇ ಇಸವಿಯಲ್ಲಿ ಫೆಬ್ರುವರಿ ತಿಂಗಳಿನಲ್ಲಿ ಕೇಂದ್ರದ ಬ್ಯಾಂಕುಗಳಿಗೆ ಪ್ರೆಸಿಡೆಂಟರನ್ನೂ ಒಳಗೊಂಡು ಆರು ಮಂದಿಯನ್ನು ನಾಮಿನೇಷನ್ ಮಾಡಿದ್ದಾರೆ.

ಅದಕ್ಕೆ ಕೋ-ಆಪರೇಟೀವ್ ಕಾನ್‌ಫರೆನ್ಸಿನಲ್ಲಿ ಈ ವಿಷಯದಲ್ಲಿ ವಿನಂತಿ ಮಾಡಿಕೊಂಡಿದ್ದೇವೆ. ಅವರಿಗೆ ಅಧಿಕಾರವಿದೆ. ರಿಜಿಸ್ಟ್ರಾರರು ಸೂಚನೆ ಕೊಟ್ಟರೆ special general meeting ಕರೆಯಲಿಕ್ಕೇಬೇಕು; special general meeting ಕರೆಯುವಂತೆ ಸೂಚನೆ ಮಾಡಲಿಕ್ಕೆ ಸಂಪೂರ್ಣ ಅಧಿಕಾರವಿದೆ. ಆಮೇಲೆ the State Government or any authority specified by the State Government in this behalf, shall have the right to nominate not more than three members or one third of the total number of members of the Committee of the Co-operative society. Whichever is less, ಅಂತ Mysore Co-operative Society Actನ ಸೆಕ್ಷನ್ 30 ರಲ್ಲಿದೆ. ಹಾಗೇನೇ A member nominated on the Committee...under sub-section (1) shall hold office during the pleasure of the State Government or the specified authority, as the case may be ಅಂತ ಅದರ ಕೆಳಗೇ ಇದೆ. ಗವರ್ನ್‌ಮೆಂಟಿಗೆ ಒಳಪಟ್ಟು

(ಶ್ರೀ ಎ. ಎಸ್. ಪಾಟೀಲ್)

ಅವರನ್ನು ನಾಮಿನೇಟ್ ಮಾಡಲಿಕ್ಕೆ ಬರುತ್ತದೆ. ಅದರಿಂದ special general meeting ಕರೆದು ತಿದ್ದುಪಡಿ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಅದಕ್ಕೋಸ್ಕರವೇ ಕೆಲಮಟ್ಟಿಗೆ Co-operators Conference ವೇಳೆಯಲ್ಲಿ ಇದನ್ನು ಒಪ್ಪಿಕೊಂಡಿದ್ದೇವೆ.

ಈ ಒಂದು ಸಹಕಾರ ಶಿಕ್ಷಣಕ್ಕೆ ಉತ್ತೇಜನ ಕೊಡಲು, ಸಹಕಾರ ಸಂಘಗಳ ಮೇಲೆ compulsary levy ಹಾಕಿ ಅದನ್ನು educational fund ಗೆ ಕೊಡುವ ಹಾಗೆ ಮಾಡಬೇಕು. ಬೊಂಬಾಯಿ ಆಕ್ಟಿನಲ್ಲಿ ಏನಿವೆ ಅದೇರೀತಿ compulsory levy ಏರ್ಪಾಡು ಮಾಡಬೇಕು. ಈ ಸಲಹೆಯನ್ನು ಈಡೇರಿಸಲು ನಮ್ಮ ಸೊಸೈಟಿ ಆಕ್ಟಿನ ಸೆಕ್ಷನ್ 57ಕ್ಕೆ ಅಮೆಂಡ್‌ಮೆಂಟನ್ನು ತಂದು ಈ ಸಭೆಯ ಮುಂದೆ ಆದಷ್ಟು ಜಾಗ್ರತೆಯಾಗಿ ಇಡಬೇಕು. ಬೊಂಬಾಯಿನವರು ಅವರ ಶಿಕ್ಷಣದ ನೀತಿ ಬಗ್ಗೆ ಬೊಂಬಾಯಿ ಆಕ್ಟಿನಲ್ಲಿ ಈರೀತಿ ಹೇಳಿದ್ದಾರೆ :

"Every society which pays a dividend to its members at a rate of 4 per cent or more shall contribute towards the educational fund of the Bombay Provincial Co-operative Institute at such rate as may be prescribed".

ಶಿಕ್ಷಣದ ಬಗ್ಗೆ ಬೊಂಬಾಯಿ ನೀತಿಯನ್ನು ಅನುಸರಿಸದೆ ಇದ್ದರೆ ಶಿಕ್ಷಣ ಪ್ರಚಾರದಲ್ಲಿ, ಶಾಲಾ ಕಾಲೇಜುಗಳಿಗೆ ಸಿಬ್ಬಂದಿ ಒದಗಿಸುವುದರಲ್ಲಿ, ವಿನಾಯಿತಿ ಕೊಡುವುದು, ಮುಂತಾದುದರಲ್ಲಿ ಶಿಕ್ಷಣ ಸಂಸ್ಥೆಗೆ ಅವಕಾಶ ಇಲ್ಲದೆ, ಕೆಲಸ ಮಾಡಲು ಅಗತ್ಯವಾಗಿ, ಸಂಸ್ಥೆ ಉಳಿಯುವ ಪ್ರಶ್ನೆಯೇ ಬರುತ್ತದೆ ಒಟ್ಟಿನಲ್ಲಿ ಈ ಸುಧಾರಣೆಗಳನ್ನು ಕೆಲವು ಗಮನಕ್ಕೆ ತೆಗೆದುಕೊಂಡ, ಅವುಗಳನ್ನು ಆಚರಣೆಗೆ ತರುವ ವಿಚಾರ ಮಾಡುತ್ತೀರೆಂದು ನಂಬಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಸಭಾಪತಿಗಳೆ,

ನಾನು ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಇದರಲ್ಲಿರುವ ಕೆಲವು ನ್ಯೂನತೆಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ವ್ಯವಸಾಯಕ್ಕೆ ಮುಖ್ಯವಾಗಿ ಅರಣ್ಯ ಬೇಕು. ಅರಣ್ಯ ಈ ದಿವಸ ಉಳಿಯುತ್ತಾ ಇದೆಯೇ, ಅರಣ್ಯ ಬೆಳೆಯುತ್ತಾ ಇದೆಯೇ, ಇದಕ್ಕೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಾ ಇದೆಯೇ, ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಈಗ ಅರಣ್ಯದ ಸೌದೆಗೆ ಕೆಲವು ಪರ್ಮಿಟ್ಟುಗಳನ್ನು ಕೊಡುತ್ತಾ ಇದ್ದಾರೆ. ಇದರಲ್ಲಿ ಮೂರು ಅಡಿ ತುಂಡಿಗೆ ಮೇಲ್ಪಟ್ಟು ತರಕೂಡದು, 3 ಅಡಿಗೆ ಒಳಪಟ್ಟು ತರ ಬೇಕೆಂದಿದೆ. ಇದರಲ್ಲಿ ಬೀಟೆ, ಹೊನ್ನೆ, ಇವುಗಳನ್ನೂ ಕೂಡ ಪರ್ಮಿಟ್ಟಿನಲ್ಲಿ ಅಳವಡಿಸಿಕೊಡುತ್ತಾ ಇದ್ದಾರೆ. ಇದರಲ್ಲಿ ಏನುಮಾಡುತ್ತಾ ಇದ್ದಾರೆಂದರೆ 18 ಅಡಿ ಒಂದು ತುಂಡನ್ನು, 3-3 ಅಡಿಗಳ pieces ಮಾಡುತ್ತಾರೆ. 6 ರಿಂದ 10 ಅಡಿ ಸುತ್ತಳತೆ ಇರುವ ಅಂಥ ಪೀಸುಗಳನ್ನು ಮಾಡಿ, ಬೇರೆ ವರ್ಕ್‌ಷಾಪುಗಳಿಗೆ ತಗೆದುಕೊಂಡು ಹೋಗಿ, ಕುಯ್ಯಿಸಿ, ಸಾಮಾನುಗಳನ್ನು ತಯಾರುಮಾಡುತ್ತಾರೆ. ಅರಣ್ಯ ಕಡಿದುಬಿಟ್ಟು, ದುರುಪಯೋಗಮಾಡುತ್ತಿದ್ದಾರೆ. ಸೌದೆ ರೂಪದಲ್ಲಿ ಒಟ್ಟು ದಳ್ಳಾಳಿ ಕೈಯಲ್ಲಿ ಬಂದು, ಅವನಿಗೆ ಪ್ರಾಫಿಟ್ ಆಗುತ್ತಾ ಇದೆ; ಇದಕ್ಕೆ ಗಮನ ಕೊಟ್ಟು ಬೀಟೆ, ಹೊನ್ನೆ ಇಂಥ ಬೆಲೆ ಬಾಳತಕ್ಕಂತ ಮರಗಳ ಬಗ್ಗೆ ಒಂದು ಕಂಡೀಷನ್ ಮಾಡಿ, ಪರ್ಮಿಟ್ಟಿನಲ್ಲಿ ಅವಕ್ಕೆ ಅವಕಾಶ ಮಾಡಿಕೊಡದೆ, ಆ ಮರಗಳನ್ನು ಉಳಿಸುವ ಪ್ರಯತ್ನ ಮಾಡಬೇಕು. ದೊಡ್ಡ ದೊಡ್ಡ ಬೆಲೆಬಾಳುವ ಮರಗಳನ್ನು ಸೀಳಿಬಿಟ್ಟು, ಕಾಡು ಕಡಿದು ಸಾಗಿಸುವ ಪರ್ಮಿಟ್ಟಿನಲ್ಲಿ, ಹೊರಗಡೆಗೆ ಸಾಗಿಸಿಬಿಡುತ್ತಿದ್ದಾರೆ. ಇಲಾಖೆಗೆ instructions ಕೊಟ್ಟು ಈರೀತಿ ನಡೆಯದಂತೆ ಏರ್ಪಾಡು ಮಾಡುತ್ತೀರೆಂದು ನಾನು ನಂಬಿದ್ದೇನೆ.

ಇನ್ನು ಕೆಲವುಕಡೆ ನಾನು ನೋಡಿದ್ದೇನೆ. ಮರಗಳು ಎಲ್ಲಿ ಜಾಸ್ತಿ ಇವೆಯೋ ಅಂಥ ಕಡೆ ದರಖಾಸ್ತು ಜಮೀನು ಕೊಳ್ಳುತ್ತಾರೆ. ಅಲ್ಲಿರುವ ಮರಗಳನ್ನು cheap rateನಲ್ಲಿ, upset price ಗೆ ತೆಗೆದುಕೊಂಡು ಸಾವಿರಾರು ರೂಪಾಯಿ ಗಳಿಸಿದ ನಿದರ್ಶನಗಳು ಬೇಕಾದಷ್ಟು ಇವೆ. ಆದ್ದರಿಂದ ದರಖಾಸ್ತು ಜಮೀನು ಕೊಡುವಾಗ, ದೊಡ್ಡ ಅಧಿಕಾರಿಗಳು ಹೋಗಿ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ ಎಲ್ಲಿ ಯಾವ ಮರ ಇದೆ, ಯಾವ ಉದ್ದೇಶದಿಂದ ಆ ಜಾಗ ಕೇಳಿದ್ದಾರೆ, ಏತಕ್ಕೋಸ್ಕರ ಕಾಡು ಬಹಳ ಇರುವಸ್ಥಳವನ್ನೇ ವ್ಯವಸಾಯಕ್ಕೆ ಕೇಳಿದ್ದಾರೆ, ಆ ಸ್ಥಳ ವ್ಯವಸಾಯಕ್ಕೆ ಪ್ರಯೋಜನವಾಗುತ್ತದೆಯೇ, ಅದನ್ನು ವ್ಯವಸಾಯಕ್ಕೆ ಲಾಯಕ್ ಮಾಡಬೇಕಾದರೆ ಎಷ್ಟು ದುಡ್ಡು ಬೇಕಾಗುತ್ತದೆ, ಈ ಅಂಶಗಳನ್ನೆಲ್ಲಾ ಚೆನ್ನಾಗಿ ವಿಮರ್ಶೆ ಮಾಡಬೇಕು.

ಮೇಲುಕೋಟೆ ಫಾರೆಸ್ಟ್ನ ಹಿಂದೆ 20 ಸಾವಿರ ರೂಪಾಯಿವರೆಗೂ ಅಮರಾಯಿ ಹರಾಜು ಹಾಕುತ್ತಿದ್ದರು, ಈ ದಿವಸ ಮೂರು ಸಾವಿರ ರೂಪಾಯಿಗೆ ಬಂದಿದೆ. ಸಾವಿರಾರು ರೂಪಾಯಿ ಫಲ ಕೊಡುವ ಪದಾರ್ಥ ಇವತ್ತು ಏಕೆ ಹಾಳಾಗುತ್ತಿದೆ ಎನ್ನುವುದನ್ನು ಸ್ವಲ್ಪ ಕೂಲಂಕಷವಾಗಿ ವಿಮರ್ಶೆ ಮಾಡಬೇಕು. 30 ಸಾವಿರ ಎಕರೆ ಕಾಡು ಪ್ರದೇಶ ಇವತ್ತು ಬಂದು ಬಯಲು ಸೀಮೆ ಆಗಿದೆ. ಏಕೆ ಇಂಥ ಹಾಳಾಗುವ ಪರಿಸ್ಥಿತಿ ಬಂದಿದೆಯೆಂದರೆ, ಅಲ್ಲಿ ಅಧಿಕಾರಿಗಳ ದುರಾಚಾರದಿಂದ ಅಲ್ಲಿ ಸಾಕಷ್ಟು staff ನ್ನು ಇಟ್ಟಿಲ್ಲ. ಇಟ್ಟಿರುವ ಸ್ಟಾಫೂ, ಕೆಲವರಿಂದ ದುಡ್ಡು ತೆಗೆದುಕೊಂಡು ಸೌದೆ ಕಡಿಯುವುದಕ್ಕೆ ಬಿಟ್ಟು ಬಿಡುತ್ತಾರೆ. ಅರಳಿ, ಹುಣಿಸೆ ಇಂಥ ಮರಗಳನ್ನು ಕಡಿದುಕೊಂಡು ಬಂದು ಸಾಗಿಸುತ್ತಾ ಇದ್ದಾರೆ. ನಮ್ಮ ಮಾನ್ಯ ಮಂತ್ರಿಗಳು ನನ್ನ ಜೊತೆ ಬಂದರೆ ಲಕ್ಷಗಟ್ಟಲೆ ಸೌದೆ ಹೋಗುತ್ತಿರುವುದನ್ನು ನಾನು ತೋರಿಸುತ್ತೇನೆ. ಇವತ್ತು 30 ಸಾವಿರ ಎಕರೆ ಬರಡುಭೂಮಿ ಆಗಿದೆ. ಇದರಮೇಲೆ ನಿಗ ತೆಗೆದುಕೊಂಡು ಸರಿಮಾಡಬೇಕು. ಅಮರಾಯಿ ಮೂರು ಸಾವಿರ ರೂಪಾಯಿಗೆ ಇಳಿದಿರುವುದು ಬಹಳ ದುಃಖದ ಸಂಗತಿ. 30 ಸಾವಿರದಿಂದ 3 ಸಾವಿರ ರೂಪಾಯಿಗೆ ಹರಾಜು ಕೆಳಕ್ಕೆ ಬಂದಿರುವುದಕ್ಕೆ ಅರಳಿ ಮರ, ಹುಣಿಸೆ ಮರಗಳನ್ನು ಕಡಿಯುವುದೇ ಕಾರಣ. ಅಲ್ಲಿ ಈಗ ಬಂದೋಬಸ್ತ್ ಮಾಡಿದ್ದಾರೆ. ಎಲ್ಲಿ ಒಳ್ಳೆಯ ಕಾಡು ನಶಿಸಿ ಹೋಗಿದೆಯೋ ಅಲ್ಲಿ ಜಾಸ್ತಿ ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು.

ಪಂಚಾಯಿತಿಯವರು ಫಾರೆಸ್ಟ್ ಬೆಳೆಸಬೇಕೆಂದು ಹೇಳಿ, ಅದಕ್ಕೋಸ್ಕರ ಸ್ವಲ್ಪ ದುಡ್ಡನ್ನು ಅವರಿಗೆ ಕೊಡುತ್ತಿರುವುದು ಪ್ರಯೋಜನವಾಗುತ್ತಿಲ್ಲ. ಒಂದು ಎಕರೆಗೆ 20 ರೂಪಾಯಿ ಕೊಡುತ್ತಾರೆ. ಮಾಂಡ್ಯದಲ್ಲಿ 20 ಸಾವಿರ ರೂಪಾಯಿ ಕೊಟ್ಟಿರಬಹುದು. ಅಲ್ಲಿ ಅರಣ್ಯ ಎಲ್ಲಿಯಾದರೂ ಇದೆಯೇ! ಒಂದು ಎಕರೆಗೆ 20 ರೂಪಾಯಿ ಕೊಟ್ಟು ಕಾಡು ಉಳಿಸುವುದಕ್ಕೆ ಸಾಧ್ಯವೆ! ಅದೂ ಪಂಚಾಯಿತಿಯವರಿಗೆ ಬೆಳೆಸುವುದಕ್ಕೆ ಸಾಧ್ಯವೇ! ದೇಶಪ್ರೇಮದಿಂದ ಕೂಡಿರುವ ಪಂಚಾಯಿತಿಗಳು ಈಗ ಎಲ್ಲಿವೆ ? ಇಂಥ ಮಟ್ಟಕ್ಕೆ ಜನ ಬಂದಿದ್ದಾರೆ. ಡಿಸ್ಟ್ರಿಕ್ಟಿನಲ್ಲಿ ಯಾವುದಾದರೂ ಒಂದು ಸ್ಪಾಟ್ ಸೆಲೆಕ್ಟ್ ಮಾಡಿ, ಈ 20 ಸಾವಿರ ರೂಪಾಯಿಯನ್ನಲ್ಲಿ ಒಂದು ಕಡೆ ಫಾರೆಸ್ಟ್ ಬೆಳೆಸುವುದಕ್ಕೆ ಉಪಯೋಗಿಸಿದರೆ ಉತ್ತಮ. ಪಂಚಾಯಿತಿಗೆ ಈ ಫಾರೆಸ್ಟ್ ಬೆಳೆಸುವ ಜವಾಬ್ದಾರಿಯನ್ನು ಕೊಡುವ ಬದಲು, ಅದನ್ನು ಫಾರೆಸ್ಟ್ ಇಲಾಖೆಗೇ ಕೊಡಬೇಕು. ಫಾರೆಸ್ಟ್ ಡಿಪಾರ್ಟ್‌ಮೆಂಟು ಎಲ್ಲಿಯಾದರೂ ಆಧುನಿಕ ರೀತಿಯಲ್ಲಿ ಬೆಳಸಿ, ಜನಗಳಿಗೆ ತೋರಿಸಬೇಕು, ಈ ತರಹ ಅರೇಂಜ್ ಮಾಡಬೇಕು.

ಅಲ್ಲದೆ ಪಿ.ಡಬ್ಲ್ಯು.ಡಿ. ರೋಡಿನಲ್ಲಿ ಮರಗಳಿದ್ದುವು. ಹಿಂದೆ ಅವನ್ನು ನೋಡುವುದಕ್ಕೆ ಬಹಳ ಆನಂದವಾಗುತ್ತಿತ್ತು. ಈಗ ಅವು ಯಾವ ಇಲಾಖೆಗೆ ಸೇರಿವೆ ಎಂಬುದೇ ಅರ್ಥವಾಗುತ್ತಿಲ್ಲ. ಈಗ ಆ ರಸ್ತೆಗಳಲ್ಲಿರತಕ್ಕ ಮರಗಳನ್ನು ನೋಡಿದರೆ ಎಲ್ಲಾ ಕೊಂಬೆಗಳು ಕೆದರಿಕೊಂಡು ಬರೇ ಬೆಂಡಾಗಿ ನಿಂತಿವೆ. ಅಂಥಾದ್ದನ್ನು ಪಂಚಾಯಿತ್ತಿಗೆ ವಹಿಸಿಕೊಡುವುದರಿಂದ ಇದರಲ್ಲಿ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಬಹುದೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ವ್ಯವಸಾಯ ಬಾಬಿಗೆ ಇವತ್ತು ನಮ್ಮ ಮಂಡ್ಯ ಜಿಲ್ಲೆಗೆ 5 ಕೋಟಿ ರೂಪಾಯಿಗಳನ್ನು ಪ್ಯಾಕೇಜ್ ಪ್ರೋಗ್ರಾಂಗೋಸ್ಕರ ಕೊಟ್ಟಿದ್ದಾರೆ. ಅದರಲ್ಲಿ ಏನಾದರೂ ರೈತನಿಗೆ ಸಿಗುತ್ತದೆಯೇ ಎಂದು ಯೋಚನೆ ಮಾಡಿದರೆ ಏನೂ ಇಲ್ಲ. ಸುಮಾರು 3 ಕೋಟಿ 75 ಲಕ್ಷ ರೂಪಾಯಿಗಳನ್ನು ಕೇವಲ ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದಾರೆ. ಬೀಜ, ಗೊಬ್ಬರ ಡೆಮಾನ್‌ಸ್ಟ್ರೇಷನ್ (Demonstration) ಪ್ರಾರಂಭ ಮಾಡುವುದಕ್ಕೆ ಸರಿಯಾದ ಸೌಕರ್ಯವೇ ಇಲ್ಲ. ಅವನಿಗೆ ಕೇವಲ 5 ಸೇರು ಬೀಜ 2 ಮಣ ಅಥವಾ 4 ಮಣ ಗೊಬ್ಬರ ಹೀಗೆ ಕೊಡುತ್ತಾ ಇರುವಾಗ ಇದಕ್ಕಾಗಿ ಒಟ್ಟು ಒಂದೆರಡು ಲಕ್ಷ ರೂಪಾಯಿಗಳು ಖರ್ಚಾಗುತ್ತ ಇರಬಹುದು. ಒಂದು ಕೋಟಿ ಚಿಲ್ಲರೆ ರೂಪಾಯಿಗಳನ್ನು ಸಾಲವಾಗಿ ಹಂಚುವುದಕ್ಕೆ ಖರ್ಚುಮಾಡುತ್ತಿದ್ದೀರಿ. ಹೀಗೆ ಮಾಡಲು 3.70 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆದ್ದರಿಂದ ತಲಾ ಒಂದಕ್ಕೆ ಕೇವಲ 50 ರೂಪಾಯಿಗಳು ಬರುತ್ತವೆ. ಈ ರೀತಿ ಕಾಯಿದೆ ನಿಗದಿ ಮಾಡಿದರೆ ಅತ ಹೇಗೆ ವ್ಯವಸಾಯ ಮಾಡಬೇಕು. ಈ ರೀತಿ ಮಾಡಿದರೆ ಅವನು ಹೇಗೆ ಕಂದಾಯ ಕೊಡುತ್ತಾನೆ ? ಆದರೂ ನಿಮ್ಮ ಸ್ಕೀಮು ನಿಜವಾಗಿ ಜಯಪ್ರದವಾಗುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ. ಆದರೆ ಅದನ್ನು ಪ್ರಚಾರ ಮಾಡುತ್ತಿದ್ದೀರಿ. ಸುಮ್ಮನೆ ಪ್ರಚಾರದಿಂದ ಈ ಕೆಲಸವಾಗುವುದಿಲ್ಲ. ಸಾಮಾನ್ಯವಾಗಿ ಒಬ್ಬ ರೈತನಿಗೆ ನೀವು ವ್ಯವಸಾಯ ಮಾಡಿ ಎಂದು ಹೇಳುವಾಗ ಅವನು ಯಾವ್ಯಾವ ರೀತಿ ಅದನ್ನು ಮಾಡಬೇಕು, ಆತನಿಗೆ ಶಕ್ತಿ ಇದೆಯೇ, ಸರಿಯಾಗಿ ಉಳುವುದಕ್ಕೆ ಎತ್ತುಗಳಿವೆಯೇ, ಗೊಬ್ಬರಕ್ಕೆ ದುಡ್ಡು ಇದೆಯೇ, ಅವನ ಮನೆಯಲ್ಲಿ ತಿನ್ನುವುದಕ್ಕೆ ಅನ್ನ ಇದೆಯೇ, ವ್ಯವಸಾಯ ಮಾಡುವ ಕಾಲದಲ್ಲಿ ಸಾಕಷ್ಟು ಖರ್ಚು ಮಾಡುವುದಕ್ಕೆ ದುಡ್ಡು ಇದೆಯೇ ಎಂಬುದನ್ನೆಲ್ಲಾ ನೋಡಬೇಕು. ರೈತನಿಗೆ ಅವಶ್ಯಕವಾಗಿ ಬೇಕಾದ ವ್ಯವಸಾಯದ ಉಪಕರಣಗಳನ್ನು, ಸಾಧನಗಳನ್ನು ಒದಗಿಸಬೇಕು. ಬಹು ಮುಖ್ಯವಾಗಿ ಬೇಕಾದ ಟ್ರಾಕ್ಟರುಗಳು

(ಶ್ರೀ ಎಚ್. ನಂಜೇಗೌಡ)

ಮತ್ತು ಬುಲ್‌ಡೋಜರುಗಳು - ಇತ್ಯಾದಿ ಆಧುನಿಕ ಉಪಕರಣಗಳನ್ನು ಆಯಾ ತಾಲ್ಲೂಕಿನಲ್ಲಿಯೇ ಇಟ್ಟು ಯಾರು ಅವನ್ನು ಬೇಕು ಎಂದು ಕೇಳುತ್ತಾರೋ ಅಂತಹವರಿಗೆ ಅವನ್ನು ಒದಗಿಸಿ ಕೊಡಬೇಕು. ಆ ಕೆಲಸಕ್ಕೆ ಬೇಕಾದಾಗ ಹಣವನ್ನೂ ಸಹ ಒದಗಿಸಿ ಕೊಡಬೇಕು. ಈಗ ಏನಾಗಿದೆಯೆಂದರೆ ಪ್ರಚಾರ ಮಾಡುವವರು ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿನವರು, ಸಾಲ ಮಂಜೂರು ಮಾಡುವವರು, ಸೊಸೈಟಿಯವರು ನಂತರ ದುಡ್ಡು ಕೊಡುವವರು ಬ್ಯಾಂಕಿನವರು. ಈ ರೀತಿ ಮೂರು ಮುಖಗಳಿವೆಯೆಂದು ನಾನು ಹೇಳಬೇಕಾಗಿದೆ. ಅವನಿಗೆ ಅವನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕೆಂಬ ಶಕ್ತಿ ಸಾಕಾಗಿಲ್ಲ. ವ್ಯವಸಾಯವನ್ನು ಒಂದೇಕಡೆ ಯಾರು ಪ್ರಚಾರ ಮಾಡುತ್ತಿದ್ದಾರೋ ಅವರಿಂದ ರೈತನಿಗೆ ಸತ್ಫಲ ಸಿಕ್ಕುವಹಾಗೆ ಮಾಡಬೇಕು. ಇದರಿಂದ ಒಳ್ಳೆಯ ಪರಿಣಾಮವಾಗಬಹುದು. ಖಂಡಿತವಾಗಿ ಇಂತಹ ಪ್ಯಾಕೇಜ್ ಪ್ರೋಗ್ರಾಂ ಸಹ ಬೆಳೆಯಬಹುದು. ಆದ್ದರಿಂದ ಸರ್ಕಾರದವರು ರೈತನಿಗೆ ವ್ಯವಸಾಯ ಮಾಡಲು ತಕ್ಕ ಪ್ರೋತ್ಸಾಹ ಕೊಡುವ ರೀತಿಯಲ್ಲಿ ನಾನು ಮೇಲೆ ಹೇಳಿದಹಾಗೆ ರೈತನಿಗೆ ಅವಶ್ಯಕವಾಗಿ ಬೇಕಾದಂಥ ಸಾಮಾನುಗಳನ್ನು ಒದಗಿಸುವ ವ್ಯವಸ್ಥೆಯನ್ನು ಅತಿ ಜಾಗ್ರತೆ ಮಾಡಬೇಕೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ವ್ಯವಸಾಯವನ್ನು 10–20 ಎಚ್. ಪಿ ಟ್ರಾಕ್‌ಟರ್‌ಗಳಲ್ಲಿ ನಡೆಸಬೇಕು ಎಂದು ಹೇಳುತ್ತಾರೆ. ಇಂತಹ ಹೇಳಿಕೆಗಳಿಂದ ರೈತನಿಗೇನು ಪ್ರಯೋಜನವಾಗುತ್ತಿಲ್ಲ. ಕೂರಿಗೆ, ಇತ್ಯಾದಿ, ವ್ಯವಸಾಯ ಮುಟ್ಟುಗಳನ್ನು ಜಾಸ್ತಿಯಾಗಿ ಮಾಡಿಕೊಳ್ಳುವುದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಗದ್ದೆ ವ್ಯವಸಾಯ ಮಾಡಬೇಕು. ಬತ್ತ ನಾಟಿ ವ್ಯವಸಾಯ ಮಾಡುವವರಿಗೆ ಕೇವಲ 20–30 ಎಚ್. ಪಿ. ಟ್ರಾಕ್ಟರ್ ಇಂಜಿನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹೊಲಗಳಲ್ಲಿ ಒಂದಕ್ಕೆ ಹೊಡೆಯಬಹುದು. ಆದರೆ ಅವುಗಳಿಂದ 3–4 ಸಾರಿ ಉಳುವುದಕ್ಕೆ ಸಾಧ್ಯವಾಗುವುದಿಲ್ಲ. ಚಿಕ್ಕ ಚಿಕ್ಕ ಮೆಷಿನರಿಗಳನ್ನೂ ಸಹ ತರಿಸಿಕೊಂಡಿಲ್ಲ. ಅವುಗಳಿಂದ ಎರಡು-ಮೂರುಸಾರಿ ಉಳಬಹುದು. ಅದರಿಂದ ಖರ್ಚು ಕಡಿಮೆ ಬೀಳುತ್ತದೆ. ವ್ಯವಸಾಯದಲ್ಲಿ ಒಳ್ಳೆಯ ಆಧುನಿಕ ಪ್ರತಿಫಲವುಂಟಾಗುತ್ತದೆ. ಅಲ್ಲದೆ ಜಮಾನುಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟುವುದಕ್ಕಾಗಿ ಸರ್ಕಾರದವರು ಬೇಕಾದ ಔಷಧಿಗಳನ್ನು ಸಾಮೂಹಿಕವಾಗಿ ಮಾಡುವುದು ಒಳ್ಳೆಯದು ಎಂದು ನಾನು ಈ ಸಮಯದಲ್ಲಿ ಅಭಿಪ್ರಾಯಪಡುತ್ತೇನೆ.

ಇನ್ನು ಗ್ರಾಮ ಪಂಚಾಯಿತಿಯ ವಿಷಯ ಇದು ಹೇಗೆ ಕೆಲಸ ಮಾಡುತ್ತಿದೆಯೆಂದರೆ ಜನಗಳಿಗೆ ತಾವು ಹಾಕಿಕೊಟ್ಟ ತತ್ವವನ್ನು ನಿಜವಾಗಿ ಬೆಳೆಸುವ ಶಕ್ತಿ ಇದೆಯೋ ಎಂಬುದನ್ನು ಯೋಚನೆ ಮಾಡಬೇಕು. ಈಗ ಪಂಚಾಯಿತಿ ಎಲೆಕ್ಷನ್ ಎಂದು ಮಾಡಿದ್ದೀರಿ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬೊಬ್ಬರಿಗೂ ವೈಷಮ್ಯ ಹೆಚ್ಚಾಗಿ ಗ್ರಾಮಗಳಲ್ಲಿ ಒಗ್ಗಟ್ಟೇ ಹೊರಟುಹೋಗಿರುವ ಸ್ಥಿತಿ ಬಂದಿದೆ. ಇದರಿಂದಲೇ ಅನೇಕರು ಕೋರ್ಟು ಕಚೇರಿಗಳಿಗೆ ಹೋಗುತ್ತಾರೆ. ಒಂದು ಪಾರ್ಟಿ ಮೀಟಿಂಗ್ ಏನಾದರೂ ಇಟ್ಟರೆ, ಒಂದೊಂದು ಪಾರ್ಟಿಗಳಲ್ಲಿ ವಿರೋಧವಾಗಿ ಕೆಲಸ ಮಾಡುತ್ತಾರೆ. ಹೀಗಾದರೆ ಪಂಚಾಯಿತಿ ಕೆಲಸಗಳು ಯಾವರೀತಿ ನಡೆಯುತ್ತವೆ, ಇನ್ನು ಕೆಲವು ಕಡೆಗಳಲ್ಲಿ ಪಂಚಾಯಿತಿಗಳನ್ನು ಇಟ್ಟಿದ್ದೀರಿ. ಅಲ್ಲಿಂದ ರೈತರಿಗೆ ದುಡ್ಡು ಹಂಚಬೇಕಾದರೆ ಸೆಕ್ರೆಟರಿ ಸೈನ್ ಆಗಬೇಕು ಎಂದು ಹೇಳುತ್ತೀರಿ. ಆದರೆ ಅಂತಹ ಕಡೆಗಳಲ್ಲಿ ಇನ್ನೂ ಸೆಕ್ರೆಟರಿಗಳನ್ನೇ ನೇಮಕ ಮಾಡಿಲ್ಲ. ಒಂದೊಂದು ವೇಳೆ ಯಾರನ್ನಾದರೂ ಒಬ್ಬರನ್ನು ನೇಮಿಸುತ್ತೀರಿ ಎಂದರೆ ಆತನಿಗೆ ಆ ಬಗ್ಗೆ ಟ್ರೈನಿಂಗ್ ಆಗಿರುವುದೇ ಇಲ್ಲ. ಟ್ರೈನಿಂಗ್ ಆದವರನ್ನೇ ನೇಮಿಸಬೇಕು. ಎಷ್ಟೋ ಪಂಚಾಯಿತಿ ಬೋರ್ಡುಗಳಲ್ಲಿ ಸೆಕ್ರೆಟರಿಗಳಿಲ್ಲ. ಸೆಕ್ರೆಟರಿಗಳೇ ಇಲ್ಲದಿದ್ದ ಮೇಲೆ ಗ್ರಾಮಾಭಿವೃದ್ಧಿ ಇನ್ನು ಯಾವರೀತಿ ಆಗಬೇಕು. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಕೂಡಲೆ ಯಾವ್ಯಾವ ಪಂಚಾಯಿತಿ ಬೋರ್ಡುಗಳಲ್ಲಿ ಸೆಕ್ರೆಟರಿಗಳೇ ಇಲ್ಲವೋ ಅಂತಹ ಕಡೆಗಳಲ್ಲಿ ಶಿಕ್ಷಿತರಾದ, ಅನುಭವಸ್ಥರಾದ ಮತ್ತು ದಕ್ಷರಾದ ಸೆಕ್ರೆಟರಿಗಳನ್ನು ನೇಮಕ ಮಾಡಬೇಕೆಂದು ಆ ಮೂಲಕ ಸಾರ್ವಜನಿಕ ಕೆಲಸ ಕಾರ್ಯಗಳೆಲ್ಲಾ ಸುಸೂತ್ರವಾಗಿ ನಡೆಯುವುದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಷಯ. ಪಂಚಾಯಿತಿ ಸೆಕ್ರೆಟರಿಗಳನ್ನು ನೇಮಕ ಮಾಡಿದ್ದರೂ ಅವರ ಸಂಬಳಕೆ ಯಾರು ಜವಾಬ್ದಾರರು ಎಂಬುದನ್ನು ವಿಶದೀಕರಿಸಿಲ್ಲ. ಸರ್ಕಾರದವರು ಕೊಡದೇ ಇದ್ದರೆ ಪಂಚಾಯಿತಿಯವರು ಕೊಡಬೇಕು. ಅದಕ್ಕೆ ತಕ್ಕ ಉತ್ಪತ್ತಿ ಪಂಚಾಯಿತಿಗೆ ಬರಬೇಕು. ಒಟ್ಟಿನಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿಯಾಗುವುದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರದವರು ಕೂಲಂಕಷವಾಗಿ ವಿಚಾರ ಮಾಡಿ ಅಲ್ಲಿನ ಉತ್ಪತ್ತಿಯಿಂದ ಗ್ರಾಮಾಭಿವೃದ್ಧಿ ಹೇಗೆ ನಡೆಯಬೇಕೆನ್ನುವುದನ್ನು ದಯವಿಟ್ಟು ಸರ್ಕಾರದವರು ವಿಮರ್ಶೆ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ಬಾವಿಗಳನ್ನು ತೆಗೆಯುವುದಕ್ಕೆ ಹಣವನ್ನು ಕೊಡುತ್ತೀರಿ. ತಾವು ಒಂದು ಘನೋದ್ದೇಶ ವನ್ನಿಟ್ಟುಕೊಂಡು ರೈತನಿಗೆ ಒಳ್ಳೆಯದಾಗಲಿ, ಹೆಚ್ಚು ಆಹಾರ ಬೆಳೆಯಲಿ ಎಂಬ ಬಗ್ಗೆ ತಕ್ಕ ವ್ಯವಸ್ಥೆ ಗಳನ್ನು ಮಾಡುತ್ತಿರುವುದನ್ನು ನಾನು ಸ್ವಾಗತಿಸುತ್ತೇನೆ. ಹಣ ಹಂಚುವಾಗ ಯಾರಿಗೆ ಕೊಟ್ಟಿದ್ದೀರಿ, ನಿಜವಾಗಿ ಕೆಲಸ ನಡೆದಿದೆಯೋ ಎನ್ನುವುದನ್ನು ಸ್ವಲ್ಪ ವಿಮರ್ಶೆ ಮಾಡಬೇಕು. ನನ್ನ ತಾಲ್ಲೂಕಿಗೆ 96 ಬಾವಿಗಳನ್ನು ಮಂಜೂರು ಮಾಡಿ ಅದಕ್ಕೆ ಹಣ ಸಾಕಷ್ಟು ಕೊಟ್ಟಿದ್ದರೂ ಇದುವರೆಗೂ 20 ಬಾವಿಗಳು ಪೂರ್ತಿಯಾಗಿಲ್ಲ. ಅಧಿಕಾರಿಗಳೂ ಇದ್ದಾರೆ ಆದರೆ ಏನು ಪ್ರಯೋಜನ. ಎಲ್ಲಾ ವಿಷಯ ಗಳನ್ನು ಮಂತ್ರಿಗಳ ಹತ್ತಿರವೇ ಬಂದು ಹೇಳುವುದಕ್ಕೆ ಸಾಧ್ಯವೇ ? ಇನ್ನುಳಿದ 76 ಬಾವಿಗಳ ಹಣ ಏನಾಯಿತು. ಅವು ನಿಜವಾಗಿ ರಿಟರ್ನ್ ಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನು ವಿಮರ್ಶೆ ಮಾಡ ಬೇಕು. ತಾವು ಕೊಡುವ ಹಣ ನೇರವಾಗಿ ರೈತನಿಗೆ ಸಲ್ಲಬೇಕು. ಅವನಿಗೆ ಅದರಿಂದ ಉತ್ಪತ್ತಿ ಹೆಚ್ಚಾ ಗಬೇಕು. ನಿಜವಾಗಿ ಜಬರದಸ್ತಾಗಿ ಲಗಾಮು ತಮ್ಮ ಕೈಲಿ ಇರಬೇಕು. ಪ್ರತಿ ತಿಂಗಳು ಗ್ರಾಮೋ ತ್ಪತ್ತಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿಗೆ ಕಳುಹಿಸಿಕೊಡಬೇಕು ಎಂಬುದನ್ನು ತಾವು ವಿಮರ್ಶೆ ಮಾಡಬೇಕು. ಅಲ್ಲಿನ ನ್ಯೂನತೆಗಳನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ಎನ್. ಇ. ಎಸ್. ವಿಷಯವಾಗಿ ನಾನು ಪದೇ ಪದೇ ನಾನು ಹೇಳುತ್ತಾ ಬಂದಿದ್ದೇನೆ ; ಈಗಲೂ ಅದನ್ನೇ ಹೇಳಿದರೆ ಮಾನ್ಯ ಮಂತ್ರಿಗಳಿಗೆ ಸ್ವಲ್ಪ ಬೇಜಾರು ಆಗಬಹುದು. ನಮ್ಮ ತಾಲ್ಲೂ ಕಿನಲ್ಲಿ 1941ನೇ ಇಸವಿಯಲ್ಲಿಯೇ ಬಾವಿಗಳನ್ನು ಶುರುಮಾಡಿ ಆ ರಾಗಾಯಿತು 1962ನೇ ಇಸವಿ ಹೊತ್ತಿಗೆ 97 ಬಾವಿಗಳು ಅಪೂರ್ಣವಾಗಿವೆ. ನಾನು ಅವರಿಗೆ ಈ ಬಗ್ಗೆ ಎಷ್ಟೋ ಮನವಿಗಳನ್ನು ಬರೆದುಕೊಟ್ಟಮೇಲೆ ಅಸಿಸ್ಟೆಂಟ್ ಡೆವಲಪ್‌ಮೆಂಟ್ ಆಫೀಸರೊಬ್ಬರನ್ನು ಕಳುಹಿಸಿಕೊಟ್ಟರು. ಅವರು ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡಿ ಸಾಕಾದಷ್ಟು ಆಶ್ಚರ್ಯಕರ ಸಂಗತಿ ಹೊರಬಿದ್ದಿದೆ ಎಂದು ಅಭಿಪ್ರಾಯ ಪಟ್ಟರು. ಈಗ್ಗೆ 1½ ವರ್ಷಗಳಿಂದ ಅಲ್ಲಿ ಬಹಳ Wrong paymentಗಳಾಗಿ ಕೆಲವರಿಗೆ ಬರಬೇಕಾದ ಹಣ ಸಹ ಕೊಡಲಿಲ್ಲ. ಬಾವಿಗಳನ್ನು ಚೆಕ್ ಸಹ ಮಾಡಲಿಲ್ಲ. ಬಿಲ್ ಚೆಕ್ ಮಾಡದೆ ಬಾವಿಗಳನ್ನು ಚೆಕ್ ಮಾಡಿದರೆ ಅಲ್ಲಿಯ ವಿಚಾರ ಏನಿದೆಯೆಂಬುದು ಹೊರಗೆ ಬರುತ್ತದೆಂದು ಪುನಃ ಅಲ್ಲಿಗೆ ಅವರನ್ನೇ ಕಳುಹಿಸಿಕೊಟ್ಟಿಲ್ಲ. ಆದ್ದರಿಂದ ಆ ಕಾಲದಲ್ಲಿ ಆಫೀಸರು ಯಾರು ಇದ್ದರು, ಏಕೆ ಆ ರೀತಿ ಮಾಡಿದರು, ಕೆಲಸಗಳು ನಿಲ್ಲುವುದಕ್ಕೆ ಕಾರಣವೇನು, ಏಕೆ ಬಾವಿಗಳು ಪೂರ್ತಿ ಮಾಡಲಿಲ್ಲ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ವರದಿಯನ್ನು ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇ ನೆ. 97 ಬಾವಿಗಳನ್ನು ತಾಲ್ಲೂಕ್ ಬೋರ್ಡಿನ ಮ ೂಲಕ ಮಾಡಿ ಎಂದು ಅಸಿಸ್ಟೆಂಟ್ ಡೆವಲಪ್‌ಮೆಂಟ್ ಕಮಿಷನರು ಹೇಳಿದರು. ಇದರಿಂದ 114 ಸಾವಿರ ಉತ್ಪತ್ತಿ 117 ಸಾವಿರ ಖರ್ಚು ಆಗಿ 3 ಸಾವಿರ ಷಾರ್ಟೇಜ್ ಇದೆ. ಇಂಥಾದ್ದನ್ನು ಮಾಡುವುದಕ್ಕೆ ತಾಕತ್ ಇಲ್ಲ. ಆದ್ದರಿಂದ ಕೂಡಲೆ ಸ್ಪೆಷಲ್ ಗ್ರ್ಯಾಂಟ್ ಕೊಟ್ಟು ಈ 97 ಬಾವಿಗಳನ್ನು ಪೂರ್ತಿ ಮಾಡಿಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

2.30. P.M.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ನಮ್ಮ ಮುಂದಿರುವ ಈ ಅತಿ ಮುಖ್ಯವಾದ ವ್ಯವಸಾಯ, ಪಶುಪಾಲನೆ ಮತ್ತು ಗ್ರಾಮಾಭಿವೃದ್ಧಿ, ಈ ಶಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ವಿಚಾರದಲ್ಲಿ ಈಗಾಗಲೇ ಮಾನ್ಯ ಸ್ನೇಹಿತರು ಅನೇಕರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಈ ಬಾಬುಗಳ ಚರ್ಚೆಗೆ ಗೊತ್ತು ಮಾಡಿರುವ ಕಾಲ ಅತ್ಯಲ್ಪವೆಂದು ಹೇಳಲಿಚ್ಛಿಸುತ್ತೇನೆ. ನಮ್ಮ ದೇಶದ ಮುಖ್ಯ ಕಸಬು ವ್ಯವಸಾಯ. ಆದರೆ ಇದಕ್ಕೆ ಒದಗಿಸಿರುವ ಹಣ, ಈ ಇಲಾಖೆ ಮಾಡುತ್ತಿರುವ ಕೆಲಸ ರೈತನಿಗೆ ಎಳ್ಳಷ್ಟೂ ಉಪಯೋಗವಾಗದೇ ಇರುವ ಹಾಗೆ ಆಗುತ್ತದೆ. ಬಹಳ ಅನುಭವಸ್ಥರೆಂದು ಹೇಳಿಕೊಳ್ಳತಕ್ಕ ಅಧಿಕಾರಿಗಳು ಕೆಲವರನ್ನಿಟ್ಟಿದ್ದಾರೆ. ಆದರೆ ಈ ಕಸಬಿನಿಂದ ಬಂದವರಲ್ಲ. ಏನೋ ಪಾಸು ಮಾಡಿರುತ್ತಾರೆ, ಎಲ್ಲೋ ಇರುತ್ತಾರೆ. ಇವರಿಗೆ ರೈತನ ಕಷ್ಟ ಗೊತ್ತಿಲ್ಲ. ಹಳ್ಳಿಗಳಿಗೆ ಹೋಗಿ ರೈತರ ಕಷ್ಟವನ್ನು ನೋಡದೇ ಇದ್ದರೆ, ರೈತ ಬದುಕುವುದು ಹೇಗೆ ? ಸಾಮಾನ್ಯ ಚರ್ಚೆ ಆಗುವಾಗ ಕೆಲವರು ಮಾನ್ಯ ಮಿತ್ರರು ಒಂದು ಸಲಹೆ ಯನ್ನು ಕೊಟ್ಟರು. ಹಾರ್ಟಿಕಲ್ಚರ್ ಮತ್ತು ಅಗ್ರಿಕಲ್ಚರ್ ಈ ಎರಡು ಇಲಾಖೆಗಳೂ ಒಂದೇ ಆಗ ಬೇಕೆಂದು ಸಲಹೆ ಮಾಡಿದರು. ಇದು ಸುತರಾಂ ಸರಿಯಲ್ಲ. ಬೇರೆ ಬೇರೆ ಇಲಾಖೆಗಳಾಗಿ ಬೇರೆ ಬೇರೆ ಡೈರೆಕ್ಟರುಗಳಿರುವುದೇ ಸೂಕ್ತ. ಇದನ್ನೇ ಮುಂದುವರಿಸಿಕೊಂಡು ಬರಬೇಕೆಂದು ನಾನು ಹೇಳಲಿಚ್ಛಿಸುತ್ತೇನೆ. ಇಲ್ಲಿ ಬಾವಿಗಳಿಂದ ಆಹಾರವನ್ನು ಹೆಚ್ಚು ಬೆಳೆಯಬೇಕು. ಆದರೆ ಈ ಹೊತ್ತು ರೈತನಿಗೆ ಅವನೆಷ್ಟು ಕಷ್ಟಪಟ್ಟರೂ ಸರಿಯಾದ ಪ್ರತಿಫಲ ಸಿಕ್ಕದೆ ಅವನು ಹಿಂಜರಿಯಬೇಕಾಗಿದೆ. ಕಾಲ ಕ್ರಮೇಣ ಈ ವ್ಯವಸಾಯ ಕಸಬನ್ನೇ ಬಿಟ್ಟು ಬೇರೆ ಕೈಗಾರಿಕೆಗಳಿರುವ ಪ್ರದೇಶಗಳಿಗೆ ಬಂದು

(ಶ್ರೀ ಟಿ. ಎಸ್. ಮಾದಪ್ಪ ಗೌಡ)

ದೊಡ್ಡ ಪಟ್ಟಣಗಳಿಗೆ ಸೇರಿಕೊಳ್ಳುವ ಸಂಭವ ಸಮೀಪದಲ್ಲೇ ಬರುತ್ತದೆಂದು ಭಾಸವಾಗುತ್ತದೆ. ಉತ್ತಮ ಬೀಜ ಕೊಡುವುದಕ್ಕೆ ಯಾರೋ ಕೆಲವರನ್ನು ಗೊತ್ತುಮಾಡುತ್ತಾರೆ. ಹಣದ ಆಸೆಗಾಗಿ ಸರಿಯಾದ ಬೀಜವನ್ನು ಅವರು ಆಯುವುದಿಲ್ಲ. ಸರ್ಕಾರದವರು ಪ್ರತಿಯೊಂದು ಅಭಿವೃದ್ಧಿ ಕ್ಷೇತ್ರದಲ್ಲಿಯೂ ತಮ್ಮದೇ ಆದ ಬಿತ್ತನೆ ಫಾರಮ್‌ಗಳನ್ನಿಟ್ಟುಕೊಳ್ಳಬೇಕು. ಅಲ್ಲಿ ಹೆಚ್ಚು ಹೆಚ್ಚಾಗಿ ಬಿತ್ತನೆಯ ಕಾಳುಗಳನ್ನು ತಯಾರು ಮಾಡಿ ರೈತನಿಗೆ ಹಂಚುವ ವ್ಯವಸ್ಥೆಯನ್ನು ಅವರೇ ಮಾಡಬೇಕಾಗಿದೆ.

ರಾಸಾಯನಿಕ ಗೊಬ್ಬರಗಳನ್ನು ಕೊಡುತ್ತಿದ್ದಾರೆ. ಪದೇ ಪದೇ ಒಂದೇ ಸಮನಾಗಿ ಈ ಗೊಬ್ಬರವನ್ನು ಉಪಯೋಗಿಸಿದರೆ ಭೂಸಾರ ಕಡಮೆಯಾಗುತ್ತದೆ, ಮುಂದೆ ಕಾಲಕ್ರಮದಲ್ಲಿ ಬೆಳೆ ರೈತನ ಜಮೀನಿನಲ್ಲಿ ಬೆಳೆಯುವುದು ಕಡಮೆಯಾಗಿ ಅವನ ಕೈಹತ್ತುವುದು ದುರ್ಲಭವೆಂದು ಅನೇಕರು ಹೇಳುತ್ತಾರೆ. ಇದನ್ನು ಶಾಸ್ತ್ರೀಯವಾಗಿ ಶೋಧನೆಮಾಡಿ, ಒಂದು ವೇಳೆ ಈ ಅಭಿಪ್ರಾಯದಲ್ಲಿ ನಿಜವಿದ್ದರೆ ಇದನ್ನು ಹೋಗಲಾಡಿಸಲು, ಗೊಬ್ಬರದ ಕೊರತೆಯೇನಿದೆಯೋ ಅದನ್ನು ಬೇರೆ ರೀತಿ ತುಂಬಲು ಇಲಾಖೆಯವರು ಯೋಚನೆಮಾಡಬೇಕಾಗಿದೆಯೆಂದು ಹೇಳಲು ಇಷ್ಟಪಡುತ್ತೇನೆ.

ಪಶುಪಾಲನೆಯ ವಿಚಾರದಲ್ಲಿ ಹೇಳಿಕೊಳ್ಳಲು ಬೇಕಾದಷ್ಟಿದೆ. ಇವರು ಕೊಡತಕ್ಕ ಕೋಳಿ, ಕುರಿ, ಹೋರಿ ಇವುಗಳನ್ನು ಜನರಿಗೆ ಹಂಚುತ್ತಾರೆ. ಹೇಗೆ ಹಂಚುತ್ತಾರೆಂದರೆ, ಒಂದು ದೊಡ್ಡ ತಾಲ್ಲೂಕಿಗೆ ಒಂದೆರಡು ಹೋರಿಗಳನ್ನೂ ಎಂಟು ಹತ್ತು ಕುರಿಗಳನ್ನೂ ಕೊಟ್ಟರೆ ಅದರಿಂದ ಏನೋ ದೊಡ್ಡ ಕೆಲಸವನ್ನು ತಾವು ಮಾಡಿದೆವೆಂದು ಸರ್ಕಾರದವರು ಭಾವಿಸಿದ ಹಾಗಿದೆ. ಹಾಗೆ ಮಾಡುವುದಕ್ಕೆ ಬದಲು ಒಂದೊಂದು ಬ್ಲಾಕ್‌ಗೆ ಅಥವಾ ಡಿವಿಜನ್‌ಗೆ ಇಷ್ಟಿಷ್ಟು ಎಂದು ಡಿವಿಜನ್‌ವಾರ್ ಸರಿಯಾದ ರೀತಿ ವೆಟರಿನರಿ ಆಸ್ಪತ್ರೆಗಳಲ್ಲಿ ಮತ್ತು ಪಶುಗಳನ್ನು ಚೆನ್ನಾಗಿ ಸಾಕಿ ಅನುಭವವಿರುವವರನ್ನು ಗೊತ್ತುಮಾಡಿ ಸಹಾಯ ಧನವನ್ನು ಕೊಡುವುದರ ಮೂಲಕ ತಳಿ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ. ತಾಲ್ಲೂಕು ಬೋರ್ಡ್‌ಗಳಲ್ಲಿ ಪಶುಗಳನ್ನು ಕೊಂಡು ಕೊಡುವುದಕ್ಕಾಗಿ ಹಣವನ್ನು ಕೊಡುತ್ತೇವೆಂದು ಇದಕ್ಕಾಗಿ ಹಣವನ್ನೊದಗಿಸಿದ್ದಾರೆ. ಈ ಹಣವನ್ನು ವರ್ಷದ ಕೊನೆಯಲ್ಲಿ ಕೊಡುವುದರಿಂದ ಖರ್ಚುಮಾಡುವುದಕ್ಕಾಗದೆ ಅದು ಲ್ಯಾಪ್ಸ್ ಆಗುತ್ತದೆ. ಇದಕ್ಕೆ ಕಾರಣ ಈ ಹಣವನ್ನು ಎ. ಸಿ. ಬಿಲ್ ಮೇಲೆ ಡ್ರಾ ಮಾಡಿ ಪ್ರಾಣಿಗಳನ್ನು ಕೊಳ್ಳದೇ ಹೋದರೆ ರೈತನಿಗೆ ಕೊಡುವುದಕ್ಕಾಗುವುದಿಲ್ಲ. ಅವನಿಗೆ ಕೊಡದೆ ಕಾಂಟ್ರಿಬ್ಯೂಷನ್ ವಸೂಲು ಮಾಡುವುದಕ್ಕಾಗುವುದಿಲ್ಲ. ಈ ಕೆಲವು ಸಣ್ಣ ಕಾರಣಗಳಿಂದ ಎಷ್ಟು ಹಣವನ್ನೊದಗಿಸಿದರೂ ಅದು ಲ್ಯಾಪ್ಸ್ ಆಗತಕ್ಕ ಸಂದರ್ಭವಿರುವುದರಿಂದ ಸರ್ಕಾರದವರು ಈ ಸಂದರ್ಭದಲ್ಲಿರುವ ನಿಯಮಗಳನ್ನು ಸ್ವಲ್ಪ ಸಡಿಲ ಮಾಡಬೇಕೆಂದು ಸೂಚಿಸುತ್ತೇನೆ.

ಫಾರೆಸ್ಟ್ ಇಲಾಖೆಯ ವಿಷಯವನ್ನು ನಾನು ಹಿಂದೆ ಅನೇಕ ಸಾರಿ ಮಂತ್ರಿಗಳಿಗೆ ಹೇಳಿಕೊಂಡಿದ್ದೇನೆ. ಅರಣ್ಯ ಎಲ್ಲಿ ಹೆಚ್ಚಾಗಿರುತ್ತದೆ, ಎಲ್ಲಿ ಚೆನ್ನಾಗಿ ಬೆಳೆಸುವುದಕ್ಕೆ ಅವಕಾಶವಿರುತ್ತದೆ ಅಂಥ ಕಡೆ ಮುತುವರ್ಜಿಯಿಂದ ಕಾಪಾಡುವುದು ನ್ಯಾಯ. ನಾನು ಬಂದಿರತಕ್ಕ ಪ್ರದೇಶದಲ್ಲಿ ಹಂಗರು ಮೆಳೆಯೂ ಬೆಳೆಯಲು ಆಗದೇ ಇರುವ ಪ್ರದೇಶ. ಅಲ್ಲಿ ನೂರಾರು ಎಕರೆಗಳಲ್ಲಿ ಒಂದು ಗಿಡ ಕೂಡ ಇಲ್ಲದಿದ್ದರೂ ಅರಣ್ಯವೆಂದು ಇಟ್ಟುಕೊಂಡಿದ್ದಾರೆ. ರೈತರು ಅವರ ಸ್ವಂತ ಜಮೀನಿನಲ್ಲಿ ಬೆಳೆದು ತಮ್ಮ ಮನೆಯ ಉಪಯೋಗಕ್ಕೆ ಕತ್ತರಿಸಿ ತೆಗೆದುಕೊಂಡುಹೋದರೆ ಗಾರ್ಡುಗಳು ಟೌನ್ ಲಿಮಿಟ್‌ನಲ್ಲಿ ಕುಳಿತಿದ್ದು ಸೌದೆ ತರತಕ್ಕ ರೈತರಿಗೆ ಕಿರುಕುಳ ಕೊಡುತ್ತಾರೆ. ಅವರನ್ನು ಹಿಡಿದು ಗಾಡಿಯೊಂದಕ್ಕೆ 60-70 ರೂಪಾಯಿ ಜುಲ್ಮಾನೆ ಅವರಿಗೆ ಹಾಕಿಸಿರತಕ್ಕ ಅನೇಕ ಸಂದರ್ಭಗಳಿವೆ. ಮತ್ತು ಕೆಲವು ಸಂದರ್ಭಗಳಲ್ಲಿ ಯಾರಿಗೂ ಗೊತ್ತಾಗದೇ ಇರುವ ಹಾಗೆ ಬೇರೆ ರೂಪದಲ್ಲಿ ಅವರಿಂದ ಹಣವನ್ನು ವಸೂಲು ಮಾಡಿಕೊಂಡು ಕಿರುಕುಳ ಕೊಡುತ್ತಿದ್ದಾರೆ. ಇದನ್ನು ಆದಷ್ಟು ಬೇಗ ತಪ್ಪಿಸಬೇಕು. ಕಾಡಿನ ಸೌದೆಗೂ ರೈತರ ಸ್ಥಳದಲ್ಲಿ ಬೆಳೆದ ಸೌದೆಗೂ ಬಹಳ ವ್ಯತ್ಯಾಸವಿರುತ್ತದೆ. ಕಂಡುಹಿಡಿಯಬಹುದು. ಈ ಬಗ್ಗೆ ಮಾನ್ಯ ಅರಣ್ಯ ಸಚಿವರು ತಕ್ಷಣ ಗಮನಕೊಟ್ಟು ರೈತರಿಗಾಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇನ್ನು ಅಭಿವೃದ್ಧಿ ಇಲಾಖೆಗಳಲ್ಲಿ ಸುಮ್ಮನೆ ಇಲಾಖೆಗಳನ್ನು, ನೂರಾರು ಜನ ಕೆಲಸಗಾರರನ್ನು ನೇಮಕ ಮಾಡಿದ್ದಾಗಿದೆಯೇ ವಿನಾ ಚೆನ್ನಾಗಿ ಅಭಿವೃದ್ಧಿ ಮಾಡುವುದಕ್ಕೆ ತಕ್ಕ ವಾತಾವರಣ ಕಲ್ಪಿತವಾಗಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಸಹಕಾರವಿಲ್ಲ, ಸಂಪರ್ಕವಿಲ್ಲ. ಹಾಗಿಲ್ಲದಿರುವುದರಿಂದ ಪ್ರತಿಯೊಬ್ಬನೂ ತನ್ನದೇ ಮೇಲೆಂದು ತಿಳಿದುಕೊಂಡು ಅಭಿವೃದ್ಧಿ ಯೋಜನೆಗಳಿಂದ ನಾವೇನು ನಿರೀಕ್ಷಿಸಿದ್ದೇವೋ ಅದಾಗುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಬಾವಿಗಳ ವಿಚಾರವನ್ನು ಮಾನ್ಯ ಮಿತ್ರರಾದ ನಂಜೇಗೌಡರು ಹೇಳಿದರು. ನಮ್ಮ ಕಡೆಯೂ ಕೂಡ ಬಹಳ ಬಾವಿಗಳಿಗೆ ಹಣ ಕೊಟ್ಟಿದ್ದಾರೆ. ಆದರೆ ಪೂರ್ಣವಾಗಿರುವ ಬಾವಿಗಳೆಷ್ಟು ಎಂದು ನೋಡಿದರೆ ಬಹಳ ಸಂಕಟವಾಗುತ್ತದೆ. ಇಂಥ ಒಂದು ಸಂದರ್ಭದಲ್ಲಿ ಸರ್ಕಾರದ ಹೇಳಿಕೆ ಕೇಳಿಕೆಗಳನ್ನು ನಾವು ನೋಡುವುದಾದರೆ ಶಾಲೆಗಳನ್ನು, ಆಸ್ಪತ್ರೆಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಬೇಕೆಂದಿದ್ದೀರಿ, ಇನ್ನೂ ಏನೇನಿದೆಯೋ ಅದೆಲ್ಲವನ್ನೂ ತಾಲ್ಲೂಕ್ ಬೋರ್ಡಿಗೆ ವಹಿಸುವುದಾದರೆ ನೀವು ಮಾಡುವುದಾದರೂ ಏನು ? ಕೆಲವು ಖಾಸಗಿ ಸಂಸ್ಥೆಗಳಿವೆ. ಅವು ಹೇಗೆ ಕೆಲಸ ಮಾಡುತ್ತಿವೆ, ಅವುಗಳಲ್ಲೇನು ಲೋಪ ದೋಷಗಳಿವೆ ಎಂದು ಆಡಿಟ್ ಇಲಾಖೆಯನ್ನು ವಿಚಾರ ಮಾಡಿದರೆ ಸ್ವಲ್ಪ ಮಟ್ಟಿಗೆ ಅರ್ಥವಾಗುತ್ತದೆ. ಖಾಸಗಿ ಜನ ಅಧಿಕಾರ ಬೇಕೆಂದು ಹೇಳುವುದು ಸ್ವಾಭಾವಿಕವಾದರೂ ಅಧಿಕಾರವನ್ನು ಧರ್ಮದಿಂದ ನಿರ್ವಂಚನೆಯಿಂದ ನಿರ್ವಹಿಸುವ ಶಕ್ತಿ ನಮಗೆ ಬಂದಿಲ್ಲ ಎಂದು ಹೇಳುವುದಕ್ಕೆ ನಾನಂತೂ ನಾಚಿಕೆ ಪಟ್ಟುಕೊಳ್ಳುವುದಿಲ್ಲ. ನಾವು ಪೂರ್ಣವಾಗಿ ತಯಾರಾಗುವವರೆಗೆ ಈ ಎಲ್ಲಾ ಬಾಬಿನ ಕೆಲಸಗಳೂ ಸರ್ಕಾರದ ಹತೋಟಿಯಲ್ಲೇ ನಡೆಯಬೇಕು ಎಂದು ನನಗನ್ನಿಸುತ್ತದೆ. ಮತ್ತು ಈ ಬಾವಿ ಕೆಲಸವನ್ನು ಸರ್ಕಾರದ ಇಲಾಖೆಯವರೇ ವಹಿಸಿಕೊಂಡು ಒಂದೊಂದು ಬಾವಿಯಿಂದ 10-20 ಎಕರೆಗಳ ಸಾಗುವಳಿಯಾಗಿ 5-6 ರೈತರಿಗೆ ಅನುಕೂಲವಾಗುವ ಹಾಗೆ ಸರಿಯಾದ ಸ್ಥಳದಲ್ಲಿ ಬಾವಿ ತೆಗೆಸಿ, ಅಲ್ಲಿಗೆ ವಿದ್ಯುಚ್ಛಕ್ತಿ ಒದಗಿಸಿ, ಆ ಬಗ್ಗೆ ಖರ್ಚಾದ ಹಣವನ್ನು ಕಾಂಟ್ರಿಬ್ಯೂಷನ್ ವಗೈರೆ ರೂಪದಲ್ಲಿ ರೈತರಿಂದ ವಸೂಲು ಮಾಡುವುದು ಸೂಕ್ತ ಎಂದು ನನಗನ್ನಿಸುತ್ತದೆ. ಈಗ ಅನುಸರಿಸುತ್ತಿರುವ ಕ್ರಮವನ್ನೇ ಮುಂದುವರೆಸಿದರೆ ಶತಮಾನಗಳಾದರೂ ನಮಗೆ ಅನುಕೂಲ ಪರಿಸ್ಥಿತಿ ಬರುವುದಿಲ್ಲ.

ಇನ್ನು ಸಹಕಾರಿ ಇಲಾಖೆ ತೆಗೆದುಕೊಂಡರೆ ಈ ದೇಶದ ಅಳಿವು ಉಳಿವೆಲ್ಲವೂ ಕೂಡ ಈ ಸಹಕಾರದಲ್ಲೇ ಇದೆ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಏನಿದೆ ಅಲ್ಲ ಈಗ ರೈತರಿಗೆ ಸಾಲ ಸರಿಯಾಗಿ ಸಿಕ್ಕುವುದಕ್ಕೆ ನಾನಾ ಅಡ್ಡಿ ಆತಂಕಗಳಿವೆ. ಅದರಲ್ಲಿಯೂ ಹಿಂದೆ ಹೇಳಿದ ಹಾಗೆ ನಾನ್‌ಅಫಿಷಿಯಲ್ಸ್ ಕಾರ್ಯದರ್ಶಿಗಳಾಗಿರುವ ಹತ್ತಾರುಕಡೆ ಪರಿಶೀಲಿಸಿ ಇದನ್ನು ತಿಳದಕೊಳ್ಳಲಾಗಿದೆ. ಅಲ್ಲಿ ಮಾಮೂಲು ತೆಗೆದುಕೊಳ್ಳುವ ಪದ್ಧತಿ ಸಹ ಇದೆ, ಒಂದು ಸಾವಿರ ರೂಪಾಯಿಗಳ ರಿಕಾರ್ಡಾದರೆ 150ರಿಂದ 250 ರೂಪಾಯಿಗಳವರೆಗೆ ಮಾಮೂಲು ತೆಗೆದುಕೊಳ್ಳುವ ಪದ್ಧತಿಯಿದೆ. ಅಲ್ಲಿ ಕೆಲದರು ಬಹಳ ಖದೀಮರಿರುತ್ತಾರೆ. ಆದುದರಿಂದ ಅದರ ವಿಚಾರದಲ್ಲಿ ಸ್ವಲ್ಪ ಹೆಚ್ಚು ಮುತವರ್ಜಿ ಅತ್ಯಾವಶ್ಯಕ. ಒಬ್ಬ ಹೆಬ್ಬೆಟ್ಟಿನ ಗುರ್ತು ಹಾಕಲು ಒಂದು ಬೆರಳನ್ನು ಉಪಯೋಗಿಸುತ್ತಿರುವಾಗ ಅಲ್ಲಿ ಹತ್ತು ಬೆರಳನ್ನೂ ಉಪಯೋಗಿಸುವ ಮಹನೀಯರಿದ್ದಾರೆ. ಕೆಲವು ಸೊಸೈಟಿಗಳ ರಿಕಾರ್ಡನ್ನು ತಾವು ನೋಡಬಹುದು. ಇದನ್ನು ಸುಮ್ಮನೆ ಉತ್ಪ್ರೇಕ್ಷೆ ಮಾಡಲು ಹೇಳುತ್ತಿದ್ದೇನೆಂದು ಭಾವಿಸಬಾರದು. ಇದನ್ನು ಅಗತ್ಯವಾಗಿ ಪರಿಶೀಲಿಪಬೇಕು. ಇಂಥ ನಿದರ್ಶನಗಳನ್ನು ನೋಡಿ ಆದಷ್ಟು ಇಂಥ ಸೊಸೈಟಿಗಳಿಗೆ ನೀವು ಸರ್ಕಾರಿ ಸೊಸೈಟಿ ಇನ್ಸ್‌ಪೆಕ್ಟರುಗಳನ್ನೇ ನೇಮಿಸಬೇಕು ನಿಮ್ಮ ಹಿಡಿತದಲ್ಲಿರುವವರನ್ನೇ ಕಾರ್ಯದರ್ಶಿಗಳಾಗಿ ನೇಮಿಸಬೇಕು ಎಂದು ಹೇಳುತ್ತೇನೆ.

ಸಂಸ್ಥೆಗಳಿಗೆ ಈಗ ನಾಮಿನೇಷನ್ ಮಾಡುವ ಪದ್ಧತಿಯಿದೆ. ಅದನ್ನು ತೆಗೆದರೆ ಒಳ್ಳೆಯದು. ಏಕೆಂದರೆ ಒಂದು ಸೊಸೈಟಿ ನನಗೆ ಸಂಬಂಧಪಟ್ಟಿರುವುದರಿಂದ ಅನುಭವದಿಂದ ಹೇಳುತ್ತಿದ್ದೇನೆ. ಜನರಲ್‌ಬಾಡಿ ಆದ ನಾಲ್ಕುತಿಂಗಳ ಮೇಲೆ, ಬೇರೊಂದು ಸಮಿತಿ ವ್ಯವಸ್ಥಿತವಾಗಿ ಕಾನೂನು ಪ್ರಕಾರ ಫಾರಂ ಆದಮೇಲೆ ಯಾವುದೋ ಒಂದು ದಿವಸ ಯಾರೋ ಹೇಳಿದರು ಎಂದು ಯಾರನ್ನೋ ನಾಮಿನೇಷನ್ ಮಾಡುವುದು ಸರಿಯಲ್ಲ. ಇದರ ಕಷ್ಟ ಅನುಭವಿಸಿದವರಿಗೆ ಗೊತ್ತು. ಈ ಪದ್ಧತಿಯನ್ನು ಬೇಗ ತೆಗೆಯಬೇಕು. ಇದಿರುವವರೆಗೆ ಹಳ್ಳಿಯಲ್ಲಿ ಇಲ್ಲದಿರುವ ಕಿತಾಪತಿಗೆ ಮತ್ತು ರಾಜಕೀಯಕ್ಕೆ ಅವಕಾಶವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಎನ್. ಇ. ಎಸ್. ನಲ್ಲಿ ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಮುಂತಾದವರಿದ್ದಾರೆ. ಹಾಗೆಯೇ ಲೇಡಿ ಸೋಷಿಯಲ್ ಆರ್ಗನೈಜರುಗಳಿದ್ದಾರೆ. ಅವರ ತೊಂದರೆ ಹೇಳಲು ಬಹಳ ಸಂಕಟವಾಗುತ್ತದೆ. ನಮ್ಮಲ್ಲಿ ಬಹಳ ವಿತರಣೆಯಿಂದ ಯಶಸ್ವಿಯಾಗಿ ಕಲಸ ಮಾಡುವ ಮಹಿಳೆಯರು ಕೂಡ ಇದ್ದಾರೆ. ಈ ವಿಭಾಗದಲ್ಲಿ, ಬ್ಲಾಕ್ ಏರಿಯಾದಲ್ಲಿರುವ ಹೆಣ್ಣುಮಕ್ಕಳಿಗೆ ಬಹಳ ಮಟ್ಟಿಗೆ ಕಿರುಕುಳವಿದೆ. ಇತರರು ಈ ಮಹಿಳಾ ನೌಕರರನ್ನು ಸರಿಯಾಗಿ ನೋಡುವುದಿಲ್ಲ. ಮಹಿಳೆಯರಲ್ಲಿ ಕೆಲವು ನೌಕರರು ಪದವೀಧರರು ಸಹ ಆಗಿರುತ್ತಾರೆ. ತಿಂಗಳಲ್ಲಿ ನಾಲ್ಕಾರು ದಿವಸ ಸಂಚಾರ ಮಾಡಬೇಕಾಗುತ್ತದೆ. ಆದುದರಿಂದ ಹೆಂಗಸರಿಗೇ ಬೇರೆ ಏರ್ಪಾಡು ಮಾಡಬೇಕು. ಅವರನ್ನು ಬೇರೆ ಇಟ್ಟು ಅವರ ಮೇಲ್ವಿಚಾರಣೆಗೆ ಜಿಲ್ಲಾ ಮಟ್ಟದಲ್ಲಿ ಮಹಿಳಾಧಿಕಾರಿಗಳನ್ನು ನೇಮಕ ಮಾಡುವುದು ಬಹಳ ಸೂಕ್ತ. ಆದಷ್ಟು ಬೇಗ ಸರ್ಕಾರ ಈ ಕಡೆ ಗಮನ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಗ್ರಾಮಾಂತರ ಪ್ರದೇಶಗಳಿಗೆ, ಕುಡಿಯುವ ನೀರಿನ ಬಾವಿಗಳಿಗೆ ಲೋಕಲ್ ಕಂಟ್ರಿಬ್ಯೂಷನ್ ಕೊಡಬೇಕೆಂದು ಕೇಳುತ್ತೀರಿ. ಅನೇಕ ಕಡೆ ಕುಡಿಯುವುದಕ್ಕೆ ನೀರು ಇಲ್ಲದೇ ಇರತಕ್ಕ ಸನ್ನಿವೇಶಗಳು ಇವೆ. ಕಾಂಟ್ರಿಬ್ಯೂಷನ್ ಕೊಡುವುದಿಲ್ಲ ಎಂದು ಹೇಳಿ ನೀರಿನ ಬಾವಿಗಳನ್ನು ಕೊಡದಿದ್ದರೆ ದೇಶದ ಎಲ್ಲಾ ಪ್ರಜೆಗಳಿಗೂ ಕುಡಿಯುವ ನೀರಿನ ಸೌಕರ್ಯ ಒದಗಿಸಬೇಕೆಂಬ ಸರ್ಕಾರದ ಜವಾಬ್ದಾರಿ ಏನಿದೆ ಅದನ್ನು ಹೇಗೆ ನಿರ್ವಹಿಸಿದಂತಾಯಿತು ? ಎಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ ಅಂತಹ ಕಡೆ ಗ್ರಾಮಸ್ಥರಿಂದ ಯಾವುದೇ ವಿಧವಾದ ಕಾಂಟ್ರಿಬ್ಯೂಷನನ್ನು ಅಪೇಕ್ಷಿಸದೇ ಆದಷ್ಟು ವೇಗ ಬಾವಿಗಳನ್ನು ಮಾಡಿಕೊಡಬೇಕೆಂದು ಹೇಳಿ ನಾನು ಬಹಳ ಒತ್ತಾಯ ಪೂರ್ವಕವಾಗಿ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಲೋಕಲ್ ಗ್ರ್ಯಾಂಟ್ ಎಂದು ಹೇಳಿ ತಾಲ್ಲೂಕು ಬೋರ್ಡುಗಳಿಗೆ ಹಾಲಿ ಕೊಡುತ್ತಾ ಇದ್ದೀರಿ. ಇವತ್ತಿನ ರಾಜಕೀಯ ಸ್ಥಿತಿಯಲ್ಲಿ ಏನಾಗುತ್ತಾ ಇದೆ ಎಂದರೆ ಒಂದು ತಾಲ್ಲೂಕಿನಲ್ಲಿ ನಾಲ್ಕು ಗ್ರಾಮ ಪಂಚಾಯ್ತಿಗಳು ಇರುತ್ತವೆ. ಎಲ್ಲಾ ಪಂಚಾಯ್ತಿಗಳಿಗೂ ಒಂದು ಸಮವಾದ ರೀತಿಯಲ್ಲಿ ಹಣ ಹಂಚತಕ್ಕ ಏರ್ಪಾಡು ಮಾಡದೇ ಹೋದರೆ ಯಾರು ದಬಾದುಬಿ ಮಾಡುತ್ತಾರೆ, ವಶೀಲಿ ಬಾಜಿ ನಡೆಸುತ್ತಾರೆ ಅಂಥವರ ಪಾಲಿಗೆ ಹಣ ಸಿಕ್ಕಿ ಇತರರಿಗೆ ಸಿಕ್ಕುವ ಪ್ರಮೇಯ ಬರದೆ, ಅವರು ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಒಂದು ಹೇಳುವುದು ಉಂಟು. ಗ್ರಾಮಸ್ಥರು ಮುಂದೆ ಬರುವುದಿಲ್ಲ ನಾವೇನು ಮಾಡುವುದಕ್ಕಾಗುತ್ತದೆ ಎಂದು. ಮುಂದೆ ಬರುವಂತೆ ಮಾಡುವುದಕ್ಕೇ ಈ ಇಲಾಖೆಯನ್ನು ಇಟ್ಟಿದ್ದೀರಿ. ಹತ್ತಾರು ಜನ ಅಧಿಕಾರಿಗಳು ಇದ್ದಾರೆ, ಅವರಿಗೆ ಕೆಲಸವಾದರೂ ಏನು ? ಪ್ರತಿಯೊಂದು ಗ್ರಾಮದಲ್ಲೂ ಹೋಗಿ ಅಲ್ಲಿ ಏನು ಕೆಲಸ ಆಗಬೇಕು, ಆಯಾಯ ಪಂಚಾಯ್ತಿಗಳಿಗೆ ಸರ್ಕಾರದಿಂದ ಬರತಕ್ಕ ಹಣ ಪಾವತಿಯಾಗಿ ಹೇಗೆ ಕೆಲಸ ನಡೆಯಬೇಕೆಂದು ಅಪೇಕ್ಷೆ ಪಡುತ್ತೇವೆಯೋ ಆ ರೀತಿ ಕೆಲಸ ನಡೆಯುವಂತೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ.ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದೆ ಇರತಕ್ಕ ವ್ಯವಸಾಯ, ಪಶುಸಂಗೋಪನ, ಅರಣ್ಯ, ಗ್ರಾಮಾಂತರ ಅಭಿವೃದ್ಧಿ, ಎನ್. ಇ. ಎಸ್., ಸಹಕಾರ ಈ ಬಾಬುಗಳಿಗೆ ನನ್ನ ಪೂರ್ಣವಾದ ಬೆಂಬಲವನ್ನು ಕೊಟ್ಟು ನಾಲ್ಕು ಮಾತುಗಳನ್ನು ಹೇಳಲು ಬಯಸುತ್ತೇನೆ. ಸ್ವಾಮಿ, ದೇಶಕ್ಕೆ ಬೆನ್ನುಮೂಳೆಯಂತಿರುವವರು ರೈತರು. ರೈತರಿಂದಲೇ ದೇಶದ ಅಭಿವೃದ್ಧಿಯಾಗಬೇಕು ಎಂಬ ಮಾತನ್ನು ಇವತ್ತು ಒಪ್ಪಿಕೊಳ್ಳುತ್ತಾ ಇದ್ದೇವೆ. ಆದರೆ ಇವತ್ತು ನಮ್ಮ ದೇಶದಲ್ಲಿ ರೈತರ ಪರಿಸ್ಥಿತಿ ಹೇಗಿದೆ, ರೈತನ ಸಾಲಸೋಲಗಳ ಪರಿಸ್ಥಿತಿ ಹೇಗಿದೆ ಮತ್ತು ಅವನಿಗೆ ಸರಿಯಾದಂಥ ಸಹಾಯ ದೊರೆಯುತ್ತಾ ಇದೆಯೇ ಎಂಬುದನ್ನು ಪರಿಶೀಲನೆ ಮಾಡಿದರೆ ರೈತನ ಪರಿಸ್ಥಿತಿ ನಮ್ಮ ದೇಶದಲ್ಲಿ ಚಿಂತಾಜನಕವಾಗಿದೆ. ಯಾವ ಲಾಭವೂ ಇಲ್ಲದೇ, ಸ್ವಾರ್ಥ ತ್ಯಾಗ ಮಾಡತಕ್ಕ ರೈತ ವ್ಯವಸಾಯವನ್ನೇ ನಂಬಿರುತ್ತಾನೆ, ಅವನು ಅದರಿಂದಲೇ ಸಂಪಾದನೆ ಮಾಡಬೇಕು. ದೇಶದಲ್ಲಿ ಎಲ್ಲ ಜನರಂತೆ ಅವನೂ ಇರಬೇಕು, ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಮನೋಭಾವ ಇದ್ದಂಥ ಆ ರೈತ ತನ್ನ ಕಸಬನ್ನು ಬಿಟ್ಟು ಇತರ ಕಸಬುಗಳನ್ನು ಅವಲಂಬಿಸಿದ್ದೇ ಆದರೆ ದೇಶಕ್ಕೆ ಬಹಳ ಕಷ್ಟದ ಪರಿಸ್ಥಿತಿ ಉಂಟಾದೀತು ಎಂಬುದನ್ನು ನಾವೆಲ್ಲರೂ ಅರಿತುಕೊಂಡಿದ್ದೇವೆ. ರೈತ ಬೆಳೆದ ಆಹಾರ ಧಾನ್ಯಗಳಿಗೆ ಸರಿಯಾದ ಒಂದು ಬೆಲೆ ಇಲ್ಲ. ಈ ವರ್ಷ ಈ ಬೆಲೆಗಳು ವಿಪರೀತ ಮೇಲಕ್ಕೆ ಹೋಗುತ್ತಾ ಇರತಕ್ಕ ಸಮಯದಲ್ಲಿ ಇದರಿಂದ ದೇಶದ ಆಹಾರದ ಕೊರತೆಯುಂಟಾದೀತು ಎಂದು ಹೇಳಿ ಬೆಲೆಯನ್ನು ತಡೆದು ಹಿಡಿದಿದ್ದೇವೆ. ರೈತನಿಗೆ ಸರಿಯಾದ ಬೆಲೆ ಸಿಕ್ಕದೆ ತೊಂದರೆಯಾಗಿರತಕ್ಕ ವಿಷಯ ಸರ್ಕಾರದವರ ಪರ್ಯಾಲೋಚನೆಗೆ ಬಂದು ಸೊಸೈಟಿಗಳ ಮುಖಾಂತರ ಅವನು ಬೆಳೆದ ಧಾನ್ಯವನ್ನು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಅವನು ಬೆಳೆದ ಧಾನ್ಯವೆಲ್ಲಾ ಬಹುಮಟ್ಟಿಗೆ ಮಾರಾಟಗಾರರ ಕೈಗೆ ಹೋಗತಕ್ಕ ಪರಿಸ್ಥಿತಿ ಬಂದಿದೆ. ಅದನ್ನು ನಮ್ಮ ಸರ್ಕಾರ ಅರಿತುಕೊಂಡೇ ಗೋಡೌನ್‌ಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಮಾಣಮಾಡಿ ರೈತನು ಬೆಳೆದಂಥ ಬೆಳೆಯನ್ನು ತಾವೇ ತೆಗೆದುಕೊಳ್ಳುವುದಕ್ಕೂ ಕೂಡ ಒಂದು ಅವಕಾಶವನ್ನು ಮಾಡಿಕೊಂಡಿದ್ದಾರೆ. ರೈತ ಎಷ್ಟೇ ಕಂದಾಯವನ್ನು ದೇಶಕ್ಕೆ ಕೊಡಲಿ, ಅವನು ಎಷ್ಟೇ ಸೇವೆಯನ್ನು ಸಲ್ಲಿಸಲಿ ಅಕ್ಷರಸ್ಥನಲ್ಲ. ಸರಿಯಾಗಿ ಹೇಳುವುದಾದರೆ ಸಾವಿರಾರು ರೂಪಾಯಿ ಭೂಕಂದಾಯ ಕೊಡತಕ್ಕ ಒಬ್ಬ ರೈತ ತಾನು ಕೊಡಬೇಕಾಗಿರತಕ್ಕ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಫಾರಂನಲ್ಲಿ ಭರ್ತಿಮಾಡಿ ಕೊಡಬೇಕಾದರೆ ಅವನು ಪಡತಕ್ಕ ಪಾಡು ನೋಡಿದರೆ ದುಃಖವಾಗುತ್ತದೆ. ಎಷ್ಟೋ ಜನಗಳ ಹತ್ತಿರ ಹೋಗಿ ಮಾತನಾಡತಕ್ಕ ಸಮಯದಲ್ಲಿ ಅದನ್ನು ನೋಡಿದ್ದೇನೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ವಸೂಲು ಮಾಡುವಾಗ

1959-60, 1960-61; 1961-62 ಈ ಮೂರು ವರ್ಷದ ಇನ್‌ಕಂಟ್ಯಾಕ್ಸ್ ಒಂದೇಸಾರಿ ಕೊಡಬೇಕೆಂದಾಗ ರೈತ ಎಂಥಾ ಪೇಚಾಟಕ್ಕೆ ಸಿಕ್ಕಿದ ಎಂಬುದನ್ನು ನೋಡಿ ತಿಳಿದುಕೊಂಡಿದ್ದೇನೆ. ಇಂಥಾ ಅಂಕಿ ಅಂಶ ಒದಗಿಸಬೇಕು, ಲೆಕ್ಕ ಕೊಡಬೇಕು ಎನ್ನುವ ಪರಿಸ್ಥಿತಿಯಲ್ಲಿ ನಿಸ್ಸಹಾಯಕನಾದ ರೈತನಿಗೆ ಸರ್ಕಾರದವರು ನೆರವನ್ನು ಕೊಡುವುದು ಬಹಳ ಅಗತ್ಯ ಎಂದು ನಾನು ನಂಬಿಕೊಂಡಿದ್ದೇನೆ. ಈ ದೇಶದಲ್ಲಿ ವ್ಯವಸಾಯವೇ ಬಹಳ ಪ್ರಾಮುಖ್ಯವಾದದ್ದು. ವ್ಯವಸಾಯ ಎಂದರೆ ಆಹಾರ ಧಾನ್ಯಗಳು ಅಷ್ಟೇ ಅಲ್ಲದೆ ಇನ್ನು ಅನೇಕ ಕಮರ್ಷಿಯಲ್ ಬೆಳೆಗಳನ್ನು ಬೆಳೆಯುತ್ತಾರೆ. ಉದಾಹರಣೆಗೆ ಹೇಳುವುದಾದರೆ ಕಾಫಿ, ಏಲಕ್ಕಿ ಮತ್ತು ಟೀ ಅಲ್ಲದೆ ಅಡಿಕೆ, ತೆಂಗು ಇವುಗಳನ್ನೆಲ್ಲಾ ಬೆಳೆಯುತ್ತಾ ಇದ್ದಾರೆ. ಇಂಥಾ ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಇವತ್ತು ನಾವು ನೋಡಬೇಕಾಗಿದೆ. ಸರ್ಕಾರದವರು ವಿಧಿಸಿರತಕ್ಕ ಮಿನಿಮಂ ವೇಜಸ್‌ನ್ನು ಕೊಡಲೇಬೇಕಾಗಿದೆ. ಇದಕ್ಕೆ ಆಗತಕ್ಕ ಗೊಬ್ಬರದ ಪರಿಸ್ಥಿತಿ ಹೇಗಿದೆ ಎಂದರೆ ಒಂದು ಟನ್ ಗೊಬ್ಬರಕ್ಕೆ 100–120 ರೂಪಾಯಿ ಇದ್ದದ್ದು ಈ ದಿನ 500 ರೂಪಾಯಿಗೆ ಏರಿದೆ. ಫ್ಯಾಕ್ಟರಿಗಳವರು ಮಾಡತಕ್ಕ ಉತ್ಪನ್ನ ಮತ್ತು ಅವರು ಕೂಲಿಯವರಿಗೆ ಕೊಡತಕ್ಕ ಸಂಬಳವನ್ನು ನೋಡಿದರೆ ರೈತರ ಸ್ಥಿತಿ ಯಾವುದಕ್ಕೂ ಹೋಲಿಸುವಂತಿಲ್ಲ. ರೈತ ಆಹಾರ ಉತ್ಪನ್ನ ಮಾಡಿ, ಸುಖವಾದ ಜೀವನ ಮಾಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ದೇಶದ ಆಹಾರ ಸಂಪತ್ತನ್ನು ಹೆಚ್ಚಿಸತಕ್ಕ ರೈತರಿಗೆ ತಮ್ಮ ಸಹಾಯವನ್ನು ನೀಡಬೇಕೆಂದು ಹೇಳುತ್ತಾ ಇದ್ದೇನೆ. ಹಾಗೆಯೇ ರೈತರಿಗೆ ನಮ್ಮ ಸರ್ಕಾರದವರು ಅವರಿಗೆ ತುಂಬಾ ಉಪಕಾರವಾಗತಕ್ಕ ವಿದ್ಯುಚ್ಛಕ್ತಿ, ಪಂಪು ಸೆಟ್ಟುಗಳಲ್ಲಿ ಒದಗಿಸಿ ನೀರಿನ ಸೌಕರ್ಯ ಮಾಡಿಕೊಡಬೇಕು. ಮಲೆನಾಡಿನ ಪರಿಸ್ಥಿತಿ ಹೇಳುವುದಾದರೆ ವಿದ್ಯುಚ್ಛಕ್ತಿ ಪಂಪುಗಳಿಂದ ರೈತನಿಗೆ ಅಷ್ಟು ಅನುಕೂಲವಾದ ಹಾಗೆ ಇಲ್ಲ. ತುಂಗಭದ್ರಾ, ಹೇಮಾವತಿ, ಯಗಚಿ ನದಿಗಳಿದ್ದರೂ ಕೂಡ ಮೇಲ್ಭಾಗದಲ್ಲಿ ಹುಟ್ಟಿದ ನದಿಗಳು ಕೆಳಭಾಗದಲ್ಲಿ ಹರಿಯದೇ ಇರುವುದರಿಂದ ಪಂಪ್‌ಸೆಟ್ಟುಗಳನ್ನು ಹಾಕದೇ ಇದ್ದರೆ ವ್ಯವಸಾಯ ಮಾಡುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಮಲೆನಾಡು ಪ್ರದೇಶಗಳಲ್ಲಿ ಪೂರ್ವ ಕಾಲದಲ್ಲಿ ನಿರ್ಮಾಣವಾದ ಅನೇಕ ಕೆರೆಗಳು ಇವೆ. ಮೊನ್ನೆ ಪ್ರಶ್ನೆ ಕೇಳಿದಾಗ ಪೂರ್ವ ಕಾಲದ ಅಯ್ಯನಕೆರೆ ಹಾಳಾಗುತಾ ಇದೆ ಎಂದು ಹೇಳಿದರು. ಬಯಲು ಸೀಮೆಯಲ್ಲಿರತಕ್ಕ ಕೆರೆಗಳಿಗೂ ಮಲೆ ಸೀಮೆಯ ಕೆರೆಗಳಿಗೂ ಬಹಳ ವ್ಯತ್ಯಾಸವಿದೆ. ಮಲೆನಾಡಿನ ಕೆರೆಗಳಿಗೆ ಏರಿ ಹಾಕಿದರೆ ಪ್ರಯೋಜನ ಆಗುವುದಿಲ್ಲ. ಹೂಳು ತೆಗೆಸಬೇಕು. ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ 1 ಲಕ್ಷ ಎಕರೆಯಷ್ಟು ರಬ್ಬರು ಬೆಳೆಯತಕ್ಕ ಪ್ರದೇಶ ಇದೆ. ನಮ್ಮ ಸರ್ಕಾರದವರು ಅದನ್ನು ಮೊದಲು ಪರಿಶೀಲನೆ ಮಾಡಿ ಬಹಳ ಆದಾಯ ಬರತಕ್ಕ, ಪರದೇಶಗಳಿಗೆ ಕಳುಹಿಸತಕ್ಕ, ರಬ್ಬರ್ ಬೆಳೆಸತಕ್ಕ ಬೆಳೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಪ್ರಾರ್ಥನೆಮಾಡಿ ಕೊಳ್ಳುತ್ತೇನೆ.

ರೈತನ ವ್ಯವಸಾಯಕ್ಕೆ ಅನುಕೂಲವಾದ ಪಶುಸಂವರ್ಧನದ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಪಶುಪಾಲನೆ ಅಭಿವೃದ್ಧಿಯಾಗಬೇಕಾದರೆ ರೈತ ತೃಪ್ತಿಯಿಂದಿರಬೇಕು. ಉದಾಹರಣೆಗೆ ಹೇಳುವುದಾದರೆ ಆಹಾರ ಧಾನ್ಯಗಳಾಗಿರತಕ್ಕ, ಬತ್ತ, ರಾಗಿ ಮತ್ತು ಜೋಳ, ಕಮರ್ಷಿಯಲ್ ಕ್ರಾಪ್ಸ್ ಆಗಿರತಕ್ಕ ಏಲಕ್ಕಿ, ಕಾಫಿ, ಟೀ, ಮೆಣಸು, ರಬ್ಬರ್, ಕಿತ್ತಲೆ ಹಣ್ಣು, ಮಾವು, ನಿಂಬೇ, ಹೇರಳೆ ಮೊದಲಾದ ಸಮೃದ್ಧಿಯಾಗಿ ಫಲ ಬಿಡತಕ್ಕ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಪ್ರೋತ್ಸಾಹ ಕೊಡಬೇಕಾದರೆ ದೇಶದಲ್ಲಿ ಪರಿಣತರಾದ ರೈತರನ್ನು ಸರ್ಕಾರದವರು ತಯಾರು ಮಾಡುವುದು ಬಹಳ ಮುಖ್ಯ. ಎಷ್ಟೋ ಜನ ವಿದ್ಯಾಭ್ಯಾಸ ಮಾಡಿದವರು ಸರ್ಕಾರಿ ನೌಕರಿಗಳಿಗೆ ಬರುತ್ತಾರೆಯೇ ಹೊರತು ವ್ಯವಸಾಯಕ್ಕೆ ಗಮನ ಕೊಡುತ್ತಿಲ್ಲ. ಆದ್ದರಿಂದ ರೈತರ ಮಕ್ಕಳಾಗಿ, ವ್ಯವಸಾಯದಲ್ಲಿ ಹೆಚ್ಚಿನ ಪರಿಶ್ರಮ ಹೊಂದಿ ವ್ಯವಸಾಯಕ್ಕೆ ಬೆಂಬಲ ಕೊಡುತ್ತಾ, ಹೆಚ್ಚು ಆಹಾರದ ಬೆಳೆಗಳನ್ನು ಬೆಳೆಯತಕ್ಕ ಜಿಲ್ಲೆಗಳಲ್ಲಿ ಒಂದಾದ ಚಿಕ್ಕಮಗಳೂರು ಜಿಲ್ಲೆಗೆ ಒಂದು ವ್ಯವಸಾಯದ ಕಾಲೇಜನ್ನು ಪ್ರಾರಂಭ ಮಾಡಿಕೊಡಬೇಕೆಂದು ನಮ್ಮ ಸರ್ಕಾರದ ವ್ಯವಸಾಯದ ಇಲಾಖೆಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

3-00 P.M.

ರೈತನಿಗೆ ಇರತಕ್ಕ ಮುಖ್ಯವಾದ ಮತ್ತೊಂದು ಕಸುಬೆಂದರೆ ಅದು ದನಕರುಗಳನ್ನು ಸಾಕುವುದು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಹೆಚ್ಚಿನ ಸಂಚಾರಮಾಡಿ ಹೆಚ್ಚಿನ ಪರಿಶ್ರಮ ಪಡೆದುಕೊಂಡು ಬಂದಿರುವುದರಿಂದ ನಮ್ಮ ರಾಜ್ಯದಲ್ಲಿ ದನಕರುಗಳನ್ನು ಹೇಗೆ ಸಾಕಬೇಕೆಂಬುದರ ಬಗ್ಗೆ ಆಗಿಂದಾಗ್ಗೆ ಅವರು ಅನೇಕ ಸಲಹೆಗಳನ್ನು ನಮಗೆ ತಿಳಿಸುತ್ತಿದ್ದಾರೆ. ಈ ಹಿಂದೆ ನಮ್ಮ ರಾಜ್ಯದಲ್ಲಿ ದನಕರುಗಳು ಹೋಗಿ ಮೇಯುವುದಕ್ಕೆ ನೂರಾರು ಎಕರೆ ಹುಲ್ಲುಗಾವಲದ್ದಂಥ ಗೋಮಾಳ ಪ್ರದೇಶವಿತ್ತು. ಈಗ ಆ ಗೋಮಾಳ ಪ್ರದೇಶವೆಲ್ಲ ಮಾಯವಾಗಿಹೋಗಿದೆ. ಎಲ್ಲೋ ಅಲ್ಲೊಂದು ಎಕರೆ—ಇಲ್ಲೊಂದು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಎಕರೆ ಉಳಿದುಕೊಂಡಿದೆ. ಹೀಗಾಗಿ ದನಕರುಗಳ ಮೇವಿಗೆ ಈ ದಿವಸ ತುಂಬಾ ಅನಾನುಕೂಲವಾಗಿದೆ. ಮಾನ್ಯ ಮಂತ್ರಿಗಳೊಂದಾವರ್ತಿ ಮಾತನಾಡುತ್ತ ಆ ಸ್ವಿಟ್‌ಜರ್ ಲ್ಯಾಂಡಿನಲ್ಲಿ ಒಂದೊಂದು ದನವಿನ ಮೇವಿಗಾಗಿ ಅಲ್ಲಿ 6 ಎಕರೆ ಭೂಮಿಯನ್ನು ಹುಲ್ಲು ಬೆಳಸಲು ಇಟ್ಟುಕೊಂಡಿರುತ್ತಾರೆಂತ ತಿಳಿಸಿದ್ದರು. ನಮ್ಮ ಮಂತ್ರಿಗಳು ಎಲ್ಲ ರೈತರಿಗೂ ಆ ಸಿಂಧಿ ಹಾಗೂ ಜರ್ಸಿ ಜಾತಿಯ ದೊಡ್ಡ ರಾಸುಗಳನ್ನು ಇಡಬೇಕೆಂತ ಹೇಳುತ್ತಿದ್ದಾರೆ. ಆ ನಮ್ಮ ಚಿಕ್ಕಮಗಳೂರಿನಂಥ ಜಿಲ್ಲೆಯಲ್ಲಿ–ಅದರಲ್ಲೂ 400 ಇಂಚು ಮಳೆ ಬೀಳತಕ್ಕ ಪ್ರದೇಶದಲ್ಲಿ ಈ ಸಿಂಧಿ-ಜರ್ಸಿ ಜಾತಿ ದನಗಳು ಬಾಳುವುದಿಲ್ಲ. ಅಲ್ಲಿಗೇನಿದ್ದರೂ ಆ ನಮ್ಮ ಮಲೆನಾಡು ಗಿಡ್ಡಗಳೇ ಅನುಕೂಲ. ಅಷ್ಟೇ ಅಲ್ಲದೆ ಇಂಥಾ ಬಲ್ ಬಾಳತಕ್ಕ ರಾಸುಗಳನ್ನಿಡಲು ನಮ್ಮ ದೇಶದಲ್ಲಿ ಎಷ್ಟು ಜನ ರೈತರಿಗೆ ಸಾಧ್ಯವಿದೆ ? ಈ ಬೆಂಗಳೂರಿನ ಪರಿಸ್ಥಿತಿಯೇ ಒಂದು ರೀತಿ-ಆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪರಿಸ್ಥಿತಿಯೇ ಬೇರೆ. ಈ ದಿವಸ ಇಂಥಾ ದೊಡ್ಡ ಬೆಲೆಬಾಳತಕ್ಕ 2-3 ಸಾವಿರ ರೂ.ಗಳ ಬೆಲೆಯುಳ್ಳ ಒಂದು ಜೊತೆ ರಾಸನ್ನಿಡುವಂಥ ಉತ್ತಮ ಆರ್ಥಿಕ ಪರಿಸ್ಥಿತಿಯುಳ್ಳ ರೈತರಾದರೂ ನಮ್ಮ ದೇಶದಲ್ಲಿ ಎಷ್ಟು ಜನ ಇದ್ದಾರೆ ? ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಆದರೆ ಜಾನುವಾರುಗಳ ವಿಚಾರದಲ್ಲಿ ಒಂದು ತೀರ ಕನಿಕರವಾದಂಥ ವಿಷಯ ಎಂದರೆ ಇವು ನಮಗೆ ನಮ್ಮ ತಾಯಿ-ತಂದೆಗಳಿಗಿಂತ ಅಧಿಕವಾಗಿ ಹಾಲುಕೊಟ್ಟು ನಮ್ಮನ್ನು ಅವು ಸಾಕುತ್ತಿವೆ. ಆದರೆ ಅವು ವಯಸ್ಸಾಗಿ-ನಿಶ್ಶಕ್ತಿ ಹೊಂದಿದ್ದಾಗ ಅವುಗಳನ್ನು ಕಟುಕರಿಗೆ ಕೊಲೆ ಮಾಡಲು ಮಾರಾಟ ಮಾಡಿಬಿಡುತ್ತಾರೆ. ಸರ್ಕಾರದವರು ಈ ವಿಚಾರವನ್ನು ಗುಪ್ತ ರೀತಿಯಲ್ಲಿ ಪತ್ತೆ ಮಾಡಬಹುದು. ಆ ರೀತಿ ಮಾಡಿ ಅಂಥಾ ಕಾನೂನೇನಾದರೂ ಇದ್ದರೆ ಅವರಿಗೆ ಶಿಕ್ಷೆ ವಿಧಿಸಿ, ನಮ್ಮನ್ನು ತಂದೆ-ತಾಯಿಗಳಿಗಿಂತ ಹೆಚ್ಚಾಗಿ ನಮಗೆ ಹೆಚ್ಚಾಗಿ ನಮಗೆ ಹಾಲನ್ನು ಕೊಟ್ಟು ಸಂರಕ್ಷಣೆ ಮಾಡಿದಂಥ ಈ ಗೋವುಗಳ ಕೊಲೆಯನ್ನು ಕಡ್ಡಾಯದಿಂದ ತಡೆಗಟ್ಟಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೈತನಿಗೆ ಹತ್ತಿರವಾದ ವಿಷಯವೆಂದರೆ ಅದು ಅರಣ್ಯ ಶಾಖೆಗೆ ಸಂಬಂಧಿಸಿದ್ದು. ನಮ್ಮಲ್ಲಿ ಅರಣ್ಯ ಸಂಪತ್ತು ಹೆಚ್ಚಾಗಿದ್ದೂ-ಇಲ್ಲ. ಇದರಿಂದಲೂ ರೈತನಿಗೆ ಬಹು ಅನುಕೂಲ ಉಂಟಾಗಿದೆ. ನಮ್ಮ ಅರಣ್ಯ ಇಲಾಖೆಯನ್ನು ಇನ್ನು ಹೆಚ್ಚು ಅಭಿವೃದ್ಧಿ ಮಾಡಿ ನಮ್ಮ ವನಸಂಪತ್ತನ್ನು ಅಭಿವೃದ್ಧಿ ಮಾಡಬೇಕೆಂಬ ಅಭಿಮಾನ ನಮ್ಮ ಈಗಿನ ಮಂತ್ರಿಗಳಲ್ಲಿ ಹೆಚ್ಚಾಗಿದೆ. ಇದಕ್ಕಾಗಿ ನಮ್ಮ ಅರಣ್ಯ ಶಾಖೆಯ ಮಂತ್ರಿಗಳು ಬಹಳ ಶ್ರಮ ವಹಿಸಿ ಕೆಲಸಮಾಡುತ್ತಿದ್ದಾರೆ. ಅದಕ್ಕಾಗಿ ನಾವೆಲ್ಲರೂ ಅವರಿಗೆ ಕೃತಜ್ಞರಾಗಬೇಕಾದ್ದು ಅಗತ್ಯ. ನಾನು ಕಾಡು ಹೆಚ್ಚಾಗಿರತಕ್ಕಂಥ ಚಿಕ್ಕಮಗಳೂರು ಜಿಲ್ಲೆಯಿಂದ ಬರುತ್ತಿದ್ದೇನೆ. ಈ ದಿವಸ ಅರಣ್ಯ ಇಲಾಖೆಯವರು ನನಗೆ ತಿಳಿದಂತೆ ಆ ನಮ್ಮ ಕಾಡುಪ್ರದೇಶದಲ್ಲಿ 500 ಎಕರೆಗಳಿಂದ ಸಾವಿರ ಎಕರೆವರೆಗೂ ಅಲ್ಲಿರತಕ್ಕ ಮರವಳಿಯನ್ನು ಇದ್ದಲಗಾಗಿ ಕಡಿಯಲು ಕೊಡುತ್ತಿದ್ದಾರೆ. ಹಾಗೆ ಕಡಿದು ಎಲ್ಲಾ ರಿಲೀಜ್ ಆಗುತ್ತೋ ಆ ಪ್ರದೇಶದಲ್ಲಿ ಅರಣ್ಯಶಾಖೆಯವರು ಸಾಗುವಾನಿ ಪ್ಲಾಂಟೇಷನ್ನನ್ನು ಬೆಳೆಸುವುದಾಗಿ ಹೇಳುತ್ತಿದ್ದಾರೆ. ಈ ದಿವಸ ಅಲ್ಲಿ 5-6 ಸಾವಿರ ಎಕರೆಗಳಲ್ಲಿದ್ದ ಮರಗಳನ್ನೆಲ್ಲ ಕತ್ತರಿಸಿ ಇದ್ದಿಲನ್ನು ಮಾಡುತ್ತಿದ್ದಾರೆ. ಈಗ ಇದ್ದ ಅಷ್ಟು ಮರಗಳನ್ನೆಲ್ಲ ಅವರು ಕತ್ತರಿಸಿ ಹಾಕಿದಮೇಲೆ ಮತ್ತೆ ಯಾವಕಾಲಕ್ಕೆ ಇವರು ಅಲ್ಲಿ ಮರಗಳನ್ನು ಬೆಳಸುವುದು ? ಎಷ್ಟು ದಿವಸಗಳು ಬೇಕು ? ಈ ರೀತಿ ಇರತಕ್ಕ ಮರಗಳನ್ನೆಲ್ಲ ಕಡಿದು ಹಾಳು ಮಾಡಿ-ಮುಂದೆ ಹೊಸವನ್ನು ಬೆಳೆಸುತ್ತೇವೆಂದರೆ ಇದರಿಂದ ದೇಶಕ್ಕೆ ಖಂಡಿತ ತುಂಬಾ ತೊಂದರೆಯಾಗುತ್ತದೆ. ಈ ದಿವಸ ಈ ಇದ್ದಿಲು ಸುಡುವ ನೆಪದಲ್ಲಿ ಭಾರಿನಾಟ ಬೇರೆ ಕಡೆಗೆ ಸಾಗುತ್ತಿದೆ. ಈ ದಿವಸ ಕೆಲವು ಸ್ವಾರ್ಥಿಗಳೂ-ಲಾಭ ಬಡುಕರೂ ಇದ್ದಿಲು ಸುಡತಕ್ಕ ನೆಪದಲ್ಲಿ ಕಾಡನ್ನು ಹಿಡಿದು ಬೆಲೆಯಾದ ಮರಗಳನ್ನೆಲ್ಲ ಕತ್ತರಿಸಿ ಕಳ್ಳತನದಲ್ಲಿ ಬೇರೆ ಕಡೆಗೆ ಸಾಗಿಸುತ್ತಿದ್ದಾರೆ. ಇದರಿಂದ ಈ ದಿವಸ ಸರ್ಕಾರಕ್ಕೆ ಒಂದು ಕೆಟ್ಟ ಹೆಸರು ಬರುವಂತಾಗಿದೆ. ಈ ಮರಗಳನ್ನು ಕತ್ತರಿಸಿ ಬೇರೆಕಡೆಗೆ ಸಾಗಿಸಿ-ಸಾಲದ್ದಕ್ಕೆ ಆ ಮರಗಳ ಬೇರನ್ನು ಅಗೆದು ಕಿತ್ತು ಅವುಗಳನ್ನು ಸುಟ್ಟು ಇದ್ದಿಲನ್ನು ಮಾಡುತ್ತಿದ್ದಾರೆ. ಈ ರೀತಿ ಆಗುತ್ತಿರುವುದರಿಂದ ಈ ದಿವಸ ಜನರಲ್ಲಿ ಈ ಅರಣ್ಯ ಇಲಾಖೆಯಲ್ಲಿ ತುಂಬಾ ಅನ್ಯಾಯ ನಡೆಯುತ್ತಿದೆ ಎಂಬ ಭಾವನೆ ಬಂದಿದೆ. ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಕೆಲವರು ಕೇರಳದಿಂದ ಇಲ್ಲಿಗೆ ಮರದ ವ್ಯಾಪಾರಕ್ಕಾಗಿ ಬಂದು ಅಲ್ಲಲ್ಲೇ ಉಳಿದಿದ್ದಾರೆ. ಅವರ ಪೈಕಿ ಕೆಲವರು ಏನೇನೋ ನೆಪ ಹೇಳಿಕೊಂಡು ತಲಾ 4-5 ಎಕರೆ ಕಾಡುಪ್ರದೇಶವನ್ನು ದರಖಾಸ್ತು ಮೂಲಕ ಪಡೆದುಕೊಂಡಿದ್ದಾರೆ. ಹೀಗೆ ಅವರು ಜಮೀನನ್ನು ಪಡೆದುಕೊಂಡಿರುವುದರಿಂದ ಅಲ್ಲಿರತಕ್ಕ ಕಾಡೆಲ್ಲ ಸರ್ವನಾಶವಾಗುತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ಮೊದಲು ಗಮನ ಕೊಡಬೇಕು. ಇಲ್ಲವಾದರೆ ಈ ಕಾಡು ನಾಶವಾಗಿ ಮುಂದೆ ಮಳೆಯಿಲ್ಲದೆ ಹೋಗಿ ರೈತನಿಗೆ ತುಂಬಾ ತೊಂದರೆ

ಯಾಗುತ್ತದೆ. ಆದುದರಿಂದ ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ವ್ಯವಸಾಯ ಮಾಡತಕ್ಕ ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವರು ಕಾಫಿ ತೋಟ ಮಾಡಲು ಅರಣ್ಯಪ್ರದೇಶಗಳನ್ನು ಕೇಳುತ್ತಿದ್ದಾರೆ. ಅಂಥವರಿಗೆ ಬೆಟ್ಟಗುಡ್ಡಗಳಿರುವ ತಕ್ಕ ಜಾಗದಲ್ಲಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅಂಥ ಕಡೆಗಳಲ್ಲಿ ಈ ವ್ಯವಸಾಯ ಮಾಡಲು ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಈ ವಿಚಾರದಲ್ಲಿ ಮಾನ್ಯ ಅರಣ್ಯ ಖಾತೆಯ ಮಂತ್ರಿಗಳು ಇಲಾಖೆಯಲ್ಲಿರತಕ್ಕ ತಜ್ಞರ ಹಾಗೂ ಅನುಭವ ಇರತಕ್ಕ ಜನರ ಸಲಹೆ ಹಾಗೂ ಅವರ ಅಭಿಪ್ರಾಯ ಪಡೆದು ಇದನ್ನು ಮಾಡತಕ್ಕದ್ದು ಅವಶ್ಯಕ ಎಂದು ಹೇಳುತ್ತೇನೆ. ಏತಕ್ಕೆಂದರೆ ಬೆಟ್ಟದ ಪ್ರದೇಶದಲ್ಲಿ ಒಂದು ಎಕರೆ ತೋಟ ಬೆಳೆಸಲು ಕನಿಷ್ಟಪಕ್ಷ 5 ಸಾವಿರ ರೂ. ಖರ್ಚಾಗುತ್ತೆ. ಸಮವಾದ ಜಾಗದಲ್ಲಿ ಜಮೀನನ್ನು ಕೊಟ್ಟರೆ 2-3 ವರ್ಷಗಳಲ್ಲಿ ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಹೀಗೆ ಕಾಫಿ ತೋಟಕ್ಕೆ ಜಮೀನು ಇಲ್ಲ ಅಂತ ಹೇಳಿದರೆ ಇತ್ತ ಅರಣ್ಯದಲ್ಲಿ ಮರಗಳಾದರೂ ಸರಿಯಾಗಿರುತ್ತವೆಯೇ ಎಂದರೆ ಅದೂ ಇಲ್ಲ. ಈ ಮರಗಳ ಅಕ್ರಮ ಸಾಗಾಣಿಕೆ ನಾನಾ ರೀತಿಯಲ್ಲಿ ನಡೆಯುತ್ತಿದೆ. ಉದಾಹರಣೆ ಹೇಳುವುದಾದರೆ ಮುತ್ತೋಡಿ ಎಂಬ ಸ್ಥಳಕ್ಕೆ ಆರುಮೈಲಿ ದೂರದಲ್ಲಿ ಹಿಪ್ಪೆಕೊಡಿಗೆ ಎಂಬ ಸ್ಥಳದಲ್ಲಿ ರಸ್ತೆ ಪಕ್ಕದಲ್ಲೇ ಒಂದು ದೊಡ್ಡ ಸಾಗುವಾನಿ ಮರ ಸುಮಾರು 20 ಘ. ಅ. ಇದ್ದಂಥ ಮರವಿತ್ತು. ಆ ಮರದ ಸುತ್ತಮುತ್ತಲೂ ಫಾರೆಸ್ಟ್ ಇಲಾಖೆಗೆ ಸೇರಿದ ರೇಂಜರೂ-ಫಾರೆಸ್ಟರೂ ಇರುತ್ತಾರೆ. ಅವರೂ ಆ ಮರ ಇದ್ದಕ್ಕಿದ್ದ ಹಾಗೆ ಅಲ್ಲಿಂದ ಮಾಯವಾಗಿದೆ. ಎಲ್ಲ ಹುಡುಕಿಸಿದರೂ ಆ ಮರ ಸಿಕ್ಕಲಿಲ್ಲ. ಒಂದು ವೇಳೆ ನೆಲವೇ ಆ ಮರವನ್ನು ತಿಂದುಬಿಟ್ಟಿತೇನೋ ಎನ್ನುವ ಸಂಶಯ ನಮಗೆ ಬಂದಿದೆ! ಇನ್ನು ಕಸ್ತೆಮನೆ ಸ್ಟೇಟ್ ಫಾರೆಸ್ಟಿಗೆ ಸೇರಿದ-ಸಂಗಮೇಶ್ವರ-ಸಿಂಗಾರ-ಹಿರಿಯಟ್ಟಿ ಇತ್ಯಾದಿ ಕಡೆಗಳಲ್ಲಿ 2.3 ಲಕ್ಷ ರೂ.ಗಳ ಬೆಲೆ ಬಾಳತಕ್ಕ ಮರಗಳನ್ನು ಕಡಿದು ಕಳ್ಳತನದಲ್ಲಿ ಮಾರಾಟ ಮಾಡಲಾಗಿದೆ ಎಂದು ಎಲ್ಲೆಲ್ಲೂ ಇದು ಒಂದು ದೊಡ್ಡ ಕಥೆಯಾಗಿಬಿಟ್ಟಿದೆ. ಸರ್ಕಾರದವರು ಖಂಡಿತ ಇದನ್ನೆಲ್ಲ ಪತ್ತೆಮಾಡಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ತುಂಬಾ ಕೆಟ್ಟ ಹೆಸರು ಬರುತ್ತೆ. ದೇಶದ ಹಿತದೃಷ್ಟಿಯಿಂದಲೂ, ಇಲಾಖೆಯವರ ಹಿತದೃಷ್ಟಿಯಿಂದಲೂ ಪ್ರಾಮಾಣಿಕತೆಯ ದೃಷ್ಟಿಯಿಂದಲೂ ಸರ್ಕಾರ ಇದಕ್ಕೆ ಹೆಚ್ಚಿನ ಗಮನ ಕೊಡಬೇಕು.

ಇನ್ನು ನಮಗೆ ಈ ಕಾಡಿನಲ್ಲಿರತಕ್ಕ ಮರಗಳೆಷ್ಟು ಪ್ರಾಮುಖ್ಯವೋ ಆ ಕಾಡಿನಲ್ಲಿರತಕ್ಕ ಪ್ರಾಣಿಗಳು ನಮಗೆ ಅಷ್ಟೇ ಮುಖ್ಯ. ಅವುಗಳನ್ನು ರಕ್ಷಣೆ ಮಾಡಬೇಕಾದ್ದು ಬಹಳ ಪ್ರಾಮುಖ್ಯವಾದ ವಿಷಯ. ಆಗಾಗ್ಗೆ ಈ ಖೆಡ್ಡಾ ಅಪರೇಷನ್ ಮಾಡಿ ನೂರಾರು ಆನೆಗಳನ್ನು ಹಿಡಿದು ಅವು ಒಂದನ್ನೊಂದು ಅಗಲ ಹೋಗುವ ಅವುಗಳು ಪಡತಕ್ಕ ವ್ಯಥೆಯನ್ನು ನೋಡಿದರೆ ಅಂಥ ಕರುಣಾಜನಕವಾದ ಪರಿಸ್ಥಿತಿ ಮತ್ತೊಂದಿಲ್ಲ ಅಂತ ಹೇಳಬಹುದು. ಅವುಗಳ ಸಂಕಟವನ್ನು ನೋಡುವುದಕ್ಕಾಗುವುದಿಲ್ಲ. ಆದರೆ ಇಂಥ ಒಂದು ಸಂಕಟವಾದ ಪರಿಸ್ಥಿತಿಯನ್ನು ನೋಡಿ ಆನಂದ ಪಡುವಂಥ ಜನರು ಈ ದೇಶದಲ್ಲಿ ಎಷ್ಟಿದ್ದಾರೋ ನಾನಂತೂ ಕಾಣೆ. ಈ ಹಿಂದೆ ದುಡ್ಡು ಸಂಪಾದನೆ ಮಾಡಲು ಈ ಆನೆಗಳನ್ನು ಹಿಡಿದು ಮಾರಾಟ ಮಾಡುತ್ತಿದ್ದರು. ಆದ್ದರಿಂದ ಸರ್ಕಾರದವರು ಈ ವನ್ಯಮೃಗಗಳನ್ನು ರಕ್ಷಣೆಮಾಡಲು ಅವಕಾಶ ಮಾಡಿಕೊಡಬೇಕು. ಕೆಲವರಿಗೆ ಷಿಕಾರಿಗಾಗಿ ಲೈಸೆನ್ಸ್ ಕೊಡುತ್ತಿದ್ದಾರೆ. ಇದನ್ನು ಆದಷ್ಟೂ ಕಡಮೆಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ರೈತನಿಗೆ ಹತ್ತಿರವಾದ ಮತ್ತೊಂದು ವಿಚಾರವೆಂದರೆ ಅದು ಸಹಕಾರ ಸಂಘಗಳ ವಿಚಾರ. ಇದರ ಬಗ್ಗೆ ಒಂದೆರಡು ಮಾತುಗಳನ್ನಾಡಲು ಅಪೇಕ್ಷಿಸುತ್ತೇನೆ. ಈ ಸಹಕಾರ ಸಂಘಗಳು ರೈತನಿಗೆ ಕಾಮಧೇನು ಕಲ್ಪವೃಕ್ಷವಿದ್ದಹಾಗೆ. ರೈತನಿಗೆ ಇವುಗಳಿಂದ ಬಹಳ ಪ್ರಯೋಜನವಿದೆ. ನಮ್ಮ ದೇಶದ ನಾಯಕರಾದ ಪಂಡಿತ ಜವಹರಲಾಲ್ ನೆಹರೂರವರು ಹೇಳಿರುವಂತೆ ದೇಶದಲ್ಲೆಲ್ಲ ಕಾಮನ್‌ವೆಲ್ತ್ ಕೋ-ಆಪರೇಟ್ ಬೇಸಿಸ್ ಮೇಲೆ ದೇಶದಲ್ಲಿರತಕ್ಕ ರೈತರೆಲ್ಲ ಸಹಕಾರದಿಂದ ಬಾಳ್ವೆ ಮಾಡಬೇಕೆಂಬುದಾಗಿ ಅವರೇನು ಒಂದು ತತ್ವ ಹೇಳಿದ್ದಾರೆ ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಇಲ್ಲಿಯವರೆಗೂ ಈ ಸಂಸ್ಥೆಗಳು ರೈತನಿಗೆ ಬೇಕಾದಷ್ಟು ಸಹಾಯ ಸಹಕಾರಗಳನ್ನು ನೀಡಿವೆ. ಈ ದಿವಸ ವ್ಯವಸಾಯಗಾರರ ಪರಿಸ್ಥಿತಿ ಎಷ್ಟು ಸುಧಾರಿಸಿದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ. ಆದುದರಿಂದ ಈ ಸಂಸ್ಥೆಗಳು ಈ ದಿವಸ ಹೇಗೆ ಕೆಲಸಮಾಡುತ್ತಿವೆ ಎಂಬುದನ್ನು ವೀಕ್ಷಿಸಬೇಕಾದ್ದು ಬಹು ಪ್ರಾಮುಖ್ಯವಾದದ್ದು ಈ ದಿವಸ ಅನೇಕ ಗ್ರಾಮಗಳಲ್ಲಿ ಈ ಕೊಟ್ಟಣದ ಅಕ್ಕಿ-ಎಣ್ಣೆಯ ಗಾಣ, ಚರ್ಮ ಹದ ಮಾಡುವುದು, ಇತ್ಯಾದಿ ಗ್ರಾಮ ಕೈಗಾರಿಕೆಗಳಿಗೆ ದುಡ್ಡನ್ನು ಕೊಟ್ಟಿರುವುದೇನು ಕಡಿಮೆಯಾಗಿಲ್ಲ. ಇವುಗಳಲ್ಲಿ ಸರಿಯಾಗಿ ಕೆಲಸ ಮಾಡದೆ ದುಡ್ಡನ್ನು ತಿಂದು ಹಾಕಿವೆ ಎಂತ ಪುಕಾರುಗಳು ಕೇಳಿ ಬರುತ್ತಿವೆ. ಸರ್ಕಾರದವರು ಕೂಡಲೆ ಎಚ್ಚರಿಕೆ ತೆಗೆದುಕೊಳ್ಳದಿದ್ದರೆ ಕೊನೆಗೆ ಆ ಸಂಘಗಳಿದ್ದಲ್ಲಿ ಗುರ್ತಿಸುವುದಕ್ಕೆ ಸಹ ಒಂದು ಸಾಮಾನಿಲ್ಲದಂತಾಗುತ್ತದೆ—ಮುಂದೆ ಸರ್ಕಾರ ಅವಹೇಳನಕ್ಕೆ ಗುರಿಯಾಗಬೇಕಾಗುತ್ತದೆ. ಈ ವಿಚಾರಕ್ಕೆ ಸರ್ಕಾರ ತೀವ್ರ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಗಮನ ಕೊಡಬೇಕು. ಇನ್ನು ಅನೇಕ ಸಹಕಾರ ಸಂಘಗಳಲ್ಲಿ ಸಾಲಕೊಟ್ಟ ಹಣ ಸಂಪೂರ್ಣವಾಗಿ ವಾಪಸ್ಸು ಬಂದಿಲ್ಲ. ಈ ಸೊಸೈಟಿಗಳಲ್ಲಿ ಸಾಲ ತೆಗೆದುಕೊಂಡರೆ ಅದು ವಾಪಸ್ಸು ಕೊಡತಕ್ಕ ಸಾಲವೇ ಅಲ್ಲ ಅನ್ನುವ ಭಾವನೆ ಜನರಲ್ಲಿ ಬಂದಿದೆ. ಈ ಸಾಲ ಪಡೆದು ತೃಪ್ತಿತನ್ನರಾಗಿ ಬರತಕ್ಕವರು ಮಹನೀಯರಾಗಲೀ-ಮಹಿಳೆಯರಾಗಿರಲಿ, ಅವರಿಗೆಲ್ಲ ನಿಷ್ಕರುಣೆಯಿಂದ ಕ್ರಮಕೈಗೊಂಡು ಆ ಹಣವನ್ನು ವಸೂಲ್ಮಾಡಬೇಕೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಸರ್ಕಾರದವರು ಈ ಸಹಕಾರ ಸಂಘಗಳಿಗೆ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಈ ಡಿಫಾಲ್ಟರುಗಳು ಹೆಚ್ಚಾಗುತ್ತಿದ್ದಾರೆ. ಆ ನಮ್ಮ ಚಿಕ್ಕಮಗಳೂರು ಬ್ಯಾಂಕಿನಲ್ಲಿ ಈ ಡಿಫಾಲ್ಟರ ಸಂಖ್ಯೆ ಜಾಸ್ತಿಯಾಗಿರುವುದೊಂದೇ ಅಲ್ಲದೆ ಅಲ್ಲಿ ಮೊನ್ನೆ ಎಲೆಕ್ಷನ್ ಸಹ ಆಗದೆ-ಆ ಬಗ್ಗೆ ಹೈಕೋರ್ಟಿನಿಂದ ಸ್ಟೇ ಆರ್ಡರನ್ನು ತಂದಿದ್ದಾರೆ. ಆದರೆ ಇಂಥಾ ಪರಿಸ್ಥಿತಿ ಈ ಸಂಘಗಳಿಗೆ ಬರಬಾರದು ಅಂತ ನಾನು ತಿಳಿದುಕೊಂಡಿದ್ದೇನೆ. ಇನ್ನು ಈ ಸಂಘಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡತಕ್ಕ ಬಗ್ಗೆ ಅದು ಸಕಾಲದಲ್ಲಿ ನಡೆಯುತ್ತಿಲ್ಲ. ಈ ವಿಚಾರದಲ್ಲಿ ಆ A.G.R. ಸಮಿತಿ ವರದಿಯಲ್ಲಿ ಸೂಚಿಸಿರತಕ್ಕ ಸಲಹೆಯನ್ನು ಸರ್ಕಾರದವರು ಜಾರಿಗೆ ತರುವಂತೆ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಗ್ರಾಮಾಭಿವೃದ್ಧಿ ವಿಚಾರದಲ್ಲಿ, ಗ್ರಾಮಾಂತರ ಪ್ರದೇಶದಿಂದ ಬಂದಿರುವವಳಾದ್ದರಿಂದ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಹಳ್ಳಿಗಳ ಕಡೆ ಸಂಚಾರ ಸೌಲಭ್ಯಗಳಿಲ್ಲದೆ ತೊಂದರೆಯಾಗಿದೆ. ಮೈಸೂರು ದೇಶ ಮೊದಲು 9 ಜಿಲ್ಲೆಗಳಿಂದ ಕೂಡಿದ್ದುದು ಈಗ 19 ಜಿಲ್ಲೆಗಳಿಂದ ಕೂಡಿದ್ದಾಗಿದೆ. ಖರ್ಚು ಮಾಡತಕ್ಕ ಹಣವನ್ನು ಎಷ್ಟು ಕಡಮೆ ರೀತಿಯಿಂದ ಖರ್ಚು ಮಾಡಿದರೂ ಸಹ ಎಲ್ಲ ಭಾಗಗಳಿಗೂ ಒದಗಿಸುವುದಕ್ಕೆ ತುಂಬ ಕಷ್ಟವಾಗಿದೆ. ಆದರೂ ಹಿಂದುಳಿದಿರತಕ್ಕ ಮಲೆನಾಡು ಪ್ರದೇಶಗಳಲ್ಲಿ ಸಂಚಾರ ಸೌಕರ್ಯಕ್ಕಾಗಿ ಹೆಚ್ಚು ಸಹಾಯ ಮಾಡಬೇಕು. ಮೊನ್ನೆಯ ದಿನ ಒಂದು ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಗಳು, ತಾಲ್ಲೂಕು ಬೋರ್ಡ್‌ಗಳು ಇಂಥ ರಸ್ತೆಗಳನ್ನು ನೋಡಿಕೊಳ್ಳಬೇಕೆಂದು ಅಪ್ಪಣೆ ಕೊಡಿಸಿದರು, ತಾಲ್ಲೂಕ್ ಬೋರ್ಡ್‌ಗಳ ಪರಿಸ್ಥಿತಿ ಏನಾಗಿದೆ ಎಂದರೆ, ಅವರು ತಮ್ಮ ವರಮಾನದಿಂದ ಒಂದು ರಸ್ತೆಯನ್ನೂ ಸಹ ಪೂರ್ಣವಾಗಿ ಮಾಡಲು ಸಾಧ್ಯವಿಲ್ಲ. ತಾಲ್ಲೂಕು ಬೋರ್ಡಿನ ವರಮಾನ ಒಂದೂವರೆ ಲಕ್ಷ ರೂಪಾಯಿ ಇದ್ದರೆ ಒಂದು ರಸ್ತೆಯ ಖರ್ಚು ಎರಡು ಲಕ್ಷ ರೂಪಾಯಿಗಳವರೆಗೂ ಆಗುತ್ತದೆ ತಾಲ್ಲೂಕ್ ಬೋರ್ಡ್ ಗ್ರಾಮಾಂತರ ರಸ್ತೆಗಳನ್ನೂ ನಡೆಸಿಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರದವರು ಈ ರಸ್ತೆಗಳನ್ನು ಮಾಡಿಸಿ ಅದನ್ನು maintain ಮಾಡಲು ತಾಲ್ಲೂಕ್ ಬೋರ್ಡ್‌ಗಳಿಗೆ ಹಣವನ್ನು ಕೊಟ್ಟು ಅವುಗಳಿಗೆ ವಹಿಸಬಹುದು. ಇಲ್ಲದೆ ಇದ್ದರೆ ಇನ್ನೂ ನೂರು ವರ್ಷವಾದರೂ ಆ ರಸ್ತೆಗಳು ಅಭಿವೃದ್ಧಿಯಾಗುವ ಹಾಗಿಲ್ಲ. ಇದರ ಜೊತೆಗೆ ಕುಡಿಯುವ ನೀರಿನ ತೊಂದರೆ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಹೆಚ್ಚಾಗಿದೆ. ಇದಕ್ಕೂ ಸರ್ಕಾರ ಸಹಾಯ ಮಾಡಬೇಕು. ಹಿಂದುಳಿದಿರುವ ಹಳ್ಳಿಯ ಪ್ರದೇಶಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಸರ್ಕಾರದವರು ಹೆಚ್ಚಿನ ಸಹಾಯ ಮಾಡಬೇಕೆಂದು ಹೇಳಿ ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳಿಗೆ ನಾನು ಪೂರ್ಣ ಬೆಂಬಲವನ್ನು ಕೊಟ್ಟು, ಎರಡು ದಿವಸದಿಂದಲೂ ಮಾತನಾಡಲು ಪ್ರಯತ್ನ ಪಟ್ಟರೂ ಅವಕಾಶ ಸಿಕ್ಕದೆ ಇವೊತ್ತು ಮಾನ್ಯ ಅಧ್ಯಕ್ಷಣಿಯವರು ಈ ದಿವಸ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳನ್ನರ್ಪಿಸುತ್ತೇನೆ.

† ಶ್ರೀ ಎಂ. ವಿ. ಶೆಟ್ಟಿ (ಚಿಕೋಡಿ).—ಅಧ್ಯಕ್ಷರೇ, ಇಂದು Freedom from Hunger ಎಂದು ಒಂದು ವಾರ ಚಳುವಳಿಯನ್ನು ನಡೆಸಿದ್ದಾರೆ. ಈ ಚಳುವಳಿಯು ಅಲ್ಲಿ ಇಲ್ಲಿ ಸುಮಾರಾಗಿ ನಡೆದಿದೆ. ಅಂಥ ಸ್ಥಿತಿಯಲ್ಲಿ ಈ ವ್ಯವಸಾಯ ಇಲಾಖೆಯ ಡಿಮಾಂಡ್ ಮೇಲೆ ಮಾತನಾಡುವ ಪ್ರಸಂಗ ಬಂದಿದೆ. ಯಾರಿಗೆ ಹಸಿವೆಯ ಅರಿವು ಇಲ್ಲ ಅವರೆಲ್ಲ ಪ್ರತಿನಿಧಿಗಳೆಂದು ಈ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಈ ದೇಶದ ಪ್ರಧಾನ ಮಂತ್ರಿಗಳಾದ ಜವಹರ್‌ಲಾಲ್ ನೆಹರೂ ಅವರು ಮೊನ್ನೆ ಸ್ಪಷ್ಟವಾಗಿ ಹೇಳಿದ್ದಾರೆ. "ನನ್ನ ಹತ್ತಿರ ಭೂಮಿ ಇಲ್ಲ, ನನಗೆ ಅದರ ವಿಚಾರ ಗೊತ್ತಿಲ್ಲ ಎಂದು. ಅದೇ ರೀತಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ನನಗೆ ಭೂಮಿಯಿಲ್ಲವೆಂದು ಹೇಳಿದರು. ಈ ದೇಶದೊಳಗೆ ಮುಖ್ಯವಾಗಿರತಕ್ಕದ್ದು ವ್ಯವಸಾಯ. ರೈತನು ದೇಶದ ಬೆನ್ನುಮೂಳೆ ಎಂದು ಎಲ್ಲ ಹೇಳುತ್ತೇವೆ. ಆದರೆ ಈ ದೇಶದಲ್ಲಿ ಇಂಥ ಮುಖ್ಯವಾದ ಉದ್ಯೋಗಕ್ಕೆ ಪ್ರಾಶಸ್ತ್ಯವಿಲ್ಲ. ಮಂತ್ರಿಗಳ ಸ್ಥಾನ ನೋಡಿದರೆ 20-25 ಸ್ಥಾನಗಳಿರುತ್ತವೆ. ಮಂತ್ರಿಗಳು ವಹಿಸಿಕೊಳ್ಳುವ ಇಲಾಖೆಗಳಲ್ಲಿಯೂ ಮುಖ್ಯವಾದುವು ಮತ್ತು ಅಮುಖ್ಯವಾದುವು ಎಂದು ಮಾಡಿಕೊಂಡಿದ್ದಾರೆ. important portfolios, less important portfolios ಎನ್ನುವ ಭಾವನೆ ಬೆಳೆಯುತ್ತ ಬಂದಿದೆ. ಇದು

ದುರ್ದೈವ. ದೇಶದ ಅನ್ನ ಸಮಸ್ಯೆಯನ್ನು ಬಿಡಿಸುವಂಥ ಇಲಾಖೆಗೆ ಮುಖ್ಯಸ್ಥಾನವನ್ನು ಕೊಡಬೇಕು. ವ್ಯವಸಾಯ ಮುಖ್ಯ ಅದು ನನ್ನ ಇಲಾಖೆಯಾಗಲಿ ಎಂದು ಮುಂದೆ ಬರಬೇಕು. ಈ ದೇಶಕ್ಕೆ ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ಬಂದಾಗ ರಾಮ ಬಂದ, ನಮ್ಮ ನಾಯಕ ಬಂದ, ಎಂದು ಕೆಲವರು ಹೇಳುತ್ತಿದ್ದರು. ಆ ಮಾತಿನಿಂದ ಸಮಾಧಾನವಾಯಿತು. ಹಿಂದೆ ಇಂಗ್ಲೆಂಡ್ ದೇಶಕ್ಕೆ ಒಬ್ಬಾತ Beveridge plan ಎಂದು ಕೊಟ್ಟ, ಅದೇ ರೀತಿ ಇಲ್ಲಿಯೂ ಸಾಕಷ್ಟು ವಯಸ್ಸು ಮತ್ತು ಅನುಭವವನ್ನು ಪಡೆದಂಥ ಈ ದೇಶದ ಮುಖ್ಯಮಂತ್ರಿಗಳು ಹುರುಪಿನಿಂದ ಈ ಒಕ್ಕಲುತನದ ಖಾತೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಅಮೇಲೆ Nijalingappa plan for agriculture for the State ಎಂದು ಮಾಡಬೇಕು. ಈಗ ಇರುವುದು ಯಾರ ಮಂತ್ರಿಮಂಡಲ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲವೆಂದು ಹೇಳುತ್ತಿದ್ದೇವೆ. ದೇಶದ ಬೆನ್ನು ಮೂಳೆ, ದೇಶದ ಮುಖ್ಯವಾದ ಕಸಬು ಒಕ್ಕಲುತನ. ಇದರ ಪ್ರಗತಿಯ ಮೇಲೆ, ಇದರ ಭವಿತವ್ಯದ ಬದುಕಿನ ಮೇಲೆ ದೇಶದ ಪ್ರಗತಿಯು ಅವಲಂಬಿಸಿದೆ. ಮಾನ್ಯ ಅರ್ಥ ಮಂತ್ರಿಗಳು ಅವರ ಬಜೆಟ್ ಭಾಷಣದಲ್ಲಿ ಎರಡು ಯೋಜನೆಗಳು ಮುಗಿದಿದ್ದರೂ ಸಾಕಷ್ಟು food production ಆಗಲಿಲ್ಲ. ಹತ್ತು ಲಕ್ಷ ಟನ್ ಹೆಚ್ಚಾಗಬೇಕಾಗಿತ್ತು. ಅವರೆ ಒಂದೂವರೆ ಲಕ್ಷ ಟನ್ ಮಾತ್ರ ಹೆಚ್ಚಾಗಿದೆ, ಎಂದು ಹೇಳಿದ್ದಾರೆ. ಬರುವ ಮೂರು ವರ್ಷಗಳಲ್ಲಿ ಎಂಟು ಲಕ್ಷ ಟನ್ ಹೆಚ್ಚು ಕಾಳನ್ನೂ, ಧಾನ್ಯವನ್ನೂ ಬೆಳೆಯಬೇಕಾಗಿದೆ. ಮುಖ್ಯವಾಗಿ ಈ ಸರ್ಕಾರದವರು ಒಕ್ಕಲುತನಕ್ಕೆ ಏನು ಮಹತ್ವವನ್ನು ಕೊಟ್ಟಿದ್ದಾರೆಂದು ನೋಡುವುದಕ್ಕೆ ಹೋದರೆ ಹತ್ತು ಅಲ್ಲ ಇಪ್ಪತ್ತು ವರ್ಷವಾದರೂ freedom from hunger ಬರುವುದಕ್ಕೆ ಸಾಧ್ಯವಿಲ್ಲವೆಂದೆನ್ನಿಸುತ್ತದೆ.

ಒಕ್ಕಲುತನದ ಮಾತನಾಡುವಾಗ pump sets ವಿಷಯ ಹೇಳಿದರು. ದೇಶದಲ್ಲಿ ಒಕ್ಕಲುತನದ landless labour ನೂರಕ್ಕೆ 25 ಜನರಿದ್ದಾರೆ, ಅವರಿಗೆ ಪಂಪ್‌ಸೆಟ್‌ಗಳಾಗಲೀ, ಇತರ ಸಹಾಯಗಳಾಗಲೀ ಸಿಕ್ಕುವುದಿಲ್ಲ. ನೂರಕ್ಕೆ ಐವತ್ತು ಮನೆತನಗಳು ಒಂದು ಎಕರೆ ಹಿಡುವಳಿಯಿರುವ ಮನೆತನಗಳಾಗಿವೆ. ಇಂಥವರಿಗೂ ಪಂಪ್‌ಸೆಟ್‌ಗಳನ್ನಾಗಲೀ ಭಾವಿಗಳನ್ನಾಗಲೀ ಕೊಡುವುದಿಲ್ಲ. ಸುಮಾರು 100 ಕ್ಕೆ 75 ಜನಗಳಿಗೆ, ವ್ಯವಸಾಯ ಖಾತೆಯಿಂದ ಏನೂ ಮಾಡದೇ ಇರುವಾಗ, ವ್ಯವಸಾಯವನ್ನೇ ನಂಬಿಕೊಂಡಿರುವವರಿಗೆ ಅನುಕೂಲಗಳು ಸಿಕ್ಕುವುದು ಯಾವಾಗ ಎನ್ನುವ ಪ್ರಶ್ನೆ ಬರುತ್ತದೆ. ಅವರಿಗೆ ಸುಖ ಸಿಕ್ಕುವುದು ಎಂದು. ಈ ಜನಗಳಿಗೆ ಎರಡು ಹೊತ್ತು ಹೊಟ್ಟೆಗೆ ಸಿಕ್ಕುವುದು ಎಂದು. ಸರ್ಕಾರದಿಂದ ತಮಗೆ ಸಹಾಯವಾಗುತ್ತದೆಂದು ಈ ಜನ ನಂಬಿಕೊಂಡಿದ್ದಾರೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಖಾತೆಯ ಜವಾಬ್ದಾರಿಯನ್ನು ತಾವು ಹೊತ್ತು ನಿಜಲಿಂಗಪ್ಪ ಪ್ಲಾನ್ ಮಾಡಿದರೆ ಈ ದೇಶ ಬರುವ ಮೂರು ವರ್ಷಗಳಲ್ಲಿ ಯಶಸ್ವಿಯಾಗಿ ಆಹಾರೋತ್ಪಾದನೆಯಲ್ಲಿಟ್ಟುಕೊಂಡಿರುವ ಹತ್ತು ಲಕ್ಷ ಟನ್ ಗುರಿಯನ್ನು ಸಾಧಿಸಿಕೊಳ್ಳಬಹುದು. ಆಗಮಾತ್ರ ಜನನಾಯಕ, ರಾಮ, ಎಂದ ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು plan ಮಾಡಿ ದೇಶದಲ್ಲಿರುವ ನೂರರಲ್ಲಿ 25 ಜನ ಕೂಲಿಗಾರರು ಮತ್ತು 50 ಜನ ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುವಂತೆ ಮಾಡಬೇಕು.

ವ್ಯವಸಾಯ ಖಾತೆಗೆ ಸಾಕಾದಷ್ಟು ಮನ್ನಣೆ ಕೂಡ ಇಲ್ಲ. ಭೂಕಂದಾಯದಿಂದ ಸಾಕಾದಷ್ಟು ಹಣ ವಸೂಲಾಗುತ್ತದೆ, ಬ್ರಿಟಿಷರು ರಾಜ್ಯಭಾರ ಮಾಡಿದಾಗ ಕಲೆಕ್ಟರ್ ಎಂದು ನೇಮಿಸಿ ಅವರಿಗೆ ಭೂಕಂದಾಯವನ್ನು ವಸೂಲ್ಮಾಡಲು ನೇಮಿಸಿ ಮಹತ್ವವನ್ನು ಕೊಟ್ಟರು. ಈಗ ನಮ್ಮಲ್ಲಿ ವ್ಯವಸಾಯ ಮುಖ್ಯ ಕಸಬಾಗಿರುವುದರಿಂದ, ನಾವು ವ್ಯವಸಾಯಕ್ಕೆ ಮಹತ್ವವನ್ನು ಕೊಡುತ್ತಿರುವುದರಿಂದ ವ್ಯವಸಾಯದ ಅಧಿಕಾರಿಗಳಿಗೆ ಮಹತ್ವವನ್ನು ಕೊಡಬೇಕು ಜಿಲ್ಲೆಗಳಲ್ಲಿರುವ ವ್ಯವಸಾಯದ ಇಲಾಖೆಯ ಅಧಿಕಾರಿಗಳಿಗೆ ಮನ್ನಣೆಯನ್ನು ಕೊಡಬೇಕು. Dress maketh a man ಎನ್ನುವಂತೆ Minister maketh the Department ಎಂದು ಹೇಳಬಹುದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ವ್ಯವಸಾಯ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. "Who Cares for Agriculture in this Country" ಎಂದು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮಾನ್ ಪಾವಟೆಯವರು ಒಂದು ಲೇಖನವನ್ನು ಬರೆದಿದ್ದಾರೆ. ಎಲ್ಲ ಬಾಯಿ ಮಾತಿನಲ್ಲಿ ಹೇಳುವವರೇ ಆಗಿದ್ದಾರೆ.

ಇಡೀ ಗ್ರಾಮಸೇವಕರಿಂದ ಹಿಡಿದುಕೊಂಡು ಮುಖ್ಯಮಂತ್ರಿಗಳವರೆಗೆ, ಬರೀ "Lip Sympathy" ಇದೆ. ಹದಿನೈದು ವರ್ಷಗಳಲ್ಲಿ, ಹಿಂದೆ ಹತ್ತಾರು ವರ್ಷಗಳಲ್ಲಿ ಯಾವ ರೀತಿಯಾದ ಸ್ಥಿತಿ ಇತ್ತೋ ಅದೇ ಸ್ಥಿತಿ ಇಂದೂ ಈ ದೇಶದಲ್ಲಿದೆ. ಇಲ್ಲೇನೋ ಸರಿಯಾದ ಉತ್ಪನ್ನ 725 ಎಂದು ಇದ್ದದ್ದು 792 ಕ್ಕೆ ಮುಟ್ಟಿದೆ ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಕಾಳು ಎಷ್ಟು ಉತ್ಪತ್ತಿಯಾದದ್ದು ಎನ್ನುವುದು ಇಲ್ಲ. ನಮ್ಮ ದೇಶದಲ್ಲಿ inflation ಹೆಚ್ಚಿದೆಯೇ ಹೊರತು ಕಾಳು ಹೆಚ್ಚಾಗಿಲ್ಲ. ಏನೋ ಕೆಲವರು ಈಗ ಕಾಫೀ, ಏಲಕ್ಕಿ, ಟೀ ಪ್ಲಾಂಟೇಷನ್ನುಗಳಲ್ಲಿ ಹೆಚ್ಚಿಗೆ ಉತ್ಪನ್ನ

(ಶ್ರೀ ಎಂ. ವಿ. ಶೆಟ್ಟಿ)

ಮಾಡುತ್ತಿದ್ದೇವೆಂದರು. ಇದರಿಂದ ಉತ್ಪತ್ತಿಯೂ ಹೆಚ್ಚಾಗಿರಬಹುದು. ಆದರೆ ಬಡವರಾಗಿರುವವರು ವಿಲಕ್ಕಿಯನ್ನು ಎಷ್ಟು ಜನರು ಉಪಯೋಗಿಸಬಹುದು. ಒಪ್ಪತ್ತಿನ ಊಟವನ್ನೇ ಮಾಡದಿರುವವರು, ವಿಲಕ್ಕಿಯನ್ನು ಎಷ್ಟು ಜನ ತಿನ್ನಲಿಕ್ಕೆ ಉಪಯೋಗಿಸಬಹುದು. ಇಂತಹ ಕಾಫಿ, ಏಲಕ್ಕಿ ಬೆಳೆಗಳನ್ನು ಮಾಡುವುದಕ್ಕಾಗಿ ರಸ್ತೆ ಬೇಕೆಂದು ಕೇಳುತ್ತಿದ್ದಾರೆ. ಮತ್ತೆ ನಮ್ಮ ಅಗ್ರಿಕಲ್ಚರ್ ಪ್ರೊಡಕ್ಷನ್ನು ನೋಡಿದರೆ It is only Ten Per cent. ಅಗ್ರಿಕಲ್ಚರ್ ಪ್ರಾಡ್ಯೂಸು ಮಾರ್ಕೆಟ್ಟಿಗೆ ಬರಬೇಕು. ಅದಕ್ಕಾಗಿ ರಸ್ತೆಗಳು ಬೇಕೆಂದು ಕೇಳುವವರು, ಅಗ್ರಿಕಲ್ಚರ್ ಪ್ರಾಡ್ಯೂಸ್ ಮಾಡುತ್ತಿರುವ ಜನರು ನೂರರಲ್ಲಿ ಹತ್ತರಷ್ಟಿದ್ದಾರೆ. ಈಗ ಮಾರ್ಕೆಟಿಗೇ ಎಲ್ಲರೂ ಹೋಗಿ ಕಾಳನ್ನು ಕೊಂಡುಕೊಳ್ಳುತ್ತಿದ್ದಾರೆ. ಹಳ್ಳಿಹಳ್ಳಿಗೆ ಹೋಗಿ ಕಾಳನ್ನು ಉತ್ಪನ್ನ ಮಾಡುವವರೂ ಬಹಳ ಕಡಿಮೆ ಇದ್ದಾರೆ. ಪ್ರತಿಯೊಂದು ಹಳ್ಳಿಯೂ ಇಂದು ಸ್ವಯಂಪೂರ್ಣವಾಗಿ, ಪ್ರತಿಯೊಂದು ಕುಟುಂಬವೂ ಸ್ವಯಂಪೂರ್ಣವಾಗಿರಬೇಕೆಂದು ಗಾಂಧಿಯವರು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದರು. ಇವೊತ್ತು ಅಂತಹ ಗಾಂಧಿಯವರ ಹೆಸರು ಚಿತ್ರದಲ್ಲಿರುವಂತೆ ಇದ್ದಿದ್ದರೆ ಅವರು ಕಣ್ಣೀರು ಸುರಿಸಿ Freedom for Hunger ಎಂದು ಮಾಡುತ್ತಿದ್ದರು. ಈ ದೇಶದಲ್ಲೇ ಅಲ್ಲ, ಈ ಜಗತ್ತಿನ ಯಾವ ವ್ಯಕ್ತಿಯೇ ಆಗಲೀ ಅನ್ನದ ಸಲುವಾಗಿ ಕಷ್ಟಪಡುತ್ತಿದ್ದಾರೆ. ಮೂರನೆ ಪಂಚವಾರ್ಷಿಕ ಯೋಜನೆ ಕಳೆದು ಮೂರು ವರ್ಷಗಳಾಗಿ ಇನ್ನು ಎರಡು ವರ್ಷಗಳು ಉಳಿದಿವೆ. ಹಾಗಾದರೂ ಇನ್ನೂ ಅನ್ನದ ಅಭಾವ ತಪ್ಪಲಿಲ್ಲ. ಇದಕ್ಕಾಗಿ ಈ ದೇಶದ ಜನರಿಗೆ ಅನುಕೂಲವಾಗುವಂತೆ "ನಿಜಲಿಂಗಪ್ಪ ಪ್ಲಾನು" ಎನ್ನುವಂತಹ ಒಂದು ಯೋಜನಾ ಮಾಡಿ ಜಾರಿಗೆ ತರಬೇಕು.

ಇದೂ ಅಲ್ಲದೆ ಅಗ್ರಿಕಲ್ಚರು ಆಫೀಸರುಗಳ ಬಗ್ಗೆ ಒಂದು ಸ್ಥಿಮಿತವಾಗಿಲ್ಲ. ಅವರ ಸರ್ವಿಸ್ಸು. ಸೀನಿಯಾರಿಟಿ ಲಿಸ್ಟು ಇನ್ನೂ ಸರಿಯಾಗಲಿಲ್ಲ. ಅವರುಗಳನ್ನು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಎಂದು ಬದಲಾಯಿಸುತ್ತಿದ್ದಾರೆ. ಇವೆಲ್ಲದರ ಬಗ್ಗೆ ಮಂತ್ರಿಗಳು ಲಕ್ಷ್ಯ ಕೊಡುವುದಕ್ಕೂ ಸಾಧ್ಯವಿಲ್ಲದಂತಿದೆ. ಎಂಟೆಂಟು ವರ್ಷಗಳಕಾಲ ಈ ಅಧಿಕಾರಿಗಳನ್ನೂ ಖಾಯಂ ಮಾಡದೇ ಬರೀ "Holding incharge" ಎಂದರೆ How long they will continue? ಹೀಗಿರುವುದರಿಂದ ಈ ವ್ಯವಸಾಯದ ಬಗ್ಗೆ ಸರಿಯಾದ steam line Policy ಇಟ್ಟುಕೊಳ್ಳದಿದ್ದರೆ ಇದರಿಂದೇನೂ ಆಗುವುದಿಲ್ಲ. ಇದಕ್ಕಾಗಿ ಈಗ ತುರ್ತಿನ ಸ್ಥಿತಿ ಬಂದಿದೆ ಎಂದರೆ ಯಾರು ಇದನ್ನೆಲ್ಲಾ ಕಂಟ್ರೋಲು ಮಾಡಬೇಕು ? ಗ್ರಾಮಸೇವಕರನ್ನು ಯಾರು ಕಂಟ್ರೋಲು ಮಾಡಬೇಕು ? ಇದರಲ್ಲಿ Agriculture Bias ಬರುವುದು ಬಹಳ ಮುಖ್ಯ. ಆ ರೀತಿಯಾದ ಒಂದು ನೀತಿಯನ್ನು ತಾಳಿ, ಅಂತಹ ಒಂದು ಧೋರಣೆಯನ್ನು ಹೊಂದಿದರೆ ಮಾತ್ರ ಈ ರಾಷ್ಟ್ರದಲ್ಲಿ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಾದೀತು. ನಾವು ಸುಮ್ಮನೆ ಇಲ್ಲಿ ಎಷ್ಟುಬೇಕಾದರೂ ಹೇಳಬಹುದು. ಅದು ಬರೀ ಕಾಗದದಮೇಲೆಯೇ ಇರಲು ಸಾಧ್ಯ.

ಮೊನ್ನೆ ಸಹಕಾರ ಮಂತ್ರಿಗಳು Rural Village Development Plan ಎಂದು ಮಾಡಿ ಅದರಿಂದ ಅಗ್ರಿಕಲ್ಚರು ಪ್ರೊಡಕ್ಷನ್ನನ್ನು ಹೆಚ್ಚು ಮಾಡಬೇಕೆಂದು ಪ್ರತಿಯೊಂದು ಗ್ರಾಮ ಪಂಚಾಯತಿಗೂ ಈ ಪ್ಲಾನು ಕಳಿಸಿದ್ದೇನೆಂದು ಹೇಳಿದರು. ಎಷ್ಟು ಪಂಚಾಯತಿಗಳು ಈ ರೀತಿಯಾದ ಪ್ಲಾನನ್ನು ಮಾಡಿದ್ದಾರೆ ? ಒಮ್ಮೆ ಮಾನ್ಯಮಂತ್ರಿಗಳಾದ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು,

> "Let there be 50 per cent production. There is 50 per cent production in China."

ಎಂದು ಹೇಳಿದರು.

ಹಿಂದೆ ಚೈನಾ ದೇಶದಲ್ಲಿ ನೂರಕ್ಕೆ 50 ರಷ್ಟಿತ್ತು. ಒಂದು ವರ್ಷವಾದಮೇಲೆ ನೂರಕ್ಕೆ ನೂರರಷ್ಟು ಪ್ರೊಡಕ್ಷನ್ನು ಆಯಿತು. ಎಂಟೆಂಟು ವರ್ಷಗಳಾದಮೇಲೆ ನೂರರಿಂದ ಇನ್ನೂರರವರೆಗೇರಿತು. ಹೀಗೆ ಹೆಚ್ಚಬೇಕು ಎನ್ನುವ ವಿಷಯ ಇಲ್ಲಿಲ್ಲ. ಇಲ್ಲಿ ನೋಡುವಾಗ ಹದಿನೈದು ವರ್ಷಗಳಿಂದಲೂ ನೂರಕ್ಕೆ ನಲವತ್ತರಷ್ಟು ಕೂಡ ಏರಿಲ್ಲ. ನಮ್ಮಲ್ಲಿ ಒಂದು ಎಕರೆಗೆ ಜೋಳ ದೀಡು ಪಲ್ಲ ಬರುತ್ತೆ ಎಂದು ಹೇಳುತ್ತಾರೆ. ಹಾಗೆ ಇಲ್ಲಿ intensive cultivation ಏನೂ ಮಾಡಿಲ್ಲ. ಒಂದು ಎಕರೆ ಜಮೀನು ಇಟ್ಟುಕೊಂಡಿರುವವರಿಗೆ ಅವನು ಸರಿಯಾಗಿ ಉತ್ಪನ್ನ ಮಾಡಲಿಕ್ಕೆ ಸರಿಯಾದ ಸಹಾಯಗಳನ್ನು ಕೊಡದೇಹೋದರೆ, ಆಹಾರದ ಕಾಳೂ ಹೆಚ್ಚಿಗೆ ಆಗುವುದಿಲ್ಲ. ಈ ತರಹ ಇದ್ದರೆ ಇನ್ನೂ ಹೆಚ್ಚು ಹೇಗೆ ಬೆಳೆಯಬೇಕು ? ಇನ್ನು ಅವರಿಗೆ ಸಾಲ ಕೊಡಬೇಕಾದರೆ ಅಗ್ರಿಕಲ್ಚರ್ ಇಲಾಖೆಯವರು ಏನನ್ನೂ ಕೊಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಅವನಲ್ಲಿ ಶಕ್ತಿಯಿಲ್ಲ. ಇದು ಆಗುವತನಕ ಈ ದೇಶಕ್ಕೆ ಸುಖವಾಗುವುದಿಲ್ಲ. ಸುಮಾರು ಹತ್ತಿಪ್ಪತ್ತು ಎಕರೆ ಜಮೀನು ಇರು

ವವರೇನೋ ಸ್ವಲ್ಪ ವಶೀಲಿ ಮಾಡಿಕೊಂಡು ಸಾಲವನ್ನು ಪಡೆದು ಬಾವಿ ಮಾಡಿಕೊಂಡು ಜಮೀನಿನಲ್ಲಿ ಬೆಳೆಯುತ್ತಾರೆ. ಆದರೆ ನಾನು ಒಂದು ಸೂಚನೆ ಸರಕಾರಕ್ಕೆ ಇಲ್ಲಿ ಕೊಡಬೇಕಾಗಿದೆ. ಒಂದೊಂದು ಎಕರೆ ಇರುವ ನಾಲ್ಕೈದು ಜನ ಜಮೀನುದಾರರನ್ನು ಒಟ್ಟುಗೂಡಿಸಿ ಅವರಿಗಾಗಿ ಒಂದು ಬಾವಿಯನ್ನು ತೆಗೆದುಕೊಳ್ಳಲು ಜಾಯಿಂಟು ಸೆಕ್ಯೂರಿಟಿಮೇಲೆ ಈ ಬಾವಿಯನ್ನು ಕೊಡಬಹುದು. ಈಗ ಕುಡಿಯುವ ನೀರಿನ ಬಾವಿಗಾಗಿ ಹತ್ತಾರು ಜನಕ್ಕೆ ಅನುಕೂಲವಾಗುವಂತೆ ಒಂದು ಸಮಾಜದ ಸಾಮೂಹಿಕ ಬಾವಿ ಎಂದು ಮಾಡುವಂತೆ, ಹತ್ತು ಹತ್ತು ಎಕರೆಗಳಷ್ಟು ಜಮೀನಿನವರ ಉಪಯೋಗಕ್ಕಾಗಿ ಎಂದು ಒಂದು ಬಾವಿಯನ್ನು ತೆಗೆಸಿ ಆ ಜನಕ್ಕೆ ವ್ಯವಸಾಯ ಮಾಡಿಕೊಳ್ಳಲು ಸರಕಾರ ಸಹಾಯ ಮಾಡಿಕೊಡಬಹುದು. ತಕಾವಿ ಲೋನಿನಮೇಲೆ ಈ ರೀತಿ ಬಾವಿಯನ್ನು ಮಾಡಿಸಿಕೊಡಬಹುದು. ಇದರ ಬಗ್ಗೆ ಸೂಕ್ತವಾದ ನಿಯಮ ಮಾಡಿಕೊಂಡು ಕೊಡಬಹುದು ಎಂದು ಸರಕಾರಕ್ಕೆ ಸಲಹೆ ಕೊಡುತ್ತೇನೆ.

ತಗಾಯಿ ಸಾಲ ಕೊಡುವಾಗ ಕೆಲವರು ಬಾವಿಯನ್ನು ತೆಗೆದುಕೊಂಡು ಅದರಿಂದ ಯಾವ ರೀತಿ ಬೆಳೆ ಬಂದಿದೆ, ಬಾವಿಯಾಗಿದೆಯೇ ಎನ್ನುವುದನ್ನೂ ನೋಡದೇ ಸಾಲ ಕೊಡುತ್ತಿದ್ದಾರೆ. ತಕಾವಿ ಲೋನು ತೆಗೆದುಕೊಂಡು ಬಾವಿ ಮಾಡಿದಮೇಲೆ ಅದರಿಂದ ಕಾಳನ್ನೇನೂ ಬೆಳೆಯದಿದ್ದರೆ ಇದರಿಂದ ತಕ್ಕ ಫಲ ಸಿಗುವುದಿಲ್ಲ. ಇದರಲ್ಲಿರುವ ಷರತ್ತಿನಲ್ಲಿ ಇಷ್ಟು ಎಕರೆಗಳಷ್ಟು ಕಾಳು ಬೆಳೆಯಬೇಕೆನ್ನುವ ಷರತ್ತೂ ಇದೆ. ಅದನ್ನು ಯಾರೂ ಸರಿಯಾಗಿ ನೋಡುತ್ತಲೇ ಇಲ್ಲ. ಇನ್ನು ಮುಂದಾದರೂ ತಕಾವಿ ಸಾಲ ತೆಗೆದುಕೊಂಡು ಬೇಸಾಯ ಮಾಡುವವರು ಕನಿಷ್ಟಪಕ್ಷ ಮೂರು ಎಕರೆಯಲ್ಲಾದರೂ ಕಾಳನ್ನು ಕಡ್ಡಾಯವಾಗಿ ಬೆಳೆಯಲೇಬೇಕೆಂದು ನಿರ್ಬಂಧ ಮಾಡಿದರೆ ಸ್ವಲ್ಪ ಮಟ್ಟಿಗಾದರೂ ಆಹಾರದ ಬೆಳೆ ಬೆಳೆಯಬಹುದು. ಆದರೆ ಈಗ ಏನಾಗಿದೆ ಎಂದರೆ ಬಾವಿಗಳಿಗೆಂದು ಸಾಲವನ್ನೇನೋ ಕೊಡುತ್ತಾರೆ. ಆದರೆ ಇದನ್ನು ನೋಡಲು ಗ್ರಾಮದಲ್ಲಿರುವ ಪಂಚಾಯತಿಗಳವರೂ ಲಕ್ಷ್ಯ ಕೊಡುತ್ತಿಲ್ಲ. ಬಾವಿಗಳಿಗಾಗಿ ತೆಗೆದುಕೊಂಡ ಹಣ ಆ ಜಮೀನಿಗೆ ಉಪಯೋಗವಾಗದೇಹೋದರೆ, ಕಾಳನ್ನು ಹೇಗೆ ಬೆಳೆಯಲಿಕ್ಕಾಗುತ್ತದೆ? ಕಾಳು ಬೆಳೆಯಾಗುತ್ತದೆ ಎನ್ನುವ ಒಂದು ಗ್ಯಾರಂಟಿ ಕೂಡ ಇಲ್ಲ. ನಾಲ್ಕೈದು ಎಕರೆಗಳಷ್ಟು ಜಮೀನಿನಲ್ಲಿ ಒಂದೆರಡು ಮೂರು ಎಕರೆಗಳಲ್ಲಿದ್ದರೂ ಧಾನ್ಯವನ್ನೂ ಬೆಳೆದರೆ ಸುಮಾರು ಹತ್ತು ಲಕ್ಷ ಟನ್ನಿನಷ್ಟು ಧಾನ್ಯವನ್ನು ಉತ್ಪತ್ತಿ ಮಾಡಲು ಶಕ್ಯವಿದೆ. ಈಗ ತಾಲ್ಲೂಕು ಬೋರ್ಡುಗಳಿಗೆ ಮುಖ್ಯವಾದ ಜವಾಬ್ದಾರಿಗಳನ್ನೆಲ್ಲಾ ಕೊಟ್ಟಿದ್ದಾರೆ. ಅದರಂತೆ ಅಗ್ರಿಕಲ್ಚರಲ್ ಪ್ರೊಡಕ್ಷನನ್ನು ಮತ್ತು ಇದರ ಜವಾಬ್ದಾರಿ ವಹಿಸಿ ಯಾರಿಗಾದರೂ ವಹಿಸಿಕೊಟ್ಟರೆ ಅದರಿಂದ ಸ್ವಲ್ಪ ಅನುಕೂಲವಾಗಬಹುದು. ತಾಲ್ಲೂಕು ಬೋರ್ಡುಗಳಿಗೆ ವಹಿಸಿದರೆ, ಗ್ರಾಮಸೇವಕರ ಮೂಲಕ ಅಗ್ರಿಕಲ್ಚರ್ ಪ್ರೊಡಕ್ಷನ್ನು ಹೇಗಾಗುತ್ತದೆ ಎನ್ನುವುದಕ್ಕೆ ಅವರಿಗೆ ಒಂದು Job Sheet ಕೊಟ್ಟು ಅದರಿಂದ ರಿಪೋರ್ಟನ್ನು ಮೇಲಿಂದಮೇಲೆ ತರಿಸಿಕೊಳ್ಳಬಹುದು. ನೀವೆಲ್ಲ ನಂಬಿರುವ ಹಾಗೆ Agriculture is a cradle of culture, ಎನ್ನುವಂತೆ ವಿಲೇಜು ಲೆವೆಲ್ಲಿನಲ್ಲಿ ನೋಡಬಹುದು, ಡಿಸ್ಟ್ರಿಕ್ಟು ಲೆವೆಲ್ಲಿನಲ್ಲಿ ನೋಡಬಹುದು. ಆದರೆ ಹಸಿವು ಹಿಂಗುವವರನ್ನು ನಾವು ಎಂದೂ ಕಂಡಿಲ್ಲ. ಏನೋ ಒಂದೆರಡು ದಿನ ಉಪವಾಸ ಮಾಡುವವರನ್ನು ನೋಡಿದ್ದೇವೆ. ಆದರೆ Every rule has got an exception ಎನ್ನುವಂತೆ ಯಾರೋ ಒಬ್ಬರು ಹೆಂಗಸು ಧನಲಕ್ಷ್ಮಿ ಎನ್ನುವವರು ಊಟವನ್ನೇ ಮಾಡುತ್ತಿಲ್ಲ ಎಂದು ಹೇಳಿದ್ದನ್ನು ಕೇಳಿದ್ದೇನೆ. ಹೀಗೆ ನೀವು 5 ವರ್ಷಗಳಿಂದಲೂ ರಾಮರಾಜ್ಯ ಮಾಡುತ್ತೇವೆಂದು ಏನು ಹೇಳುತ್ತಿದ್ದೀರೋ ಅಂತಹ ರಾಜ್ಯ ಮಾಡುವುದಕ್ಕೆ ಶಕ್ಯವಿಲ್ಲ. ಇದರಲ್ಲೇನೋ ಇದೆ. ನನಗೂ ಒಬ್ಬರು ಹೇಳಿದರು 'ಇದು ಎಮರ್ಜೆನ್ಸಿ ಕಾಲ' ಎಂದು ಈಗ ಹೆಚ್ಚು ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುತ್ತಿದ್ದಾರೆ. ಆದರೆ ಹಣವನ್ನುಳಿಸಿ ಎಂದು ನಮ್ಮ ಮಂತ್ರಿಗಳು ಭಾರಿಭಾರಿಯಾಗಿ ಹೇಳುತ್ತ ಬರುತ್ತಿದ್ದಾರೆ. ಅದಕ್ಕೆ ಸಾಕಷ್ಟು ಹಣ ಕೊಡಬೇಕಾದರೆ ಕಾಳು ಬೆಳೆಯುವವರಿಗೆ ಸರಿಯಾದ ಅನುಕೂಲವನ್ನು ನೀವು ಮಾಡಿಕೊಡಬೇಕಾಗಿದೆ. ಆಗ ಹೆಚ್ಚಿನ ಕಾಳು ಬೆಳೆದರೆ ಉಳಿಸಲಿಕ್ಕೆ ಸಾಧ್ಯವಾಗುತ್ತದೆ. ಈಗ ಏನು ಉಳಿತಾಯ ಮಾಡಬೇಕೆಂದು ಹೇಳುತ್ತೀರೋ ಅದಕ್ಕೆ ಹತ್ತರಷ್ಟು ಉಳಿತಾಯ ಮಾಡಿಕೊಡಬಹುದು. ಸುಮ್ಮನೆ ಇಲ್ಲಿ ಕುಳಿತಿರುವ 27 ಮಂತ್ರಿಗಳೇ ಬರೀ ಬಾಯಲ್ಲಿ ಹೇಳುತ್ತ ಹೋದರೆ ಇದರಿಂದೇನೂ ಪ್ರಯೋಜನವಾಗುವುದಿಲ್ಲ.

ಕಡ್ಡಾಯ ಶೇಖರಣೆಗಾಗಿ ಸೇವಿಂಗ್ಸ್ ಡಿಪಾಜಿಟ್ ಸ್ಕೀಂ ಅನ್ನು ಕೇಂದ್ರ ಹಣಕಾಸಿನ ಮಂತ್ರಿ ಮುರಾರ್ಜಿಯವರು ಹಾಕಿಕೊಂಡಿದ್ದಾರೆ. ಅದನ್ನು ಬೇರೆ ರೀತಿ ಮಾಡಬಹುದಾಗಿತ್ತು. ಕೋಆಪರೇಟಿವ್ ಸೊಸೈಟಿಗಳಲ್ಲಿ ಒಂದು ನೂರು ರೂಪಾಯಿ ಷೇರ್ ಬಂಡವಾಳದಲ್ಲಿ 5 ರೂಪಾಯಿ ಕಡಿಮೆಮಾಡಿ ಷೇರ್ ಕ್ಯಾಪಿಟಲ್ ಕೂಡಿಸುತ್ತಾರೆ. ಇದು ಕಡ್ಡಾಯವಾಗಿದೆ ಎಂದು ಅನಿಸುವದಿಲ್ಲ. ಆದರೆ ಕಂಪಲ್ಸರೀ ಸೇವಿಂಗ್ಸ್ ಆಗುತ್ತದೆ. ಅದೇ ರೀತಿಯಾಗಿ ನೂರಕ್ಕೆ ಹತ್ತು ರೂಪಾಯಿ ಮುರಕೊಂಡು ಸದಸ್ಯರನ್ನು ಮಾಡಿಕೊಳ್ಳಬೇಕು. ಮತ್ತು ಮುಂದಿನ ವರ್ಷ ನೂರಕ್ಕೆ 20 ರಷ್ಟು

(ಶ್ರೀ ಎಂ. ವಿ. ಶೆಟ್ಟಿ)

ಸದಸ್ಯರನ್ನು ಹೆಚ್ಚು ಮಾಡಿಕೊಳ್ಳಲು ತಿಳಿಸಬೇಕು. ಈ ನಿಯಮದಲ್ಲಿ ಬದಲಾವಣೆ ಮಾಡುವುದು ಒಳ್ಳೆಯದು. ಇದರಿಂದ ಪರ್ಸುರ್ಯೇಶನ್ ಮಾಡಬಹುದು. ಅಂದರೆ ಬರುವ ಐದು ವರ್ಷಗಳಲ್ಲಿ 300 ಜನ ಸದಸ್ಯರಿದ್ದುದು 600 ಜನ ಸದಸ್ಯರಾಗಬಹುದು, ಒಕ್ಕಲತನ ವಿಷಯ ಒಂದೆರಡು ಮಾತು ಹೇಳಬೇಕಾಗಿದೆ. ಆದರೆ ಈಗ ವೇಳೆ ಇಲ್ಲ, ಒಂದೇ ಒಂದು ಮಾತು ಹೇಳುತ್ತೇನೆ. ನಮ್ಮ ಜನೋಪಯೋಗಿ ಜನಪ್ರಿಯ ಜನನಾಯಕ ಮಂತ್ರಿ ಮಂಡಳದವರು ಜನರಿಗೆ ಮೊದಲು ಹೊಟ್ಟೆಗೆ ಹಿಟ್ಟು ಸಿಕ್ಕುವಂತೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P. M.

ಶ್ರೀ ಎಸ್. ಆವಲರೆಡ್ಡಿ (ಶಿಡ್ಲಘಟ್ಟ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಬೇಡಿಕೆಗಳಿಗೆ ಬೆಂಬಲ ಕೊಡುತ್ತಾ ಒಂದೆರಡು ವಿಷಯಗಳ ಬಗ್ಗೆ ಮಾತನಾಡಲು ಇಚ್ಛೆಪಡುತ್ತೇನೆ. ವ್ಯವಸಾಯ ಇಲಾಖೆ ಅರಣ್ಯ ಇಲಾಖೆ ನಮ್ಮ ಸರ್ಕಾರದಲ್ಲಿ ಬಹುಪುರಾತನ ಕಾಲದಿಂದ ಬಂದಿರುವ ಇಲಾಖೆಗಳಾಗಿವೆ. ಮೊದಲಿನಿಂದಲೂ ಅರಣ್ಯ ಇಲಾಖೆಯಿಂದ ಉತ್ಪತ್ತಿಯಿದೆ ವ್ಯವಸಾಯ ಇಲಾಖೆಯ ಬಗ್ಗೆ ಅಧಿಕಾರಿ ವರ್ಗದವರು ಈಗಿನ ಮಂತ್ರಿಮಂಡಳವು ಮುತವರ್ಜಿವಹಿಸಿ ಅಭಿವೃದ್ಧಿಗೊಳಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದಮೇಲೆ ಆಧುನಿಕ ವ್ಯವಸಾಯ ಪದ್ಧತಿಯಿಂದ ರಿಸರ್ಚ್ ಮುಖೇನ, ಪಾಶ್ಚಾತ್ಯ ದೇಶಗಳಿಗೆ ಅಧಿಕಾರಿಗಳನ್ನು ಕಳಿಸಿ ಅಲ್ಲಿರತಕ್ಕಂಥ ವಿಧಾನವನ್ನು ನಮ್ಮ ದೇಶದಲ್ಲಿ ಅನುಷ್ಠಾನಕ್ಕೆ ತರಲು ಬಹಳ ಮುಂದುವರಿದಿದ್ದೇವೆ. ಪಂಚಾಯಿತಿ ರಾಜ್ಯ, ತಾಲ್ಲೂಕ ಬೋರ್ಡ್, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ ಕೌನ್ಸಿಲ್ ಸ್ಥಾಪನೆಯಾಗಿವೆ. ತಜ್ಞರ ಸಹಾಯದಿಂದ ವ್ಯವಸಾಯ ಅಭಿವೃದ್ಧಿಗೊಳಿಸಲಾಗುತ್ತಿದೆ. ಎರಡನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಸರಿಯಾಗಿ ಉತ್ಪತ್ತಿಯಾಗದೆ ಗುರಿ ಮುಟ್ಟಲಿಲ್ಲ ಎಂಬುದು ಸರಕಾರಕ್ಕೆ ಗೋಚರವಾಯಿತು. Assured water supply ಇದ್ದರೆ assured crop ಬರುತ್ತದೆ ಎಂದು ಕಂಡುಹಿಡಿದರು. ಆದ್ದರಿಂದ ಕೋಟ್ಯಾಂತರ ರೂಪಾಯಿ ಒದಗಿಸಿ irrigation wells, pump sets ಒದಗಿಸಲು ಏರ್ಪಾಡಾಗಿದೆ. ಇದರಿಂದ ಏನು ಪ್ರಯೋಜನವಾಗಿದೆ ಎಂದು ಅನೇಕ ಜನ ಪ್ರಶ್ನೆ ಕೇಳುತ್ತಾರೆ. ಇದು ಈಗತಾನೆ ಹುಟ್ಟಿದ ಮಗು ಆಗಿದೆ. ಈಗತಾನೆ ಹುಟ್ಟಿದ ಮಗು ದುಡಿದು ಸಂಸಾರಕ್ಕೆ ಉತ್ಪತ್ತಿ ಮಾಡಿ ಕೊಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ಈ ವರ್ಷ ಶ್ರದ್ಧೆಯಿಂದ ಕೆಲಸ ಮಾಡಿದರೆ, ಸರಕಾರ ಒದಗಿಸುವ ಸೌಲಭ್ಯ ಉಪಯೋಗಿಸಿ, ಅವುಗಳನ್ನು ದುರುಪಯೋಗಪಡಿಸಿಕೊಳ್ಳದೆ, ಅನುಷ್ಠಾನಕ್ಕೆ ತಂದರೆ ಕೆಲವು ವರ್ಷಗಳಲ್ಲಿ ಸಂಪತ್ತು ಬೆಳೆಸಬಹುದು. ಉತ್ಪತ್ತಿ ಜಾಸ್ತಿಯಾಗುವದರಲ್ಲಿ ಸಂಶಯವಿಲ್ಲ. ಈ ಇಲಾಖೆಯಲ್ಲಿ ಬರೀ ಕಾಗದದ ಮೇಲೆ ಕ್ವೆರೀ ಹಾಕತಕ್ಕಂಥಾದ್ದು ಒಳ್ಳೆಯದಲ್ಲ, ಅದನ್ನು ವಿರೋಧ ಮಾಡಬೇಕಾಗುತ್ತದೆ. ಕ್ವೆರೀ ಹಾಕುವುದು ಹತ್ತಾರು ತಿಂಗಳು ಮುಂದಕ್ಕೆ ತಳ್ಳುವುದು ಸುಲಭ. ಆದರಿಂದ ದೇಶದಲ್ಲಿ ಉತ್ಪತ್ತಿಯಾಗುವದಿಲ್ಲ. ಅಧಿಕಾರಿಗಳು discretionary powers ಉಪಯೋಗಿಸಿಕೊಂಡು ಸಕಾಲದಲ್ಲಿ ರೈತರಿಗೆ ಸೌಲಭ್ಯ ಒದಗಿಸಿಕೊಡಬೇಕು. ರೈತರಿಗೆ ಉತ್ತಮ ಬೀಜ ಒದಗಿಸುವುದಕ್ಕೆ ವ್ಯವಸಾಯ ಇಲಾಖೆಯಿದೆ. ಬಿತ್ತನೆ ಪ್ರಿಜರ್ವ್ ಮಾಡತಕ್ಕ ಸ್ಕೀಂ ಮಾಡಿದ್ದಾರೆ. ಅನೇಕ ಕಡೆ ಅದು ಜಾರಿಗೆ ಬಂದಿದೆ. ಮತ್ತು ಬರಲಿದೆ. ತಜ್ಞರು ಬಹಳ ಶ್ರದ್ಧೆಯಿಂದ ದೇಶ ಭಕ್ತಿಯಿಂದ ರೈತರ ಅಭಿವೃದ್ಧಿಗಾಗಿ ಹೃತ್ಪೂರ್ವಕವಾಗಿ ಕೆಲಸ ಮಾಡಬೇಕು. ತುಮಕೂರು ಜಿಲ್ಲೆಯಿಂದ ಭತ್ತದ ಬಿತ್ತನೆಯನ್ನು ನಮ್ಮ ಜಿಲ್ಲೆಗೆ ತಂದಾಗ್ಗೆ ಸರಿಯಾಗಿ ಮೊಳಕೆ ಬರಲಿಲ್ಲ. ಆ ಬಿತ್ತನೆ ಸರಿಯಾಗಿ ಪ್ರಿಜರ್ವ್ ಮಾಡಿರಲಿಲ್ಲ ಎಂದು ತಿಳಿದು ಬಂದಿದೆ. ತಪ್ಪನ್ನು ಸುಧಾರಿಸಲು ಪ್ರಯತ್ನಿಸಬೇಕು. ಬರಿ ರಾಗಿ ಭತ್ತ ಜೋಳ ಬೆಳೆದರೆ ಸಾಲದು. ಹಾರ್ಟಿಕಲ್ಚರ್ ಬೆಳೆಸುವುದಕ್ಕೆ ಪ್ರಯತ್ನ ಮಾಡುವುದು ಅಗತ್ಯ. ಮುತವರ್ಜಿ ವಹಿಸಿ ಹಣ್ಣುಹಂಪಲ ಬೆಳೆದರೆ ಅನುಕೂಲವಾಗುತ್ತದೆ. ನವನಾಗರೀಕತೆಯಲ್ಲಿ ಹಣ್ಣುಹಂಪಲ ಉಪಯೋಗ ಮಾಡುವುದು ಹೆಚ್ಚಾಗಿದೆ. ಇದರಿಂದ ಹಣ ಜಾಸ್ತಿ ಬರುತ್ತದೆ. ಚೇಪೆ, ಬಾಳೇ, ಸಪೋಟ ಮುಂತಾದ ಅನೇಕ ತರದ ಹಣ್ಣುಗಳ ಸಸಿಗಳನ್ನು ಎನ್.ಈ.ಎಸ್. ಮುಖಾಂತರ ರೈತರಿಗೆ ಕೊಡುವುದು ಒಳ್ಳೆಯದು. ರೈತರ ಆರ್ಥಿಕಸ್ಥಿತಿ ಜಾಗ್ರತೆ ಸುಧಾರಿಸುತ್ತದೆ. ಅಲ್ಲಲ್ಲಿ ಡೆಮಾನ್‌ಸ್ಟ್ರೇಷನ್ ಫಾರ್ಮ್ ಮಾಡಿ ಒಳ್ಳೇ ಬೀಜ, ಸಸಿ ರೈತರಿಗೆ ಒದಗಿಸಬೇಕು.

ವ್ಯವಸಾಯ ಮಾಡಲು ರೈತನು ಪುರಾತನಕಾಲದಿಂದ ಎತ್ತು ಉಪಯೋಗಿಸುತ್ತಾನೆ. ಈಗಿನ ಸುಧಾರಿಸಿದ ವ್ಯವಸಾಯದಲ್ಲ ಕಬ್ಬಿಣ ನೇಗಿಲು ರೈತನು ಉಪಯೋಗಿಸುತ್ತಾನೆ. ಆದರೆ

1,000-1,200 ರೂಪಾಯಿ ಕೊಟ್ಟು ತಂದ ಎತ್ತುಗಳನ್ನು ಹೂಡಲು ರೈತನು ಭಯಪಡುತ್ತಾನೆ. ಎತ್ತುಗಳ ವಿಚಾರದಲ್ಲಿ ರೈತನಿಗೆ ಅಪಾರ ಭಯಭಕ್ತಿಯಿರುತ್ತದೆ.

[Mr. Speaker in the Chair.]

ಆದ್ದರಿಂದ ಕಬ್ಬಿಣ ನೇಗಿಲು ಹೂಡಲು ಎತ್ತುಗಳನ್ನು ಉಪಯೋಗಿಸುವದಿಲ್ಲ. ಇಂಥ ಎತ್ತುಗಳಿಗೆ ಸರಿಯಾದ ಹಸಿರು ಮೇವು ಸಿಕ್ಕುವದಿಲ್ಲ. ಅವು ಬಲಹೀನವಾಗಿವೆ. ರೈತನ ಹತ್ತಿರ ಪುಷ್ಟಿಕರ ಆಹಾರವಿಲ್ಲ. ಈ ರೀತಿ ಪರಿಸ್ಥಿತಿ ಇದೆ. ಜಪಾನ ಪದ್ಧತಿ ಭತ್ತ ಬೆಳೆಯುವದಕ್ಕೆ ಅಲ್ಲಿ ಯಾವ ರೀತಿ ಗದ್ದೆ ಉಳುಮೆ ಮಾಡುತ್ತಾರೋ ಅದೇ ರೀತಿ ಇಲ್ಲಿಯೂ ಅದನ್ನು ಜಾರಿಗೆ ತರಲು ಏನು ಕಷ್ಟ ?

ಸರ್ಕಾರದಲ್ಲಿ ನಾನು ಇದನ್ನು ಇಡುತ್ತೇನೆ. ಜಪಾನಿನಲ್ಲಿ ಬತ್ತವನ್ನು ಜಾಸ್ತಿ ಬೆಳೆಯುತ್ತಾರೆ. ಅಲ್ಲಿ ಹೆಚ್ಚಿನ ಇಳುವರಿ ಬರುತ್ತದೆ ಅಲ್ಲಿ ಉಪಯೋಗಿಸತಕ್ಕಂಥ ಉಳುಮೆಯ ಯಂತ್ರ ಸುಲಭವಾಗಿದೆ. ಮತ್ತು ಹಗುರವಾಗಿದೆ. ಹೆಂಗಸರು ಕೂಡ ಅದರಲ್ಲಿ ಉಳುಮೆ ಮಾಡಬಹುದು. 2 H.P. 3 PHP. 4 HP. 5 HP. ಪವರ್ ಟಿಲ್ಲರ್ಸ್‌ಗಳನ್ನು ಅಲ್ಲಿ ವ್ಯವಸಾಯಕ್ಕೆ ಉಪಯೋಗಿಸುತ್ತಾರೆ. ಜಪಾನಿನ ಸುಮಾರು 56 ಸಾವಿರ ಪವರ್ ಟಿಲ್ಲರ್ಸ್‌ಗಳು ಕೆಲಸ ಮಾಡುತ್ತಿವೆ. ತಜ್ಞರು ಅಂಥಾ ಯಂತ್ರಗಳನ್ನು ರೈತರಿಗೆ ಕೊಡಬಹುದು ಎಂದು ಹೇಳಿದಾಗ ನಮ್ಮ ಸರ್ಕಾರದವರು ಏತಕ್ಕೆ ಕೊಡಬಾರದು ? ಇಂಡಸ್ಟ್ರಿಯಲ್ ಎಗ್ಜಿಬಿಷನ್ ಡೆಲ್ಲಿಯಲ್ಲಿ ಮತ್ತು ಮದ್ರಾಸಿನಲ್ಲಿ ನಡೆದಿದೆ. ನಾನೂ ಸಹ ಅದನ್ನು ನೋಡಿದ್ದೇನೆ. ಒಂದು ಟಿಲ್ಲರ್‌ಗೆ 1,250 ರೂಪಾಯಿ ಬೆಲೆಯಾಗುತ್ತದೆ. ಅದಕ್ಕೆ 75 ಪರ್ಸೆಂಟ್ ಸೇಲ್ಸ್‌ಟ್ಯಾಕ್ಸ್ ಹಾಕಿದರೆ 1,750 ರೂಪಾಯಿಗಳು ಆಗಬಹುದು. ಒಂದು ವೇಳೆ ನಾವೇ ಅದನ್ನು ತಯಾರು ಮಾಡಿದರೆ ಅದರಿಂದ ಲಾಭ ಆಗಬಹುದು. ಇಂಥಾದ್ದನ್ನು ನಮ್ಮ ರಾಜ್ಯಸರ್ಕಾರದವರಾಗಲೀ ಅಥವಾ ಕೇಂದ್ರ ಸರ್ಕಾರದವರಾಗಲೀ ತಯಾರು ಮಾಡಿದರೆ ನಮ್ಮ ದೇಶದ ರೈತರಿಗೆ ಅನುಕೂಲವಾಗುತ್ತದೆ. ಅದು ಬಿಟ್ಟು ಸ್ಕೂಟರನ್ನು ತಯಾರು ಮಾಡುತ್ತಿದ್ದಾರೆ. ಇದರಿಂದ ಏನಾಗಿದೆಯೆಂದರೆ ಕೆಲವರು ಸ್ಕೂಟರ್‌ನ ಹಿಂದುಗಡೆ ಹೆಣ್ಣು ಮಕ್ಕಳನ್ನು ಕೂರಿಸಿಕೊಂಡು ಪೆರೇಡ್ ಹೋಗುವುದಕ್ಕೆ ಅನುಕೂಲವಾಗಿದೆ. ಆದರೆ ವ್ಯವಸಾಯಕ್ಕೆ ಬೇಕಾದಂಥ ಯಂತ್ರಗಳನ್ನು ತಯಾರಿಸುವ ಕಡೆಗೆ ಸರ್ಕಾರದವರು ಗಮನ ಕೊಟ್ಟಿಲ್ಲ. ದೊಡ್ಡ ಟ್ರಾಕ್ಟರುಗಳನ್ನು ದೊಡ್ಡ ದೊಡ್ಡ ಎಂಜಿನಿಯರು ಡಿಪಾರ್ಟ್‌ಮೆಂಟಿನವರು ಸಾವಿರಾರು ರೂಪಾಯಿಗಳು ಕೊಟ್ಟುಕೊಳ್ಳುತ್ತಿದ್ದಾರೆಯೇ ಹೊರತು ಅವು ರೈತನ ಉಪಯೋಗಿಸುವುದಕ್ಕೆ ದೊರಕುತ್ತಾ ಇಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಜಪಾನ್ ದೇಶದಲ್ಲಿರತಕ್ಕ ಯಾವುದಾದರೂ ದೊಡ್ಡ ಕಂಪೆನಿಗಳ ಕೊಲಾಬರೇಷನ್ ತೆಗೆದುಕೊಂಡು ನಮ್ಮ ಮೈಸೂರು ಸಂಸ್ಥಾನದಲ್ಲಿ ಅಂಥಾ ವ್ಯವಸಾಯದ ಯಂತ್ರಗಳನ್ನು ತಯಾರು ಮಾಡತಕ್ಕ ಒಂದು ಕಾರ್ಖಾನೆಯನ್ನು ಸ್ಥಾಪಿಸಿ ಅದರಲ್ಲಿ ತಯಾರು ಮಾಡಿದಂತಹ ವ್ಯವಸಾಯದ ಯಂತ್ರಗಳನ್ನು ರೈತರಿಗೆ ಸಪ್ಲೈ ಮಾಡಿದರೆ ಅವರು ನಿಜವಾಗಿಯೂ ಹೆಚ್ಚಿನ ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ನಮ್ಮ ಸರ್ಕಾರದವರು ರೈತರಿಗೆ ವ್ಯವಸಾಯದ ಯಂತ್ರೋಪಕರಣಗಳನ್ನು ಒದಗಿಸದೇ ಹೋದರೆ ನಿಜವಾಗಿಯೂ ಅವರೂ ಹೆಚ್ಚಿನ ಆಹಾರವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಹೆಚ್ಚಿನ ಜಮೀನನ್ನು ಹದಮಾಡುವುದಕ್ಕಾಗುವುದಿಲ್ಲ. ಸಕಾಲದಲ್ಲಿ ಬಿತ್ತನೆಯನ್ನು ಮಾಡದಿದ್ದರೆ ಸರಿಯಾಗಿ ಪೂರ್ತಿ ಬೆಳೆ ಬರುವುದಿಲ್ಲ.

ಇನ್ನು ಫಾರೆಸ್ಟ್ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ ಫಾರೆಸ್ಟ್ ಇಲಾಖೆಯವರು ಒಳ್ಳೆಯ ಪ್ರೋಗ್ರಾಮನ್ನು ಹಾಕಿಕೊಂಡಿದ್ದಾರೆ. ಎಲ್ಲೆಲ್ಲಿ ಸರ್ಕಾರದ ಫಾರೆಸ್ಟ್ ಜಮೀನು ಇದೆಯೋ ಅಲ್ಲೆಲ್ಲಾ ಯೂಕಲಿಪ್ಟಸ್ ಗಿಡಗಳನ್ನು ಹಾಕಿದ್ದಾರೆ. ಈ ರೀತಿ ಲಕ್ಷೋಪಲಕ್ಷ ಗಿಡಗಳನ್ನು ಫಾರೆಸ್ಟ್ ಜಮೀನಿನಲ್ಲಿ ಹಾಕಿದ್ದಾರೆ. ಅದು ಈಗಾಗಲೇ 6 ಅಡಿ-10 ಅಡಿಯವರೆಗೂ ಬೆಳೆದಿದೆ. ಎನ್. ಇ. ಎಸ್. ಸ್ಕೀಮಿನವರು ಸಹಕರಿಸಿ, ಟೆಕ್ನಿಕಲ್ ಏಯ್ಡ್ ಕೊಟ್ಟು ಒಂದೊಂದು ತಾಲ್ಲೂಕಿನಲ್ಲಿ 25-50 ಎಕರೆ ಪ್ಲಾಂಟೇಷನ್ ನಡೆದಿದೆ. ನಾನು ತಾಲ್ಲೂಕು ಬೋರ್ಡಿನ ಅಧ್ಯಕ್ಷನಾಗಿದ್ದಾಗ ಸುಮಾರು 75 ಎಕರೆ ಪ್ಲಾಂಟೇಷನ್ ಮಾಡಿದೆ. ಅದು ಈಗಾಗಲೇ 8 ಅಡಿ 10 ಅಡಿ ಎತ್ತರದಲ್ಲಿ ಬೆಳೆಯುತ್ತಿದೆ. ಅಲ್ಪ ಮಳೆ ಬೀಳತಕ್ಕ ಪ್ರದೇಶದಲ್ಲಿ ನಮ್ಮ ದೇಶದಲ್ಲಿ ಸಂಸ್ಥಾನಾದ್ಯಂತ ತಾಲ್ಲೂಕು ಬೋರ್ಡುಗಳೂ ಮತ್ತು ಪಂಚಾಯಿತಿಗಳೂ ಫಾರೆಸ್ಟ್ ಇಲಾಖೆಯವರ ಸಹಾಯವನ್ನು ತೆಗೆದುಕೊಂಡು ಪ್ಲಾಂಟೇಷನ್ ಮಾಡಿದರೆ ಆ ಪ್ರದೇಶದಲ್ಲಿ ಮಳೆಯ ಅಭಾವ ಇರಲಾರದು ಎಂದು ನನ್ನ ಆಶೆ. ಈ ಯೋಜನೆಯನ್ನು ಸರ್ಕಾರದವರು ಬಹಳ ವರ್ಷಗಳು ಹೀಗೆಯೇ ಮುಂದುವರಿಸಬೇಕು. ಆ ರೀತಿ ಮಾಡುವುದಾದರೆ ಆಗ ನಮಗೆ ಮಳೆ ಜಾಸ್ತಿ ಬಿದ್ದು ಸರಿಯಾಗಿ ಬೆಳೆಯಾಗಿ ಸಂಪತ್ತು ಅಭಿವೃದ್ಧಿಯಾಗುತ್ತದೆ.

ಆಮೇಲೆ ಗಂಧದಮರ ನಮ್ಮ ಕೋಲಾರ ಜಿಲ್ಲೆಯಲ್ಲಿ ಔಷಧಿಗೂ ಕೂಡ ಸಿಕ್ಕುವುದಿಲ್ಲ. ಸ್ಮಗ್ಲಿಂಗ್ ಆಗುತ್ತಿತ್ತು. ಅದನ್ನು ಅನೇಕ ಪೋಲೀಸು ಅಧಿಕಾರಿಗಳು ಹಿಡಿದಿದ್ದಾರೆ. ಗಂಧದ

(ಶ್ರೀ ಎಸ್. ಅವಲರೆಡ್ಡಿ)

ಮರ ನಮ್ಮ ದೇಶದಲ್ಲಿ ಎಷ್ಟು ಸ್ಮಗ್ಲಿಂಗ್ ಆಗುತ್ತಿದೆ ಎನ್ನುವುದನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ಇದಕ್ಕೆ ಏನಾದರೂ ಒಂದು ಉಪಾಯವನ್ನು ಹುಡುಕಲೇಬೇಕು. ಫಾರೆಸ್ಟ್ ಇಲಾಖೆಯವರು ನಿಜವಾಗಿಯೂ ದಕ್ಷತೆಯಿಂದ ಕೆಲಸ ಮಾಡುವುದಾದರೆ ಯಾವ ಯಾವ ಕಡೆ ಗಂಧದಮರ ಇದೆಯೋ ಅದೆಲ್ಲವನ್ನೂ ಕೂಡ ಶಾಸನಕ್ಕೆ ಅನುಗುಣವಾಗಿ ಅಲ್ಪಕಾಲಾವಧಿಯಲ್ಲಿಯೇ ಅದನ್ನು ಕಡಿದು ಬೇರೆ ಕಡೆ ಸಾಗಿಸುವುದು ಒಳ್ಳೆಯದು. ನಿಧಾನ ಮಾಡಿದರೆ ರಾತ್ರಿಹೊತ್ತು ಬೊಂಬಾಯಿಗೆ ಹೋಗುತ್ತದೆ. ಅನೇಕ ಕೇಸುಗಳನ್ನು ಹಾಕಿದ್ದಾರೆ. ಅವು ಕೋರ್ಟಿನಲ್ಲಿ ನಡೆಯುತ್ತಿವೆ. ಆದರೂ ಸಹ ಈ ಸ್ಮಗ್ಲಿಂಗ್ ಮಾತ್ರ ತಪ್ಪಲಿಲ್ಲ. ಸಾವಿರಾರು ರೂಪಾಯಿ ಬೆಲೆಬಾಳತಕ್ಕಂಥ ಗಂಧದಮರದ ಉತ್ಪತ್ತಿ ನಮಗೆ ಸಿಕ್ಕದಂತಾಗಿದೆ. ಫಾರೆಸ್ಟ್ ಇಲಾಖೆಯವರು ಸ್ವಲ್ಪ ಮುತವರ್ಜಿ ವಹಿಸಿ ರೈತರಿಗೆ ಉಪಕಾರ ಮಾಡಬೇಕು. ಈಗ ಫಾರೆಸ್ಟ್ ಇಲಾಖೆಯವರು ಬರೀ ಯೂಕಲಿಪ್‌ಟಸ್ ಗಿಡಗಳನ್ನು ಮಾತ್ರ ನೆಡುವುದನ್ನು ಮಾಡುತ್ತಿದ್ದಾರೆ. ಅದರ ಜೊತೆಗೆ ಹೊಂಗೆಮರ, ಮಾವಿನಮರ, ಸೀಗೆಮರ, ಹುಣುಸೆಯ ಮರ, ಗೇರುಮರ ಇತ್ಯಾದಿ ಮರಗಳ ಸಸಿಗಳನ್ನು ಬೆಳೆಸಿ ಅವುಗಳನ್ನು ರೈತರಿಗೆ ಎನ್. ಇ. ಎಸ್. ಮುಖಾಂತರ ಒಂದೊಂದು ಸಸಿಗೆ 8 ಆಣೆಯಂತೆ ಒದಗಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಮತ್ತು ಅವರಿಗೆ ಒಂದು ವಿಧವಾದ ಉತ್ಸಾಹ ಉಂಟಾಗುತ್ತದೆ. ಆಗ ಅವನು ದೊಡ್ಡ ಗುಣಿಗಳನ್ನು ಮಾಡಿ ಸಸಿಯನ್ನು ನೆಟ್ಟು ಅದಕ್ಕೆ ಗೊಬ್ಬರ ನೀರು ವಗೈರೆಗಳನ್ನು ಹಾಕಿ ಅದನ್ನು ಪ್ರೀತಿಯಿಂದ ಸಾಕುತ್ತಾನೆ. ಈ ರೀತಿ ಮಾಡಿದರೆ ಹೆಚ್ಚಿಗೆ ಗಿಡಗಳನ್ನು ಹಾಕುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ಅನೇಕ ರೈತರು ಅನೇಕ ಗಿಡಗಳನ್ನು ಹಾಕಿ ಬೆಳೆಸಿದರೆ 10–15 ವರ್ಷಗಳಾದ ನಂತರ ಜಾಸ್ತಿ ಸಂಪತ್ತು ಉತ್ಪತ್ತಿಯಾಗುವುದಕ್ಕೆ ಮಾರ್ಗವಾಗುತ್ತದೆ. ನಮ್ಮ ಸ್ನೇಹಿತರು ಅನೇಕರು ಹೇಳಿದ ಹಾಗೆ ಏನಿದ್ದರೂ ಮರಗಳನ್ನು ಕಡಿಯುವವರೇ ಜಾಸ್ತಿ. ಮರಗಳನ್ನು ಹಾಕುವವರು ಬಹಳ ಕಡಿಮೆ. ಆದ್ದರಿಂದ ಫಾರೆಸ್ಟ್ ಇಲಾಖೆಯವರು ಈ ಬಗ್ಗೆ ಒಂದು ಪ್ಲಾನನ್ನು ಹಾಕಿಕೊಂಡು ಗಿಡಗಳನ್ನು ಬೆಳೆಸಿ ರೈತರಿಗೆ ಕೊಟ್ಟರೆ ಅವರು ನಿಜವಾಗಿಯೂ ಅದನ್ನು ಸದುಪಯೋಗಪಡಿಸಿಕೊಳ್ಳುತ್ತಾರೆ. ಶ್ರೀಮಾನ್ ನಂಜೇಗೌಡರು ಈಗಾಗಲೇ ಹೇಳಿದ್ದಾರೆ, ಅರಣ್ಯದಲ್ಲಿರುವ ಅಮರಾಯಿ ಮರಗಳಿಗೆ ತಂದೆ ತಾಯಿ ಯಾರು ಎಂದು. ಈಗಾಗಲೇ ಹೊಸದಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಬಂದು ಮರಗಳಿಗೆ ನಂಬರನ್ನು ಹಾಕುತ್ತಿದ್ದಾರೆ. ಹಳ್ಳಿಗಳಲ್ಲಿರತಕ್ಕ ರೈತರ ರಸ್ತೆಯ ಪಕ್ಕದಲ್ಲಿ ಕೆಲವು ಗಿಡಗಳನ್ನು ಹಾಕಿದ್ದಾರೆ. ಅದನ್ನು ಅವರ ತಾತನೋ ಅಥವಾ ಮುತ್ತಾತನೋ ಹಾಕಿದ್ದರು. ಅವರು ಅವುಗಳ ಹಕ್ಕುದಾರಿಕೆಯನ್ನು ಅನುಭವಿಸಿಕೊಂಡು ಹುಣಿಸೆ ಮರದ ಫಸಲನ್ನು ತೆಗೆದುಕೊಳ್ಳುತ್ತಿದ್ದರು. ಹೊಂಗೆಮರದ ಹೂವನ್ನು ಗುಡಿಸಿಕೊಂಡು ಗೊಬ್ಬರಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಹೊಂಗೆಯಕಾಯನ್ನು ಕೆಡವಿಕೊಂಡು ತೆಗೆದುಕೊಂಡು ಹೋಗುತ್ತಿದ್ದರು. ಹೀಗೆ ರಸ್ತೆಯ ಪಕ್ಕದಲ್ಲಿ ಕೆಲವು ಮರಗಳನ್ನು ಹಾಕಿಕೊಂಡು ಅವುಗಳ ಹಕ್ಕುದಾರಿಕೆಯನ್ನು ಅನುಭವಿಸಿಕೊಂಡು ಬಂದಿದ್ದರೂ ಸಹ ಅಲ್ಲಿರತಕ್ಕ ಹುಣಿಸೆಮರಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಹರಾಜು ಹಾಕಿ ಕಂಟ್ರಾಕ್ಟರಿಗೆ ಕೊಟ್ಟು ದುಡ್ಡು ತೆಗೆದುಕೊಂಡು ಹೋಗುತ್ತಾರೆ. ರೈತರು ಇದು ನಮಗೆ ಸೇರಿದ್ದು ಎಂದು ರೆವಿನ್ಯೂ ಇಲಾಖೆಯವರನ್ನು ಕೇಳಿದರೆ ನಿಮ್ಮ ಹತ್ತಿರ ಸನ್ನದ್ದು ಇದೆಯೇ ಎಂದು ಕೇಳುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರನ್ನು ಕೇಳಿದರೆ ಈ ಮರ ನಿಮ್ಮ ತಾತ ಅಪ್ಪ ಹಾಕಿದ್ದು ಎನ್ನುವುದಕ್ಕೆ ಆಧಾರ ಏನು ಎಂದು ಕೇಳುತ್ತಾರೆ. ಹಿಂದಿನಿಂದ ಅವಿದ್ಯಾವಂತರಾಗಿರತಕ್ಕ ರೈತರ ಕಷ್ಟಪಟ್ಟು ಮರಗಳನ್ನು ಹಾಕಿ ಬೆಳೆಸಿಕೊಂಡು ಬಂದಿರುತ್ತಾರೆ. ಅದನ್ನು ಅವರ ತಾತನೊ ಮುತ್ತಾತನೋ ಹಾಕಿರುತ್ತಾನೆ. ಆದರ ಹಕ್ಕುದಾರಿಕೆ ಅವರಿಗೇ ಇರುತ್ತದೆ ಆದ್ದರಿಂದ ಅಂಥಾ ಮರಗಳ ಸೂಪ್ರಿವಿಜನ್ ಬೇಕಾದರೆ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೇ ಇರಲಿ. ಆದರೆ ಅದರ ಹಕ್ಕುದಾರಿಕೆ ಯಾರು ಮರವನ್ನು ಬೆಳೆಸಿರುತ್ತಾರೆಯೋ ಅವರಿಗೇ ಇರುವಂತೆ ಸರ್ಕಾರದವರು ಒಂದು ಆರ್ಡರ್ ಮಾಡಿ ಅವರಿಗೆ ಸನ್ನದ್ದು ಕೊಟ್ಟರೆ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಅನಿಮಲ್ ಹಜ್ಬೆಂಡರಿ ವಿಚಾರ. ನನಗೆ ಗೊತ್ತಿರುವ ಹಾಗೆ ವ್ಯವಸಾಯದ ಇಲಾಖೆ, ಅನಿಮಲ್ ಹಜ್ಬೆಂಡರಿ ಎಲ್ಲಾ ಒಂದೇ ಇಲಾಖೆ ಆಗಿತ್ತು. ಈಗ ಅನಿಮಲ್ ಹಜ್ಬೆಂಡರಿ ಸ್ಪೆಷಲ್ ಸಬ್ಜೆಕ್ಟ್ ಎಂದು ಅದಕ್ಕೇ ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡಿದ್ದಾರೆ. ಇದು ಒಂದು ಬಹಳ ಮುಖ್ಯವಾದ ಇಲಾಖೆ. ಈ ಇಲಾಖೆಯಲ್ಲಿ ಒಳ್ಳೊಳ್ಳೆಯ ತಜ್ಞರು ಇದ್ದಾರೆ. ಇತ್ತೀಚೆಗೆ ಅನೇಕ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ, ಪಶು ವೈದ್ಯಶಾಲೆಗಳನ್ನು (ವೆಟರ್‌ನರಿ ಡಿಸ್‌ಪೆನ್ಸರಿಗಳನ್ನು) ಸ್ಥಾಪನೆ ಮಾಡುತ್ತಿದ್ದಾರೆ. ಇದು ನಮ್ಮ ಮೈಸೂರು ಸಂಸ್ಥಾನದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಬಹಳ ಯಶಸ್ವಿಯಾಗಿ ನಡೆದಿದೆ. ಆದರೆ ಕೆಲವು ತಾಲ್ಲೂಕುಗಳಲ್ಲಿ ಇದು ಯಶಸ್ವಿಯಾಗಿ

ಜರುಗಿಲ್ಲ. ಎಲ್ಲಿ ರೈತರು ಸ್ವಲ್ಪ ಬುದ್ಧಿವಂತರಾಗಿದ್ದಾರೆಯೋ ಅಂಥಾ ಕಡೆ ಅವರು ಸರ್ಕಾರದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಅನುಕೂಲ ಮಾಡಿಕೊಂಡಿದ್ದಾರೆ. ಅಂಥಾ ಸ್ಥಳಗಳಲ್ಲಿ ಇದು ಬಹಳ ಚೆನ್ನಾಗಿ ಯಶಸ್ವಿಯಾಗಿ ನಡೆದಿದೆ.

ನನ್ನ ಜಿಲ್ಲೆಯಲ್ಲಿ ಬಾಗೇಪಲ್ಲಿ ಅಂಥ ತಾಲ್ಲೂಕಿನಲ್ಲಿ ಬಹಳ ಬುದ್ಧಿವಂತರಿದ್ದಾರೆ. ಈ ಹಸುಗಳು ಶೂಲು ಆಗುವುದಕ್ಕೆ ಮುಂಚೆ ಅವುಗಳನ್ನು 2–3 ಮೈಲಿ ಹೊಡೆದುಕೊಂಡು ಹೋಗಬೇಕಾಗುತ್ತದೆ, ಅಷ್ಟು ಹೊತ್ತಿಗೆ ವೀರ್ಯವಿರುವುದಿಲ್ಲ. ಇಂಥ ಅನಾನುಕೂಲತೆಗಳಿರುವುದರಿಂದ ಇದು ಅಷ್ಟು ಯಶಸ್ವಿಯಾಗಿ ಜರುಗುತ್ತಾ ಇಲ್ಲ. ಸಂಬಂಧಪಟ್ಟ ಎಕ್ಸ್‌ಪರ್ಟ್‌ಗಳು ಸಲಹೆ ಕೊಟ್ಟು, ಈ ರೀತಿ ಏರ್ಪಾಡು ಮಾಡುವಾಗ ರೈತರಿಗೆ ಸೌಲಭ್ಯ ದೊರಕಿಸಿ ಕೊಡುತ್ತಾರೆಂದು ನಂಬಿದ್ದೇನೆ.

ಶ್ರೀಮಾನ್ ಕೃಷ್ಣಪ್ಪನವರು ಬಹಳ ಮುತುವರ್ಜಿವಹಿಸಿ ದೆಹಲಿಯಿಂದ ನಮ್ಮ ಜಿಲ್ಲೆಗೆ ಹರಿಯಾಣ ಬ್ರೀಡಿನ ಅನೇಕ ಹಸುಗಳನ್ನು ಕಳುಹಿಸಿಕೊಟ್ಟರು. ಅವು ಏನೇ ಕಾರಣಕ್ಕೆ ಸುಲಭವಾಗಿ ಸೂಲು ಆಗಲಿಲ್ಲ. ಕೆಲವು ಸತ್ತುಹೋದುವು. ಅವಕ್ಕೆ ಹವಾ ಗುಣ ಸರಿಹೊಯಿತೋ ಇಲ್ಲವೋ. ಮುತುವರ್ಜಿಯಿಂದ ಹಣ ಖರ್ಚುಮಾಡಿ ಸಾಕಿದರು. ಅವುಗಳ ತಳಿಗಳು ಬಹಳ ಉತ್ಪತ್ತಿಯಾಗಲಿಲ್ಲ. ನಮ್ಮ ಅಭಿಪ್ರಾಯದಲ್ಲಿ ಫಲದಲ್ಲಿರತಕ್ಕಂಥ ತಳಿ ಅಭಿವೃದ್ಧಿ ಮಾಡಬೇಕು ; ಇಲ್ಲಿರತಕ್ಕಂಥ ಹವಾಮಾನ ಗುಣಕ್ಕೆ, ನೀರಿಗೆ, ಆಹಾರಕ್ಕೆ ಅವು 'ಸೂಟ್' ಆಗಬೇಕು. ಅಂಥ ತಳಿಗಳನ್ನು ಉತ್ಪತ್ತಿ ಮಾಡುವುದರಲ್ಲಿ ಮುತುವರ್ಜಿ ವಹಿಸಬೇಕು ; ಅವು ಸಾಯುವುದಿಲ್ಲ ಚೆನ್ನಾಗಿ ಅಭಿವೃದ್ಧಿಯಾಗುತ್ತವೆ. ಅನೇಕ ವರ್ಷಗಳಿಂದ ನಮ್ಮ ದೇಶದಲ್ಲಿ ಹಳ್ಳಿಕಾರ್ ಅಮೃತಮಹಲ್ ದನಗಳು ಪ್ರಸಿದ್ಧಿಯಾಗಿವೆ. ಟಿಪ್ಪುಸುಲ್ತಾನ್ ಕಾಲದಲ್ಲಿಯೂ ಬಹಳ ಪ್ರಸಿದ್ಧಿಯಾಗಿದುವೊ ಅವು ಜಿರಾಯಿರಿಗೆ ಪ್ರಸಿದ್ಧವಾದುವು. ಟಿಪ್ಪುಸುಲ್ತಾನನ ಕಾಲದಲ್ಲಿ ಫಿರಂಗಿಗಳನ್ನು ಎಳೆಯುವುದಕ್ಕೂ ಹಳ್ಳಿಕಾರ್ ಎತ್ತುಗಳನ್ನು ಕಟ್ಟುತ್ತಿದ್ದರು. ಅದರ ತಳಿಯನ್ನು ಹೆಚ್ಚು ಮುತುವರ್ಜಿಯಿಂದ ಅಭಿವೃದ್ಧಿ ಮಾಡಿದರೆ ನಮ್ಮ ದೇಶಕ್ಕೆ ಅವು ಬಹಳ ಸೂಟ್ ಆಗುತ್ತವೆ ಎನ್ನುವುದು ನನ್ನ ಅಭಿಪ್ರಾಯ.

ಇನ್ನೂ ಕೋ-ಆಪರೇಷನ್ ವಿಚಾರದಲ್ಲಿ ಹೇಳಬೇಕಾದರೆ. ಸ್ವಾಮಿ, Co-operation Department ನಮ್ಮ ಮೈಸೂರಿನಲ್ಲಿ ಬಹಳ ಪುರಾತನ ಕಾಲದಿಂದಲೂ ಬಂದಿದೆ. ಹಿಂದೆ ಅನೇಕ unlimited society ಗಳು ಇದ್ದವು, ಈವಾಗ limited society ಗಳು ಆಗಿವೆ. ರೈತರಿಗೆ ಬೇಕಾದ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಒದಗಿಸಬೇಕಾಗಿದ್ದರೆ, Co-operative institution ಗಳ ಪಾತ್ರಕ್ಕೆ ಬಹಳ ಮಹತ್ವವಿದೆ. ಅನೇಕ ಸೊಸೈಟಿಗಳು ಬಹಳ ಚೆನ್ನಾಗಿ ಕೆಲಸ ನಡೆಸಿಕೊಂಡು ಬಂದಿವೆ. ರೈತನಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸುವುದರಲ್ಲಿ ಸೊಸೈಟಿಗಳು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿವೆ. ಅದರಲ್ಲಿಯೂ ಕೂಡ ಈ ಕಾಲದಲ್ಲಿ ಆಧುನಿಕ ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾಗಿರತಕ್ಕಂಥ ಗೊಬ್ಬರಗಳನ್ನು ಈ ಸೊಸೈಟಿಗಳು ಬಹಳ ಚೆನ್ನಾಗಿ ಒದಗಿಸುತ್ತಿವೆ. ಈ ಸೊಸೈಟಿಗಳ ಆಡಳಿತ ಚೆನ್ನಾಗಿ ಜರುಗುತ್ತಾ ಇಲ್ಲವೆಂತ ಅನೇಕ ಸ್ನೇಹಿತರು ಟೀಕೆ ಮಾಡಿದರು. ನಿಜವಾಗಿಯೂ ವ್ಯವಸಾಯ ಸೊಸೈಟಿಗಳ ವ್ಯವಹಾರ ಚೆನ್ನಾಗಿ ಜರುಗುತ್ತಾ ಇದೆ. ಲಾಭದಾಯಕವಾಗಿಯೂ ಜರುಗುತ್ತಾ ಇದೆ. ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ತಂದ ಹಣವನ್ನು ವಾಪಸ್ಸು ಕೊಡುತ್ತಾ ಇವೆ. ಈ ಸೊಸೈಟಿಗಳ ಶೇರ್ ಹೋಲ್ಡರುಗಳಿಗೆ ಬಹಳ ಆನಂದವಾಗಿರುವುದು ನೋಡಿ, ಸೊಸೈಟಿಗಳಿಂದ ಎಲ್ಲರಿಗೂ ಉಪಕಾರವಾಗುತ್ತಿರುವುದನ್ನು ನೋಡಿ, ಅವುಗಳ ಆಡಳಿತ ದಕ್ಷತೆಯಿಂದ ಜರುಗುತ್ತಿರುವುದನ್ನು ನೋಡಿ ಕೆಲವರಿಗೆ ಸಹಿಸಲಾಗಿಲ್ಲ. ಈ ಹೊಟ್ಟೆಕಿಚ್ಚಿನ ಮಾತು ನಿಜವಾಗಿಯೂ ಪರಿಶೀಲನೆ ಮಾಡದೆ ಆಡಿದ ಮಾತು. ಎಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಯಾರಮೇಲೆ ಹೊಟ್ಟೆಕಿಚ್ಚು.

Sri S. AVALA REDDY.—I have not yielded Mr. Speaker.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು ಯಾವಾಗಲೂ ಈಲ್ಡ್ ಆಗುವುದಿಲ್ಲ.

ಶ್ರೀ ಎಸ್. ಆವಲ ರೆಡ್ಡಿ.—ಈ joint co-operative farming ಬಗ್ಗೆ ಬಹಳ ಮಟ್ಟಿಗೆ ಪ್ರಚಾರವಾಗುತ್ತಾ ಇದೆ. ಈ agricultural lands ತೆಗೆದುಕೊಂಡು Co-operative Farms ಮಾಡುವುದರಲ್ಲಿ, ನನಗಾದರೂ ವೈಯಕ್ತಿಕವಾಗಿ ಅಷ್ಟು ನಂಬಿಕೆ ಇಲ್ಲ. ಏಕೆಂದರೆ ನಮ್ಮ ರೈತವರ್ಗದಲ್ಲಿ ಸ್ವಂತವಾಗಿ ಜಮೀನು ಮಾಡಬೇಕು, ಅದರ ಮಾಲಿಕನಾಗ ಬೇಕು, ಸಾಹುಕಾರನಾಗಬೇಕು, ಎಂಬ ಆಕಾಂಕ್ಷೆ ಬಹಳ, ಜಮೀನು ಅಂದರೆ ರೈತರಿಗೆ ಬಹಳ ಆಶೆ. ಏನೇತನಿ ಚಚ್ಚಿಕೊಳ್ಳಿ, ಜಮೀನು ಅಂದರೆ ಪ್ರಾಣಬಿಡುತ್ತಾರೆ. ಯಾರಾದರೂ ಪಕ್ಕದ ರೈತ ತನ್ನ ಜಮೀನನ್ನು ಸ್ವಲ್ಪ ಉತ್ತುಬಿಟ್ಟಿದ್ದಾನೆ ಎಂದು ಗೊತ್ತಾದರೆ, ದೊಣ್ಣೆ ತೆಗೆದುಕೊಂಡು ಹೋಗಿ ಅವನನ್ನು ಖೂನಿ ಮಾಡಿಬಿಡುತ್ತಾನೆ. ನಮ್ಮ ರೈತರಿಗೆ, ಸರ್ಕಾರ ಎಲ್ಲಾ ಸೌಲಭ್ಯಗಳನ್ನು ಕೊಡುತ್ತಾರೆ, ಟ್ರಾಕ್ಟರ್ ಕೊಡುತ್ತಾರೆ, ಬೀಜ ಕೊಡುತ್ತಾರೆ, ಉಪಕರಣಗಳನ್ನು ಕೊಡುತ್ತಾರೆ, ಸೊಸೈಟಿ ಹೆಸರಿಗೆ ಜಮೀನು

(ಶ್ರೀ ಎಸ್. ಅವಲರೆಡ್ಡಿ)

ಮಾಡಿ ಹೆಚ್ಚಿನ ಉತ್ಪಾದನೆ ಹಂಚಿಕೊಳ್ಳಿ ಎಂದು ನೀವು ಎಷ್ಟೇ ಹೇಳಿದರೂ ಅವರು "ನಮಗೆ ಏಕೆ ಸ್ವಾಮಿ, ಆ ಕೆಲಸ; ಸೊಸೈಟಿಗೆ ಹೆಸರಿಗೆ ನಮ್ಮ ಜಮೀನು ಬದಲಾಯಿಸುವುದು ಆಗದು" ಎಂದು ಹೇಳುತ್ತಾರೆ. ಜಮೀನು ತನ್ನ ಸ್ವಂತದ್ದು ಆಗಬೇಕು. ಜಮೀನು ತನ್ನ ಹೆಸರಿಗೆ ಮಾಡಿದ ಪಕ್ಷದಲ್ಲಿ ಏನಾದರೂ ಸೊಸೈಟಿ ಸೇರಬಹುದು. ಜಮೀನು ಉತ್ಪತ್ತಿ ಷೇರ್ ಹೋಲ್ಡರು ಗಳಲ್ಲಿ ಹಂಚಿಕೆಯಾಗ ಬೇಕು ಎಂದು ನಾವು ಹಾಗೆ ಕಾನೂನು ಬದಲಾವಣೆ ಮಾಡಿದರೆ, ಅವರು ದಾರಿಗೆ ಬರಬಹುದು. ನಾನಂತೂ ಹಲವಾರು ಸಾರಿ Joint Co-operative Farm ಮಾಡೋಣ ಅಂತ ಹೇಳಿ ಪ್ರಯತ್ನ ಮಾಡಿದೆ, ಒಬ್ಬರೂ ಮುಂದೆ ಬರಲಿಲ್ಲ. Co-operative farming ಸಾಕಷ್ಟು ಮಾಡುವುದಕ್ಕೆ ಕಾಲ ಒದಗಿಲ್ಲ, ಸಾಧ್ಯವಿಲ್ಲ.

†ಶ್ರೀ ಟಿ. ವಿ. ಗೌಡ (ಪಾಳ್ಯ).—ಮಾನ್ಯ ಅಧ್ಯಕ್ಷರೆ, ಈ ನಾಲ್ಕಾರು ಬೇಡಿಕೆ ಗಳಿಗೆ 14 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗುತ್ತದೆ; ಅವುಗಳನ್ನು ಈ ಮಾನ್ಯ ಸಭೆಯ ಮಂಜೂರಾತಿಗಾಗಿ ಇಟ್ಟಿದ್ದಾರೆ. ವರ್ಷವರ್ಷವೂ ಇದೇ ರೀತಿ ಸರ್ಕಾರ ಹಣವನ್ನು ಪಡೆದು ಖರ್ಚು ಮಾಡಿದ್ದಾರೆ. ಇಷ್ಟು ವರ್ಷ ಪಡೆದಂಥ ಹಣಕ್ಕೆ ಖರ್ಚುಮಾಡಿದಂತಹ ಹಣಕ್ಕೆ ಅನುಗುಣವಾದಂಥ ಪ್ರತಿಫಲ ಏನು ದೊರಕಿದೆ ಅನ್ನತಕ್ಕಂಥಾದ್ದನ್ನು ಸರ್ಕಾರ ಸಮರ್ಥನೆ ಮಾಡಿ, ಮಂಜೂರಾತಿ ಕೊಡಿ ಎಂದು ಕೇಳಿದ್ದರೆ ಚೆನ್ನಾಗಿರುತ್ತಿತ್ತು. ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಆಹಾರ ಧಾನ್ಯಗಳನ್ನು ಉತ್ಪನ್ನ ಮಾಡತಕ್ಕಂಥ ವಿಷಯದಲ್ಲಿ, ವಾಣಿಜ್ಯ ಧಾನ್ಯಗಳನ್ನು ಬೆಳೆಯತಕ್ಕಂಥ ವಿಷಯದಲ್ಲಿ, ಹೆಚ್ಚು ಪ್ರಮಾಣದಲ್ಲಿ ಬೆಳೆಯಲು ಸರಿಯಾದ ವಾತಾವರಣವನ್ನು ನಿರ್ಮಾಣ ಮಾಡುವುದರಲ್ಲಿ ನೀವು ವಿಫಲರಾಗಿದ್ದೀರಿ ಎಂದು ಅನ್ನದೆ ವಿಧಿಯಿಲ್ಲ. ನೂತನ ವ್ಯವಸಾಯ ಪದ್ಧತಿಗಳನ್ನು ರೈತರು ಅಳವಡಿಸಿಕೊಳ್ಳತಕ್ಕಂಥ ವಿಚಾರದಲ್ಲಿ ಮತ್ತು ಬೆಳೆ ಗಳಿಗೆ ಬರತಕ್ಕಂಥ ರೋಗಗಳನ್ನು ನಿವಾರಣೆ ಮಾಡ ತಕ್ಕಂಥ ವಿಷಯದಲ್ಲಿ ಪಾರು ಕಟ್ಟೆಗಳನ್ನು ರಕ್ಷಣೆ ಮಾಡತಕ್ಕಂಥ ಸಲುವಾಗಿ ಯಾವ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳದೆ, ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ತಿಳುವಳಿಕೆಯನ್ನು ಕೂಡ ಕೊಟ್ಟಿಲ್ಲ ಅಂತ ವಿಷಾದದಿಂದ ಹೇಳ ಬೇಕಾಗಿದೆ. ಈ ಬೀಜವನ್ನು ಒದಗಿಸತಕ್ಕಂಥ ವಿಷಯದಲ್ಲಿ ಕೂಡ ನನಗಾದರೂ ಅನ್ನಿಸುತ್ತದೆ; ನಮ್ಮ ರಾಜ್ಯದಲ್ಲಿ 60–62 ಸೀಡ್ ಫಾರ್ಮುಗಳನ್ನು ನಿರ್ಮಾಣ ಮಾಡಿದ್ದಾರೆ ಆಯಾ ಪ್ರದೇಶದ. ಅವಶ್ಯಕತೆಗೆ ತಕ್ಕಂತೆ ಸೀಡ್‌ಫಾರ್ಮುಗಳು ನಿರ್ಮಾಣವಾಗಿಲ್ಲ. ಯಾವ ಪ್ರದೇಶದಲ್ಲಿ ಉತ್ತಮ ಬೀಜಗಳು ಸಿಗುವುದಿಲ್ಲವೋ ಅಂಥ ಪ್ರದೇಶಗಳಿಗೆ ಸಹಕಾರ ಸಂಘಗಳ ಮೂಲಕವಾದರೂ ಒದಗಿಸಿ ರೈತರಿಗೆ ಈ ಒಂದು ಅನುಕೂಲತೆ ಮಾಡಿಕೊಡಬೇಕು. ಈ ವ್ಯವಸ್ಥೆ ಕೂಡ ಆಗಿಲ್ಲ. ಆದ್ದರಿಂದ ರೈತ ಹೆಚ್ಚಿನ ಉತ್ಪನ್ನ ಮಾಡಿ ಬೆಳೆಯಲಿಕ್ಕೆ ಬೇಕಾಗಿರುವಂಥ ಆಕರ್ಷಣೆ ವಾತಾವರಣ ನಿರ್ಮಾಣವಾಗಿಲ್ಲ ಎಂದು ನಾನು ಸ್ಪಷ್ಟವಾಗಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಒಂದು ನೀತಿ ಮೇಲೆ ಈ ಸೀಡ್ ಫಾರ್ಮುಗಳು ನಿರ್ಮಾಣವಾಗ ಬೇಕಾಗಿತ್ತು. ಒಂದು ಲಕ್ಷ ಎಕರೆಗೆ ಒಂದು ಸೀಡ್‌ಫಾರ್ಮ್ ಅಥವಾ 1,500 ಚದುರ ಮೈಲಿಗೆ ಒಂದು ಸೀಡ್‌ಫಾರ್ಮ್. ಈ ರೀತಿ ಆಯಾಪ್ರದೇಶದ ಅವಶ್ಯಕತೆಗೆ ತಕ್ಕಂತೆ ಮಾಡದೆ, ಯಾವ ಪ್ರದೇಶದಲ್ಲಿ ಉತ್ತಮ ಬೀಜಗಳು ಸಿಕ್ಕುತ್ತದೋ ಇಲ್ಲವೋ ಎಂದು ನೋಡಿ ಅಂಥ ಪ್ರದೇಶಗಳಿಗೆ ಒದಗಿಸತಕ್ಕಂಥ ವ್ಯವಸ್ಥೆಮಾಡದೆ, ರೈತರಿಗೆ ತಮ್ಮಲ್ಲಿ ಹೆಚ್ಚು ವಿಶ್ವಾಸ ಉಂಟಾಗಿದೆ ಎಂದು ನಿರೀಕ್ಷೆ ಮಾಡಿದರೆ ಬಹಳ ತಪ್ಪಾಗುತ್ತದೆ. ಸ್ಥಳೀಯವಾಗಿ ಗೊಬ್ಬರಗಳನ್ನು ಹಂಚಲಿಕ್ಕೆ ವ್ಯವಸ್ಥೆಯಾಗಿಲ್ಲ. ಹೋದ ವರ್ಷ ಯಾವ ಪ್ರಮಾಣದಲ್ಲಿ ಉತ್ಪನ್ನಮಾಡಿದೆ. ಎಷ್ಟು ಈ ದಿವಸ ಇದೆಯೆಂದು ನೋಡಬೇಕು. ಇಂಥ ಪರಿಸ್ಥಿತಿಯಲ್ಲಿ ದ್ವಿಗುಣ ಮಾಡತಕ್ಕಂಥ ಕೆಲಸ ಇಲಾಖೆಯವರು ಮಾಡಬೇಕಾಗಿತ್ತು. ನಮ್ಮ ಮಾನ್ಯ ಮಂತ್ರಿಗಳಿಗೆ ರೈತರ ಹಿತ ರಕ್ಷಣೆ ಮಾಡಬೇಕು, ಉತ್ಪನ್ನ ಹೆಚ್ಚು ಮಾಡಬೇಕೆಂಬ ಹಂಬಲವಿದೆ. ಆದರೆ ಈ ಹಂಬಲ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳಲ್ಲಿಯೂ ಇರಬೇಕು. ವ್ಯವಸಾಯ ಇಲಾಖೆ ಇನ್‌ಸ್ಪೆಕ್ಟರುಗಳವರಲ್ಲಿ ಈ ಹಂಬಲ ಹುಟ್ಟಿ, ಸೇವಾ ಮನೋ ಭಾವ ಬರಬೇಕು. ಇಲ್ಲದೆ ಹೋದರೆ ರೈತರನ್ನು ನಿಮ್ಮ ಯೋಜನೆಗಳ ಕಡೆ ಆಕರ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಇವುಗಳ ಬಗ್ಗೆ ವಿಶ್ವಾಸ ಬರಲಿಕ್ಕೆ ಸಾಧ್ಯವಿಲ್ಲ. ನನಗಾದರೂ ಈ ಒಂದು ವ್ಯವಸಾಯದ ಇಲಾಖೆ ಅಸ್ತಿತ್ವದಲ್ಲಿ ಇದೆಯೇ ಅನ್ನಿಸುತ್ತದೆ. ರೈತರು ಸಹಕಾರ, ಸಹಾಯ ಗಳನ್ನು, ಸಹಾನುಭೂತಿಗಳನ್ನು ತೋರಿಸಲಿಕ್ಕೆ ಈ ಒಂದು ಇಲಾಖೆಯಿಂದ ಪ್ರಯೋಜನ ಆದೀತು ಎಂಬ ಭಾವನೆ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ರೈತರಲ್ಲಿ ಬರಲಿಲ್ಲ Public Works Department, ಅಥವ Education Department. ಅಥವ ಇನ್ನೊಂದು ಇಲಾಖೆ ಏನಿದೆ, ಅಂಥದೇ ಒಂದು ಇಲಾಖೆ ಇದೆಯೆಂಬ ಭಾವನೆ ಈ ವ್ಯವಸಾಯ ಇಲಾಖೆಯ ಬಗ್ಗೆಯೂ ಹಳ್ಳಿಯಲ್ಲಿದೆ. ಈ ಒಂದು ಇಲಾಖೆಯಿಂದ ಗುಣವಿದೆ. ತಮಗೆ ಅನುಕೂಲವಿದೆ ಎಂಬ ಭಾವನೆ ಹಳ್ಳಿಯ ಜನಗಳಲ್ಲಿ ಬರುವ ಹಾಗೆ

ಈ ಇಲಾಖೆ ಕೆಲಸಮಾಡಿಲ್ಲ. The people have not felt the existence of the Department. ಹನ್ನೆರಡು ಕೋಟಿ ರೂಪಾಯಿ ಈ ವರ್ಷ ಕೇಳಿದ್ದೀರಿ ? ಆದರೆ ಅದರ ಪ್ರತಿಫಲ ಜನತೆಗೆ ಆಗತಕ್ಕಂಥ ರೀತಿಯಲ್ಲಿ ಮಾಡುತ್ತಾ ಇಲ್ಲವಲ್ಲಾ ಎಂದು ವಿಷಾದಪಡಬೇಕಾಗಿದೆ.

4-00 P. M.

ಈ ವರ್ಷ ಒದಗಿಸಿದ್ದ 14 ಲಕ್ಷ ರೂಪಾಯಿಗಳ ಹಣ ಖರ್ಚಾಗಲಿಲ್ಲ. ಮುಂದಿನ ವರ್ಷ 28 ಲಕ್ಷ ರೂಪಾಯಿಗಳನ್ನು ಜಾಸ್ತಿ ಖರ್ಚು ಮಾಡಬೇಕೆಂದು ಒದಗಿಸಿದ್ದಾರೆ. ಸಿಬ್ಬಂದಿ ಖರ್ಚು 3 ಲಕ್ಷ ರೂಪಾಯಿಗಳು ಹೆಚ್ಚಾಗುತ್ತದೆ. ಖರ್ಚು ಹೆಚ್ಚಾದಾಗರೆಲ್ಲಾ ರೈತರಿಗೆ ಹೆಚ್ಚಿನ ಹಣ ಸಹಾಯವನ್ನು ಸರ್ಕಾರ ಕೊಟ್ಟೇ ಆಗಬೇಕು. ಮತ್ತು ಗೊಬ್ಬರಗಳನ್ನು ಹಂಚುವ ವಿಷಯದಲ್ಲಿ ಅನೇಕ ನ್ಯೂನತೆಗಳನ್ನು ನೋಡುತ್ತಿದ್ದೇವೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಮತ್ತು ತಾಲೂಕ್ ಮಾರ್ಕೆಟಿಂಗ್ ಸೊಸೈಟಿಯವರು ಇತ್ತೀಚೆಗೆ ಅದನ್ನು ಹಂಚುತ್ತಿದ್ದಾರೆ. ಈ ಸಂಘಗಳ ಮೂಲಕ ಅದನ್ನು ಹಂಚಬೇಕೆಂದು ಇತ್ತೀಚೆಗೆ ಹಳ್ಳಿಗಳಲ್ಲಿ ಒಂದು ನಿಯಮ ಮಾಡಿದ್ದಾರೆ. ಆದರೆ ಪ್ರತಿಯೊಬ್ಬ ರೈತನಿಗೆ ಚಿಲ್ಲರೆಯಾಗಿ ಇದನ್ನು ಹಂಚಲಿಕ್ಕೆ ಅವಕಾಶವಿಲ್ಲ. ಸೊಸೈಟಿಯವರು ಗೊಬ್ಬರವನ್ನು ಮೊದಲು ತೆಗೆದುಕೊಂಡು ತಮ್ಮ ರೈತರಿಗೆ ಹಂಚಬೇಕೆಂಬ ನಿಯಮವಿದೆ. ಅನೇಕ ಸಹಕಾರ ಸಂಘಗಳು ಫರ್ಟಿಲೈಜರ್ಸನ್ನು ಮಾರಾಟ ಸಂಘಗಳಿಂದ ತೆಗೆದುಕೊಂಡು ರೈತರಿಗೆ ಹಂಚುತ್ತಿದ್ದಾರೆ. ಇದನ್ನು ತಾವು ಚೆನ್ನಾಗಿ ವಿಮರ್ಶೆ ಮಾಡಬೇಕು. ಇದರಿಂದ ರೈತರಿಗೆ ಉತ್ತಮ ಗೊಬ್ಬರ ಸಿಗಲು ಅವಕಾಶವಿಲ್ಲದೆ ಹೋಗಿದೆ. ಮಾರಾಟ ಸಂಘಗಳು ಚಿಲ್ಲರೆಯಾಗಿ ಇವನ್ನು ಮಾರುತ್ತಿಲ್ಲ. ಗ್ರಾಮಾಂತರ ಸಹಕಾರ ಸಂಘಗಳೂ ಸಹ ಮಾರಾಟ ಮಾಡುತ್ತಿಲ್ಲ. ಇದರಿಂದ ರೈತನ ಸ್ಥಿತಿ ಬಹಳ ಶೋಚನೀಯವಾಗಿದೆ. ಸರ್ಕಲ್ ಸೊಸೈಟಿಗಳಾದರೂ ಈ ಕಾರ್ಯವನ್ನು ಮಾಡಬಹುದು. ಆದರೆ ಅವರು ಲೈಸೆನ್ಸ್ ಪಡೆದು ಮಾರುವ ವ್ಯವಸ್ಥೆಯನ್ನು ಮಾಡಲಿಲ್ಲ. ಬೇಕಾದಷ್ಟು ಬಂಡವಾಳ ಸೊಸೈಟಿಗಳಲ್ಲಿಲ್ಲ. ಗೊಬ್ಬರ ಸರಬರಾಜು ವಿಷಯದಲ್ಲಿ ಬಹು ಹೆಚ್ಚಿನ ನ್ಯೂನತೆ ಉಂಟಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಯಾವ ಒಂದು ಪ್ರಮಾಣದಲ್ಲೂ ಈ ಕಾರ್ಯ ನಡೆಯಲಿಲ್ಲ. ಈ ತೀವ್ರ ಪರಿಸ್ಥಿತಿಯಲ್ಲಿ ಗೊಬ್ಬರ ಸರಬರಾಜು ಹೆಚ್ಚಿನ ಪ್ರಮಾಣದಲ್ಲಿ ಆಗಿ ಅದು ದ್ವಿಗುಣವಾಗಬೇಕು. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕೆಲಸ ಕಾರ್ಯಗಳು ವ್ಯವಸಾಯ ಇಲಾಖೆಯಿಂದ ಎಷ್ಟರ ಮಟ್ಟಿಗೆ ನಡೆಯುತ್ತಾ ಇದೆ ಎಂಬುದನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆ ಮಾಡಿ ನೋಡಿದರೆ ಜನತೆಯ ಆಶೆ ಆಕಾಂಕ್ಷೆಗಳು ಏನ, ಇವೆಯೋ ಅವಕ್ಕೆ ನಿಜವಾಗಿ ಸಾಕಷ್ಟು ರೂಪು ಬಂದಿಲ್ಲವೆಂದು ನಾನಾದರೂ ಸ್ಪಷ್ಟ ಪಡಿಸುತ್ತೇನೆ ಈಗಾಗಲೇ ಒಂದನೆ ಯೋಜನೆ ಆಯಿತು. ಎರಡನೆ ಯೋಜನೆಯೂ ಆಯಿತು. ಮೂರನೇ ಯೋಜನೆಗೆ ಕಾಲು ಇಟ್ಟಿದ್ದೇವೆ. ಇಷ್ಟು ಅವಧಿಯೊಳಗೆ ಹೊಸ ವಾತಾವರಣ ಏನೇನು ಆಗ ಬೇಕಾಗಿತ್ತೋ ಅದು ಇನ್ನೂ ಆಗಲೇ ಇಲ್ಲವೆಂಬುದು ಈ ಅಂಕಿ ಅಂಶಗಳಿಂದರೇ ಗೊತ್ತಾಗುತ್ತದೆ. ಉತ್ಪನ್ನ ಜಾಸ್ತಿ ಮಾಡುವುದಕ್ಕೂ ಮತ್ತು ಕಮರ್ಷಿಯಲ್ ಕ್ರಾಪ್ಸನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವಿದೆ. ಇಷ್ಟೊಂದು ಹಣವನ್ನು ಖರ್ಚು ಮಾಡಿ ಪ್ರತಿಫಲ ಸಾಕಷ್ಟು ಸಿಗಲಿಲ್ಲವೆಂದು ನಾನು ಬಹಳ ವ್ಯಸನ ಪಡಬೇಕಾಗಿದೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ವಿಚಾರಗಳನ್ನು ಚೆನ್ನಾಗಿ ಗಮನಿಸಿ ಆದಷ್ಟು ತೀವ್ರವಾಗಿ ಈ ಇಲಾಖೆಯ ಅಸ್ತಿತ್ವದಲ್ಲಿರತಕ್ಕ ರೈತರ ಉದ್ಧಾರಕ್ಕಾಗಿ ಮತ್ತು ರೈತರಿಗೆ ಸಹಾಯ ಮಾಡುವುದಕ್ಕಾಗಿ ಆದಾಯ ಹೆಚ್ಚು ಮಾಡಿಕೊಳ್ಳುವ ರೀತಿಯಲ್ಲಿ ಹೆಚ್ಚಿನ ಪ್ರಚಾರ ವಾಗಬೇಕು. ರೈತನಾದವನು ವ್ಯವಸಾಯ ಇಲಾಖೆಯಿಂದ ಏನೇನು ಸೌಕರ್ಯಗಳನ್ನು ಬೇಕು ಎಂದು ಕೇಳುತ್ತಾನೋ ಅವನ್ನೆಲ್ಲಾ ಆತ ಪಡೆಯುವುದಕ್ಕೆ ಆಕರ್ಷಿತವಾದ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಇನ್ನು ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳ ವಿಚಾರವಾಗಿ ಹೇಳಬೇಕಾದರೆ ಇದರಿಂದ ಹೆಚ್ಚಿಗೆ ಉಪಯೋಗ ಪಡೆಯಬಹುದು ಎಂಬ ವಿಷಯ ಅನೇಕ ರೈತರಿಗೆ ಗೊತ್ತಿಲ್ಲ. ವ್ಯವಸಾಯ ಇಲಾಖೆ ಇದೆ ಎಂಬ ಭಾವನೆ ಅನೇಕ ರೈತರಲ್ಲಿ ಉಂಟಾಗಿಯೇ ಇಲ್ಲವೆಂದು ನಾನು ಹೇಳಬಹುದು. ಪ್ರತಿಯೊಂದು ತಾಲ್ಲೂಕಿಗೂ ಇವನ್ನು ಸರಬರಾಜು ಮಾಡಿ ರೈತರಿಗೆ ಅವುಗಳ ಪ್ರಯೋಜನ ವೇನೆಂಬುದನ್ನು ಗೊತ್ತು ಮಾಡಬೇಕು. ಆಗ ಅದರಿಂದ ಸಾರ್ಥಕವಾಗುತ್ತದೆ. ಇದಕ್ಕಾಗಿ ಒಂದು ದೊಡ್ಡ ಪರಿಶೋಧನೆ ಮಾಡಬೇಕೆಂದು ಸುಮಾರು 58 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಇವತ್ತಿನ ದಿವಸ ಇದರ ಪ್ರತಿಫಲ ಬಹಳ ಜಾಸ್ತಿಯಾಗಬೇಕು.

ಇನ್ನು ಕೋ-ಆಪರೇಟಿವ್ ಡಿಮ್ಯಾಂಡ್ ಎಂದು ಇದೆ, ಆದರೆ ಎಲ್ಲ ಸಹಕಾರ ಸಂಘಗಳು ಒಳ್ಳೆ ತಾಗಿಲ್ಲ. ನನ್ನ ಮಾನ್ಯ ಮಿತ್ರರಾದಂಥ ಶ್ರೀಮಾನ್ ಆವಲರೆಡ್ಡಿಯವರೇನೋ ಶೇಕಡ 90-95ರಷ್ಟು

(ಶ್ರೀ ಜಿ. ವಿ. ಗೌಡ)

ಸಂಘಗಳು ಇತ್ತೀಚೆಗೆ ಅಭಿವೃದ್ಧಿಯಾಗುತ್ತಿವೆ ಎಂಬುದಾಗಿ ಹೇಳಿದರು. ಅವು ಅವರ ಕ್ಷೇತ್ರದಲ್ಲಿ ಆರೀತಿ ಕೆಲಸ ಮಾಡಿದ್ದಿರಬಹುದು. ಆದರೆ ಅವುಗಳ ಬಗ್ಗೆ ಓವರ್‌ಆಲ್ ಪಿಕ್ಚರ್ ವಿಮರ್ಶೆ ಮಾಡುವಾಗ ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೆಲಸವೇನೋ ಚೆನ್ನಾಗಿ ನಡೆಯುತ್ತಾ ಇಲ್ಲ ಎಲ್ಲಿಯವರೆಗೆ ಸಹಕಾರ ಸಂಘಗಳಲ್ಲಿರುವವರು ಸರ್ಕಾರದವರನ್ನು ಮತ್ತು ಮಂತ್ರಿಗಳನ್ನು ದರುಪಯೋಗ ಪಡಿಸಿಕೊಳ್ಳುತ್ತಾರೋ ಅಲ್ಲಿಯವರೆಗೆ ಸಹಕಾರ ಕ್ಷೇತ್ರಗಳು ಮುಂದುವರಿಯುವುದಿಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ. ಸಹಕಾರ ತತ್ವದಲ್ಲಿರತಕ್ಕ ಜನರಿಗೆ ಹೆಚ್ಚಿನ ಪ್ರೋತ್ಸಾಹವಿಲ್ಲ. ಇದರಲ್ಲಿ ರಾಜಕೀಯ ಬೆಳೆಸುವುದು ಈ ತತ್ವಕ್ಕೆ ವಿರೋಧವಾದ ಚಳುವಳಿಯನ್ನು ಮತ್ತು ಧಕ್ಕೆಯನ್ನುಂಟು ಮಾಡುವುದಾಗಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಸಹಕಾರ ಸಂಘಗಳಿಗೆ ಸಾಲ ಸಾಕಷ್ಟು ಸಿಗುತ್ತಿಲ್ಲ. ಜಿಲ್ಲಾ ಬ್ಯಾಂಕಿನವರು ಅವರಿಗೆ ಹೇಗೆ ಸಾಲ ಕೊಡುತ್ತಾರೆ ಅಂದರೆ ಕಾರ್ಯ ದರ್ಶಿಯವರು ಮತ್ತು ಅಧ್ಯಕ್ಷರೇ ಹೋಗಿ ದುಡ್ಡು ಖರ್ಚು ಮಾಡಿದಮೇಲೆ ಈ ಹಣ ಮಂಜೂರು ಆಗುತ್ತದೆ. ಸೊಸೈಟಿಗಳ ಲೆಖ್ಖದಲ್ಲಿ ಶೇಕಡ 92 ರಷ್ಟು ಈ ರೀತಿ ಇರುವುದರಿಂದ ಅನೇಕ ರೈತರಲ್ಲಿ ಇತ್ತೀಚೆಗೆ ತಾವೇ ಸ್ವಲ್ಪ ಮೊಬಲಗನ್ನು ಸರ್ಕಾರದಿಂದ ಪಡೆಯುವುದಕ್ಕೆ ಬದಲಾಗಿ ಎಲ್ಲಾದರೂ ಲೇವಾದೇವಿ ಮಾಡಿ ಸಾಕಷ್ಟು ಹಣ ಪಡೆಯಬಹುದೆಂದು ಒಂದು ರೀತಿಯ ಭಾವನೆ ಮೂಡಿ ಬಂದಿದೆ. ಈಗ ಜಿಲ್ಲಾ ಬ್ಯಾಂಕಿನವರು ನೇರವಾಗಿ ಗ್ರಾಮಂತರ ಪ್ರದೇಶಗಳಲ್ಲಿರತಕ್ಕ ಸೊಸೈಟಿಗಳಿಗೆ ಸಾಲ ಕೊಡುವುದಕ್ಕೆ ಬದಲು, ಮೈಸೂರು ರಾಜ್ಯದಲ್ಲಿ ಸಹಕಾರ ಯೂನಿಯನ್ ಮೂಲಕ ಹಣವನ್ನು ರೈತರಿಗೆ ಕೊಡುತ್ತಿದ್ದಾರೆ. ಅದು ಸಂತೋಷ. ಆದರೆ ಜಿಲ್ಲಾ ಮಟ್ಟದಲ್ಲಿ ಆ ರೀತಿ ಮಾಡುವುದಕ್ಕಿಂತಲೂ ಹೆಚ್ಚಿನ ಭದ್ರತೆ ಇರತಕ್ಕ ತಾಲ್ಲೂಕ್ ಮಟ್ಟದಲ್ಲಿ ಒಂದೊಂದು ಯೂನಿಯನ್ ಸ್ಥಾಪನೆ ಮಾಡಿದರೆ ರೈತರಿಗೆ ಹೆಚ್ಚಿನ ಪ್ರಯೋಜನವಿರುತ್ತದೆ. ಆದರೂ ಸರ್ಕಾರದವರು ಗ್ರಾಮಾಂತರ ಪ್ರದೇಶಗಳ ಸಹಕಾರ ಸಂಘಗಳ ಮೂಲಕ ಹಣವನ್ನು ರೈತರಿಗೆ ಹಂಚುವಾಗ ಅದನ್ನು ಅವರ ಕೈಗೆ ಸರಿಯಾಗಿ ತಲುಪುವಂತೆ ಮಾಡಿದರೆ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯಬಹುದು ಎಂದು ನನಗಾದರೂ ಅನ್ನಿಸುತ್ತದೆ. ಇವತ್ತಿನ ದಿವಸ ಈ ಕೊ-ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರ್, ಪಂಚಾಯಿತಿ ಎಕ್ಸ್‌ಟೆನ್‌ಷನ್ ಆಫೀಸರ್ ಮತ್ತು ಸಂಬಂಧಪಟ್ಟ ಇಲಾಖಾಧಿಕಾರಿಗಳು — ಈ ಮೂವರೂ ಹೆಚ್ಚು ಜವಾಬ್ದಾರಿಯನ್ನು ವಹಿಸಿ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡದಿದ್ದರೆ ನಿಜವಾಗಿ ಈ ಇಲಾಖೆಯಲ್ಲಿ ಹೆಚ್ಚಿನ ಪ್ರಗತಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಸಹಕಾರ ಕ್ಷೇತ್ರದಲ್ಲಿ ಸಿಬ್ಬಂದಿಗಾಗಿಯೇ ಎಷ್ಟೋ ಹಣ ಖರ್ಚಾಗುತ್ತಿದೆ. ಆದರೆ ಇದರಲ್ಲಿ ಪ್ರತಿಫಲ ಚೆನ್ನಾಗಿ ಆಗುತ್ತಿದೆಯೇ ಎಂದರೆ ಏನೂ ಇಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡುವಾಗ ಆ ಹಣಕ್ಕನುಗುಣವಾಗಿ ಪ್ರತಿಫಲ ಈ ಒಂದು ಕ್ಷೇತ್ರದಲ್ಲಿ ಸಿಗುತ್ತಿಲ್ಲವೆಂದು ನಾನು ಈ ದಿವಸ ಸ್ಪಷ್ಟವಾಗಿ ತಿಳಿಸುತ್ತೇನೆ. ಇವುಗಳ ಅಭಿವೃದ್ಧಿ ನಿಜವಾಗಿ ಆಗಬೇಕಾದರೆ ಸರ್ಕಾರದವರು ಹೆಚ್ಚು ಆಸಕ್ತಿಯನ್ನು ವಹಿಸಬೇಕು. ಕೆಲವು ಸಹಕಾರ ಸಂಘಗಳಲ್ಲಿ ಭೇದ ಭಾವಗಳುಂಟಾಗಿ ಒಂದೊಂದು ಕಡೆ ಹತ್ತಾರು ಸೊಸೈಟಿಗಳನ್ನು ಮಾಡಿಕೊಂಡಿರುತ್ತಾರೆ. ಒಂದೊಂದಕ್ಕೂ ಇದರಿಂದ ವೈಮನಸ್ಸು, ಮನಸ್ತಾಪಗಳು ಹೆಚ್ಚಾಗಿ ಒಂದು ಸೊಸೈಟಿಯವರನ್ನು ಇನ್ನೊಂದು ಸೊಸೈಟಿಯವರು ಸೇರಿಸುವುದಿಲ್ಲ. ಹೀಗಾಗಿ ತುಂಬಾ ಗ್ರಾಮವಾಸಿಗಳಿಗೆ ತೊಂದರೆಯಾಗಿದೆ. ಯಾವಾಗಲೂ ಒಂದು ಗ್ರಾಮದಲ್ಲಿ ಎರಡು ಸೊಸೈಟಿಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ವಿರಬಾರದು. ಯಾವುದೋ ಒಂದು ಕಾರಣದಿಂದ ಸೊಸೈಟಿಯ ಅಧ್ಯಕ್ಷರಿಗೆ ಮತ್ತು ಕಾರ್ಯದರ್ಶಿಯವರಿಗೆ ಮನಸ್ತಾಪವುಂಟಾಗಿ ಮೀಟಿಂಗ್‌ಗೆ ಅವರಲ್ಲಿ ಯಾರಾದರೂ ಬರುವುದಿಲ್ಲವೆಂದರೆ ಅವರಿಂದೇನೂ ನಷ್ಟವಿಲ್ಲ. ಅಂಥಾದ್ದರಿಂದೇನೂ ಉಪಕಾರ ಅಷ್ಟಾಗಿ ಆಗಲಿಕ್ಕಿಲ್ಲ. ಈ ದೃಷ್ಟಿಯಿಂದ ಆದಷ್ಟು ಮಟ್ಟಿಗೆ ರಾಜಕೀಯದಲ್ಲಿ ಸದಸ್ಯರು ದೂರ ಇರುವ ಹಾಗೆ ಸಹಕಾರ ಕ್ಷೇತ್ರದಲ್ಲಿ ಮಾಡುವುದಾದರೆ ಇಂತಹ ನ್ಯೂನತೆಗಳನ್ನು ಹೋಗಲಾಡಿಸಿ ಅವುಗಳ ಆಡಳಿತವನ್ನು ಉತ್ತಮ ಮಾಡುವುದಕ್ಕೆ ಸಾಧ್ಯವೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮದ್ರಾಸ್ ಮತ್ತು ಆಂಧ್ರ ಇತ್ಯಾದಿ ಪ್ರಾಂತ್ಯಗಳಲ್ಲಿ ಯಾವರೀತಿ ಈ ಬಗ್ಗೆ ಕೆಲಸಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಸ್ವಲ್ಪ ಮಟ್ಟಿಗೆ ಇಲ್ಲಿಂದ ಕೆಲವು ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ತಿಳಿದುಕೊಂಡರೆ ಅದರಿಂದ ಎಷ್ಟೋ ಅನುಕೂಲವುಂಟು. ರೈತರು ತಮ್ಮ ಋಣ ಬಾಧೆಯನ್ನು ತೀರಿಸುವುದಕ್ಕೆ ಇಲ್ಲಿ ಯಾವ ಒಂದು ವ್ಯವಸ್ಥೆಯನ್ನೂ ಮಾಡಲಿಲ್ಲ. ಇದುವರೆಗೂ ಇಲ್ಲಿ rural indebtedness ಅಂದರೆ ರೈತರ ಋಣಬಾಧೆಯನ್ನು ನೀಗಿಸಲಿಕ್ಕೆ ಯಾವ ವಿಧವಾದಂಥ ಕೆಲಸವೂ ಸಮರ್ಪಕವಾಗಿ ನಡೆದಿಲ್ಲವೆಂದು ನಾನು ಘಂಟಾ ಘೋಷವಾಗಿ ಹೇಳುತ್ತೇನೆ. ರೈತರ ಋಣಬಾಧೆ ತೀರಿದರೆ ನಮ್ಮ ಇಕಾನಮಿಗೆ ಎಲ್ಲಿ ಧಕ್ಕೆ ಬರುತ್ತದೋ ಎಂಬ ಭಾವನೆ ಸರಿ

ಯಾದುದಲ್ಲ. ಮುಖ್ಯವಾಗಿ ಅವರ ಋಣಬಾಧೆ ನೀಗಬೇಕು. ಸಕಾಲಕ್ಕೆ ಅವರಿಗೆ ಹಣ ಸಿಕ್ಕಿದರೆ ಉತ್ಪತ್ತಿ ಹೆಚ್ಚಿಗೆ ಆಗುತ್ತದೆ. ಅವನ ಮನಸ್ಸನ್ನು ಯಾವಾಗಲೂ ಉತ್ಪನ್ನದ ಕಡೆಗೇ ಇರುವ ಹಾಗೆ ವ್ಯವಸ್ಥೆ ಮಾಡಬೇಕು ಎಂಬುದಾಗಿ ನಾನು ತಿಳಿಸುತ್ತೇನೆ.

ಇನ್ನು ಅರಣ್ಯ ಖಾತೆ ವಿಚಾರ. ಇದು ಬಹಳ ಜವಾಬ್ದಾರಿಯನ್ನು ವಹಿಸಿರತಕ್ಕ ಖಾತೆ. ಹೋದ ವರ್ಷಕ್ಕಿಂತ ಈ ವರ್ಷದಲ್ಲಿ 19 ಲಕ್ಷ ರೂಪಾಯಿಗಳ ಹೆಚ್ಚಿನ ಆದಾಯ ಬರುತ್ತಿದೆಯೆಂದು ತೋರಿಸಿದ್ದಾರೆ. 1962-63ನೇ ಸಾಲಿನಲ್ಲಿ ಸುಮಾರು 2 ಕೋಟಿ ರೂಪಾಯಿಗಳ ಹೆಚ್ಚಿನ ಆದಾಯವನ್ನು ನಿರೀಕ್ಷಣೆ ಮಾಡಿತ್ತು. ಹಾಗೇಯೇ 1963-64 ರಲ್ಲಿ 2 ಕೋಟಿ ರೂಪಾಯಿಗಳಷ್ಟು ಉತ್ಪನ್ನ ಬರಬೇಕೆಂದು ಈ ಅರಣ್ಯ ಇಲಾಖೆಯಿಂದ ಆಶೆ ಇತ್ತು.

Resources and Economy ಸಮಿತಿಯವರು ಸುಮಾರು ಎರಡು ಕೋಟಿ ರೂಪಾಯಿ ಉತ್ಪತ್ತಿಯನ್ನು ಹೆಚ್ಚುಮಾಡಲು ಸಾಧ್ಯವಾಗುತ್ತದೆ ತೀವ್ರವಾಗಿ ಕೆಲಸ ಮಾಡಿದರೆ ಎಂದು, ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಬರಿಯ ಹತ್ತೊಂಬತ್ತು ಲಕ್ಷ ರೂಪಾಯಿ ಮಾತ್ರ ಹೆಚ್ಚು ಆದಾಯ ತೋರಿಸಿ ಖರ್ಚನ್ನು ಐದು ಲಕ್ಷ ಹೆಚ್ಚು ತೋರಿಸಲಾಗಿದೆ. ಉತ್ಪತ್ತಿ ಎಂಟುನೂರಎಂಬತ್ತನಾಲ್ಕು ಲಕ್ಷ, ವೆಚ್ಚ ನಾನೂರಎಂಬತ್ತು ಲಕ್ಷ ಮಾಡುತ್ತಿವೆ. ಆದಾಯದ ಶೇಕಡ 54 ರಷ್ಟು ಖರ್ಚುಮಾಡುತ್ತಿದ್ದೇವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಖರ್ಚಾಗುವ ಇಲಾಖೆ ಸರ್ಕಾರದವಲ್ಲಿಲ್ಲವೆಂದು ಕಂಡು ಬಂದಿದೆ. ನೂರು ರೂಪಾಯಿ ಆದಾಯಕ್ಕೆ 51 ರೂಪಾಯಿ ಖರ್ಚುಮಾಡುತ್ತಿದ್ದೇವೆ. ಇದು ನಿಜವಾಗಿಯೂ ನನ್ನ ಅಭಿಪ್ರಾಯದಲ್ಲಿ ಸರಿಯಲ್ಲ, ಆದಷ್ಟುಮಟ್ಟಿಗೆ ಖರ್ಚನ್ನು ಕಡಿಮೆಮಾಡಬೇಕು. ಬರಿಯ ಸಿಬ್ಬಂದಿಗೇ ಅರವತ್ತೈದು ಲಕ್ಷ ಎಂದರೆ 13 ಪರ್‌ಸೆಂಟ್ ಆಗುತ್ತದೆ ಇದು ಬಹಳ ಹೆಚ್ಚು. ....

ಶ್ರೀ ಬಿ. ರಾಚಯ್ಯ.—ಸಿಬ್ಬಂದಿಗೆಷ್ಟು!

ಶ್ರೀ ಡಿ. ವಿ. ಗೌಡ.—ಅರವತ್ತೈದು ಲಕ್ಷ ರೂಪಾಯಿ ಖರ್ಚುಮಾಡುತ್ತಿದ್ದಾರೆ; ಇದು ಒಟ್ಟಿನಲ್ಲಿ ಶೇಕಡ 13 ಆಗುತ್ತದೆ. ಈ ಖರ್ಚು ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ಶೇಕಡ 3 ರಷ್ಟಾಗುತ್ತಿದೆ, ವ್ಯವಸಾಯ ಇಲಾಖೆಯಲ್ಲಿ 4 ರಷ್ಟು; ಯಾವ ಇಲಾಖೆಯಲ್ಲಿಯೂ ಶೇಕಡ 6 ಕ್ಕಿಂತ ಹೆಚ್ಚು ಹೋಗುವುದು ಮಿತವ್ಯಯ ದೃಷ್ಟಿಯಿಂದ ಸರಿಯಲ್ಲ. ಈ ಇಲಾಖೆಯಲ್ಲಿ ಶೇಕಡ 13 ರಷ್ಟು ಖರ್ಚು ಮಾಡಿದರೆ, ಮೈಸೂರು ರಾಜ್ಯದ ಅರಣ್ಯ ಸಂಪತ್ತು ಏನಿದೆಯೋ ಅದನ್ನು ರಕ್ಷಣೆ ಮಾಡುವ ಕೆಲಸ ಸಾರ್ವತ್ರಿಕವಾಗಿ ಬೆಳವಣಿಗೆ ಆಗಿದೆಯೇ, ಎಷ್ಟುಮಟ್ಟಿಗೆ ನಡೆದಿದೆ ಎನ್ನುವುದನ್ನು ವಿಮರ್ಶೆ ಮಾಡಬೇಕು. ಉತ್ಪತ್ತಿಯನ್ನು ಹೆಚ್ಚು ಮಾಡಬೇಕು, ಅರಣ್ಯ ಸಂಪತ್ತನ್ನು ಹೆಚ್ಚು ಮಾಡಬೇಕು. ಇದರಿಂದ ಹೆಚ್ಚಿನ ಆದಾಯವನ್ನು ತರಬೇಕೆಂಬ ಹಂಬಲ ಮಂತ್ರಿಗಳಿಗಿದೆ. ಆದರೆ ಇದೇ ಮನೋಭಾವ ಇಲಾಖೆಯವರಿಗೆ ಬಾರದೇ ಇದ್ದರೆ ಇದು ಸಾಧ್ಯವಾಗುವುದಿಲ್ಲ. ಮರಗಳ ಕಳ್ಳತನವಾಗುತ್ತಿದೆ, ಗಂಧದ ಮರದ ಕಳ್ಳಸಾಗಾಣಿಕೆಯಾಗುತ್ತಿದೆ ಎಂದು ಹೇಳುತ್ತಾರೆ. ಜನಗಳು ಮಾಡುತ್ತಾರೆ. ಅಧಿಕಾರಿಗಳ ಚಲನವಲನ ಸರಿಯಾಗಿದ್ದರೆ, ಅವರು ಎಚ್ಚರಿಕೆಯಿಂದಿದ್ದರೆ, ಅವರ ಗಮನಕ್ಕೆ ಇದು ಬಂದೇ ಬರುತ್ತದೆ. ಆದುದರಿಂದ, ಇಂಥ ಕಳ್ಳತನಗಳನ್ನು ತಡೆಗಟ್ಟಲು ಹೆಚ್ಚಿನ ವ್ಯವಸ್ಥೆ ಮಾಡಬೇಕು. ಡಿವಿಜನಲ್ ಅಧಿಕಾರಿಗಳು ಹೆಚ್ಚು ಕೆಲಸ ಮಾಡಬೇಕು. ಪ್ಲಾಂಟೇಷನ್ 1961—62 ರಲ್ಲಿ 31 ಸಾವಿರ ಎಕರೆ, 1962—63 ರಲ್ಲಿ 40 ಸಾವಿರ ಎಕರೆಯಷ್ಟು ಸಾಧನೆ ಮಾಡುವುದಾಗಿ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಎಲ್ಲ ಪ್ರದೇಶಗಳಲ್ಲಿಯೂ ಇದು ಸರಿಯಾಗಿ ಆಗಿದೆಯೆ ಎಂದು ನೋಡಲು ಸಾಧ್ಯವಿಲ್ಲ. ಅಧಿಕಾರಿಗಳ ಪ್ರಾಮಾಣಿಕತೆಯಿಂದ ಈ ಕೆಲಸ ಆಗಬೇಕು. ನನ್ನ ಅನುಭವದಲ್ಲಿ, ನನ್ನ ಕ್ಷೇತ್ರದಲ್ಲಿ 50 ಸಾವಿರ ಖರ್ಚಾಗಿದೆ ಎಂದು ಲೆಕ್ಕ ತೋರಿಸಿದ್ದಾರೆ. ಆದರೆ ಖರ್ಚಾಗಿರುವುದು 10 ಸಾವಿರ ಮಾತ್ರ. ಸೋಲಿಗರಿಗೆ ಕೇಂದ್ರ ಸರ್ಕಾರ ಮತ್ತು ನಮ್ಮ ಸರ್ಕಾರ ಹೆಚ್ಚು ಸೌಲಭ್ಯಗಳನ್ನೊದಗಿಸಬೇಕೆಂದು ಮಾಡಿದ್ದಾರೆ. ಅವರಿಗೆ ಕೂಲಿ, ದಿನಕ್ಕೆ 1 ರೂಪಾಯಿ 37 ನ.ಪೈ. ಕೊಡಬೇಕಾದರೆ ಕೇವಲ ಎಂಟಾಣೆ ಕೊಟ್ಟು ಅವರಿಂದ ರುಜು ಹಾಕಿಸಿಕೊಳ್ಳುತ್ತಾರೆ. ಇಂಥ ಲೋಪದೋಷಗಳು ನಡೆಯುತ್ತಿವೆ. ಈ ರೀತಿ ಆದರೆ ಸಮಾಜವನ್ನು ಹೇಗೆ ತಿದ್ದುವುದು? ಸಮಾಜದ ದೋಷವನ್ನು ನಿವಾರಿಸುತ್ತೇವೆಂದು ಹೇಳುವ ಸರ್ಕಾರದ ಸಿಬ್ಬಂದಿಯೇ ಹೀಗೆ ಮಾಡುತ್ತಿದೆ! ಹೀಗೆ ಕಳ್ಳ ಲೆಕ್ಕಗಳನ್ನು ಹಾಕಿದರೆ, ಪ್ಲಾಂಟೇಷನ್ ಹೇಗೆ ಹೆಚ್ಚಾಗುತ್ತದೆ? ಅನೇಕ ಕಡೆ ಆಗಿದೆ. ಆದರೆ ಹೆಚ್ಚು ಖರ್ಚೇನು ಮಾಡಿದ್ದಾರೋ ಅದರಲ್ಲಿ ಪೂರ್ತಿ ಹಣ ಸರಿಯಾಗಿ ಖರ್ಚಾಗಿಲ್ಲ; ಶೇಕಡ 50 ರಷ್ಟು ಮಾತ್ರ ಸದುಪಯೋಗವಾಗಿದೆಯೆಂದು ತೋರಿಸುತ್ತಿದ್ದೇನೆ. ಆದುದರಿಂದ ಈ ಪರಿಸ್ಥಿತಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಆದಷ್ಟುಮಟ್ಟಿಗೂ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಪ್ಲಾಂಟೇಷನ್ ಜಾಸ್ತಿ ಮಾಡಬೇಕು. ಅಖಿಲ ಭಾರತ ಸರಾಸರಿ ಮಟ್ಟವನ್ನು ಮುಟ್ಟಲು ಸಾಧ್ಯವಾಗಬೇಕೆಂದು ತಿಳಿಸುತ್ತಿದ್ದೇನೆ.

(ಶ್ರೀ ಜಿ. ವಿ. ಗೌಡ)

ಅರಣ್ಯವಿರತಕ್ಕ ಪ್ರದೇಶದಲ್ಲಿ ಸೌದೆಗೆ ಬಹಳ ಅಭಾವವಿದೆ. ರೈತರಿಗೂ ಇತರರಿಗೂ ಹಂಚುವ ವ್ಯವಸ್ಥೆ ಸರಿಯಾಗಿಲ್ಲ. ಈಗ ತಾನೇ ಇದರ ಬಗ್ಗೆ ಕಾನೂನು ಮಾಡುತ್ತೇವೆಂದು ಹೇಳಿದರು. ಅದಾದ ಮೇಲೆ ಪರಿಸ್ಥಿತಿ ಸರಿಯಾಗಬಹುದೆಂದು ನಂಬಿದ್ದೇನೆ. ರೈತರಿಗೆ ಕೊಡಬೇಕಾದ ರಿಯಾಯಿತಿಯನ್ನು ಕೆಲವು ಕಡೆ ಕೊಡಲಿಲ್ಲ. ಈ ದೃಷ್ಟಿಯಿಂದ ಯೋಚನೆ ಮಾಡಬೇಕು. ಅನೇಕ ಪ್ರದೇಶವನ್ನು ಕಾಡು ಎಂದು ಸುಮ್ಮನೆ ಇಟ್ಟುಕೊಂಡಿದ್ದಾರೆ. ಆದರೆ ಅದರಿಂದ ಯಾವ ಉತ್ಪತ್ತಿಯೂ ಬರುತ್ತಿಲ್ಲ. ಇಂಥ ಪ್ರದೇಶಗಳನ್ನು ವ್ಯವಸಾಯಕ್ಕೆ ಕೊಡುವುದರ ಮೂಲಕ ಹೆಚ್ಚಿನ ಪ್ರಯೋಜನ ಸರ್ಕಾರಕ್ಕಾಗಬಹುದೆಂದು ಸೂಚಿಸುತ್ತೇನೆ.

ಈ ಬೇಡಿಕೆಗಳ ಬಗ್ಗೆ ಸಮರ್ಥನೀಯವಾದ ಅಂಶಗಳನ್ನು ಸರ್ಕಾರ ಈ ಮಾನ್ಯ ಸಭೆಯ ಮುಂದಿಟ್ಟು, ಸಭೆಯನ್ನು ತೃಪ್ತಿಪಡಿಸಿ, ಸಮರ್ಪಕವಾಗಿ ಕೆಲಸ ಮಾಡುತ್ತದೆ, ಮಾಡುವ ಖರ್ಚಿಗೆ ತಕ್ಕಂತೆ ಪ್ರತಿಫಲವನ್ನು ದೊರಕಿಸಿಕೊಡುತ್ತದೆ, ಜನತೆಗೆ ಒಳ್ಳೆಯದಾಗುತ್ತದೆಯೆಂದು ತೋರಿಸಿ ಸಮರ್ಥನೆಮಾಡುವುದರ ಮೂಲಕ ಬೇಡಿಕೆಗಳಿಗೆ ಮಂಜೂರಾತಿ ದೊರಕಿಸಿಕೊಳ್ಳಬೇಕು. ಮುಂದಿನ ವರ್ಷ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಕೆಲಸಗಳು ಎಲ್ಲ ಕ್ಷೇತ್ರಗಳಲ್ಲಿಯೂ ಆಗುತ್ತವೆಂದು ನಂಬಿ ಇಷ್ಟು ಹೇಳಲಿಚ್ಛಿಸುತ್ತೇನೆ. ಇಷ್ಟು ಹಣವನ್ನು ಸರ್ಕಾರ ಪಡೆದು, ಇದಕ್ಕನುಗುಣವಾದ ಪ್ರತಿಫಲ ಸಾಧನೆಯಾಗದಿದ್ದರೆ ನಿಜವಾಗಿಯೂ ವಿಷಾದಪಡಬೇಕಾದ ಪ್ರಸಂಗ ಬರುತ್ತದೆ. ಅಕ್ಕಪಕ್ಕದ ರಾಜ್ಯಗಳು ಇಷ್ಟೇ ಹಣ ಖರ್ಚುಮಾಡಿ ಹೆಚ್ಚಿನ ಪ್ರಗತಿ ಸಾಧಿಸಿವೆಯೆಂಬುದನ್ನರಿತು ಎಷ್ಟು ವೇಗದಿಂದ, ತ್ವರಿತವಾಗಿ ಇಲ್ಲಿ ಕೆಲಸ ಮಾಡಬೇಕೆಂಬುದನ್ನು ನಿರ್ಧರಿಸಬೇಕು. ಅಧಿಕಾರಿಗಳು, ನಾವೂ ದೇಶದ ಪ್ರತಿನಿಧಿಗಳು, ನಮಗೆ ದೇಶ ಸಂಬಳ ಕೊಡುತ್ತಿದೆ, ನಮ್ಮ ಕರ್ತವ್ಯವನ್ನು ಪೂರ್ಣವಾಗಿ, ಪರಿಣಾಮಕಾರಿಯಾಗಿ, ಶ್ರದ್ಧೆಯಿಂದ ಮಾಡಬೇಕು ಎಂಬುದನ್ನರಿತು ಮಾಡುತ್ತಾರೆಂದು ಆಶಿಸಿ, ಇಷ್ಟು ಹೇಳಲು ಅವಕಾಶಕೊಟ್ಟದಕ್ಕಾಗಿ ವಂದನೆಗಳನ್ನರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri M. MADHVARAJA (Udipi).—Sir, I rise to support the Dpmands for Agriculture and other Departments under Demand No. 20—Agriculture. I would like to speak a few words about Fisheries. I am fisherman myself and I am connected with the fishery industries and co-operative societies and as such I have no hesitation to say that no tangible result is shown for development of fisheries in Mysore, compared with other States like Kerala, Maharashtra and Gujarat. With an annual production of over one million tons of fish, India is one among the 7 major countries in the world and the national income from fisheries in India is estimated to be Rs. 60 crores and by overseas trade foreign exchange earned by the country is about Rs. 6 crores. The Royal Commission on Agriculture has noted the failure to develop fisheries in India. Fish is a specially valuable addition to the diet, the staple of which is rice. Under the First Five year plan although Rs. 238 crores was set apart for agriculture, only Rs. 4 crores was spent on fisheries; in the Second plan it was increased to Rs. 12 crores and in the Third Plan it has been increased up to Rs. 36 crores, but Mysore State has earmarked only Rs. 130 lakhs for development of fisheries in the Third Plan. Mysore State has acquired about 200 miles of sea coast comprising of South Kanara and North Kanara Districts and we have got very rich fisherable waters.

Compared to the East Coast, the West Coast or the Mysore State Coast has the density—proportion of fish—of one is to 300. Mysore State has one-fifteenth of the total coastal length and it accounts for one fifth of the fish production in the country.

Mr. SPEAKER.—Is it one-fifth or one-fifteenth ?

Sri M. V. KRISHNAPPA (Minister for Reveune).—Coastal length is one-fifteenth and fish production is one-fifth.

Sri M. MADHWARAJA.—The F.A.O. in their review have reported that the per capita yield of the Indian fisherman is only one ton compared to eighty tons in most advanced countries like Japan. Fishermen, as it is, are very illiterate and poor. They use the same age old frail boats depending on wind and the tide for catching fish. Any development in fisheries is not possible without mechanised fishing, in which direction, the Government has to give attention from the very beginning. Under scheme 231, mechanised fisheries, the physical target is kept at 150 boats in the Third Plan. Two boat building yards are established, one at Karwar and the other at Mangalore. In 1961-62, 16 boats have been built and in 1962-63, 28 boats have been built—in all 44 boats have been built by the Fisheries Department. But what we require today is to build many mechanised boats for fishing. We will be requiring from 800 to 1,000 boats, and each thirty feet boat will cost us Rs. 30,000. For this purpose, we may require some crores of rupees. The Centre is willing to give as much help as possible to the State Government for establishing boat building yards for fishermen.

As regards training centre for fishermen, there is only one such centre in Mangalore which trains 100 fishermen. But training centres could be increased and many more young fishermen could be trained in fisheries training and in mechanised fishing. From experience, I can say that by mechanised fishing, the annual income of the fishermen has increased from Rs. 300 to Rs. 3,000. There is a crazy demand for training in mechanised fishing at the fisheries centre, and Government were compelled to refuse admission to so many fisheries students, who were coming forward for training in mechanised fishing. At one time, it was thought that mechanised fishing would not be successful, because the fishermen would not be able to adopt themselves to this, as they were all used to age old methods of fishing. But this has been proved otherwise. Even now, I appeal to the State Government to make and strive to improve mechanised fishing, and make available mechanised boats to man the entire fish catching device, so that we may come in par with other countries in the world.

Now, about fishing harbours, it is scheme No. 234, and for this about eight lakhs of rupees is kept apart. During the last two years only Rs. 50,000 has been spent. Development of fisheries is seriously handicapped, because of the lack of breaching boats and handling of fish catch, etc. The F.A.O. experts have selected a number of ports along the Mysore State coast and they have made a comprehensive study of all the ports. Now, I understand that they have submitted reports with the estimates. When the Hon'ble Deputy Minister for Food Mr. Thomas was at in Mulpe, he was taken round the port. He was very much pleased to see the development that could be made as fishing harbour. I also saw the allocations under this item. They have estimated a sum of 21.1 lakhs for a fishing harbour at Mulpe, 4.6 lakhs at Coondapur and 40 lakhs for a fishing harbour at Karwar. When I

(SRI M. MADHAVARAJA)

wrote a letter to the Hon'ble Minister, he was pleased to reply that the Government of India would be prepared to give 50 per cent of their share, if the Mysore Government goes ahead in making these harbours. As I have said earlier, our budget provides only eight lakhs.

Another point I want to stress is about the salt subsidy. It is very unfortunate that the State Government has decided to stop this subsidy. It is a continuance assistance to the fishermen even during the British days. This Government has now come forward to stop this. After all the amount of subsidy involved is not more than fifty or seventy-five thousand rupees. The salt sold by Government in Fish Curing Yards is about 50,000 maunds, and even at one rupee per maund, it will not cost Government more than Rs. 50,000. I would like to point out that the Government is spending about 1,08,000 as only the establishment cost for thirty fish curing yards in the two districts of South and North Kanara. I must also point out that the Andhra Government is supplying free salt to all fishermen. Quality control can be kept up if curing is done at Government Curing Yards. If it is left to the fishermen, they may not care for the quality. Also, 90 per cent of the processed fish is now cured by salt methods, as there are no refrigerators, no ice and preservation of fish is being done through salt curing only. Hence, I would appeal to the Hon'ble Minister for Fisheries to renew this salt subsidy and fishermen will be hit hard by stopping of salt subsidy. Likewise, you have withdrawn payment of subsidies for fisheries requirements like nylon, twine, etc. The State Government used to meet 33⅓ per cent of the expenditure, and the reason that is given is that the Centre has withdrawn their share of fifty per cent of this subsidy. May I suggest to the Government to give their share and if you want to withdraw these facilities, you could do so gradually and not all of a sudden. After all, you are constructing not more than thirty boats and the requisite cost only about Rs. 3,000 each and your share is only Rs. 500. I would therefore like to bring to your notice that all the fishermen will be more affected by the withdrawal of this subsidy.

SRI V. M. DEO (Gubbi).—You know all those things much more. Why not form co-operative societies......

SRI M. MADHWARAJA.—It was being distributed through co-operative societies.

In 1962-63, there has been some achievement in looking after the welfare of the fisherfolk. Two more High Schools have been started. But I should say that the greatest achievement of the Fisheries Department is the Indo-Japanese collaboration. A Japanese training centre is started in Mangalore and they are going to spend fifty lakhs of rupees. About five or six Japanese have come. They are world experts in fisheries. They have got equipment worth about seven lakhs. Last time, the Japanese Ambassador was here. He was brought to our place by the Deputy Minister for Food and the Hon'ble Minister for Fisheries

was also there. They were pleased to see the good work done by the Fisheries Department and the potentialities we have in the Fisheries Industry. Mr. Speaker, Sir, you are also coming from our area and from a fishing village. I know that you have been taking keen interest in fisheries and by your efforts, I should say that......

Mr. SPEAKER.—Drop me. You will be alright.

Sri M. MADHWARAJA.—No, No, Sir. Dr. Bhattacharya, is deputed by the Central Government, and he has come with one boat. I understand, Sir, that you have recommended to the Government—I am telling these because, as Speaker also, you are taking interest in fisheries.

Mr. SPEAKER.—It is my duty and nothing more.

4-30 P.M.

Sri M. MADHWARAJA.—Now, I have got to make a few suggestions. The Kerala Government has made very vast development in fisheries. I have gone there and seen things personally. Many fisheries industries have come up there. Government has gone out of the way to develop industries. It is due to the Indo-Norwegian foundation aid. I am very glad that the fisheries Department and the Hon'ble Minister has done his best to get this aid to Mysore State also. The Norwegian experts will train personnel and they are going to do exploratory fisheries work. But the State Government will have to encourage them. If you do that you may get crores of rupees aid from the Norwegian Government of which I am quite sure because they have done so in Kerala.

One more suggestion is,—I have spoken about the subsidy. There is great scope for putting up a salt industry in west coast, either in South Kanara or North Kanara, and the Hon'ble Industries Minister has already worked out a scheme for Salt Industries for fisheries improvement, so that the salt that is needed for fisheries Industry there, may be made available on the spot. Because I know at present salt is imported either from Tuticorin or from Bombay at fantastic prices.

Mr. SPEAKER.—Don't they produce at Sani Katta ?

Sri M. MADHWARAJA.—Yes, Sir. But it is not enough. For fish we require 90 per cent sodium chloride. To make dried fish, we must have superior kind of salt which we are now getting at fantastic price from Tuticorin and Bombay.

Finally, we have to explore the possibilities of developing fisheries and to find out what we have to do in fisheries. I request the Government to form a committee which is very necessary. Because, I do not know whether I am making a new suggestion. But other States like Gujerat and Maharashtra and Kerala have a committee of that nature and they are having this fishing activities for so many years if not decades. But the Mysore Government has just now got 200 miles of coast line only recently, and there this State of Mysore has naturally not got all the experience as other coastal States have acquired over years. There is so much work that has to be done. I must appeal to the Government to do their best to start the mechanisation of fishing. An intensive drive

(SRI M. MADHAVARAJA)

must be there and I should also suggest to the Government to form a corporation either in the public sector or in the private sector to provide our fishermen with boats. We will pay you that money with interest and what capital you sink into it, you will take back within five or seven years. Government may be aware that during the last fish famine, they had advanced long term loans repayable in instalments and out of this amount, we have paid back more than 50 per cent and no other dues is pending, in spite of the fact that fishing was not very flourishing during this year as well. I am therefore trying to make the point that whatever is done to fishermen is not a waste and they will always be greateful to the Government.

Finally, I had discussion with the Hon'ble Revenue Minister. He was also formerly a Central Minister for fisheries and I should say, he is more a fisherman himself, because he had come there during that time and stayed with us for a day. Some of the land very near to the shore has been encroached upon by the fishermen since ages. It is continuing since the British days. Now the Government have served them with eviction notices. I should say that if they must be evicted, you will have to make alternative arrangements for their rehabilitation, I remember of another case at Padubidri where the fishermen lost their properties, by sea-erosion and I am told they were given lands three or four miles away from the shore. But it must be remembered that the fishermen will always prefer to be on the shore. He has to dry his net, repair his boats and he will have to watch for the fish to come to the shore instead of his going very deep into the sea. If you ask him to stay three or four miles away from the shore, I do not think it is advisable and they may also refuse to go. Therefore, I request the Hon'ble Revenue Minister to allow them to continue there until you can provide them with alternative rehabilitation. You know in the monsoon it is very difficult for anybody to live there. The monsoon rains and winds directly hit them in the face. They will have to be provided with shelter. Although there is scheme to give housing loans, I do not think much progress is made in that respect.

I have again to stress before the Government about the importance of this industry. From my own experience, I can say that fish is a very valuable food. The Government of India have indented for canned fish for their armed forces. Fish has 25 per cent protien and 75 per cent water. In the process of canning-because I have a canning factory myself--fifty per cent of the water is reduced and when you get canned fish or tinned fish, it contains concentrated protien and minerals and vitamins. The armed forces require it and the Government of India is placing orders with us, because the only alternative is to import.

One more thing. The Government have an ice-plant at Mangalore. It was constructed by the Madras Government at a cost of 6 lakhs. During the second Plan period, that one plant has earned for the Government Rs. 60 lakhs worth of foreign exchange. In 1961-62, it

earned 12 lakhs and in 1962-63, even up to the present, twenty lakhs has been earned. For an investment of six lakhs, if you can make so much profit and earn foreign exchange, you can imagine the potentiality especially in the direction of foreign exchange which we are able to earn even with our country boats.

Another point is, Government have sanctioned some ice-plants. So many have progressed and so many are still progressing. I suggest that there must be one ice-plant every ten miles on the coast. The peculiar condition of fishing industry is, fish is a perishable and it has to be preserved immediately it is caught.

Sri SANJEEVANATH AIKALA.—The ice-plant is frozen ! The work is frozen!

Sri M. MADHWARAJA.—I think Sir, I have given a fairly good account of the fisheries.

Mr. SPEAKER.—The Hon'ble member has not said anything about the marketing facilities. People of the State also should consume it.

Sri M. MADHWARAJA.—I was speaking from my own personal experience. Though I have a canning factory, the primary need is, you must have fish available in the first instance. I hardly run the factory for 100 days in a year. We find it very difficult to sell canned fish. We must have a proper market. I am speaking about the subject from my personal experience. The Government of India wanted 200 tons of fish to be delivered in three months. And I have great pleasure in telling that I have done it. What I did for three months has not been done for three years. If fish is available and if sufficient market is created, this industry can grow. There is a fish meal plant at Malpe which has been constructed at a cost of $4\frac{1}{2}$ lakhs. Of course it is not yet commissioned. Machinery has come. I am very doubtful if this plant can run even for one day. Whatever processing or marketing facilities we have, it directly depends upon the quantity of fish that is caught. That must be our idea and it has got to be done only by mechanised fishing ; and as I said earlier, a corporation in the public sector or private sector must be floated for this purpose. There are about 20,000 fishermen actively engaged in this profession. We require about 4,000 boats and the investment will be from 12 to 15 crores of rupees. Otherwise, 150 boats provided in the Third Plan will be merely a demonstration.

I conclude, Sir. Thank you.

†ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ, ಅಧ್ಯಕ್ಷರೇ : ಈಗ ನಮ್ಮ ಮುಂದೆ ಅನೇಕ ಇಲಾಖೆಗಳಿಗೆ ಸಂಬಂಧಪಟ್ಟ ಡಿಮ್ಯಾಂಡ್‌ಗಳಿರುತ್ತವೆ. ಆದರೆ ನಾನೀಗ ವ್ಯವಸಾಯದ ಇಲಾಖೆಯ ಮೇಲೆ ಮೊಟ್ಟ ಮೊದಲನೇಯದಾಗಿ ಮಾತನಾಡಲಿಚ್ಛಿಸುತ್ತೇನೆ.

ಸ್ವಾಮಿ, ನಮ್ಮ ದೇಶದಲ್ಲಿ ಈ ವ್ಯವಸಾಯದ ಇಲಾಖೆಯೆಂಬುದೇನಿದೆ. ಇದು ಒಂದು ವಿಚಿತ್ರವಾದ ಇಲಾಖೆಯಾಗಿಬಿಟ್ಟಿದೆ. ಈ ವ್ಯವಸಾಯದ ಇಲಾಖೆಯಾದರೋ ಈ ದೇಶದಲ್ಲಿರತಕ್ಕ ಜನಸಂಖ್ಯೆಯಲ್ಲಿ ಸುಮಾರು ಶೇಕಡ 80 ಜನಗಳಿಗೆ ನಿಕಟಸಂಬಂಧವಿರುವಂಥ ಒಂದು ಇಲಾಖೆ ಇದು. ಈ ಇಲಾಖೆ ಹೇಗಿದೆ ಎಂತ ಯಾರಾದರೂ ಕೇಳಿದರೆ—ಅದಕ್ಕೇನು ಹೇಳಬೇಕೋ ಅದೇ ನನಗೆ ದೊಡ್ಡ ಸಂಶಯವಾಗಿದೆ. ಆದುದರಿಂದ ನಾನೀಗ ಈ ಇಲಾಖೆಯ ಬಗ್ಗೆ ಏನಾದರೂ ಸಲಹೆಗಳನ್ನು ಮಾಡಬೇಕೇ ಅಥವಾ ಈ ಇಲಾಖೆಯನ್ನು ಕ್ರಿಟಿಸೈಜ್ ಮಾಡಬೇಕೇ ಎಂತ ಆಲೋಚಿಸಿದ್ದರಲ್ಲಿ ಈ ಎರಡನ್ನೂ ಮಾಡಬೇಕಾಗಿಲ್ಲವೆಂದು ಅನಿಸುತ್ತಿದೆ. ಏಕೆಂದರೆ ಈ ಇಲಾಖೆಯನ್ನೇ ಮುಚ್ಚಿಬಿಡ

(ಶ್ರೀ ಜಿ. ಮರುಳಪ್ಪ)

ಬೇಕು ಎಂದು ನನಗೆ ಅನಿಸುತ್ತಿದೆ. ಏತಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ ಈ ಇಲಾಖೆ ಇಲ್ಲಿಯುವರೆಗೆಂದರೂ ವ್ಯವಸಾಯಾಭಿವೃದ್ಧಿಗೆ ಏನಾದರೂ ಕಿಂಚಿತ್ ಉಪಯೋಗ ಮಾಡಿ ಕೊಟ್ಟಿದೆಯೇ ಅಥವಾ ರೈತನು ಭೂಮಿಯನ್ನು ಯಾವ ಕಾಲದಲ್ಲಿ ಉಳುಮೆ ಮಾಡಬೇಕು, ಯಾವ ಕಾಲದಲ್ಲಿ ಬಿತ್ತನೆ ಮಾಡಬೇಕು, ರೈತನ ಖರ್ಚನ್ನು ಕಡಮೆ ಮಾಡಿ ಆತನ ಉತ್ಪತ್ತಿಯನ್ನು ಹೇಗೆ ಹೆಚ್ಚಿಸಬೇಕೆಂಬುದನ್ನಾಗಲೀ ಇತ್ಯಾದಿ ಏನಾದರೂ ಮಾಡಿದೆಯೇ ಎಂತ ನೋಡಿದರೆ—ರೈತನಿಗೆ ಉಳುಮೆ ಕಾಲದಲ್ಲಿ ಅವನಿಗೆ ಅಗತ್ಯವಾದ ಉಪಕರಣಗಳನ್ನು ಈ ಇಲಾಖೆ ಒದಗಿಸುತ್ತಿಲ್ಲ; ಬಿತ್ತನೇ ಕಾಲದಲ್ಲಿ ರೈತನಿಗೆ ಒಳ್ಳೆ ಬೀಜಗಳನ್ನು ಒದಗಿಸುತ್ತಿಲ್ಲ; ಒಂದು ವೇಳೆ ಕಷ್ಟಪಟ್ಟು ಬೀಜವನ್ನೊದಗಿಸಿದರೆ—ಆ ಬೀಜಗಳು ಹುಟ್ಟುವುದೇ ಇಲ್ಲ; ಗೊಬ್ಬರವನ್ನು ಯಾವ ಕಾಲಕ್ಕೆ ಹಾಕಬೇಕೋ ಆ ಕಾಲಕ್ಕೆ ಇಲಾಖೆಯವರಲ್ಲಿ ಗೊಬ್ಬರ ಸಿಕ್ಕುವುದಿಲ್ಲ. ಯಾವಾಗ ಹೋಗಿ ಕೇಳಿದರೂ ಇಂಡೆಂಟ್ ಮಾಡಿದ್ದೇವೆ ಬರುತ್ತದೆ, ಬಂದರೆ, ಬಂದಮೇಲೆ ಬಂದು ತೆಗೆದು ಕೊಂಡು ಹೋಗಿ ಕೊಡುತ್ತೇವೆ ಎಂತ ಈ ಇಲಾಖೆಯವರು ಹೇಳುತ್ತ, ಕುಳಿತರೆ ಆ ರೈತ ಬೇಸಾಯ ಮಾಡಲು ಸಾಧ್ಯವಿದೆಯೇ ಎಂತ ಕೇಳುತ್ತೇನೆ? ಹಾಗೂ ಒಂದು ವೇಳೆ ರೈತನು ಇದನ್ನೇ ಅನುಸರಿಸಿಕೊಂಡು ವ್ಯವಸಾಯ ಮಾಡಲಿ ಎಂಬುದಾಗಿದ್ದರೆ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಯಾವಾಗ ಈ ಇಲಾಖೆಯವರು ಈ ಸಾಮಾನುಗಳನ್ನೆಲ್ಲಾ ರೈತನಿಗೆ ಒದಗಿಸಿಕೊಡುತ್ತಾರೋ ಆಗಲೇ—ಆ ಕಾಲದಲ್ಲೇ ಮಳೆ ಬೀಳತಕ್ಕದ್ದು ಎಂತ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದರೆ —ಅದರಂತೆ ಮಳೆ ಬರುವುದಾದರೆ ಹಾಗೂ ಆಗಬಹುದು: ನಾನು 60ನೇ ಇಸವಿಯಲ್ಲಿ ಒಂದು ಟ್ರಾಕ್ಟರ್ ಎಲ್ಲಿ ಬಿದ್ದುದನ್ನು ನೋಡಿದೆನೋ ಅದು 61 ರಲ್ಲೂ ಅಲ್ಲೇ ಇತ್ತು, 62 ರಲ್ಲೂ ಅಲ್ಲೇ ಇತ್ತು. ಈ ಟ್ರಾಕ್ಟರುಗಳ ಅವಸ್ಥೆ ಹೀಗಾಗಿದೆ. ನಾನಾದರೋ ಹಳ್ಳಿಯಿಂದ ಬಂದಿರತಕ್ಕವನು. ಆ ರೈತ ಈ ದಿವಸ ಈ ಟ್ರಾಕ್ಟರ್‌ಗಳು ಕೆಲಸಕ್ಕೆ ಸಿಗದೆ ಎಷ್ಟು ದುಃಖಪಡುತ್ತಿದ್ದಾನೆಂಬುದನ್ನು ಹೇಳತೀರದಾಗಿದೆ. ಯಾಕಯ್ಯ ಟ್ರಾಕ್ಟರ್ ತರಲಿಲ್ಲ ಎಂತ ಕೇಳಿದರೆ ಇಲಾಖೆಯವರು ಅದಕ್ಕೆ ಯಾವುದೋ ಬೋಲ್ಟ್ ಕಳಚಿಹೋಗಿದೆ ಎಂತ ಹೇಳುತ್ತಾರೆ ಎನ್ನುತ್ತಾನೆ. ಇಲಾಖೆಯವರು ಈ ದಿವಸ ನೇರವಾಗಿ ರೈತರಿಗೆ ಈ ಬುಲ್‌ಡೋಜರುಗಳು—ಟ್ರಾಕ್ಟರುಗಳು ಸಿಕ್ಕುವುದಿಲ್ಲ ಎಂತ ಏಕೆ ಹೇಳಬಾರದು? ಬೋಲ್ಟ್ ಕಳಚಿಹೋಗಿದೆ, ಅದಿಲ್ಲ—ಇದಿಲ್ಲ ಎಂತ ಹೇಳುವುದಾದರೂ ಎಲ್ಲಿಯತನಕ? ನಾನೇ ಒಂದಾವರ್ತಿ ಆ ಡ್ರೈವರನ್ನು ಎಷ್ಟು ದಿವಸಗಳಾಯಿತು ಏಕೆ ಆ ಬೋಲ್ಟ್ ಬರಲಿಲ್ಲ ಎಂತ ಕೇಳಿದರೆ ಆತ ಇವರು ಅವರಿಗೆ ಬರೆದಿದ್ದಾರೆ, ಅವರು ಅವರಿಗೆ ಬರೆದಿದ್ದಾರೆ. ಅಲ್ಲಿಂದ ಆ ಸಾಮಾನು ಬರಬೇಕು, ಬಂದಮೇಲೆ ನಿಮ್ಮೂರಿಗೆ ಟ್ರಾಕ್ಟರನ್ನು ತರುತ್ತೇನೆ ಎಂತ ಆತ ಹೇಳಿದ. ಆದರೆ ಇವರು ಇಷ್ಟೆಲ್ಲಾ ಸಮಾರಂಭ ಮಾಡಿಕೊಂಡು ಆ ಟ್ರಾಕ್ಟರನ್ನು ಹಳ್ಳಿಗೆ ತರುವ ವೇಳೆಗೆ ಅಲ್ಲಿ ಉಳುಮೆ ಮಾಡುವುದಕ್ಕೆ ಹದವಿಲ್ಲದೆ ಅವಕಾಶವಿರುವುದಿಲ್ಲ. ಆದರೆ—ಸ್ವಾಮಿ, ಈ ಅವ್ಯವಸ್ಥೆ ಎಲ್ಲ ಇಲಾಖೆಗಳಲ್ಲೂ ಸ್ವಲ್ಪ-ಹೆಚ್ಚು ಕಡಮೆ ಇದ್ದಿರಬಹುದು. ಆದರೆ ಅದೇನೂ ಅಷ್ಟು ಪ್ರಾಮುಖ್ಯವಾದ್ದಲ್ಲ. ಆದರೆ ಈ ಇಲಾಖೆ ಹುಟ್ಟಿ ಎಷ್ಟು ವರ್ಷಗಳಾಯಿತು? ಈ ಇಲಾಖೆ ಹುಟ್ಟಿ ಇಷ್ಟು ದಿವಸಗಳಾದರೂ ಇಲ್ಲಿಯ ತನಕ ಏನು ಕೆಲಸ ಮಾಡಿದೆ? ಏನಂಥಾ ಕ್ರಾಂತಿಕಾರಕ ಕೆಲಸಮಾಡಿ ಏನು ಅಂಥಾ ಈ ಕ್ಷೇತ್ರದಲ್ಲಿ ಬದಲಾವಣೆ ಮಾಡಿರತಕ್ಕದ್ದನ್ನು ನೋಡಿದರೆ ಅದೆಲ್ಲಿಯೂ ಕಾಣುತ್ತಿಲ್ಲ. ಹಳ್ಳಿಯಲ್ಲಿರತಕ್ಕ ಒಬ್ಬ ವಯಸ್ಸಾದ ಬೇಸಾಯಗಾರನಿಗಿರುವಷ್ಟು ಬುದ್ಧಿ ಈ ಇಲಾಖೆಗಿಲ್ಲ ಎಂತ ಹೇಳಿದರೆ ಅದೇನೂ ತಪ್ಪಾಗಲಾರದು. ಆದರೂ ಇದೊಂದು ಬಹು ಮುಖ್ಯವಾದ ಇಲಾಖೆ. ಈ ದಿವಸ ದೇಶದಲ್ಲಿರತಕ್ಕ ರೈತನಿಗೆ ಒಳ್ಳೆಯ ಉತ್ಪತ್ತಿ ಮಾಡುವಂಥಾ ಶಕ್ತಿ ಆತನಿಗೆ ಬಾರದ ಹೊರತು, ಅವನಿಗೆ ಸಾಕಷ್ಟು ಪ್ರೋತ್ಸಾಹವನ್ನು ಸರ್ಕಾರ ನೀಡದ ಹೊರತು ನೀವೆಷ್ಟೇ ಮಾಡಿದರೂ ದೇಶದಲ್ಲಿ ಯಾವ ಒಂದು ಉದ್ಯಮವೂ ನಡೆಯಲಾರದು—ಇದು ಸತ್ಯವಾದ ಮಾತು, ಅನ್ನವಿಲ್ಲದ ದೇಶದಲ್ಲಿ ಏನು ತಾನೆ ಮಾಡಲು ಸಾಧ್ಯವಿದೆ? ಆದರೆ ಇನ್ನೂ ಈಗತಾನೆ ಬಹಳ ಉತ್ಸಾಹಶಾಲಿಗಳಾದಂಥಾ ಹೊಸ ಮಂತ್ರಿಗಳು ಈ ಖಾತೆಗೆ ಬಂದಿದ್ದಾರೆ. ಉತ್ತಮ ದರ್ಜೆಯ ರೈತಾಪಿ ಜನಗಳಿರುವಂಥ ಜಿಲ್ಲೆಯಿಂದ ಅವರು ಬಂದಿದ್ದಾರೆ. ಈ ಇಲಾಖೆಯಲ್ಲಿ ಹೆಚ್ಚಿನ ಮಾರ್ಪಾಡುಗಳನ್ನು ಮಾಡಬೇಕೆಂಬ ಆಸೆ ಅವರಿಗೆ ಬಹಳವಾಗಿದೆ. ಅವರು ದಕ್ಷರೂ ಹೌದು. ಇಷ್ಟೆಲ್ಲಾ ಇದ್ದರೂ ನನಗಿನ್ನೂ ಅನುಮಾನವೇ. ಏಕೆಂದರೆ ಅವರ ಕೈಕೆಳಗಿರುವ ಮೆಷಿನರಿ ಬಹಳ ಹಳೆಯದಾಗಿದ್ದು ಅದು ಕೆಟ್ಟು ಹೋಗಿದೆ. ಅದನ್ನು ಹೊಸದಾಗಿ ಮಾಡಿಕೊಂಡರೆ ಮಾತ್ರ ಇವರು ತಮ್ಮ ಕಾರ್ಯದಲ್ಲಿ ಯಶಸ್ವಿಯಾಗುತ್ತಾರೋ ಏನೋ ಎಂದೆನಿಸುತ್ತಿದೆ. ನಾನು ಈ ದಿವಸ ಈ ಮಾತುಗಳನ್ನು ನಗಸಾರಕ್ಕಾಗಿ ಹೇಳುತ್ತಿಲ್ಲ. ಬಹಳ ಸೀರಿಯಸ್ ಆಗಿ ಹೇಳುತ್ತಿದ್ದೇನೆ. ಈ ವ್ಯವಸಾಯದ ಇಲಾಖೆಯೊಂದು ದೊಡ್ಡ ರಾಜಕೀಯದ ಇಲಾಖೆಯಾಗಿದೆಯೇನೋ ಎಂಬ ಸಂಶಯ ಬಂದಿದೆ. ಈ ಇಲಾಖೆ ವಿಚಾರ

ದಲ್ಲಿ ಜನ ಬಹಳ ಬೇಸತ್ತಿದ್ದಾರೆ. ಈ ವಿಚಾರವನ್ನು ಸರ್ಕಾರದವರು ಜಾಗ್ರತೆಯಾಗಿ ಪರಿಶೀಲನೆ ಮಾಡತಕ್ಕದ್ದು ಯೋಗ್ಯವೆಂದು ಹೇಳುತ್ತೇನೆ.

ಯಾವ ವಿಚಾರಕ್ಕಾಗಲೀ ಈ ಇಲಾಖೆಯಲ್ಲಿ ಒಂದು ಸ್ಟ್ಯಾಟಿಸ್ಟಿಕ್ಸ್ ಇದೆಯೇ ಎಂದರೆ ಅದಿಲ್ಲ. ಈ ದಿವಸ ಈ ವ್ಯವಸಾಯದಲ್ಲಿ ಕಾವಲುಪಡುತ್ತಿರು ರೈತ ಹಾಗೂ ವ್ಯವಸಾಯದ ಕೂಲಿಗಾರರ ಆಗಚಾಟಲನ್ನೂ ಮತ್ತು ಈ ಕೈಗಾರಿಕೆಗಳಲ್ಲೂ ಇತರ ಉದ್ಯಮಗಳಲ್ಲೂ ತೊಡಗಿರತಕ್ಕ ಜನರು ಪಡುತ್ತಿರುವ ಆ ಸುಖ-ಆನಂದ, ಅವರ ಜೀವನದ ಮಟ್ಟ ಇವುಗಳನ್ನೆಲ್ಲಾ ಲೆಕ್ಕ ಹಾಕಿನೋಡಿದ್ದೇ ಆದರೆ ಆ ಹಳ್ಳಿಗಳಲ್ಲಿರತಕ್ಕ ಶೇಕಡ 80 ರಷ್ಟು ರೈತಾಪಿ ಜನಗಳಿಗೆ ವ್ಯವಸಾಯಗಾರರಿಗೆ ಅವರ ಜೀವನದ ಮಟ್ಟ ಹೆಚ್ಚಾಗುವಂತೆ ಈ ಇಲಾಖೆಯಿಂದ ಏನೇನು ಅನುಕೂಲತೆಗಳು ದೊರೆತಿರುತ್ತವೆ, ಅವರ ಕಷ್ಟ ಎಷ್ಟರಮಟ್ಟಿಗೆ ನಿವಾರಣೆಯಾಗಿದೆ ಎಂಬುದನ್ನು ತೂಕ ಹಾಕಿದರೆ ಆಗ ಈ ಇಲಾಖೆ ಇರಬೇಕೇ ಅಥವಾ ಬೇಡವೇ ಎಂಬುದು ಸರ್ಕಾರದವರಿಗೇ ಗೊತ್ತಾಗುತ್ತದೆ. ಆದರೆ ಸರ್ಕಾರದ ವರಿಗೆ ಇದೆಲ್ಲವೂ ಅರ್ಥವಾಗಿರಬಹುದು. ಆದರೆ ನಾನು ಮತ್ತೆ ಪೇಪರನ್ನು ಓದುತ್ತಿದ್ದಾಗ ಅಲ್ಲೆಲ್ಲೋ ಮತ್ತೆ ದೊಡ್ಡ ಸೈನ್ಯವನ್ನು ತಂದಿದ್ದಾರೆ ಎಂತ ಬರೆದಿತ್ತು. ಆದರೆ ನಮಗೆ ಯಾವ ಕಾಲವಾದರೇನು ಒಳ್ಳೆಯ ಕಾಲವೇ ಆಗಲಿ, ಕೆಟ್ಟ ಕಾಲವೇ ಆಗಲಿ ಎಂಥಾ ಕಾಲದಲ್ಲೂ ಈ ಆಹಾರ ಬೇಕೇಬೇಕು. ಇದನ್ನು ಬಿಟ್ಟಿರುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಈ ವ್ಯವಸಾಯದ ಉದ್ಯಮದಲ್ಲಿ ಒಂದು ಕ್ರಾಂತಿಕಾರಿಕ ರೀತಿಯಲ್ಲಿ ಕೆಲಸಗಳು ನಡೆದು ನಾವು ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡಿಕೊಳ್ಳಬೇಕಾಗಿದ್ದರೆ ನಾವು ರೈತರಿಗೆ ಅನೇಕ ಬಾಬಿನಲ್ಲಿ ಸೌಕರ್ಯಗಳನ್ನು ದೊರಕಿಸಿ ಕೊಡಬೇಕು—ಅವರಿಗೆ ಪ್ರೋತ್ಸಾಹ ನೀಡಬೇಕು. ನಮ್ಮಲ್ಲಿ ಆಹಾರ ಧಾನ್ಯ ಸಾಕಷ್ಟು ಇಲ್ಲದಿದ್ದಾಗ ಇನ್ನಾವ ಇಂಡಸ್ಟ್ರಿಯೂ ಇಲ್ಲ ಉದ್ಧಾರವಾಗುವುದಿಲ್ಲ ಎಂದು ನಾನು ಖಚಿತವಾಗಿ ಹೇಳಬಲ್ಲೆ. ಆದರೆ ಈಗತಾನೆ ಈ ಬೇಡಿಕೆಗಳು ನಮ್ಮ ಮುಂದೆ ಬಂದಿವೆ. ಈ ಹಣ ಮುಂದಿನ ವರ್ಷದಲ್ಲಿ ಖರ್ಚು ಮಾಡಬೇಕಾದ್ದಾಗಿದೆ. ಆದ್ದರಿಂದ ಈಗ ಬಂದಿರತಕ್ಕ ಮಂತ್ರಿಗಳು ಈ ಹಣವನ್ನು ಎಷ್ಟರಮಟ್ಟಿಗೆ ಸದ್ವಿನಿಯೋಗ ಮಾಡುತ್ತಾರೆಂಬುದನ್ನು ಇನ್ನೂ ಒಂದು ವರ್ಷ ನಾವು ಕಾದು ನೋಡಿ ಅನಂತರ ಮುಂದಿನ ವಿಚಾರ ಮಾತನಾಡತಕ್ಕದ್ದು ಉಚಿತವೆಂತ ಭಾವಿಸಿ ಇದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ.

ಇನ್ನು ಎರಡನೆಯದಾಗಿ ಈ ಕೋ-ಆಪರೇಷನ್ ಇಲಾಖೆ ವಿಚಾರಕ್ಕೆ ಬಂದರೆ—ಇದರ ಬಗ್ಗೆ ನನ್ನ ಸ್ನೇಹಿತರು ಬಹಳವಾಗಿ ಟೀಕೆಮಾಡಿ ಮಾತನಾಡಿದ್ದಾರೆ. ಈ ದಿವಸ ದೇಶದಲ್ಲಿ ಪ್ರಜಾಪ್ರಭುತ್ವಾಡಳಿತವಿದೆ. ಎಲ್ಲ ಕಡೆಗಳಲ್ಲೂ ನಾನಾಫಿಷಿಯಲ್ ಬಾಡಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಅಧಿಕಾರವನ್ನು ವಿಕೇಂದ್ರಿಕರಣ ಮಾಡಬೇಕು ಎಂತ ಹೇಳುತ್ತಿರುವವರೂ ನಾವೇ ಮತ್ತು ಈ ದಿವಸ ಈ ಸ. ಸಂಘಗಳನ್ನು ಕಟುವಾಗಿ ಟೀಕೆ ಮಾಡುತ್ತಿರುವವರೂ ನಾವೇ. ಈ ದಿವಸ ಈ ಸ. ಸಂಸ್ಥೆಗಳಲ್ಲಿ ಶೇಕಡ 90 ಭಾಗ ನಾನ್‌ಅಫಿಷಿಯಲ್ಸ್‌ಗಳೇ ಇದ್ದಾರೆಂತ ಹೇಳುತ್ತಿದ್ದೇನೆ. ಅಥವಾ ಆ ನಾಮಿನೇಷನ್ ಪದ್ಧತಿಯಲ್ಲಿ ಶೇಕಡ 5 ಭಾಗದಷ್ಟು ಬೇರೆ ಜನ ಬಂದಿರಬಹುದು. ಉಳಿದವರೆಲ್ಲ ನಾವೇ. ನಾವು ಎಂದರೆ ಯಾರು ? ಪ್ರಜಾಪ್ರತಿನಿಧಿಗಳೆಂದೆನಿಸಿಕೊಂಡು ಈ ಸಭೆಯಲ್ಲಿರತಕ್ಕ ಮಹನೀಯರನೇಕರು ಆ ಸೊಸೈಟಿಗಳಲ್ಲೂ ಇದ್ದಾರೆ. ನಮಗೀದಿವಸ ಈ ಅಫಿಷಿಯಲ್ ಡಂ ಬೇಕಾಗಿಲ್ಲ ಅನ್ನೋ ಜನರೂ ಈ ದಿವಸ ಈ ಸ. ಸಂಘಗಳಲ್ಲಿರುತ್ತಾರೆ. ಆದರೆ ಏನೋ ಅಲ್ಲಿ ಒಬ್ಬರಿಗೊಬ್ಬರಿಗೆ ಪೈಪೋಟಿ ಬಂದು ಕೆಲಸಗಳು ಸರಿಯಾಗಿ ಆಗುತ್ತಿಲ್ಲವೆಂತ ಟೀಕೆ ಮಾಡಿದ್ದರೆ ಅದೊಂದು ರೀತಿಯಾಗಿರುತ್ತಿತ್ತು. ಹಾಗಿಲ್ಲದೆ ಈ ದಿವಸ ಯಾರ ಒಂದು ಜವಾಬ್ದಾರಿ ಮೇಲೆ ಈ ಕೆಲಸ ಬಿದ್ದಿದೆಯೋ ಅವರು ಆ ಕೆಲಸ ನಿರ್ವಹಿಸಲು ತಕ್ಕ ಶಕ್ತಿ ಸಾಮರ್ಥ್ಯಗಳಿಲ್ಲದೆ ಅಲ್ಲಿ ದುರಾಚಾರ ನಡೆದಿದ್ದಾರೆ ಅದಕ್ಕೆಲ್ಲ ಈ ನಾನಫಿಷಿಯಲ್ಸ್‌ಗಳೇ ಜವಾಬ್ದಾರರು. ಈ ದಿವಸ ಈ ನಾನ್ ಅಫಿಷಿಯಲ್‌ಗಳು ಸರಿಯಾಗಿ ಕೆಲಸಮಾಡದೆ ಅಲ್ಲಿ ದುರಾಡಳಿತ ನಡೆದಿದ್ದಾದರೆ ಅದಕ್ಕೆ ಈ ದಿವಸ ಇಲ್ಲಿ ಬಂದು ಸರ್ಕಾರದವರನ್ನು ಟೀಕೆ ಮಾಡುವುದರಲ್ಲಿ ಅರ್ಥವಾದರೂ ಏನಿದೆ ? ನಮ್ಮ ರಾಜ್ಯವೊಂದೇ ಅಲ್ಲ—ಇಡೀ ಹಿಂದೂಸ್ಥಾನಕ್ಕೇ ಈ ಕೋ-ಆಪರೇಟೀವ್ ಮೂವ್‌ಮೆಂಟೆಂಬುದು ಬಹಳ ಮುಖ್ಯವಾದದ್ದು. ದೇಶದ ಕಲ್ಯಾಣ ಸಾಧನೆಗೆ ಇದು ಬಹಳ ಮುಖ್ಯವಾಗಿ ಬೇಕಾದದ್ದು ಅದರಲ್ಲಿ ಈ ಸಂಸ್ಥೆಗಳಲ್ಲಿ ಅಲ್ಲಲ್ಲೇ ಕೆಲವು ನ್ಯೂನತೆಗಳಿರಬಹುದು. ಇವುಗಳನ್ನು ತಿದ್ದಿ ಸರಿಪಡಿಸಲು ಸರ್ಕಾರ ಸರ್ವಪ್ರಯತ್ನಗಳನ್ನೂ ಮಾಡಬೇಕಾಗಿತ್ತು. ಆದರೆ ಮಾಡಿಲ್ಲ, ಆ ಜನಗಳ ತಪ್ಪನ್ನು ಯಾವ ರೀತಿ ತಿದ್ದಬೇಕು. ಅಂಥಾ ತಪ್ಪಿತಸ್ಥರಿಗೆ ಒಂದು ರೀತಿಯ ಭೀತಿಯನ್ನುಂಟುಮಾಡಿ ಈ ಸಂಸ್ಥೆಗಳು ಅಭಿವೃದ್ಧಿಗೊಳ್ಳುವಂತೆ ಸಹಾಯ ಮಾಡಬೇಕಾದ್ದು ಈ ಇಲಾಖೆಯ ಮುಖ್ಯ ಕೆಲಸವಾಗಿತ್ತು. ಆದರೆ ಇದರಲ್ಲಿ ಒಂದು ಅಂಶವನ್ನು ಮಾತ್ರ ಸರ್ಕಾರದವರು ಕೈಬಿಡಬೇಕಾಗಿದೆ. ಅದೇನಪ್ಪ ಅಂದರೆ ಈ ನಾಮಿನೇಷನ್ ಪದ್ಧತಿ. ಇದನ್ನು ಸರ್ಕಾರ ಎಲ್ಲಿಯವರೆಗೆ ರದ್ದು ಮಾಡುವುದಿಲ್ಲವೋ ಅಲ್ಲಿಯತನಕ ಸರ್ಕಾರಕ್ಕೆ ಕೆಟ್ಟ ಹೆಸರು ತಪ್ಪಿದ್ದಲ್ಲ ಎಂತ ಹೇಳುತ್ತೇನೆ. ಇದನ್ನು ರದ್ದುಮಾಡಿ ಈ ಸಂಸ್ಥೆಗಳ ಅಭಿವೃದ್ಧಿಗೆ ಸೂಕ್ತ ಗಮನ ಕೊಡಬೇಕೆಂದು ಹೇಳುತ್ತೇನೆ.

(ಶ್ರೀ ಜಿ. ಮರುಳಪ್ಪ)

ಇನ್ನು ನಾನೀಗ ಈ N.E.S. ಬಾಬಿನಲ್ಲಿ ಕೇವಲ ಹಳ್ಳಿಗಳಿಗೆ ಕುಡಿಯುವ ನೀರಿನ ವಿಚಾರವನ್ನು ಮಾತ್ರ ಹೇಳಲಿಚ್ಛಿಸುತ್ತೇನೆ. ಈ ದಿವಸ ಇಲ್ಲಿರತಕ್ಕ ಮಂತ್ರಿಗಳೆಲ್ಲರೂ ಹಳ್ಳಿಯಿಂದಲೇ ಬಂದವರಾಗಿದ್ದಾರೆ. ಅದರಲ್ಲೂ ಈ ಬಾಬಿಗೆ ಸಂಬಂಧಪಟ್ಟ ಮಂತ್ರಿಗಳು ನೀರಿಗೆ ತುಂಬಾ ಕಷ್ಟವಿರುವಂಥಾ ಜಿಲ್ಲೆಯಿಂದಲೇ ಬಂದವರಾಗಿದ್ದಾರೆ. ಅವರ ಕಡೆ ಜನರು ನೀರು, ನೀರೆಲ್ಲದೆ ಎಂತ 4–5 ಮೈಲಿಗಟ್ಟಲೆ ಈ ಕುಡಿಯುವ ನೀರಿಗೆ ಅಲೆದಾಡುವಂಥಾ ಪ್ರದೇಶದಿಂದ ಈ ಮಂತ್ರಿಗಳು ಬಂದಿದ್ದಾರೆ. ಅವರಿಗೆ ಈ ಕುಡಿಯುವ ನೀರಿನ ಭಂಗ ಎಷ್ಟರಮಟ್ಟಿಗೆ ಇದೆ ಎಂಬ ಕಷ್ಟ ಅವರಿಗೆ ಗೊತ್ತಾಗಿದೆ. ಅಂಥಾವರು ಈ ದಿವಸ ಈ ಹಳ್ಳೀ ಜನರಿಗೆ ಈ ಕುಡಿಯುವ ನೀರಿನ ಬಾವಿಗಳಿಲ್ಲದೆ ಎಷ್ಟು ತೊಂದರೆಯಾಗಿದೆ ಎಂಬುದನ್ನು ಕೂಡಲೇ ಪರಿಶೀಲನೆಮಾಡಿ ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ಅವರ ಕರ್ತವ್ಯ.

ಸ್ವಾಮಿ, ಬಾವಿಗಳ ವಿಚಾರದಲ್ಲಿ ನಮ್ಮ ಸ್ನೇಹಿತರು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಬಾವಿಗಳು 15 ವರ್ಷದಿಂದ, 10 ವರ್ಷದಿಂದ, 8 ವರ್ಷದಿಂದ, 4 ವರ್ಷದಿಂದ ಆಗಿಲ್ಲ, ಬಾವಿಗಳಿಗೆ ಜನತೆಯಿಂದ ದುಡ್ಡು ಕೇಳುತ್ತಿದ್ದೀರಿ. ಅವರು ಹಣ ಕೊಡದೆ ಇದ್ದರೆ ನಿಮ್ಮ ಕೋಟಾ ಕೊಡಲಿಲ್ಲವೆಂದು ಕೆಲಸ ಮಾಡಿಸುವುದಿಲ್ಲ. ಕೆಲವು ಕಂಟ್ರಾಕ್ಟರುಗಳು ಬಿಟ್ಟು ಹೋಗಿ ಕೆಲಸ ನಿಂತು ಹೋಗಿದೆ. ಹೀಗೆ ಒಂದೊಂದು ತಾಲ್ಲೂಕಿನಲ್ಲಿ 50-100-200 ಹೀಗೆ ಬಾವಿಗಳ ಕೆಲಸ pending ನಲ್ಲಿವೆ—ವರ್ಷಾಂತರಗಳಾದರೂ ಬಾವಿ ಕೆಲಸ ಮುಗಿದಿಲ್ಲವೆಂದು ಹೇಳುವದರ ಬದಲು ವರ್ಷ ಒಂದಕ್ಕೆ ಒಂದು ತಾಲ್ಲೂಕಿಗೆ ಹತ್ತು ಬಾವಿಗಳನ್ನು ಕೊಡಿ, ನಿಮ್ಮ ಶಕ್ತಿ ಎಷ್ಟಿದೆಯೋ ಅಷ್ಟನ್ನೂ ಕೊಡಿ ಆದರೆ ಗ್ರಾಮಸ್ಥರ ಭಾಗ ಕೊಟ್ಟರೆ ಮಾತ್ರ ಕುಡಿಯುವ ನೀರಿನ ಬಾವಿಯನ್ನು ಕೊಡುತ್ತೇವೆಂದು ಹೇಳಬೇಡಿ. ಸುವ್ಯವಸ್ಥಿತವಾದ ಏಜನ್ಸಿಯಿಂದ ವರ್ಷಕ್ಕೆ ಹತ್ತು ಬಾವಿಗಳಂತೆ ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಖಂಡಿತವಾಗಿ ಒದಗಿಸಿಕೊಡಬೇಕು, ಅವರಿಂದ ಹಣ ಕೇಳಬಾರದು ಎಂದು ಹೇಳುತ್ತೇನೆ.

ಪಶುವೈದ್ಯ ಇಲಾಖೆಯ ವಿಷಯದಲ್ಲಿ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಏಕೆ ಎಂದು ಕೇಳಬಹುದು. ಈ ಇಲಾಖೆ ಯಾರ ಕೈಯಲ್ಲಿದೆಯೋ ಅವರನ್ನು ನಾನು ಬಹಳ ಚೆನ್ನಾಗಿ ಬಲ್ಲೆ. ಅವರು ಕ್ರಾಂತಿಕಾರರೆನ್ನಿಸಿಕೊಂಡವರು, ಅವರು ಚಿಕ್ಕ ವಯಸ್ಸಿನಲ್ಲಿಯೇ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿ ಅಂಥ ಪ್ರಯೋಜನವನ್ನು ಕೂಡ ರೈತರಿಗೆ ಒದಗಿಸಿಕೊಟ್ಟಿದ್ದಾರೆ. ಆದರಿಂದಲೇ ಅವರಿಗೆ ಒಂದೊಂದು ಮೆಟ್ಟಿಲು ಜಾಸ್ತಿಯಾಗಿ ಇಂಥ ಪದವಿ ಸಿಕ್ಕಿದೆ ಎಂದು ನಾನು ಹೇಳುತ್ತೇನೆ.

ಈ ಇಲಾಖೆಯ ವಿಷಯದಲ್ಲಿ ಜನಗಳು ಬಹಳ ಹೇಳುತ್ತಾರೆ. ಅದು ನನಗೂ ತಿಳಿದಿದೆ. ಅಲ್ಲಿ ಒಬ್ಬರ ಮಾತನ್ನು ಒಬ್ಬರು ಕೇಳುವುದಿಲ್ಲ, ಮೇಲಿನವರ ಮಾತನ್ನು ಕೆಳಗಿನವರು ಕೇಳುವುದಿಲ್ಲ, ಇದರಿಂದ ದಕ್ಷತೆ ಕಡಮೆಯಾಗಿದೆ ಎಂದು ತಿಳಿದು ಬಂದಿದೆ. ಇದಕ್ಕೆ ಸರ್ಕಾರದವರು ದಿಟ್ಟತನದಿಂದ, ಹಾಗೆಲ್ಲ ನಡೆಯುತ್ತಿಲ್ಲ, ಅದೆಲ್ಲ ಸುಳ್ಳು ಎಂದು ಹೇಳಬಹುದು. ಆದರೆ ಅದು ಸರಿಯಲ್ಲ. ನಾವು ದೇಶದ ಹಿತದೃಷ್ಟಿಯಿಂದ ಹೇಳುತ್ತೇವೆ. ಅಂಥ ತಪ್ಪುಗಳೇನಾದರೂ ಇದ್ದರೆ ಅವುಗಳನ್ನು ಒಪ್ಪಿಕೊಂಡು ತಿದ್ದುತ್ತೇವೆಂದು ಹೇಳಬೇಕು. ಅಲ್ಲಿರತಕ್ಕ ಕೆಲವು ಅಧಿಕಾರಿಗಳ ಬಗ್ಗೆ ಯಾರಿಗೂ ವಿಶ್ವಾಸವಿಲ್ಲ. ಅದನ್ನು ತಪ್ಪಿಸುವುದಕ್ಕೆ ಅನೇಕ ಎಡರು ತೊಡರುಗಳಿವೆ. ನನಗೆ ಅದೂ ಗೊತ್ತಿದೆ. ಆದರೂ ಕೂಡ ಸರ್ಕಾರ ಅದನ್ನೆಲ್ಲ ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಅರಣ್ಯ ಇಲಾಖೆ ಮೊದಲಿನಿಂದಲೂ ಅನೇಕ ಟೀಕೆಗಳಿಗೊಳಗಾಗುತ್ತ ಬಂದಿದೆ. ಕಳೆದ ಒಂದು ವರ್ಷದಿಂದ ಈ ಇಲಾಖೆ ಮೊದಲಿಗಿಂತ ಸಮರ್ಪಕವಾಗಿ ಕೆಲಸ ಮಾಡುತ್ತಿದೆ, ಚೆನ್ನಾಗಿದೆ, ಲೋಪ ದೋಷಗಳಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಮಂತ್ರಿಗಳು ಸ್ವಲ್ಪ ಹೆಚ್ಚಿಗೆ ಶ್ರದ್ಧೆ ತೆಗೆದುಕೊಳ್ಳುತ್ತಿದ್ದಾರೆ. ಕಾಡನ್ನು ಹಾಳು ಮಾಡುವುದಕ್ಕಿಂತ ಸ್ವಲ್ಪ ಉತ್ತಮಪಡಿಸಬೇಕೆನ್ನುವ ದಿಸೆಯಲ್ಲಿ ಸಹಕಾರಿಗಳಾಗಿದ್ದರೆ, ಅದರ ಉತ್ಪನ್ನಗಳನ್ನು ಹೆಚ್ಚಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ, ಕಷ್ಟ ಸುಖಗಳನ್ನು ಕೇಳಿ ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಕೆಲವರು ಆ ಇಲಾಖೆಗೆ ಸಂಬಂಧಪಟ್ಟವರು ಹೇಳುತ್ತಾರೆ. ಈ ಇಲಾಖೆಯನ್ನು ಬಹಳ ಯಶಸ್ವಿಯಾಗಿ ಮಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಎಲ್ಲ ಬೇಡಿಕೆಗಳನ್ನೂ ಸಂಪೂರ್ಣವಾಗಿ ಅನುಮೋದಿಸುತ್ತ ಕೆಲವು ವಿಷಯಗಳನ್ನು ಸರ್ಕಾರದಲ್ಲಿ ಸೂಚಿಸಬೇಕೆಂದು ಅಪೇಕ್ಷೆ ಮಾಡಿದ್ದೇನೆ.

ಮಾನ್ಯ ಮರುಳಪ್ಪನವರು ಬಹಳ ಚೆನ್ನಾಗಿ ಭಾಷಣ ಮಾಡಿದರು. ಅವರು ಬಹಳ ಹಿರಿಯರು ಅವರೇ ಒಪ್ಪಿಕೊಂಡಿದ್ದಾರೆ, ರೈತರ ಕುಟುಂಬದಲ್ಲಿ ಹುಟ್ಟಿದ್ದೇನೆ ಎಂದು, ಅವರು ಹೇಳಿದರು ಟ್ರಾಕ್ಟರ್ ಕೊಟ್ಟಿಲ್ಲ, ನೇಗಿಲುಕೊಟ್ಟಿಲ್ಲ, ಬೀಜ ಕೊಟ್ಟಿಲ್ಲ, ಗೊಬ್ಬರ ಕೊಟ್ಟಿಲ್ಲ ಎಂದು. ರೈತನಾದವನ ಮನೆಗೆ ಸರ್ಕಾರದವರು ಬೀಜ ತಂದು ಕೊಡಬೇಕು, ಹೊಲ ಉಳಮೆ ಮಾಡಿಸಿ ಕೊಡಬೇಕು, ಆಮೇಲೆ ಗೊಬ್ಬರ ತಂದು ಹಾಕಬೇಕು. ಇಷ್ಟೆಲ್ಲ ಆದ ಮೇಲೆ ನಾವು ಮಾಡತಕ್ಕ ಕೆಲಸವೇನು ಎಂದು ಕೇಳುತ್ತೇನೆ.

ಶ್ರೀ ಜಿ. ಮರುಳಪ್ಪ.—ಸ್ವಾಮಿ, ಗೊಬ್ಬರ, ಬೀಜ ವಗೈರೆ ಸಕಾಲದಲ್ಲಿ ಇಲಾಖೆಯಲ್ಲಿ ದೊರೆತ್ತಿಲ್ಲವೆಂದು ಹೇಳಿದೇನೇ ಹೊರತು ನಮ್ಮ ಮನೆಗೆ ತಂದುಕೊಡಬೇಕೆಂದು ಹೇಳಲಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ನಾನಾದರೂ ಇಷ್ಟು ಹೇಳುತ್ತೇನೆ. ಇಲಾಖೆಯವರು ಸಂಶೋಧನೆ ಮಾಡಿ ಒಳ್ಳೆಯ ಬೀಜ ಸಿಕ್ಕುವಂತೆ ಮಾಡಬೇಕು. ಗೊಬ್ಬರದ ವಿಷಯ ತೆಗೆದು ಕೊಂಡರೆ ತಿಪ್ಪೆ ಗೊಬ್ಬರ ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಅದರ fertilisers ಬೇಕಾದ ಹಾಗೆ ಉಪಯೋಗಿಸಿಕೊಳ್ಳಬಹುದು. ಆದರೆ ಯಾವತ್ತೂ fertilisers ಬೇಕು ಎಂದರೆ ಹೇಗೆ. ಸರ್ಕಾರದವರು ಕೊಟ್ಟಂಥ ಬೀಜಗಳನ್ನು ತಿಂದು ಸರ್ಕಾರದವರು ಬೀಜಗಳನ್ನು ತಂದು ಕೊಟ್ಟಿಲ್ಲವೆಂದು ಟೀಕೆ ಮಾಡುವುದು, ಬರೀ ಟೀಕೆ ಮಾಡತಕ್ಕವರ ಕಾರ್ಯವೇ ಹೊರತು ರೈತರ ಕಾರ್ಯವಲ್ಲ. ರೈತ ಕುಟುಂಬದಲ್ಲಿ ಹುಟ್ಟಿದವರು ಬೀಜ ಬೇಕು ಎಂದು ಸರ್ಕಾರವನ್ನು ಕೇಳದೆ ಅದನ್ನೂ ದಾಸ್ತಾನು ಮಾಡುತ್ತಾರೆ, ಗೊಬ್ಬರ ಸರಿಯಾಗಿ ಇಟ್ಟುಕೊಳ್ಳುತ್ತಾರೆ, ಯಾವ ಗೊಬ್ಬರ ಬೇಕೋ ಅದನ್ನು ಇಟ್ಟುಕೊಳ್ಳುತ್ತಾರೆ. ಅವರ ಮೇಲೆ ಸರ್ಕಾರದಿಂದ ಏನು ಸಹಾಯಬೇಕೋ ಅದನ್ನು ಕೊಡಿ ಎಂದು ಸೌಲಭ್ಯಗಳನ್ನು ಪಡೆಯುತ್ತಾರೆ. ಸರ್ಕಾರದವರೇ ಎಲ್ಲವನ್ನೂ ಕೊಡುವುದಕ್ಕಾಗುವುದಿಲ್ಲ. ನಾನೂ ರೈತರ ಕುಟುಂಬದಲ್ಲಿದ್ದೇನೆ. ರೈತರ ಅನುಭವ ಬಹಳ ಚೆನ್ನಾಗಿದೆ. ಹೆಚ್ಚು ಆಹಾರ ಉತ್ಪಾದನೆ ಮಾಡುವುದರಲ್ಲಿ ಬೆಳೆಗಳಿಗೆ ರೋಗರುಜಿನಗಳು ಬರದಂತೆ ತಡೆಗಟ್ಟತಕ್ಕ ಆಧುನಿಕ ಪದ್ಧತಿಗಳೇನಿದೆ ಅವುಗಳ ಮೂಲಕ ಆ ಸಮಸ್ಯೆಯನ್ನು ಪರಿಹಾರ ಮಾಡಿಕೊಡಬೇಕು, ಎಂಥೆಂಥ ವ್ಯವಸಾಯ ಮಾಡುವವರಿಗೆ ಏನೇನು ಸಹಾಯಬೇಕು, subsidy loan ಮುಂತಾದುವನ್ನು ಮಂಜೂರು ಮಾಡಬೇಕೆಂದು ಹೇಳಿದ್ದರೆ ಬಹಳ ಬಹಳ ಚೆನ್ನಾಗಿರುತ್ತಿತ್ತೆಂದು ನನ್ನ ಅಭಿಪ್ರಾಯ.

ವ್ಯವಸಾಯ ಇಲಾಖೆಯ ಬಗ್ಗೆ ನಾನು ಕೆಲವೊಂದು ಸೂಚನೆಗಳನ್ನು ಹೇಳಬೇಕೆಂದು ಅಪೇಕ್ಷೆ ಪಡುತ್ತೇನೆ. ಇವೊತ್ತಿನ ದಿವಸ ನಮ್ಮ ಕಡೆ Cotton Marketing Act ಇದುವರಿಗೂ ಜಾರಿಗೆ ಬಂದಿಲ್ಲ, ಇದರಿಂದ ರಾಯಚೂರಿನಲ್ಲಿ ಹತ್ತಿ ಬೆಳೆಯತಕ್ಕ ರೈತರಿಗೆ ತುಂಬ ಅನ್ಯಾಯವಾಗಿದೆ. ಈಗ ಗದಗ್ ಮಾರುಕಟ್ಟೆಯಲ್ಲಿ ಏನು ಬೆಲೆ ಇದೆಯೋ ಅದೇ ಬೆಲೆ ರಾಯಚೂರಿನಲ್ಲಿ ಸಿಕ್ಕುತ್ತ ಇಲ್ಲ. ಕಾನೂನು ಜಾರಿಯಲ್ಲಿಲ್ಲದೆ ಆ area demarket ಆಗಿಲ್ಲ. ಗದಗಿನಿಂದ ಎರಡು ನೂರು ಮೈಲಿ ದೂರದಲ್ಲಿ ರಾಯಚೂರು ಜಿಲ್ಲೆಯ ಹಳ್ಳಿಗಳಲ್ಲಿ ಗದಗಿನಲ್ಲಿ ಸಿಕ್ಕುವ ಬೆಲೆ ಸಿಕ್ಕುತ್ತಿಲ್ಲ. ಆದುದರಿಂದ ಆ ಕಾನೂನನ್ನು ಸರ್ಕಾರದವರು ತೀವ್ರಗತಿಯಿಂದ ಜಾರಿಗೆ ತರಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

Soil Conservation ಸಲುವಾಗಿ ಒಂದು ಕಾನೂನು ಮಾಡಿದ್ದಾರೆ. ಈ ಕೆಲಸಕ್ಕೆ ಸ್ವಲ್ಪ ದುಡ್ಡನ್ನು ಕೊಟ್ಟಿದ್ದಾರೆ, ನನ್ನ ಜಿಲ್ಲೆಯ ವಿಚಾರ ಹೇಳಬೇಕೆಂದರೆ ಅಲ್ಲಿಗೆ ಕೊಟ್ಟಂಥ ದುಡ್ಡು ಸಾಲುವುದಿಲ್ಲ. ನಮ್ಮಲ್ಲಿ ಬರಗಾಲ ಬರುವ ಪ್ರದೇಶಗಳಿವೆ. ಅಲ್ಲಿ contour bunding ಹಾಕತಕ್ಕದ್ದು ಬಹಳ ಉಪಯುಕ್ತವಾಗಿದೆ, ಕಡಮೆ ಮಳೆ ಬಂದಾಗ್ಯೂ ಕೂಡ Contour bunding ಹಾಕುವುದರಿಂದ ನೀರೆಲ್ಲ ಭೂಮಿಯಲ್ಲಿ ಹಿಂಗಿ ಬೆಳೆಗಳು ಚೆನ್ನಾಗಿ ಬರುತ್ತವೆ, ಈ ಕಾರ್ಯಕ್ಕೆ ಸರ್ಕಾರ ಒದಗಿಸಿರುವ ಹಣ ಬಿಲ್‌ಕುಲ್ ಬಹಳ ಕಡಮೆ ಇದೆ. ಇದುವರೆಗೂ ಇದಕ್ಕಾಗಿ ಕೊಟ್ಟಿರುವ ಹಣ ಕೂಡ ಕಾರ್ಯಗತವಾಗಿಲ್ಲ. ಕೆಲವು ಕಡೆ black cotton soil ಇರುವುದರಿಂದ ಅಲ್ಲಿ contour bunding ಅಷ್ಟು ಯಶಸ್ವಿಯಾಗಿ ನಡೆಯುವುದಿಲ್ಲ. ಸರ್ಕಾರ ಈ ಜಮೀನನ್ನು ಅಭಿವೃದ್ಧಿಪಡಿಸಲು ಯಾವ ತರಹ ಮಾಡಬೇಕೆಂದು ಸಂಶೋಧನೆ ಮಾಡುತ್ತಿದ್ದಾರೆ. ಇದುವರೆಗೂ ಖಚಿತವಾದ ಅಭಿಪ್ರಾಯಕ್ಕೆ ಬಂದಿಲ್ಲ.

5.00 P.M.

ನನ್ನ ಅನುಭವದಲ್ಲಿ ಹೇಳುವುದಾದರೆ, ಸರಿಯಾದ ಬಂಡಿಂಗ್ ಹಾಕಿದರೆ ನೀರೂ ಸಿಕ್ಕಿ ಬೆಳೆಯನ್ನು ಮಾಡಲು ಬರುತ್ತದೆ. ಸಾಯಿಲ್ ಕನ್‌ಸರ್‌ವೇಷನ್ನು ಮಾಡುವಾಗ Heavy Bundings ಕೂಡ ಮಾಡಬೇಕು. ಈ ರೀತಿಯಾಗಿ ನಮ್ಮ ಜಾಗದಲ್ಲಿ ಮಾಡುವುದೂ ಅಲ್ಲದೆ ಕಾಂಟೂರು ಬಂಡಿಂಗ್‌ನ್ನು ಹಾಕುವುದೂ ಉಪಯುಕ್ತ ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

(ಶ್ರೀಮತಿ ಬಸವರಾಜೇಶ್ವರಿ)

ಇದೇ ಪ್ರಕಾರ ಈ ಕೆಲಸ ಯಶಸ್ವಿಯಾಗಿ ನಡೆಯಬೇಕಾದರೆ ಸ್ಟೇಟ್ ಲೆವೆಲ್ಲಿನಲ್ಲಿ ಒಂದು ಬೋರ್ಡನ್ನು ರಚಿಸಬೇಕು. ಡಿಸ್ಟ್ರಿಕ್ಟ್ ಲೆವೆಲ್ಲಿನಲ್ಲಿಯೂ ಒಂದು ಬೋರ್ಡ್ ರಚಿಸಿದರೆ ಇದರ ಮೂಲಕ ಕೆಲಸವನ್ನು ಸಮರ್ಪಕವಾಗಿ ಮಾಡಲು ಸರಕಾರ ಪ್ರಯತ್ನ ಮಾಡುತ್ತಾರೆ ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇದುವರೆಗೆ ಎಷ್ಟೋ ಮಾನ್ಯ ಸದಸ್ಯರು ರೋಗರುಜಿನದ ಬಗ್ಗೆ ಹೇಳಿದರು. ಗೋದಿಗೆ ಕುಂಕುಮ್ ಎನ್ನುವ ರೋಗ ಬಂದು ಆ ಬೆಳೆ ಹಾಳಾಗುತ್ತಿದೆ ಎಂದು ಹೇಳಿದರು. ಇದರ ಬಗ್ಗೆ ಒಂದು ವಿಷಯ ಇಲ್ಲಿ ಹೇಳಲು ಸಂತೋಷವಾಗುತ್ತದೆ. ಇವೊತ್ತಿನ ದಿವಸ ಅಮೃತ ಎನ್ನುವ ಗೋಧಿಯ ಬೀಜವನ್ನು ಅಣ್ಣಿಗೆರೆ ರೀಸರ್ಚ್ ಫಾರಂನಲ್ಲಿ ಟೆಸ್ಟುಮಾಡಿಸಿ ನಮ್ಮ ಭಾಗದಲ್ಲಿ ಈ ಗೋಧಿ ಬೆಳೆಯನ್ನು ಮಾಡಿದ್ದಾರೆ. ಅಂತಹ ಅಮೃತ ಗೋಧಿಗೆ ಯಾವ ರೋಗವೂ ತಗಲದೆ ನಮ್ಮ ಕಡೆ ಬಹಳ ಸಮರ್ಪಕವಾಗಿ ಬೆಳೆಯನ್ನು ಬೆಳೆದಿದ್ದಾರೆ ಎಂದು ಇಲ್ಲಿ ನಾನು ಸಂತೋಷದಿಂದ ಹೇಳುತ್ತೇನೆ. ಇದೇ ಬೀಜವನ್ನು ಎಲ್ಲಾಕಡೆಗೂ ಎಕ್ಸ್‌ಟೆಂಡುಮಾಡಿ ನಮ್ಮ ಭಾಗದ ರಾಯಚೂರಿನಲ್ಲಿ ಗಂಗಾವತಿಯಲ್ಲಿರುವ ರೀಸರ್ಚ್ ಸ್ಟೇಷನ್ನಿನಲ್ಲಿ ಇನ್‌ವೆಸ್ಟಿಗೇಟು ಮಾಡಿಸಬೇಕೆಂದು ಸರಕಾರದಲ್ಲಿ ಸಲಹೆ ಮಾಡುತ್ತೇನೆ. ಇಂತಹ ಉತ್ತಮ ಬೀಜಗಳನ್ನುಪಯೋಗಿಸಿ ರೋಗರುಜಿನಗಳನ್ನು ಬಾರದಂತೆ ತಡೆಗಟ್ಟಬೇಕು, ಎಂದು ಹೇಳುತ್ತ ಕೆಲವರು ಎಷ್ಟೇ ಗೊಬ್ಬರ ಹಾಕಿ ಬೆಳೆಸಿದರೂ ಹತ್ತಿ ಬೆಳೆ ಸರಿಯಾಗಿ ಬರುತ್ತಿಲ್ಲ ಎಂದು ಹೇಳಿದರು. ಈ ಹತ್ತಿ ಬೆಳೆಗೆ ಅತಿ ಮುಖ್ಯವಾದುದು ಬೀಜ. ಈಚೆಗೆ ಕೆಲವು ಭಾಗಗಳಲ್ಲಿ ಉತ್ತಮವಾದ ಲಕ್ಷ್ಮೀ ಕಾಟನ್‌ನ ಬೀಜವನ್ನು ಸಪ್ಲೈಮಾಡಿದಂತೆ ನಮ್ಮ ಭಾಗದಲ್ಲಿಯೂ ಇದೇ ಲಕ್ಷ್ಮೀ ಹತ್ತಿ ಬೀಜವನ್ನು ತೆಗೆದುಕೊಂಡು ಒಳ್ಳೆಯ ಬೆಳೆಯನ್ನು ಬೆಳೆದಿದ್ದಾರೆ. ಆದರೆ ಈ Laxmi Cotton ಎನ್ನುವುದು ಒಂದು ತರಹ Delicate ಆದ ಕ್ರಾಪ್ ಆಗಿದೆ. ಆದರೆ ಇದನ್ನು ಬೆಳೆಯಲು ಸರಿಯಾದ Power Sprayersಗಳನ್ನು ಸರಕಾರ ಕೊಟ್ಟು ಸಹಾಯ ಮಾಡಿದ್ದರಿಂದ ಇದರ ಬೆಳೆಗೆ ಬರುವ ರೋಗವನ್ನು ತಡೆಗಟ್ಟಲು ಅನುಕೂಲವಾಗಿದೆ. ಈರೀತಿ Sprayersಗಳನ್ನುಪಯೋಗಿಸಿದರೆ ಶೇಕಡಾ ಎಂಬತ್ತರಷ್ಟು ಭಾಗದ ಬೆಳೆಗೆ ತಗಲುವ ರೋಗವನ್ನು ತಡೆಗಟ್ಟಲು ಅನುಕೂಲವಾಗುತ್ತದೆ. ಹತ್ತಿ ಬೆಳೆಯನ್ನು ಯಾವಾಗಲೂ ಬಹು ಕಡಿಮೆ ಪ್ರಮಾಣದಲ್ಲಿ ಬೆಳೆಯುವುದಿಲ್ಲ. ಹೆಚ್ಚುಹೆಚ್ಚಾಗಿಯೇ ಬೆಳೆಯುತ್ತಾರೆ. ಈ ಹತ್ತಿ ಬೆಳೆಗೆ ಅತಿ ಮುಖ್ಯವಾದುದು Power Sprayers ಅತಿ ಮುಖ್ಯವಾದುದು. ಆದುದರಿಂದ ಇಂತಹ Power Sprayersಗಳನ್ನು ಪ್ರತಿ ಒಂದು ತಾಲ್ಲೂಕಿಗೂ ಒಂದೊಂದರಂತೆ ತರಿಸಿ ಅಲ್ಲಿರುವ N.E.S. ಬ್ಲಾಕುಗಳಲ್ಲಿಟ್ಟರೆ ರೈತರಿಗೆ ಬಹಳ ಉಪಯೋಗವಾಗುತ್ತದೆ. ಆದರೆ ಇದನ್ನು ತರಿಸಲು foreign exchange ಸಿಗುವುದೂ ಕಷ್ಟವಾಗಿದೆ ಎಂದು ತಿಳಿದುಬರುತ್ತದೆ. ಸರಕಾರದವರೇನೋ 300 ಪವರ್ ಸ್ಪ್ರೇಯರುಗಳನ್ನು ತರಿಸಬೇಕೆಂದು ಏರ್ಪಾಡು ಇಟ್ಟುಕೊಂಡಿದ್ದಾರೆಂದು ಗೊತ್ತಾಗುತ್ತದೆ. ಅದಷ್ಟು ತೀವ್ರವಾಗಿ ಸರಕಾರದವರು ತರಿಸಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದರಂತೆ ಸಪ್ಲೈಮಾಡುವುದು ಅವಶ್ಯಕ ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು Diesel Rate ಈಚೆಗೆ ಬಹಳ ಹೆಚ್ಚಾಗಿದೆ. ದೊಡ್ಡದೊಡ್ಡ ಬೇಸಾಯ ಮಾಡುವ ರೈತರಿಗೆ ಟ್ರ್ಯಾಕ್ಟರುಗಳು, ಬುಲ್‌ಡೋಜರುಗಳನ್ನಿಟ್ಟುಕೊಂಡು ವ್ಯವಸಾಯ ಮಾಡುವುದರಿಂದ ಅವರಿಗೆ ಈಗ Diesel Rate ಹೆಚ್ಚಾಗಿರುವುದರಿಂದ ಬೇಸಾಯ ಮಾಡುವುದು ಕಷ್ಟವಾಗಿದೆ. ಇಂತಹ ವ್ಯವಸಾಯ ಮಾಡುವವರಿಗೆ ಏನಾದರೂ ರಿಯಾಯಿತಿ ಕೊಡುವುದು ಅಗತ್ಯವಾಗಿದೆ. Diesel Rate ಈಚೆಗೆ ಕೇಂದ್ರದವರು ಹೆಚ್ಚು ಮಾಡಿದ್ದಾರೆಂದು ಹೇಳಿ ನಮ್ಮ ಸರಕಾರಕ್ಕೆ ಏನೂ ಸಂಬಂಧವಿಲ್ಲ ಎಂದು ಹೇಳಬಹುದು. ಆದರೂ ಸಹ ನಮ್ಮ ಸರಕಾರದವರು ದೇಶದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಬೇಕೆಂದು ಹೇಳಿ ಪ್ರತಿಯೊಂದು ಭಾಗದಲ್ಲಿಯೂ ರೈತರಿಗೆ ಹೆಚ್ಚು ಸಹಕಾರ ಮಾಡಬೇಕೆಂದು ಹೇಳುವಾಗ, ಈ ಸಮಯದಲ್ಲಿ ಕೇಂದ್ರ ಸರಕಾರಕ್ಕೂ ಹೇಳಿ, ಹೆಚ್ಚಿನ ಬೆಳೆ ಬೆಳೆಯತಕ್ಕ ರೈತರಿಗೆ Diesel Ratesಗಳಲ್ಲಿ ಸ್ವಲ್ಪ ಕನ್‌ಸೆಷನ್ನನ್ನು ತೋರಿಸಬೇಕೆಂದು ಶಿಫಾರಸು ಮಾಡಬಹುದು. Furguson Tractersಗಳನ್ನು ಉಪಯೋಗಿಸುವಾಗ ಒಂದು ದಿವಸಕ್ಕೆ ಕನಿಷ್ಟ ಪಕ್ಷ ಎಂಟು ಗ್ಯಾಲನ್ನುಗಳ ಮೇಲೆ Diesel ಬೇಕಾಗುತ್ತದೆ. ಎಂದರೆ ಸುಮಾರು 50 ರೂಪಾಯಿಗಳಷ್ಟು Cost of Cultivation ಬರುತ್ತದೆ. ಇದು ಪರಿಶೀಲನೆ ಮಾಡಬೇಕಾದುದು ಅಗತ್ಯ. ಎಂದು ಕೇಂದ್ರ ಸರಕಾರಕ್ಕೂ ಹೇಳಿ ಸ್ವಲ್ಪ ಕನ್‌ಸೆಷನ್ನು ಕೊಡಿಸಬೇಕೆಂದು ಹೇಳುತ್ತೇನೆ. ದೇಶದಲ್ಲಿ ಹೆಚ್ಚಿನ ಉತ್ಪತ್ತಿ ಮಾಡಬೇಕೆಂದು ಪ್ರತಿಯೊಬ್ಬರೂ ಹೇಳುತ್ತಿರುವಾಗ Dieselನ ಸಹಾಯದಿಂದ ಬೇಸಾಯ ಮಾಡುವವರಿಗೆ ಸ್ವಲ್ಪ ರಿಯಾಯತಿ ಮಾಡಿಕೊಡಬೇಕು. ಇಲ್ಲದಿದ್ದರೆ ಇಂತಹ ದೊಡ್ಡ ಟ್ರ್ಯಾಕ್ಟರುಗಳ ಸಹಾಯದಿಂದ ಬೇಸಾಯ ಮಾಡುವುದು ರೈತರಿಗೆ ಬಹಳ ಕಷ್ಟವಾಗುತ್ತದೆ.

ಮೊನ್ನೆ ಒಂದು ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಹೇಳುತ್ತಾ, ನಮ್ಮ ಭಾಗದಲ್ಲಿ ಒಂದು Agricultural Implements Factoryಯನ್ನು ತೆಗೆಯಬೇಕೆಂದಿದ್ದೇವೆ ಎಂದು ಹೇಳಿದರು. ಇದನ್ನು ತೀವ್ರತೆಯಿಂದ ಮಾಡಬೇಕೆಂದು ಸಲಹೆ ಮಾಡುತ್ತೇವೆ. ಇಲ್ಲಿಯೇ ಸಣ್ಣ ಸಣ್ಣ ಟ್ರಾಕ್ಟರುಗಳು ಮತ್ತು ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳು ಎಂದರೆ, ಕುಂಟೆ, ಕೂರಿಗೆ, Trailors, ಇತ್ಯಾದಿ ಸಾಮಾನುಗಳನ್ನೆಲ್ಲಾ ಇಲ್ಲಿಯೇ ಮಾಡಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. Trailors ಬೇಕಾಗುವ ಸ್ಪೇರು ಪಾರ್ಟುಗಳನ್ನೂ ಇಂತಹ ಫ್ಯಾಕ್ಟರಿಗಳಲ್ಲಿ ತಯಾರುಮಾಡಿದರೆ, ನಮ್ಮ ರೈತರಿಗೆ ಹೆಚ್ಚಿನ ಪ್ರಯೋಜನ ಸಿಕ್ಕುತ್ತದೆ.

ಮತ್ತೆ Light Irrigation ಸಲುವಾಗಿ Tungabhadra Left Bank channelನಲ್ಲಿ ಒಂದು Borderstrip ತೆಗೆದು ವ್ಯವಸಾಯ ಚೆನ್ನಾಗಿ ಮಾಡುತ್ತಿದ್ದಾರೆ. ಕೆಲವು ಜನ ರೈತರು ಒಟ್ಟಿಗೆ ಸೇರಿಕೊಂಡು ಇಲ್ಲಿ Tracter Ploughing, Dozing ಇತ್ಯಾದಿ ಕೆಲಸಗಳನ್ನು ಚೆನ್ನಾಗಿ ಮಾಡಿ ವ್ಯವಸಾಯ ಮಾಡುತ್ತಿದ್ದಾರೆ. ಇಂತಹವರಿಗೆ ಸರಕಾರ ಸ್ವಲ್ಪ ಸಹಾಯ ಮಾಡಿದರೆ ಇಲ್ಲಿರುವ ಜನ Rich and experienced ಆಗಿರುವುದರಿಂದ ಇತರರಿಗೆ ಸಬ್ಸಿಡಿ ಏನು ಕೊಡುತ್ತಾರೋ ಹಾಗೆ Border Stripಮಾಡಿಕೊಳ್ಳಲು ಸಹಾಯ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಸಲಹೆ ಮಾಡುತ್ತೇನೆ. ಜೀಪುಗಳನ್ನು ಸಾಧಾರಣವಾಗಿ ಎಲ್ಲರಿಗೂ ಕೊಡುತ್ತಿದ್ದಾರೆ. ಎಸ್. ಇ. ಎಸ್. ಬ್ಲಾಕಿನಲ್ಲಿ ಜೀಪು ಕೊಟ್ಟಿದ್ದಾರೆ. ಸೋಷಿಯಲ್ ವೆಲ್‌ಫೇರ್ ಶಾಖೆಗೆ ಒಂದು ಜೀಪು ಕೊಟ್ಟಿದ್ದಾರೆ. ಹೀಗೆ ಎಲ್ಲ ಇಲಾಖೆಗಳಿಗೂ ಕೊಟ್ಟಿದ್ದರೂ ಅಗ್ರಿಕಲ್‌ಚರ್ ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ಒಂದು ಜೀಪನ್ನು ಕೊಟ್ಟಿಲ್ಲ. ಇವೊತ್ತಿನವರೆಗೂ ಜೀಪನ್ನು ಕೊಡದೇ ಇರುವುದರಿಂದ ಬಹಳ ಅನಾನುಕೂಲವಾಗುತ್ತಿದೆ, ಹೊಸ ಪದ್ಧತಿಯ ಮೇಲೆ ಬೇಸಾಯ ಮಾಡಬೇಕು, ಹೊಸ ಹೊಸ ಮಾದರಿ ಬೆಳೆಗಳನ್ನು ಬೆಳೆಯತಕ್ಕ ರೈತರಿಗೆ ಸಹಾಯಮಾಡಲು ಇವೊತ್ತಿನ ದಿನ ಜೀಪು ಇಲ್ಲದೇ ಇಲ್ಲಿರುವ ಅಗ್ರಿಕಲ್‌ಚರಿನ ಅಧಿಕಾರಿಗಳಿಗೆ ಬಹಳ ಕಷ್ಟವಾಗುತ್ತಿದೆ. ಈ ಅಗ್ರಿಕಲ್‌ಚರಲ್ ಅಧಿಕಾರಿಗಳಿಗಾಗಿ ಒಂದೊಂದು ಜೀಪನ್ನು ಕೊಡಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟೋ ಸ್ಕೀಮುಗಳಿದ್ದರೂ ಅವನ್ನು ಸ್ವಲ್ಪ ಮಟ್ಟಿಗೆ ಕಾರ್ಯಗತ ಮಾಡಿದ್ದಾರೆ. ಇನ್ನೂ ಹೆಚ್ಚು ಹೆಚ್ಚಾಗಿ ಸ್ಕೀಮುಗಳನ್ನು ತೆಗೆದುಕೊಳ್ಳದೆ ಹಾಗೆ ಇಲ್ಲಿಯವರೆಗೂ ಉಳಿದಿವೆ. ಅಗ್ರಿಕಲ್‌ಚರ್ ಕಾಲೇಜನ್ನು ಅಪ್‌ಗ್ರೇಡುಮಾಡಿ ಅಲ್ಲಿ Post graduate Coursesನ್ನು ಇಂಟ್ರೊಡ್ಯೂಸುಮಾಡಿ ಅದನ್ನು ಎಕ್ಸ್‌ಟೆಂಡು ಮಾಡಬೇಕಾಗಿತ್ತು. ಇಲ್ಲಿಯವರೆಗೂ ಆ ರೀತಿ ಈ ಕಾಲೇಜಿನಲ್ಲಿ ಎಕ್ಸ್‌ಟೆಂಡು ಮಾಡಿದಂತೆ ಕಾಣುತ್ತಿಲ್ಲ. ಈಗಲಾದರೂ ಈ ಕಾಲೇಜಿನಲ್ಲಿ ಬೇಗ Post graduate Coursesಗಳನ್ನು ಇಂಟ್ರೊಡ್ಯೂಸು ಮಾಡಬೇಕೆಂದು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅನಿಮಲ್ ಹಸ್‌ಬೆಂಡ್ರಿ ವಿಚಾರದಲ್ಲಿ ಹೇಳುವಾಗ ಉತ್ತಮವಾದ ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು insemination centresಗಳನ್ನು ತೆರೆದಿದ್ದರೂ ಅದು ಈ ದೇಶಕ್ಕೆ ಇನ್ನೂ ಸಾಲುತ್ತಿಲ್ಲ. ಎರಡು ಮೂರು ತಾಲ್ಲೂಕಿಗೆ ಒಂದೊಂದು insemination centres ಎಂದು ಮಾಡಿದ್ದಾರೆ. ಹಳ್ಳಿಯ ಕಡೆಯಿಂದ ಜನರು ಬಂದು ಇಲ್ಲಿ ಉತ್ತಮ ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು ಇದ್ದರೂ ತಳಿಗಳ ಅಭಿವೃದ್ಧಿ ಹೆಚ್ಚಾಗಿಲ್ಲ. ಈಗಿರುವ insemination ceutresಗಳೂ ಬಹಳ ಕಡಿಮೆ. ನಮ್ಮ ರಾಯಚೂರು ಭಾಗದಲ್ಲಿ ಒಂದೆರಡು ಸೆಂಟರುಗಳು ಮಾತ್ರ ಇವೆ. ಇದರಿಂದ ಒಂದೊಂದು ತಾಲ್ಲೂಕಿನಲ್ಲೂ ತಳಿಯನ್ನು ಅಭಿವೃದ್ಧಿಮಾಡಲು insemination centersಗಳನ್ನು ಸ್ಥಾಪನೆ ಮಾಡಬೇಕು. ಸಿರಿವಾರ ಎಂಬಲ್ಲಿ ಒಂದು ವೆಟರ್ನರಿ ಆಸ್ಪತ್ರೆಯನ್ನೇನೋ ಷುರು ಮಾಡಿ ಎರಡು ತಿಂಗಳಾದರೂ ಇವೊತ್ತಿನವರೆಗೂ ಅಲ್ಲಿಗೆ ಸರಿಯಾದ Staff ಇಲ್ಲ. ಇಲ್ಲಿಗೆ ಡಾಕ್ಟರನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಇತರ ಸ್ಟಾಫನ್ನೂ ಮತ್ತು ಔಷಧಿಗಳನ್ನೂ ಕಳುಹಿಸಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಸಹಕಾರ, ಸಹಕಾರ ಪದ್ಧತಿಮೇಲೆ ಇವೊತ್ತಿನ ದಿವಸ ಪ್ರತಿಯೊಂದು ಪಂಚಾಯತಿ ಲೆವಲ್ಲಿನಲ್ಲಿಯೂ ಒಂದೊಂದು Service co-operative Societies ಎಂದು ಮಾಡಿದ್ದಾರೆ. ಇದು ಚೆನ್ನಾಗಿ ನಡೆಯುತ್ತಿದೆ. ಆದರೆ ಈ ಮೊದಲು Large Scale Societies ಎಂದು ಷುರುವಾಗಿದ್ದುದು ಸುಮಾರು ಹತ್ತಿಪ್ಪತ್ತು ಸೊಸೈಟಿಗಳು ನಮ್ಮಲ್ಲಿದ್ದವು. ಇಂತಹ ಸೊಸೈಟಿಗಳಿಂದ ಸುಮಾರು 30-40 ಗ್ರಾಮಗಳಿಗೆ ಅನುಕೂಲವಾಗುತ್ತಿತ್ತು. ಆದರೆ ಯಾವುದಾದರೂ ಗ್ರಾಮದಲ್ಲಿ ಸಾಲದ ದುಡ್ಡನ್ನು ವಾಪಸು ಕೊಡದೇಹೋದರೆ ಇತರ ಎಲ್ಲ ಜನಕ್ಕೂ ಸಾಲ ಸಿಗುತ್ತಿರಲಿಲ್ಲ. ಪ್ರತಿಯೊಬ್ಬರಿಗೂ ಅನುಕೂಲವಾಗಬೇಕೆಂದು ಪಂಚಾಯತಿಗಳಲ್ಲಿ ಸರ್ವಿಸ್ ಕೋ-ಅಪರೇಟೀವ್ ಸೊಸೈಟಿಗಳನ್ನು ಕೋ-ಅಪರೇಷನ್ನಿನಮೇಲೆ ಮಾಡೋಣ ಎಂದು ಈ

(ಶ್ರೀಮತಿ ಬಸವರಾಜೇಶ್ವರಿ)

ಸೊಸೈಟಿಗಳ ಷೇರನ್ನು ಡೈವರ್ಟ್ ಮಾಡಿ ಎಲ್ಲ ಜನಕ್ಕೂ ಪ್ರಯೋಜನವಾಗುವಂತೆ ಮಾಡಬೇಕೆಂದು ಇತ್ತು. ಇದರಬಗ್ಗೆ ಸರಕಾರಕ್ಕೆ ಮನವಿಗಳೂ ಬಂದಿತ್ತು. ಇದರಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಆಶ್ವಾಸನ ಕೊಟ್ಟಿದ್ದರು. ಅಲ್ಲದೆ ಪ್ರತಿಯೊಂದು ಸರ್ವಿಸ್ಸು ಕೋ-ಆಪರೇಟಿವ್ ಸೊಸೈಟಿಯನ್ನೂ ಕೋ-ಆಪರೇಷನ್ನಿನಮೇಲೆ ಮಾಡಿದ್ದಾರೆ. ಹೊಸದಾಗಿ ರಚನೆಯಾಗಿರತಕ್ಕ ಸರ್ವಿಸ್ಸು ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಮೊದಲು ಷೇರುಗಳು ಕಲೆಕ್ಟಾಗುತ್ತಿದ್ದುವು. ಮೊದಲನೆ ವರ್ಷ 200-300 ರೂಪಾಯಿಗಳಷ್ಟು ಮಾಡಿ ಸೇರಿಸಿದ್ದರೂ ಶೇಕಡಾ ಹತ್ತರಷ್ಟು ಷೇರು ಬಂದಿಲ್ಲ ಎಂದು ಹೇಳುತ್ತಿರುವುದರಿಂದ ವಸೂಲು ಮಾಡುವುದು ಬಹಳ ಕಷ್ಟವಾಗಿದೆ ಎಂದರು. ಆದಕಾರಣ ಕಾನೂನು ಪ್ರಕಾರ ಎಷ್ಟು ಷೇರುಗಳವರು ಸಾಲವನ್ನು ಹಿಂದಿರುಗಿಸಿದ್ದಾರೋ ಅಂತಹವರಿಗಾದರೂ ಸ್ವಲ್ಪ ಸಹಾಯ ಮಾಡಬೇಕು. ಕೆಲವುಕಡೆ ಹತ್ತಿ ಬೆಳೆಯಿಂದ ನಷ್ಟವಾಗಿದೆ ಎಂದು ಕೆಲವರು ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ಅವರು ಮುಂದಿನ ಸಾಲನಲ್ಲಿ ಸಾಲದ ಜೊತೆಗೆ ಬಡ್ಡಿಯನ್ನೂ ಸೇರಿಸಿ ವಾಪಸು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಕೆಲವುಕಡೆ ಬಡವರಾಗಿರುವವರಿಗೆ ವಾಪಸು ಕೊಡಲು ಆಗುವುದಿಲ್ಲ ಎನ್ನುತ್ತಾರೆ. ಅಂತಹವರಿಗೆ 50 per cent concession ಎನ್ನುವ ರೀತಿಯಲ್ಲಾದರೂ ರಿಯಾಯತಿಕೊಟ್ಟು, ಈ ಷೇರುಗಳನ್ನು ಸಕಾಲದಲ್ಲಿ ವಸೂಲು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಕಡೆಯದಾಗಿ ರೂರಲ್ ಆಡ್ಮಿನಿಷ್ಟ್ರೇಷನ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈಗ ಶೇಕಡ 50 ರಷ್ಟು ಪರ್ಮನೆಂಟ್ ಸೆಕ್ರೆಟರಿಗಳು ಕೆಲಸ ಮಾಡುತ್ತಿದ್ದಾರೆ. ನಾಲ್ಕು ತಿಂಗಳಾದರೂ ಅವರಿಗೆ ಸಂಬಳ ಸಿಕ್ಕಿಲ್ಲ, ಯಾವ ಇಲಾಖೆಯಿಂದ ಅವರಿಗೆ ಸಂಬಳ ಕೊಡಬೇಕೆಂಬುದು ಇನ್ನೂ ಗೊತ್ತಾಗಿಲ್ಲ. ಸಂಬಳ ದೊರೆಯದೆ ಅವರಿಗೆ ತುಂಬಾ ಅನಾನುಕೂಲವಾಗಿದೆ. ತಕ್ಷಣ ಸಂಬಳ ಅವರಿಗೆ ಸಿಕ್ಕುವಹಾಗೆ ಏರ್ಪಾಡು ಮಾಡಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಪಂಚಾಯತಿಗಳು ಇಡಬೇಕಾದಂಥ ರಿಕಾರ್ಡ್ಸ್ ಬಹಳ ಜಾಸ್ತಿಯಾಗಿವೆ. ಪಂಚಾಯತಿಗಳಲ್ಲಿರುವ ಸದಸ್ಯರಿಗೆ ಮತ್ತು ಸೆಕ್ರೆಟರಿಯವರಿಗೆ ಈ ರಿಕಾರ್ಡ್ಸ್ ಮೆಂಟೇನ ಮಾಡುವುದು ತುಂಬಾ ಕಷ್ಟವಾಗಿದೆ. ಈಗ ಇರತಕ್ಕ ಪದ್ಧತಿಯ ಪ್ರಕಾರ ರಿಕಾರ್ಡ್ಸ್ ಇಡುವುದು ತುಂಬಾ ಕಾಂಪ್ಲಿಕೇಟೆಡ್ ಆಗಿದೆ. ಅದನ್ನು ಸಿಂಪ್ಲಿಫೈ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಅನುಭವ ಕಡಿಮೆ ಇದ್ದವರು ಚಿಕ್ಕವಯಸ್ಸಿನವರು ಎಕ್ಸ್‌ಟೆನ್‌ಷನ್ ಆಫೀಸರ್ ಆಗಿ ನೇಮಕವಾಗಿದ್ದಾರೆ. ಹಿರಿಯರಾದವರು ಏನಾದರೂ ಕೇಳುವುದಕ್ಕೆ ಬಂದರೆ ಅವರನ್ನು ಕನ್‌ವಿನ್ಸ್ ಮಾಡುವ ಕ್ಯಾಪಾಸಿಟಿ ಈ ಚಿಕ್ಕವಯಸ್ಸಿನ ಅಧಿಕಾರಿಗಳಲ್ಲಿರುವದಿಲ್ಲ. ಕಾಲೇಜಿನಿಂದ ಪಾಸ್ ಆಗಿ ಬಂದು ನೇರವಾಗಿ ಎಕ್ಸ್ಟೆನ್‌ಷನ್ ಆಫೀಸರ್ ಎಂದು ನೇಮಕ ಮಾಡಿದರೆ ಅಂಥವರಿಗೆ ಏನೂ ಅನುಭವವಿರುವದಿಲ್ಲ. ಆದ್ದರಿಂದ ಈ ಸ್ಥಾನಕ್ಕೆ ಅನುಭವ ಶಾಲಿಗಳನ್ನು ಕಳಿಸಬೇಕು, ಅಂದರೆ ಈ ಯೋಜನೆ ಯಶಸ್ವಿಯಾಗುತ್ತದೆ. ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಮುಖ್ಯ ಕಸುಬು ಆಗಿರುವ ವ್ಯವಸಾಯದಲ್ಲಿ ನೂರಕ್ಕೆ 86 ರಷ್ಟು ಜನ ಇದ್ದಾರೆ. ಆದರೂ ಕೂಡ ಇಂದು ನಾವು ಆಹಾರ ಉತ್ಪಾದನೆ ಮಾಡುವದರಲ್ಲಿ ಹಿಂದುಳಿದಿದ್ದೇವೆಂದು ವಿಷಾದದಿಂದ ಹೇಳಬೇಕಾಗಿದೆ. ಈ ತುರ್ತು ಪರಿಸ್ಥಿತಿ ಉದ್ಭವಿಸಿದ ಮೇಲೆ ವ್ಯವಸಾಯದ ಪ್ರಾಮುಖ್ಯತೆ ಅಷ್ಟಿಷ್ಟಲ್ಲ. ಈ ವ್ಯವಸಾಯ ಇಲಾಖೆಗೆ ಬೇಕಾಗುವ ಎಲ್ಲ ವ್ಯವಸ್ಥೆಯನ್ನು ಕಾಗದದ ಮೇಲೆ ವಿಧಾನ ಸೌಧದಲ್ಲಿ ವ್ಯವಸಾಯ ಇಲಾಖೆ ಆಫೀಸಿನಲ್ಲಿ ಮಾಡಿದ್ದಾರೆ. ಆದರೆ ಈ ಏರ್ಪಾಡು ರೈತನಿಗೆ ಮುಟ್ಟಿದೆಯೇ ಜಮೀನುಗಳಿಗೆ ಮುಟ್ಟಿದೆಯೇ ಅಂದರೆ ಖಂಡಿತವಾಗಿ ಬಹಳ ವಿಷಾದ ಪಡಬೇಕಾಗಿದೆ. ಸಂಶೋಧನೆಯಿಂದ ಫಲತಾಂಶ ಕಂಡು ಹಿಡಿಯುತ್ತೇವೆ, ಒಳ್ಳೇ ಬೀಜ ಒದಗಿಸಿ ಅಭಿವೃದ್ಧಿ ಪಡಿಸುತ್ತೇವೆಂದು ಹೇಳುತ್ತಾರೆ. ಆದರೆ ರೈತನಿಗೆ ಅದು ನೇರವಾಗಿ ದೊರೆಯುತ್ತಿದೆಯೇ ಅವನು ಜಮೀನಿನಲ್ಲಿ ಅದನ್ನು ಕಾರ್ಯಗತ ಮಾಡಲು ಸಾಧ್ಯವಾಗಿದೆಯೇ ಎಂಬುದನ್ನು ನೋಡಿದರೆ ಅದು ಪೂರ್ತಿ ಸೊನ್ನೆ ಎಂದು ಹೇಳಬಹುದು. ಏನೇನೂ ಮುಂದುವರಿದಿಲ್ಲ. ಕಾರ್ಯತಃ ಏನೂ ನಡೆದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ನಿನ್ನೆಯ ದಿವಸ ನಮ್ಮ ತಾಲ್ಲೂಕ್ ಬೋರ್ಡಿನ ಸಭೆಗೆ ಹೋಗಿದ್ದೆ ಅಲ್ಲಿಯ ಸದಸ್ಯರು ವಿಸ್ತರಣ ಅಧಿಕಾರಿಗಳು ಹೇಳಿದರು. ಸರಕಾರದಿಂದ ಬರುವ ಆರ್ಡರ್ ಓದುವದರಲ್ಲಿಯೇ ವೇಳೆ ಹೋಗುತ್ತದೆ. ವ್ಯವಸಾಯ ಕಡೆ ಗಮನ ಕೊಡುವುದಕ್ಕೆ ವೇಳೆಯೇ ಇಲ್ಲ ಎಂದು ಹೇಳಿದರು, ದಿನಾಲು ನಾಲ್ಕಾರು ಆರ್ಡರುಗಳು ಬರುತ್ತವೆ ಎಂದು ಹೇಳಿ ಅವರು ಭಯ ಪಟ್ಟರು. ವಿಸ್ತರಣಾ ಅಧಿಕಾರಿಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗಿ ಸಹಕರಿಸಿ ಕೆಲಸ ಮಾಡದೇ ಹೋದರೆ ಈ

ಯೋಜನೆ ವಿಫಲವಾಗುತ್ತದೆ. ಇದರಿಂದ ಅನಾಹುತವಾಗುತ್ತದೆಂದು ನಿಮಗೆ ನಾನು ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡುತ್ತೇನೆ. ನಿಮ್ಮ ಈ ಇಲಾಖೆ ನಿಮ್ಮ ನೀತಿ ಟೀಕೆಗೆ ಗುರಿಯಾಗಿದೆ. ಈ ಇಲಾಖೆಯಿಂದ ಗೊಬ್ಬರ ಬೀಜ ಸರಿಯಾಗಿ ಸಕಾಲದಲ್ಲಿ ರೈತರಿಗೆ ದೊರೆಯುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ರೈತರಿಗೆ ಅನುಕೂಲ ಮಾಡಿಕೊಟ್ಟಿಲ್ಲ, ಪಂಚಾಯಿತಿಗಳು ಸಹಕಾರಿ ಸಂಘಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ. ಯಾರೂ ಜವಾಬ್ದಾರಿ ವಹಿಸಿ ಕೆಲಸ ಮಾಡತ್ತಿಲ್ಲ ವ್ಯವಸಾಯ ಇಲಾಖೆಯಿಂದ ನೇರವಾಗಿ ಬೀಜ ಗೊಬ್ಬರ ಒದಗಿಸುವ ವ್ಯವಸ್ಥೆ ಮಾಡದೇ ಇದ್ದರೆ ನಿಮ್ಮ ಈ ಪ್ಲಾನ್ ಸಫಲವಾಗುವದಿಲ್ಲ. ಎಂದು ಹೇಳಬಯಸುತ್ತೇನೆ. ಬಾಯಲ್ಲಿ ಹೆಚ್ಚು ಮಾತನಾಡುವದಕ್ಕಿಂತ ಕೃತಿಯಲ್ಲಿ ಅನುಕೂಲ ಮಾಡಿಕೊಡಬೇಕು ಎಂದು ತಿಳಿಸುತ್ತೇನೆ.

ಹೊಸ ಮಾದರಿಯ ವ್ಯವಸಾಯವನ್ನು ಶಾಸ್ತ್ರೀಯವಾಗಿ ಮಾಡುವದಕ್ಕೆ ರೈತನಿಗೆ ಪ್ರಾಕ್ಟಿಕಲ್ ಟ್ರೇನಿಂಗ್ ಕೊಡುವುದು ಮುಖ್ಯ ಜಿಲ್ಲಾ ಮಟ್ಟದಲ್ಲಿ ಒಂದು ಟ್ರೇನಿಂಗ್ ಸ್ಕೂಲ್ ಸ್ಥಾಪನೆ ಮಾಡಿ ಆರು ತಿಂಗಳು ಅಥವಾ ಒಂದು ವರ್ಷ ಪ್ರಾಕ್ಟಿಕಲ್ ಟ್ರೇನಿಂಗ್ ಕೊಡಬೇಕು. ಟ್ರೇನಿಂಗ್ ಕೊಡದೇ ಇದ್ದರೆ ಶಾಸ್ತ್ರೀಯವಾಗಿ ವ್ಯವಸಾಯ ಮಾಡುವುದು ಖಂಡಿತವಾಗಿ ವಿಫಲವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚು ಪರಿಶ್ರಮ ವಹಿಸಿ ಕೆಲಸ ಮಾಡುವುದು ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ.

ಈ ಇಲಾಖೆಯಲ್ಲಿ ಒಂದೆರಡು ಉಪಯುಕ್ತವಾದ ಕೆಲಸ ಮಾಡಿದ್ದಾರೆಂದು ಹೇಳಿದರೆ ಅದು ನಿಮ್ಮನ್ನು ಹೊಗಳಿದಂತಲ್ಲ. ಅದು ನನ್ನ ಕರ್ತವ್ಯವಾಗಿದೆ. ತೋಟಗಾರಿಕೆ ಸಂಬಂಧದಲ್ಲಿ ದ್ರಾಕ್ಷೆ ಹಣ್ಣು ಬೆಳೆಯುವದಕ್ಕೆ ಯೋಜನೆ ಮಾಡಿದ್ದೀರಿ ಮಳೆಬಾರದೆ ಆಗಾಗ್ಗೆ ಬರಗಾಲಕ್ಕೆ ತುತ್ತಗುವ ಪ್ರದೇಶದಲ್ಲಿ ಈ ಯೋಜನೆ ಮಾಡಲಾಗಿದೆ ದೊಡ್ಡ ಸಮುದ್ರದಲ್ಲಿ ಒಂದು ತೊಟ್ಟು ನೀರು ಬಿಟ್ಟರೆ ಏನೂ ಉಪಯೋಗವಾಗುವದಿಲ್ಲ. ಆ ರೀತಿ ಈ ನಿಮ್ಮ ಯೋಜನೆಯಾಗಿದೆ. ಈ ಬರಗಾಲ ಪ್ರದೇಶದಲ್ಲಿ ಅಲ್ಲಲ್ಲಿ ರಿಸರ್ಚ್‌ಸೆಂಟರ್ಸ್ ಮಾಡಬೇಕು. ಡಿಮಾನ್‌ಸ್ಟ್ರೇಷನ್ ಮಾಡಿ ತೋರಿಸಿದರೆ ತೋಟಗಾರಿಕೆ ಮುಂದುವರಿಯುತ್ತದೆ. ಈ ತೋಟಗಾರಿಕೆಗೆ ಒಂದು ಡಿಪಾರ್ಟಮೆಂಟ್ ಸ್ಟೇಟಸ್ ಕೊಟ್ಟ ವ್ಯವಸಾಯ ಇಲಾಖೆಯಿಂದ ಬೇರೆ ಮಾಡುವುದಕ್ಕೆ ಹೆಚ್ಚಿನ ನಿಗಾ ಕೊಡಬೇಕು ಇಲ್ಲವಿದ್ದರೆ ಮುಂದುವರಿಯುವದಿಲ್ಲ.

ಈ ಇಲಾಖೆಯಲ್ಲಿಯ ಟ್ರಾಕ್ಟರ್ ಬುಲ್ ಡೋಜರ್ಸ ಒದಗಿಸುವ ಸ್ಕೀಂ ಯಶಸ್ವಿಯಾಗಿಲ್ಲ. ನೀರಾವರಿಯಿಂದ ಹೆಚ್ಚಿನ ಪ್ರಮಾಣದಲ್ಲಿ ವ್ಯವಸಾಯ ಮಾಡುವುವದಕ್ಕೆ ಟ್ರಾಕ್ಟರ್ ಬುಲ್ ಡೋಜರ್ಸ್ ಉಪಯೋಗಿಸುವುದು ಅತ್ಯುತ್ತಮವಾದುದು. ನಮ್ಮ ಸಂಸ್ಥಾನದಲ್ಲಿ 60 ಬುಲ್‌ಡೋಜರ್ಸ ಇದ್ದರೆ ಅವುಗಳಲ್ಲಿ 40 ಕ್ಕೆ ಕಾಯಿಲೆಯಾಗಿದೆ. ಈ ಯೋಜನೆ ಅಸಮರ್ಪಕ ರೀತಿಯಲ್ಲಿದ್ದು ವಿಫಲವಾಗಿದೆ. ಈ ಯೋಜನೆ ಇನ್ನೂ ಹೆಚ್ಚು ವಿಸ್ತರಿಸಬೇಕು. ಮತ್ತು ಕಡಿಮೆ ದರದಲ್ಲಿ ಅವಶ್ಯಕವಿದ್ದಾಗ ಸರ್ವಿಸ್ ಕೊಡುವ ಏರ್ಪಾಟು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅದೇ ರೀತಿ ಕಾಂಟೂರ ಬಂಡಿಂಗ್‌ಗಾಗಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟ್ ಜಾರಿಗೆ ತಂದಿದ್ದೀರಿ. ಆದರೆ ಅದು ಕಾರ್ಯಗತವಾಗಿಲ್ಲ. Utilisation of man power ಗಾಗಿ ನಿರುದ್ಯೋಗಿಗಳಿಗೆ ಕೆಲಸ ಕೊಡಿಸುತ್ತೇವೆಂದು ಹೇಳಿ ಹೋದ ವರ್ಷ ಪೈಲೆಟ್ ಪ್ರೊಜೆಕ್ಟ್ ಜಾರಿಗೆ ತಂದಿದ್ದಿರಿ. ಆದರೆ ಅದು ವಿಚಿತ್ರವಾಗಿದೆ. ನಿಜವಾಗಿಯೂ ನಾಚಿಕೆ ಪಡುವ ವಿಷಯ. 1962-63 ಸಾಂಕ್ಷನ್ ಆಗಿರುವ ಪ್ರೊಜೆಕ್ಟ್ ಕಾರ್ಯಗತ ಮಾಡಲು ಇನ್ನೂ ಅವರಿಗೆ ಸರಿಯಾಗಿ ಇನ್‌ಸ್ಟ್ರಕ್ಷನ್ಸ್ ಕೊಟ್ಟಿಲ್ಲ. ರೈತ ಎಷ್ಟು ಹಣ ಕೊಡಬೇಕು. ಮತ್ತು ಸರಕಾರದ ಸಹಾಯ ನಿರ್ದಿಷ್ಟವಾಗಿ ಕೊಟ್ಟಿಲ್ಲ. ಪಾವಗಡದಲ್ಲಿ ಇಂಥ ಒಂದು ಯೋಜನೆ ಮಾಡಿದ್ದೀರಿ. ಇದರಿಂದ ಅನ್ಯಾಯವಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ಹಣ ಒದಗಿಸಲು ನಿಧಾನವಾಗಿದೆ. ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಆರ್ಡರ್ ವಿಶದವಾಗಿ ಕೊಡದೇ ಇದ್ದರೆ ಈ ಉದ್ದೇಶ ವಿಫಲವಾಗುತ್ತದೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ಈಗ ಬಹಳ ಮುಖ್ಯವಾಗಿ ಶಾಸ್ತ್ರೀಯವಾಗಿ ವ್ಯವಸಾಯವನ್ನು ಮಾಡಬೇಕಾದರೆ ನಮ್ಮ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಎಂದರೆ ಪೋಸ್ಟ್ ಗ್ರ್ಯಾಜುಯೇಟ್ಸ್ ತರಗತಿಗಳನ್ನು ಸ್ಥಾಪನೆ ಮಾಡುವುದು ಬಹಳ ಮುಖ್ಯವಾದದ್ದು. ಸ್ನಾತಕೋತ್ತರ ಶಿಕ್ಷಣವನ್ನು ಕೊಡತಕ್ಕಂಥ ಒಂದು ವ್ಯವಸಾಯದ ಶಾಸ್ತ್ರೀಯ ಯೂನಿವರ್ಸಿಟಿಯನ್ನು ಪ್ರಾರಂಭಮಾಡುತ್ತೇವೆಂದು ಒಂದು ಯೋಜನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕಾಗಿ ನಮ್ಮ ಮಾನ್ಯ ವ್ಯವಸಾಯ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಇಂಥಾ ಒಂದು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದು ಬಹಳ ಅತ್ಯಗತ್ಯ. ಇದು ಬಹಳ ಚೆನ್ನಾಗಿ ಕೈಗೂಡಲಿ ಎಂದು ನಾನು ಹಾರೈಸುತ್ತೇನೆ. ನಾನು ಹಿಂದೆ ಬಜೆಟಿನ ಮೇಲೆ ಭಾಷಣ ಮಾಡುತ್ತಾ ಹೇಳಿದ್ದೆ. ಮುಖ್ಯವಾಗಿ ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತನಿಗೆ ಸರ್ಕಾರದವರು ಒದಗಿಸತಕ್ಕಂಥ ವ್ಯವಸಾಯದ ಉಪಕರಣಗಳು, ಗೊಬ್ಬರ ಇತ್ಯಾದಿ ಸೌಲಭ್ಯಗಳು ಸಿಕ್ಕಬೇಕು. ಅವು ರೈತನಿಗೆ ಸರಿಯಾಗಿ ತಲಪಬೇಕಾ

(ಶ್ರೀ ಬಿ. ಎಲ್. ಗೌಡ)

ದರ ವ್ಯವಸಾಯ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ತೃಪ್ತರಾಗಿರಬೇಕು. ಆ ಅಧಿಕಾರಿಗಳಲ್ಲಿ ಆ ತಕ್ಕ ಅತೃಪ್ತಿ ಮನೋಭಾವನೆಯನ್ನು ಹೋಗಲಾಡಿಸಬೇಕಾದರೆ ತಕ್ಷಣ ಯಾವುದಾದರೊಂದು ಏರ್ಪಾಟು ಮಾಡದೆ ಹೋದರೆ ತೊಂದರೆಯಾಗುತ್ತದೆ. ಅದರಿಂದ ದೇಶಕ್ಕೆ ಹಾನಿಯಾಗುತ್ತದೆಂದು ನಾನು ಒತ್ತಿ ಹೇಳುತ್ತೇನೆ. ರೈತನಿಗೆ ಮುಖ್ಯವಾಗಿ ಒಂದು ಇನ್‌ಸೆಂಟೀವ್ ದೊರೆಯಬೇಕಾದರೆ ಅವನು ಬೆಳೆದ ಬೆಳೆಗೆ ಒಂದು ಸರಿಯಾದ ಬೆಲೆ ಸಿಕ್ಕಬೇಕಾದ್ದು ಬಹಳ ಮುಖ್ಯ. ಈಗ ಒಂದು ವರ್ಷದಿಂದ ರೈತನಿಗೆ ಬಹಳ ಕಡಿಮೆ ಬೆಲೆ ಸಿಕ್ಕುತ್ತಿದೆ. ಒಂದು ಬೆಳೆಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಂದರೆ ಉತ್ಪತ್ತಿ ವೆಚ್ಚ ಎಷ್ಟಾಗುತ್ತದೆ ಎಂಬುದನ್ನು ನೋಡಿ ಲಾಭ ಇಟ್ಟು ಬೆಲೆಯನ್ನು ನಿಗದಿ ಮಾಡದೆ ಹೋದರೆ ನಾವು ವ್ಯವಸಾಯದಲ್ಲಿ ಪ್ರಗತಿಯನ್ನು ಹೊಂದುವುದಿಲ್ಲ. ಅಂತಹ ಒಂದು ಕಾರ್ಯಕ್ರಮ ವನ್ನು ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಬೇರೆ ಪ್ರಾಂತಗಳಲ್ಲಿ ರೈತನು ಬೆಳೆದ ಬೆಳೆಗೆ ಒಂದು ಬೆಲೆಯನ್ನು ನಿಗದಿಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. ಅದೇ ರೀತಿ ನಮ್ಮ ಸಂಸ್ಥಾನದಲ್ಲಿಯೂ ಸಹ ಅಂತಹ ಒಂದು ಕಮಿಟಿಯನ್ನು ನೇಮಕ ಮಾಡಬೇಕು. ಒಟ್ಟಿನಲ್ಲಿ ರೈತನಿಗೆ ಅವನು ಬೆಳೆದ ಬೆಳೆಗೆ ನ್ಯಾಯವಾದ ಬೆಲೆಯನ್ನು ದೊರಕಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪಶು ಸಂಗೋಪನೆಯ ವಿಷಯ; ಈ ವಿಷಯದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ, ಕೃತಕ ಗರ್ಭಧಾರಣಾ ಕೇಂದ್ರಗಳು ಬಹಳ ಕಡಿಮೆ. ಅವುಗಳನ್ನು ಸ್ಥಾಪನೆಮಾಡುವುದರಲ್ಲಿ ಬಹಳ ವಿಳಂಬವಾಗುತ್ತಿದೆ. C. D. ಬ್ಲಾಕುಗಳು ಮತ್ತು ಎನ್. ಇ. ಎಸ್. ಬ್ಲಾಕುಗಳು ಇರುವ ಕಡೆಗಳಲ್ಲಿ ಒಂದೊಂದು ಕೃತಕ ಗರ್ಭಧಾರಣಾ ಕೇಂದ್ರ ವನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆ. ನನ್ನ ಕ್ಷೇತ್ರದಲ್ಲಿ ಈಗ ಮೂರು ವರ್ಷಗಳಿಂದ ಎನ್. ಇ. ಎಸ್. ಬ್ಲಾಕು ಇದೆ. ಆದರೆ ಇವೊತ್ತಿನವರೆಗೂ ಅಲ್ಲಿ ಒಂದು ಕೃತಕ ಗರ್ಭಧಾರಣಾ ಕೇಂದ್ರ ವನ್ನು ಸ್ಥಾಪನೆ ಮಾಡಿಲ್ಲ. ಚಿತ್ರದುರ್ಗ ಜಿಲ್ಲೆಯ ಅನೇಕ ಗ್ರಾಮಾಂತರ ಪ್ರದೇಶಗಳಿಗೆ ಒಳ್ಳೆಯ ತಳಿಯ ಸಹಾಯ ದೊರೆಯದೆ ತೊಂದರೆಯಾಗುತ್ತಿದೆ. ಅದಕ್ಕೋಸ್ಕರ ಶೀಘ್ರವಾಗಿ ಕಾರ್ಯಕ್ರಮ ಗಳನ್ನು ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಈಗ ನಮ್ಮ ಮಂತ್ರಿಗಳು ಪಟ್ಟಣಗಳಲ್ಲಿ ಹಾಲನ್ನು ಸರಬರಾಜು ಮಾಡಲು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ಸ್ತುತ್ಯಾರ್ಹವಾಗಿದೆ. ಹಳ್ಳಿಗಳಲ್ಲಿ ಮಜ್ಜಿಗೆ ಸಹ ಸಿಕ್ಕುವುದಿಲ್ಲ. ಇದು ಬಹಳ ಅನ್ಯಾಯ ಮತ್ತು ವಿಷಾದಕರ ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿಯೂ ಹೆಚ್ಚು ಹೆಚ್ಚು ತಳಿ ಅಭಿವೃದ್ಧಿಯನ್ನು ಮಾಡಿ ಒಳ್ಳೊಳ್ಳೆಯ ಹಾಲನ್ನು ಕರೆಯತಕ್ಕ ಹಸುಗಳನ್ನೂ ಮತ್ತು ಎಮ್ಮೆಗಳನ್ನು ಸಾಕುವ ಒಂದು ಯೋಜನೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಆ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ವೆಟರ್‌ನರಿ ಆಸ್ಪತ್ರೆಗಳನ್ನು ಸ್ಥಾಪನೆ ಮಾಡುವುದರಲ್ಲಿ ಸರ್ಕಾರದವರು ರಾಜಕೀಯವನ್ನು ಮಾಡುತ್ತಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಜಿಲ್ಲಾ ಅಭಿವೃದ್ಧಿ ಮಂಡಲ ಇದೆ, ಆದರಲ್ಲಿ ವ್ಯವಸಾಯದ ಅಧಿಕಾರಿಗಳಿದ್ದಾರೆ, ಎಂ. ಎಲ್. ಎ. ಗಳು ಇದ್ದಾರೆ, ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟರಿರುತ್ತಾರೆ. ಅವರುಗಳು ಶಿಫಾರಸ್ಸು ಮಾಡಿ ಇಂಥಾ ಜಾಗದಲ್ಲಿ ವೆಟರ್‌ನರಿ ಆಸ್ಪತ್ರೆಯನ್ನು ಕೊಡಬೇಕು ಎಂದು ಹೇಳಿದರೆ, ಅದನ್ನು ಓವರ್‌ಲುಕ್ ಮಾಡಿ ಕಡೆಗಾಣಿಸಿ ರಾಜಕೀಯ ದೃಷ್ಟಿಯಿಂದ ಬೇರೆ ಜಾಗಕ್ಕೆ ಕೊಟ್ಟರೆ ಅನ್ಯಾಯಮಾಡಿದ ಹಾಗಾಗುತ್ತದೆ ಎಂದು ಸಂಬಂಧಪಟ್ಟ ಮಂತ್ರಿಗಳು ಯೋಚನೆಮಾಡಬೇಕು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ ಪರಶುರಾಂಪುರ ಎನ್ನುವ ಒಂದು ಊರು ಇದೆ. ಅದು ಚಳ್ಳಕೆರೆಗೆ 18 ಮೈಲಿ ದೂರ ಆಗುತ್ತದೆ. ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದು ಜಿಲ್ಲಾ ಅಭಿವೃದ್ಧಿ ಮಂಡಳಿಯವರು ಒಂದು ಯೂನಾನಿಮಸ್ ರೆಜಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದು ಯಾಕೋ ಏನೋ ಮಂತ್ರಿಗಳು ಅದನ್ನು ಕಡೆಗಾಣಿಸಿ ಬೇರೆ ಜಾಗಕ್ಕೆ ಕೊಟ್ಟಿದ್ದಾರೆ. ಬೇರೆ ಕಡೆಗೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಬಗ್ಗೆ ಪ್ರತ್ಯೇಕವಾಗಿ ಒಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಎಲ್. ಗೌಡ.—ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಯೂನಾನಿಮಸ್ ರೆಸಲ್ಯೂಷನ್ ಮಾಡಿ ಕಳುಹಿಸಿಕೊಟ್ಟರೂ ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಟ್ಟಿಲ್ಲ. ಆದರೆ ಬೇರೆ ಕಡೆಗೆ ಕೊಟ್ಟಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಲೋಕಲ್ ಬೋರ್ಡಿನವರು ¼ ಭಾಗ ಕಾಂಟ್ರಿಬ್ಯೂಷನ್ ಕೊಡದೆ ಇದ್ದರೆ ಆಸ್ಪತ್ರೆಯನ್ನು ಕೊಡುವುದಕ್ಕೆ ಬರುವುದಿಲ್ಲ. ಲೋಕಲ್ ಬೋರ್ಡಿನವರು ¼ ಭಾಗ ಕಾಂಟ್ರಿಬ್ಯೂಷನ್ ಕೊಟ್ಟು ಯಾವ ಸ್ಥಳಕ್ಕೆ ವೆಟರ್‌ನರಿ ಆಸ್ಪತ್ರೆಯನ್ನು ಕೊಡಬೇಕೆಂದು ಹೇಳಿದ್ದಾರೆಯೋ

ಅಲ್ಲಿಗೆ ಕೊಟ್ಟಿದ್ದೇವೆ. ಲೋಕಲ್ ಬೋರ್ಡಿನವರು ½ ಭಾಗ ಕಾಂಟ್ರಿಬ್ಯೂಷನ್ ಕೊಡದೆ ಇದ್ದರೆ There is no question of opening a hospital at all. ಲೋಕಲ್ ಬೋರ್ಡಿನವರು ವೆಲ್‌ಕಂ ಮಾಡಿರುವುದರಿಂದ ನಾವು ಅಲ್ಲಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಎಲ್. ಗೌಡ.—ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಒಂದು ರೆಸುಲ್ಯೂಷನ್ ಮಾಡಿ ಇಂಥಾ ಸ್ಥಳಕ್ಕೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡ ಮೇಲೂ ಅದನ್ನು ಕಡೆಗಾಣಿಸಿ ಬೇರೆ ಕಡೆ ಕೊಡುವ ಉದ್ದೇಶವೇನಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಾ ಕಡೆಗೂ ಯೂನಾನಿಮಸ್ ರೆಸುಲ್ಯೂಷನ್ ಆಗಿದೆ.

ಶ್ರೀ ಬಿ. ಎಲ್. ಗೌಡ.—ಈಗ ಸರ್ಕಾರದವರು ವೆಟರ್‌ನರಿ ಆಸ್ಪತ್ರೆಯನ್ನು ಕೊಟ್ಟಿರುವ ಜಾಗಕ್ಕೆ ಯೂನಾನಿಮಸ್ ರೆಸುಲ್ಯೂಷನ್. ಆಗಿಲ್ಲ. ಪಶುಪಾಲನೆ ಹೆಚ್ಚಾಗಿ ತೃಪ್ತಿಕರವಾಗಿ ನಡೆಯಬೇಕಾದರೆ ಮೇವು ಮುಖ್ಯ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಮೇವಿನ ಅಭಾವ ಬಹಳ ಜಾಸ್ತಿ ಉಂಟಾಗಿದೆ. ಆದ್ದರಿಂದ ಹೆಚ್ಚಿಗೆ ಹುಲ್ಲು ಸಿಕ್ಕತಕ್ಕಂಥ ವ್ಯವಸ್ಥೆ ಮಾಡಬೇಕು. ಮತ್ತು ಹಳ್ಳಿಗಳಲ್ಲಿ ಹುಲ್ಲಿನ ವ್ಯವಸಾಯವನ್ನು ಡೆವಲಪ್ ಮಾಡುವ ರೀತಿಯಲ್ಲಿ, ಹೆಚ್ಚು ಹುಲ್ಲನ್ನು ಬೆಳೆಯುವ ರೀತಿಯಲ್ಲಿ ಒಂದು ಯೋಜನೆಯನ್ನು ಹಾಕಿಕೊಂಡು ಹುಲ್ಲನ್ನು ಬೆಳೆಯದೆ ಹೋದರೆ ಹುಲ್ಲಿನ ಅಭಾವ ದೊಡ್ಡದಾಗುತ್ತದೆ.

ಇನ್ನು ಅರಣ್ಯ ಇಲಾಖೆಯ ವಿಚಾರದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಅಮೃತಮಹಲ್ ದೊಡ್ಡ ದೊಡ್ಡ ಕಾವಲು ಹತ್ತಾರು ಎಕರೆ ಜಮೀನು ಬಂಜರು ಬಿದ್ದಿದೆ. ಅದನ್ನು ರೆವಿನ್ಯೂ ಇಲಾಖೆಗೆ ಒಳಪಡಿಸಿಕೊಂಡು ರೈತರಿಗೆ ವ್ಯವಸಾಯಕ್ಕೆ ಕೊಟ್ಟು ಉಳಿದ ಜಮೀನಿನಲ್ಲಿ ಅರಣ್ಯವನ್ನು ಬೆಳೆಸಿದರೆ ಒಳ್ಳೆಯದು. ಇದರಿಂದ ಅನೇಕ ಸಮಸ್ಯೆಗಳಿಗೆ ಅನುಕೂಲವಾಗುತ್ತದೆಂದು ನಾನು ತಮ್ಮಲ್ಲಿ ಹೇಳುತ್ತೇನೆ.

ಗ್ರಾಮಾಂತರ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ ಗ್ರಾಮಗಳಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಕುಡಿಯುವ ನೀರಿನ ಅಭಾವ ಜಾಸ್ತಿಯಾಗಿದೆ. ಒಂದು ವರ್ಷಕ್ಕೆ ಒಂದು ತಾಲ್ಲೂಕಿಗೆ ಎರಡು-ಮೂರು ಬಾವಿಗಳನ್ನು ಸಹ ಕೊಡುವುದಿಲ್ಲ. ದೊಡ್ಡ ದೊಡ್ಡ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ನಮ್ಮ ದೇಶದಲ್ಲಿ ಇನ್ನು ಒಟ್ಟು 5,000 ಕುಡಿಯುವ ನೀರಿನ ಬಾವಿಗಳನ್ನು ಒದಗಿಸಬೇಕಾಗಿದೆ ಎಂದು ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಆದ್ದರಿಂದ ಕುಡಿಯುವ ನೀರಿನ ಬಾವಿಗಳನ್ನು ತೆಗೆಸಲು ಆದ್ಯತೆ ಕೊಟ್ಟು ಅದನ್ನು ಮೊದಲು ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಗ್ರಾಮಾಂತರಗಳ ಪಂಚಾಯಿತಿಗಳು ಸರಿಯಾಗಿ ನಡೆಯುತ್ತಾ ಇಲ್ಲ. ಅಲ್ಲಿ ಸರಿಯಾದ ಆಡಿಟ್ ಇಲ್ಲ. ಅದಕ್ಕೋಸ್ಕರ ಆಡಿಟ್ ಮಾಡುವಂಥಾ ಒಂದು ವ್ಯವಸ್ಥೆಯನ್ನು ಮಾಡಬೇಕು. ಎಕ್. ಇ. ಎಸ್. ಅಧಿಕಾರಿಗಳನ್ನು ನೇಮಕ ಮಾಡುವುದರಲ್ಲಿ ಡಿಲೇ ಆಗುತ್ತದೆ. ಆದ್ದರಿಂದ ಅಲ್ಲಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಕುಡಿಯುವ ನೀರಿನ ಬಾವಿ ಮುಂತಾದ ಕೆಲವು ಬಾಬುಗಳಿಗೆ ವರ್ಷೇ ವರ್ಷೇ ಹಣವನ್ನು ಸರಿಯಾಗಿ ಬಡ್ಜೆಟ್ಟಿನ ಪ್ರಕಾರ ಖರ್ಚು ಮಾಡದೆ ಇರುವುದರಿಂದ ದೇಶದಪ್ರಗತಿ ಕುಂಠಿತವಾಗುತ್ತಿದೆಯೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೆಲವು ಆಫೀಸರುಗಳಿಗೆ ಸರಿಯಾದ ತರಪೇತು ಇಲ್ಲದೆ ಇರುವುದರಿಂದ ಸರಿಯಾಗಿ ಕೆಲಸ ಕಾರ್ಯಗಳು ಆಗುತ್ತಾ ಇಲ್ಲ.

ಇನ್ನು ಕೊನೆಯದಾಗಿ ಸಹಕಾರ ಇಲಾಖೆಯಲ್ಲಿ ಕಾಂಗ್ರೆಸ್‌ನವರಿಗೆ ಸಹಕಾರ ಬಾಕಿಯವರಿಗೆ ಅಸಹಕಾರ ನಡೆಯುತ್ತಿದೆಯೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕೋ-ಆಪರೇಟಿವ್ ಸೊಸೈಟಿಗಳಿಗೆ ನಾಮಿನೇಷನ್ ಮಾಡತಕ್ಕಂಥ ಪದ್ಧತಿಯನ್ನ ಮೊದಲು ತೆಗೆದು ಹಾಕಬೇಕೆಂದು ನನ್ನ ಸ್ನೇಹಿತರನೇಕರು ಈಗಾಗಲೇ ಹೇಳಿದ್ದಾರೆ. ಈ ನಾಮಿನೇಷನ್ ಪದ್ಧತಿಯಿಂದ ಎಷ್ಟು ದುರುಪಯೋಗ ನಡೆಯುತ್ತಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. 1962 ನೇ ಇಸವಿಯಲ್ಲಿ ಚಿತ್ರದುರ್ಗ ಕೋ-ಆಪರೇಟಿವ್ ಯೂನಿಯನ್ ಸ್ಥಾಪನೆ ಮಾಡಿದರು. ಅದರಲ್ಲಿ ಒಬ್ಬರು ಮಾಜಿ ಎಂ. ಎಲ್. ಎ ಯವರನ್ನು ಆಗ ನೇಮಕ ಮಾಡಿದರು. ಸೆಪ್ಟೆಂಬರ್ ತಿಂಗಳಿನಲ್ಲಿ ಆ ಕೋ-ಆಪರೇಟೀವ್ ಯೂನಿಯನ್ನಿನ 15 ಜನ ಮೆಂಬರುಗಳ ಪೈಕಿ ಒಬ್ಬರನ್ನು ಮಾತ್ರ ತೆಗೆದು ಹಾಕಿದರು. ಏತಕ್ಕೋಸ್ಕರ ಅವರನ್ನು ತೆಗೆದು ಹಾಕಿದರು ಅವರಿಗೇನು ಕ್ವಾಲಿಫಿಕೇಷನ್ ಇರಲಿಲ್ಲವೇ ಎಂದು ನಾನು ಕೇಳುತ್ತೇನೆ. ಇದೇ ರೀತಿ ಚಳ್ಳಕೆರೆಯಲ್ಲಿರುವ ಒಂದು ಮಾರ್ಕೆಟಿಂಗ್ ಸೊಸೈಟಿಗೆ ಒಬ್ಬರು ಬಾಸಗಿಯವರನ್ನು ಇನ್‌ಸ್ಪೆಕ್ಟರವರ ಜಾಗದಲ್ಲಿ ನೇಮಕ ಮಾಡಿದ್ದಾರೆ. ಅದು ಹಾಗಿರಲಿ, ಹೋದ ಸಾರಿ ಚುನಾವಣೆಯಲ್ಲಿ ಫೇಲಾದವರನ್ನು ಆ ಸೊಸೈಟಿಗೆ ನಾಮಕರಣ ಮಾಡಿದ್ದಾರೆ. ಈ ರೀತಿ ಸ್ವಪಕ್ಷದವರನ್ನು ನಾಮಕರಣ ಮಾಡುತ್ತಾ ಹೋದರೆ ಸೊಸೈಟಿಗಳು ಮುಂದುವರೆಯುತ್ತವೆಯೇ ? ಖಂಡಿತವಾಗಿ ಈ ನಾಮಿನೇಷನ್ ಪದ್ಧತಿಯನ್ನು ಕಂಪ್ಲೀಟಾಗಿ ತೆಗೆಯಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದೇ ರೀತಿ ಅಡಮಾನ ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ಗಳಿಗೂ ಸಹ ಚುನಾಯಿತರಾದ ಅಧ್ಯಕ್ಷರನ್ನು

(ಶ್ರೀ ಟಿ. ಎಲ್. ಗೌಡ)

ನೇಮಕ ಮಾಡಿದರೆ ಒಳ್ಳೆಯದು. ಸಂಸ್ಥಾನದ ಆಡಳಿತವನ್ನು ನಡೆಸಬೇಕಾದರೆ, ಇಂಡಿಯಾ ದೇಶದ ಆಡಳಿತವನ್ನು ನಡೆಸಬೇಕಾದರೆ ಚುನಾಯಿತರಾದ ಸದಸ್ಯರು ಇರಬೇಕಾದರೆ; ಅದೇ ರೀತಿ ಕೋ-ಆಪರೇಟೀವ್ ಸೊಸೈಟಿಗಳ ಆಡಳಿತವನ್ನು ನಡೆಸಬೇಕಾದರೂ ಚುನಾಯಿತರಾದ ಸದಸ್ಯರು ಇಲ್ಲದೆ ಹೋದರೆ ಪ್ರಜಾಪ್ರಭುತ್ವಕ್ಕೆ ಅವಹೇಳನಮಾಡಿದಂತಾಗುತ್ತದೆ.

ಈ ನಾಮಕರಣ ಪದ್ಧತಿ ಯಾವರೀತಿ ದುರುಪಯೋಗಪಡಿಸಿಕೊಳ್ಳುತ್ತಿದ್ದೀರಿ ಅನ್ನುವುದಕ್ಕೆ ನಿದರ್ಶನ ಕೊಡುತ್ತೇನೆ. ದಾವಣಗೆರೆ ದೊಡ್ಡ ಊರು, ಅಲ್ಲಿ Regulated Marketing Society ಇದೆ. ಇಡೀ ಹಳೇ ಮೈಸೂರು ಸಂಸ್ಥಾನದಲ್ಲಿ ಯಾವ Regulated Marketಗೂ ಸಹ ಖಾಸಗಿ ಅಧ್ಯಕ್ಷರಿಲ್ಲ. ಎಲ್ಲ ಕಡೆಯಲ್ಲಿಯೂ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದಾರೆ. ಆದರೆ ಇಲ್ಲಿ ಸ್ವಪಕ್ಷದ ವರಿಗೋ ತಮಗೆ ಬೇಕಾದವರಿಗೋ ಹಾಗೆ ಕೊಡುವುದಕ್ಕೋಸ್ಕರ ಜಿಲ್ಲಾಧಿಕಾರಿಗಳನ್ನು ಬಿಟ್ಟು ಈ ರೀತಿ ಮಾಡಿದ್ದಾರೆಂದು ನನಗನಿಸುತ್ತದೆ. ದಾವಣಗೆರೆಯಲ್ಲಿ ಏಕೆ ಹೀಗೆ ಮಾಡಿದ್ದೀರಿ ಅನ್ನುವ ಬಗ್ಗೆ ಸಮಜಾಯಿಷಿ ಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರಿ ಮತ್ತು ಅಭಿವೃದ್ಧಿ ಶಾಖೆಯ ಮಂತ್ರಿಗಳು).—ಇನ್ನು ಮುಂದೆ ಎಲ್ಲ ಸಂಘಗಳಿಗೂ ಖಾಸಗಿಯವರೇ ಅಧ್ಯಕ್ಷರಾಗಿರುವರು.

5-30 P. M.

ಶ್ರೀ ಟಿ. ಎಲ್. ಗೌಡ.—ಎಲ್ಲರನ್ನೂ ನಾಮಕರಣ ಮಾಡುವಿರೋ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಚುನಾಯಿತ ಅಧ್ಯಕ್ಷರನ್ನು ನೇಮಿಸಲಾಗುತ್ತದೆ.

ಶ್ರೀ ಟಿ. ಎಲ್. ಗೌಡ.—ಸಹಕಾರ ಇಲಾಖೆ ಆಡಿಟ್ ವ್ಯವಸ್ಥೆಯಲ್ಲಿಯೂ "ಕಾಂಗ್ರೆಸು" ನಡೆಯುತ್ತಿದೆ. ನಮ್ಮ ಚಿತ್ರದುರ್ಗ ಜಿಲ್ಲೆಯ ಒಂದು ಸಹಕಾರ ಸಂಘದ ವಿಷಯ ನಮ್ಮ ಉಪ ಮಂತ್ರಿಯವರಿಗೂ ಗೊತ್ತಿದೆ. ಈ ವ್ಯವಸಾಯ ಸಹಕಾರ ಸಂಘ ಜಿಲ್ಲಾ ಬ್ಯಾಂಕಿನಿಂದ ಮೂರು ಲಕ್ಷ ರೂಪಾಯಿ ತೆಗೆದುಕೊಂಡು ಮೂರು ವರ್ಷದಿಂದ ಕ್ಯಾಷ್ ಬುಕ್ಕು ಮತ್ತು ಲೆಡ್ಜರ್ ಬರೆದಿರು ವುದಿಲ್ಲ. ಜವಾಬ್ದಾರರಾದವರ ಮೇಲೆ ತಕ್ಕ ಕ್ರಮ ತೆಗೆದುಕೊಂಡು ಶಿಕ್ಷೆಗೆ ಗುರಿಮಾಡಲು ಆರ್ಡರ್ ಆಗಿದ್ದರೂ, ಆದು ವಾಪಸ್ಸು ಬರುತ್ತಿದೆ. ಇದು ಸರಿಯಲ್ಲ. ಯಾರು ತಪ್ಪು ಮಾಡಿದ್ದಾರೋ, ಅವರ ತಪ್ಪನ್ನು ಮುಚ್ಚಬಾರದು, ಅವರಿಗೆ ಶಿಕ್ಷೆ ಮಾಡಬೇಕು. ಇಲ್ಲದೆ ಹೋದರೆ ಇದರಿಂದ ಬಹಳ ತೊಂದರೆಯಾಗುತ್ತದೆ. ಇಂಥ ತಾತ್ಸಾರ ಮನೋಭಾವ ಬೆಳೆಯುವ ರೀತಿಯಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸಬಾರದು.

† ಶ್ರೀ ಜಿ. ಮಾದೇಗೌಡ (ಮಳವಳ್ಳಿ).—ಸ್ವಾಮಿ, ಈ ದಿವಸ ಈ ಸಭೆಯ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಕೆಲವು ಬೇಡಿಕೆಗಳ ಬಗ್ಗೆ ನಾಲ್ಕಾರು ಸಲಹೆಗಳನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ.

ವ್ಯವಸಾಯದ ಮೇಲೆ ಹೇಳುತ್ತಾ, ಇಂಡಿಯಾ ದೇಶ ಹಳ್ಳಿಗಳ ದೇಶ, ಹಳ್ಳಿಗಳಲ್ಲಿರತಕ್ಕಂಥ ಸುಮಾರು 80 ಭಾಗ ಜನ ವ್ಯವಸಾಯವನ್ನೇ ಅವಲಂಬಿಸಿಕೊಂಡಿದ್ದಾರೆ ಅನ್ನತಕ್ಕಂಥದ್ದು ನಿತ್ಯ ಸತ್ಯದ ಮಾತು. ನಮ್ಮ ದೇಶ ಆರ್ಥಿಕವಾಗಿ ಪ್ರಗತಿಯನ್ನು ಸಾಧಿಸಬೇಕಾದರೆ ಮತ್ತು ದೇಶ ಮುಂದುವರಿಯಬೇಕಾದರೆ, ವ್ಯವಸಾಯಗಾರರು ಮುಂದುವರಿಯಬೇಕು. ಅವರ ಪ್ರಗತಿ ಆಗ ಬೇಕು ಅನ್ನುವ ದೃಷ್ಟಿಯಿಂದ ಸರ್ಕಾರದವರು ಎರಡು ಪಂಚವಾರ್ಷಿಕ ಯೋಜನೆಗಳ ಮುಖಾಂತರ ಅನೇಕ ಯೋಜನೆಗಳನ್ನು ಕೈಗೊಂಡು ಅನೇಕ ವಿಧದಲ್ಲಿ ರೈತರಿಗೆ ಉಪಕಾರ ಮಾಡಿದ್ದಾರೆ. ಈಗಾ ಗಲೇ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 192 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 2 ಲಕ್ಷ ಟನ್ ಆಹಾರ ಉತ್ಪನ್ನವನ್ನು ಜಾಸ್ತಿ ಮಾಡಿದ್ದಾರೆ. ಹಾಗೆಯೇ ಎರಡನೇ ಯೋಜನೆ ಯಲ್ಲಿ ಸುಮಾರು 755 ಲಕ್ಷ ರೂಪಾಯಿಯನ್ನು ಖರ್ಚುಮಾಡಿ ಸುಮಾರು 38 ಲಕ್ಷ ಟನ್‌ಗಳ ಆಹಾರದ ಉತ್ಪನ್ನವನ್ನು ಮಾಡಿದ್ದಾರೆ. ಈ ರೀತಿ ಆಹಾರ ಉತ್ಪಾದನೆ ಜಾಸ್ತಿ ಮಾಡತಕ್ಕಂಥ ವಿಧಾನ ದಲ್ಲಿ ಸರ್ಕಾರದವರು ಅನೇಕ ಕೆಲಸಗಳನ್ನು, ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರು ಅನೇಕರು ಸೂಚಿಸಿದ ಹಾಗೆ ವ್ಯವಸಾಯದ ಉಪಕರಣಗಳು ಏನಿವೆ ಅವನ್ನು, ಮತ್ತು ಸುಧಾರಿಸಿದ ಬೀಜಗಳನ್ನು ಒದಗಿಸುವುದರ ಮುಖಾಂತರ, Compost ಗೊಬ್ಬರಗಳನ್ನು ತಯಾರುಮಾಡಿ ರೈತರಿಗೆ ಅವನ್ನು ವ್ಯವಸಾಯಕ್ಕೆ ಉಪಯೋಗಿಸುವ ಹಾಗೆ ಮಾಡಿ ಅನೇಕ ಗೊಬ್ಬರಗಳನ್ನು ಸೊಸೈಟಿಯ ಮುಖಾಂತರ ಕೊಟ್ಟು ಅನೇಕ ಅಧಿಕಾರಿ ವರ್ಗದವರು

ಹಣ ಕೊಟ್ಟು, ನಾಟಿ ಹಾಕಿ, Japan method of cultivation ಪ್ರಚಾರಕ್ಕೆ ತಂದು, ವ್ಯವಸಾಯಕ್ಕೆ ಬರತಕ್ಕಂಥ ರೋಗರುಜಿನಗಳನ್ನು ಕೂಡ ಔಷಧಿಗಳನ್ನು ಕೊಟ್ಟು ತಡೆದು, ಮಿಶ್ರ ವ್ಯವಸಾಯ ಮತ್ತು ರೊಟೇಷನ್ ಕ್ರಾಪ್ ಎನಿದೆ ಅವುಗಳನ್ನು ಪ್ರಚಾರಕ್ಕೆ ತಂದು ಅನೇಕ ರೀತಿಯಲ್ಲಿ ದೇಶದ ಆಹಾರೋತ್ಪತ್ತಿಯನ್ನು 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಹಳವಾಗಿ ಏರಿಸಿದರು. ಆದರೂ ಕೂಡ ಇವತ್ತಿನ ದಿವಸ ಅನೇಕಸಾರಿ ಈ ಮಾನ್ಯ ಸಭೆಯಲ್ಲಿ ಈ ವ್ಯವಸಾಯದ ಇಲಾಖೆ ಉಗ್ರವಾದ ಟೀಕೆಗೆ ಒಳಗಾಗಿದೆ. ಈಗ ಮಾತನಾಡಿದ ಶ್ರೀ ಮರುಳಪ್ಪನವರು ಈ ವ್ಯವಸಾಯ ಇಲಾಖೆ ಮುಚ್ಚಿಬಿಡಬೇಕು ಅನ್ನುವಹಾಗೆ ಟೀಕೆ ಮಾಡಿದರು. ಆದರೆ ಒಂದು ಮಾತನ್ನು ಮಾತ್ರ ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಪಾಶ್ಚಿಮಾತ್ಯ ದೇಶವೇ ಆಗಲಿ, ಯಾವ ದೇಶವೇ ಆಗಲಿ, ಈ ಒಂದು ಇಲಾಖೆ ಏನಿದೆ ಅದಕ್ಕೆ ಮುಖ್ಯವಾದ ಸ್ಥಾನವನ್ನು ಕೊಡಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ಈ ಇಲಾಖೆಗೆ ಮುಖ್ಯ ಸ್ಥಾನವನ್ನೂ ಕೂಡ ಕೊಡುತ್ತಾ ಇದ್ದಾರೆ. ಈ ಅನ್ನದ ಇಲಾಖೆಗೆ, ಈ ಹೊಟ್ಟೆಯ ಇಲಾಖೆಗೆ, ಈ ವ್ಯವಸಾಯದ ಇಲಾಖೆಗೆ ಮಾನ್ಯತೆ ಕೊಡದಿದ್ದರೆ ಯಾವ ಕೈಗಾರಿಕೆಯೇ ಆಗಲಿ, ಯಾವ ದೇಶವೇ ಆಗಲಿ, ಆರ್ಥಿಕ ಸ್ಥಿತಿಯಲ್ಲಿ ಉತ್ತಮವಾಗುವುದಿಲ್ಲ ಅನ್ನತಕ್ಕಂಥಾದ್ದನ್ನು ಎಲ್ಲರೂ ಕೂಡ ಒಪ್ಪಿಕೊಳ್ಳುವ ಮಾತು. ಈ ವ್ಯವಸಾಯದ ಅಭಿವೃದ್ಧಿ ಮೇಲೆ ಕೈಗಾರಿಕೆ ಅವಲಂಬಿಸಿದೆ, ದೇಶದ ಆರ್ಥಿಕ ಸ್ಥಿತಿಯೂ ಕೂಡ ಇದನ್ನೇ ಅವಲಂಬಿಸಿದೆ ಅನ್ನತಕ್ಕಂಥಾದ್ದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ವ್ಯವಸಾಯದಲ್ಲಿ ಎಷ್ಟು ಏಳಿಗೆಯನ್ನು ಮುಟ್ಟುತ್ತೇವೆಯೋ, ಅಷ್ಟರ ಮಟ್ಟಿಗೆ ದೇಶದ ಪ್ರಗತಿಯನ್ನು ಸಾಧಿಸುತ್ತೇವೆ. ಅದಕ್ಕೋಸ್ಕರ ನಾನು ಈ ಸಂದರ್ಭದಲ್ಲಿ ಸೂಚಿಸತಕ್ಕಂಥಾದ್ದು, ಎರಡು ಪಂಚವಾರ್ಷಿಕ ಯೋಜನೆಯನ್ನು ಮುಗಿಸಿದ್ದರೂ ಕೂಡ, ಅನೇಕ ಯೋಜನೆಗಳನ್ನು ಕೈಗೊಂಡಿದ್ದರೂ ಕೂಡ ನಾವು ಎಷ್ಟು ಪ್ರಗತಿಯನ್ನು, ಫಲವನ್ನು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ದೊರೆತಿಲ್ಲ. ಏಕೆಂದರೆ ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ನಾವು ಏನೊಂದು ಯೋಜನೆಯನ್ನು ಕೈಗೊಂಡಿದ್ದೇವೆಯೋ ಅದು ಪ್ರತಿಯೊಬ್ಬ ರೈತನಿಗೂ ಮುಟ್ಟುತ್ತಾ ಇಲ್ಲ. ಪ್ರತಿಯೊಬ್ಬ ರೈತನಿಗೂ ಕೂಡ ಸುಧಾರಿಸಿದ ವ್ಯವಸಾಯದ ಬೀಜಗಳು, method, ಮುಟ್ಟುತ್ತಾ ಇಲ್ಲ. ಹಾಗೆಯೇ Compost ಗೊಬ್ಬರ ಅನ್ನತಕ್ಕಂಥಾದ್ದನ್ನೂ ತಯಾರು ಮಾಡುತ್ತಾ ಇದ್ದೇವೆ, ಅದರ ಪ್ರಚಾರವಿಲ್ಲ. Compost Demonstratorಗಳನ್ನು ಸರ್ಕಾರದವರು ನೇಮಿಸಿದ್ದಾರೆ. ಅವರು ಪ್ರತಿಯೊಬ್ಬನ ಮನೆ ಬಾಗಿಲಿಗೂ ಹೋಗಿ ಯಾವುದನ್ನು ತಯಾರು ಮಾಡುತ್ತಿದ್ದೇವೆಯೋ ಅದನ್ನು ಹೇಳುತ್ತಾ ಇಲ್ಲ. ಸರ್ಕಾರದವರ ಪ್ರಯತ್ನ ಇಲ್ಲದೇನೇ ತಾನೇ ಸ್ವತಃ ವ್ಯವಸಾಯ ಮಾಡತಕ್ಕಂಥ ಶಕ್ತಿ ರೈತನಿಗೆ ಇಲ್ಲ. ಇವತ್ತು ಇಂಡಿಯಾ ದೇಶದಲ್ಲಿ ರೈತರು 80 ಪರ್ಸೆಂಟ್ ಜನ. ಅವರು ಅನಕ್ಷರತೆ ಮತ್ತು ಅಜ್ಞಾನದಿಂದ ತುಂಬಿರುತ್ತಾರೆ. ಈ ದೇಶದಲ್ಲಿ ವ್ಯವಸಾಯ ಕೂಡ ಬಹಳ ಹಿಂದುಳಿದಿದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಅದಕ್ಕೋಸ್ಕರ ಸರ್ಕಾರ ರೈತರ ಏಳಿಗೆಯ ಗುರಿಯನ್ನು ಮುಟ್ಟಬೇಕಾದರೆ, ಇಂಡಿಯಾ ಸರ್ಕಾರದವರು ಅವರ ಒಂದು ಯೋಜನೆಯನ್ನು ಪ್ರತಿ ಪ್ರಾಂತ ಸರ್ಕಾರಗಳೂ ಕೈಗೊಳ್ಳಬೇಕು, ಈವತ್ತಿನ ದಿವಸ ಆ Package Deal Programme ಈ ರಾಜ್ಯದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜಾರಿಯಲ್ಲಿದೆ. ಅದು ಸುಮಾರು 5 ವರ್ಷದ ಯೋಜನೆ. ಈಗಾಗಲೇ 5 ವರ್ಷಗಳು ಆದರೂ ಕೂಡ, ನಾವು ಒಂದು ವರ್ಷ ಮುಗಿದು, 2ನೇ ವರ್ಷದ ಮೂರನೇ ತಿಂಗಳಿನಲ್ಲಿದ್ದೇವೆ. ಆದರೂ ಕೂಡ ನನಗೆ ಕಂಡಹಾಗೆ ಈ ಯೋಜನೆಯನ್ನು ಅರ್ಥ ಮಾಡಿಕೊಂಡಿರತಕ್ಕಂಥ ಅಧಿಕಾರ ವರ್ಗದವರು ಏನಿದ್ದಾರೆಯೋ ಅವರು ಬಹಳ ಕಡಿಮೆ ಎಂದು ಈ ಸಂದರ್ಭದಲ್ಲಿ ವಿಷಾದದಿಂದ ಹೇಳಬೇಕಾಗಿದೆ. ನಾವು ಇವತ್ತು ಪ್ರಜಾಪ್ರಭುತ್ವ ಯುಗದಲ್ಲಿ ಇದ್ದೇವೆ. ಈ ದೇಶವನ್ನು ಸಬಲರಾಜ್ಯದ ಕಡೆಗೆ ಅನೇಕ ಯೋಜನೆಗಳನ್ನು ಹಾಕಿಕೊಂಡು ತೆಗೆದುಕೊಂಡು ಹೋಗುತ್ತಾ ಇದ್ದೇವೆ.

ಈ ಯೋಜನೆಯನ್ನು ನಾವು ಹಾಕುವಾಗ ಪಕ್ಷಗಳ ಸರ್ಕಾರವನ್ನು ರಚನೆ ಮಾಡುವ ಕಾಲದಲ್ಲಿ ಪಕ್ಷಗಳು ತಮ್ಮ ಪಕ್ಷದ ತತ್ವಕ್ಕನುಗುಣವಾಗಿ ಈ ಯೋಜನೆಯನ್ನು ರೂಪಿಸುವುದು ಪ್ರಜಾಪ್ರಭುತ್ವದ ಧರ್ಮ. ಹಾಗೆಯೇ ಈ ಯೋಜನೆಯನ್ನು ನೆರವೇರಿಸುವಂಥಾದ್ದು ನಿಜವಾಗಿ ಪಕ್ಷಗಳು ಅಲ್ಲ. ಆಡಳಿತ ವರ್ಗವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಯಾವ ಆಡಳಿತ ವರ್ಗಕ್ಕೆ ತನ್ನ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ದಕ್ಷತೆ ಇರುವುದಿಲ್ಲವೋ ಆಗ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ ಮತ್ತು ಯೋಜನೆಯೂ ಸಹ ಯಶಸ್ವಿಯಾಗುವುದಿಲ್ಲವೆಂಬ ಮಾತನ್ನು ನಾನು ಮತ್ತೆ ಒತ್ತಿ ಹೇಳಬೇಕಾಗಿದೆ. ಇವತ್ತಿನ ದಿವಸ ನಾವು ಏನೊಂದು ಯೋಜನೆಯನ್ನು ಹಾಕಿಕೊಂಡ ಎ ರ ಡ ನೆ ಯ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿ ಮೂರನೆಯ ಪಂಚವಾರ್ಷಿಕ ಯೋಜನೆಯ ಎರಡನೆಯ ವರ್ಷವನ್ನು ಮುಗಿಸಿದ್ದೇವೆ. ನಾವು ಏನೊಂದು ಈ ಯೋಜನೆಯಿಂದ ನಿರೀಕ್ಷಣೆ ಮಾಡಿದ್ದೆವೋ ಅಷ್ಟು ಫಲ ನಿಜವಾಗಿ ದೊರಕಿಲ್ಲ ಇದಕ್ಕೆ ಮುಖ್ಯ ಕಾರಣ ಪಕ್ಷಗಳಲ್ಲ; ಆಡಳಿತ ವರ್ಗದಲ್ಲಿರತಕ್ಕ ಕೋಮುವಾರು ಭಾವನೆ ಮತ್ತು

(ಶ್ರೀ ಜಿ. ಮಹಾದೇಗೌಡ)

ಆಡಳಿತವರ್ಗದಲ್ಲಿರಬೇಕಾದ ದಕ್ಷತೆ ಇಲ್ಲದೇ ಇರುವುದು ಆಗಿದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಮಂಡ್ಯಾ ಜಿಲ್ಲೆಯ ಉದಾಹರಣೆಯನ್ನು ಕೊಟ್ಟು ಈ ಮಾತನ್ನು ಪುಷ್ಟೀಕರಿಸುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ ಇಂಡಿಯಾ ಸರ್ಕಾರದವರ ಯೋಜನೆಯಾದಂಥ ಈ ಪ್ಯಾಕೇಜ್‌ಡೀಲ್ ಪ್ರೋಗ್ರಾಂನ್ನು ಕೇಂದ್ರ ಸರ್ಕಾರದವರೇ ಕೊಡಬೇಕಾದರೆ ಈ ಒಂದು ಜಿಲ್ಲೆಯಲ್ಲಿ ಒಂದು ಮಾದರೀ ರೀತಿಯಲ್ಲಿ ಈ ವ್ಯವಸಾಯವನ್ನು ಪ್ರಯೋಗ ಮಾಡಬೇಕೆಂದು ಮಾಡಿದರು. ಏಕೆಂದರೆ ಅಲ್ಲಿ ರೈತರೇ ಬಹಳ ಹೆಚ್ಚಾಗಿದ್ದಾರೆ. ಪ್ರತಿಯೊಬ್ಬ ರೈತನಿಗೆ ಏನೇನು ಸೌಲಭ್ಯಗಳು ಬೇಕಾಗಿವೆ ಎಂಬುದನ್ನು ಮೊದಲು ಗಮನಿಸಬೇಕಾಗಿದೆ. ಗಾಡಿ, ಎತ್ತು, ನೇಗಿಲು ಮುಂತಾದ ವ್ಯವಸಾಯೋಪಕರಣಗಳನ್ನು ರೈತನಿಗೆ ಕೊಡಬೇಕು. ಸಾಲವನ್ನೂ ಸಹ ಕೊಡಬೇಕಾಗಿದೆ. ರೈತನಾದವನು ಒಂದು ಪಲ್ಲ ಬೆಳೆಯುವ ಕಡೆ 10 ಪಲ್ಲ, 10 ಪಲ್ಲ ಬೆಳೆಯುವ ಕಡೆ 20 ಪಲ್ಲ, 1 ರೂಪಾಯಿ ಸಂಪಾದನೆ ಮಾಡುವ ಕಡೆ 10 ರೂಪಾಯಿಗಳನ್ನು ಸಂಪಾದನೆ ಮಾಡುವ ಹಾಗೆ ಅವನಿಗೆ ತಿಳುವಳಿಕೆ ಹೇಳಬೇಕು. ದೇಶದ ಉತ್ಪತ್ತಿ, ಅವನ ಆರ್ಥಿಕ ಪರಿಸ್ಥಿತಿ ಖಂಡಿತವಾಗಿ ಉತ್ತಮವಾಗಬೇಕು. ಎಂಬ ದೃಷ್ಟಿಯಿಂದ ಈ ಯೋಜನೆಯನ್ನು ಮಂಡ್ಯಾ ಜಿಲ್ಲೆಯಲ್ಲಿ ಜಾರಿಗೆ ತಂದರು. ಇದೇ ರೀತಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಪ್ರಾಂತ್ಯ ಸರ್ಕಾರದವರೂ ಸಹ ಕೊಟ್ಟಿದ್ದಾರೆ. ಆದರೆ ಇವರ ಪರಿಸ್ಥಿತಿ ಈಗ ಏನಾಗಿದೆ ಎಂದರೆ ಒಂದು ಯಕ್ಷಿಣಿ ತರವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಕ್ಷಣಿಗಾರ ಒಂದು ಸಂತೆ ಮೈದಾನದಲ್ಲಿ ಒಂದು ರೂಪಾಯಿ ಕೊಡಿ 10 ರೂಪಾಯಿ ಮಾಡುತ್ತೇನೆ. ಒಂದು ಹಿಡಿ ಮರಳನ್ನೂ ಕೂಡ ಪೆಪ್ಪರ್‌ಮೆಂಟ್ ಮಾಡುತ್ತೇನೆಂದು ಹೇಳುವ ಹಾಗೆ ಈ ಪ್ಯಾಕೇಜ್‌ಡೀಲ್ ಪ್ರೋಗ್ರಾಂ ಸ್ಥಿತಿ ಆಗಿದೆ. ಇದೇನು ದೊಂಬರ ಆಟವೋ ಅಥವಾ ಯಕ್ಷಿಣಿ ಆಟವೋ ಗೊತ್ತಿಲ್ಲ. ಆದರೆ ನಾನು ಸರ್ಕಾರವನ್ನು ಟೀಕೆ ಮಾಡುತ್ತಾ ಇಲ್ಲ. ಅಧಿಕಾರವರ್ಗದವರು ಪ್ರಜಾಪ್ರಭುತ್ವದಲ್ಲಿ ಈ ಯೋಜನೆಗಳನ್ನು ಎಷ್ಟರಮಟ್ಟಿಗೆ ನಿಷ್ಠೆಯಿಂದ ಮಾಡುತ್ತಿದ್ದಾರೆ ಮತ್ತು ಎಷ್ಟರ ಮಟ್ಟಿಗೆ ಅವರಿಗೆ ದೇಶಪ್ರೇಮವಿದೆ ಯೆಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮಂಡ್ಯಾ ಜಿಲ್ಲೆಯ ಈ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಮಾಡಬೇಕಾಗಿದ್ದರೆ ಪ್ರತಿಯೊಂದು ಕುಟುಂಬದಲ್ಲಿಯೂ ಈ ದೇಶಕ್ಕೆ ಬೇಕಾದಂಥ ಈ ಯೋಜನೆಯನ್ನು ಬೆಳೆಸಿ ತಕ್ಕ ಸೌಕರ್ಯಗಳನ್ನು ಒದಗಿಸಬೇಕು. ಒಂದೊಂದು ಸಂಸಾರಕ್ಕೂ ಈ ಯೋಜನೆ ಹರಡುವಂತೆ ಮಾಡಬೇಕು. ಪ್ರತಿಯೊಂದು ಕುಟುಂಬದಲ್ಲಿರತಕ್ಕ ತರೀ ಜಮೀನು, ಬಾಗಾಯಿತು ಜಮೀನು ಅವರಲ್ಲಿರತಕ್ಕ ದನಕರುಗಳು ಇತ್ಯಾದಿ ಹೀಗೆ ಪ್ರತಿಯೊಂದು ಕೂಡ ಈ ಯೋಜನೆಯಲ್ಲಿ ಬರುತ್ತದೆ. ಹಿಂದೆ ಇದ್ದಂಥ ಉತ್ಪತ್ತಿ, ಮುಂದೆ ಇನ್ನೂ ಅಧಿಕವಾಗಿ ವ್ಯವಸಾಯ ಮಾಡಬೇಕಾದರೆ ಅವನಿಗೆ ಅಧಿಕವಾಗಿ ಬೇಕಾಗಿರತಕ್ಕ ಸಹಾಯ ಅಂದರೆ ಗೊಬ್ಬರವನ್ನು ಯಾವ ರೀತಿ ಸರಬರಾಜು ಮಾಡಬೇಕು, ಭೂಮಿ ವಿಷಯ ತಿಳಿಯಬೇಕು, ಯಾವ ಬೆಳೆ ಹಾಕಿದರೆ ಒಳ್ಳೆಯ ಫಲ ಸಿಗುತ್ತದೆ ಎನ್ನುವುದನ್ನು ಈ ಯೋಜನೆಯಲ್ಲಿ ಸರ್ಕಾರದವರು ಕ್ರೋಢಿಕರಿಸಬೇಕು. ಮೂರನೆಯ ಒಂದು ಭಾಗವನ್ನು ಈ ಮಂಡ್ಯಾ ಜಿಲ್ಲೆಯಲ್ಲಿ ಹೋದ ವರ್ಷ ಈ ಯೋಜನೆಗೆ ಸೇರಿಸಿದ್ದಾರೆ. ಈ ಯೋಜನೆ ⅓ ಭಾಗ ಪ್ರದೇಶದಲ್ಲಿ ಮಾತ್ರ ಮಾಡಿ ಈಗ್ಗೆ ಒಂದು ವರ್ಷ ಮುಗಿದಿದೆ. ಈ ವರ್ಷ ಅವಧಿಯಲ್ಲಿ ಮಂಡ್ಯಾ ಜಿಲ್ಲೆಯಲ್ಲಿ ಆಹಾರೋತ್ಪತ್ತಿ ಎಷ್ಟು ಹೆಚ್ಚಿದೆ ಎಂಬುದನ್ನು ತಿಳಿಯಲು ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಇಲಾಖಾಧಿಕಾರಿಗಳು ಇನ್ನೂ ಆ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಏಕೋ ಹಿಂದು ಮುಂದು ನೋಡುತ್ತಿದ್ದಾರೆ. ಅವರ ವಿಷಯವೇ ಬೇರೆ. ನಾನು ಆ ಜಿಲ್ಲೆಯ ಒಬ್ಬ ಜವಾಬ್ದಾರಿಯುತ ರೈತನಾಗಿ ಇದನ್ನು ಹೇಳುತ್ತಿದ್ದೇನೆ. ಆದರೆ ಈ ಯೋಜನೆಯ ಒಂದು ವರ್ಷದ ಅವಧಿಯಲ್ಲಿ ಒಂದು ನಯಾಪೈಸೆಯಷ್ಟು ಏನೊಂದು ಪ್ರಯೋಜನವನ್ನೂ ಪಡೆದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಘಂಟಾಘೋಷವಾಗಿ ಹೇಳುತ್ತೇನೆ. ಮೊದಲು ಉಗ್ರವಾಗಿ ಈ ಯೋಜನೆಯಮೇಲೆ ನಾನು ಟೀಕೆ ಮಾಡಿದ್ದೆ. ವ್ಯವಸಾಯ ಮಂತ್ರಿಗಳಾದ ಶ್ರೀಮಾನ್ ನಾರಾಯಣ ಗೌಡರನ್ನು ಕೆಲವು ಕಡೆಗಳಲ್ಲಿ ನಾನೇ ಕರೆದುಕೊಂಡು ಹೋಗಿದ್ದೇನೆ. ಅನೇಕ ಅಧಿಕಾರಿಗಳು ಡಿಮಾನ್‌ಸ್ಟ್ರೇಷನ್ ಮಾಡುತ್ತಿದ್ದ ಪ್ಲಾಟುಗಳ ಹತ್ತಿರವೂ ಕರೆದುಕೊಂಡು ಹೋಗಿದ್ದೇನೆ. ಒಂದೊಂದು ಪ್ಲಾಟನ್ನು ತೋರಿಸಿದ್ದೇನೆ. ಎಷ್ಟರ ಮಟ್ಟಿಗೆ ಬತ್ತದ ಬೆಳೆ ಬೆಳೆದಿದೆ ಎಂಬುದನ್ನು ನೋಡಿದ್ದಾರೆ. ಸ್ವಾತಂತ್ರ ಮುಂಚಿತವಾಗಿ ಹೆಚ್ಚು ಬೆಳೆಯನ್ನು ಬೆಳೆಯುತ್ತಿದ್ದುದು ಈಗ ಕಡಿಮೆಯಾಗಿದೆ. ಇವತ್ತು ಈ ಜಿಲ್ಲೆಯಲ್ಲಿ ಬೆಳೆಯುತ್ತಿರುವುದಕ್ಕಿಂತ ಹೆಚ್ಚಿನ ಉತ್ತಮ ಮಟ್ಟದಲ್ಲಿ ಹಿಂದೆ ಬೆಳೆಯುತ್ತಿದ್ದರು ಈ ಯೋಜನೆಗೆ ಮುಂಚೆ ವ್ಯವಸಾಯವನ್ನು ಸಹ ಬಹಳ ಚೆನ್ನಾಗಿ ಮಾಡುತ್ತಿದ್ದರು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಈ ಯೋಜನೆಯಿಂದ ಅಲ್ಲಿನ ರೈತರು ವ್ಯವಸಾಯ ಮಾಡುವುದನ್ನು ಕಲತಿರ

ಲಿಲ್ಲ. ಈ ಯೋಜನೆಯಿಂದ ಮಂಡ್ಯಾದ 1 ಲಕ್ಷದ 25 ಸಾವಿರ ಎಕರೆ ತರೀ ಜಮೀನಿನಲ್ಲಿ ಎಷ್ಟರ ಮಟ್ಟಿಗೆ ಉತ್ಪತ್ತಿ ಜಾಸ್ತಿಯಾಗಿದೆ ಎಂಬುವಾಗಿ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಉತ್ಪತ್ತಿ ಯಾವ ರೀತಿ ಜಾಸ್ತಿ ಮಾಡಬೇಕೆಂಬ ಬಗ್ಗೆ ಸರ್ಕಾರ ತೀವ್ರ ಗಮನಿಸಬೇಕು. ಮೊದಲು ರೈತನಿಗೆ ಬೇಕಾದ ಬುಲ್‌ಡೋಜರುಗಳನ್ನು ಗೊಬ್ಬರ ಮತ್ತು ಬೀಜಗಳನ್ನು ಪ್ಯಾಕೇಜ್‌ಡೀಲ್ ಪ್ರೋಗ್ರಾಂನಿಂದ ಕೊಡಬೇಕೆಂದು ಇಂಡಿಯಾ ಸರ್ಕಾರದವರು 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ದನಕರುಗಳನ್ನು ಕೊಂಡುಕೊಳ್ಳಲಿಕ್ಕೆ ನೇಗಿಲು, ಗೊಬ್ಬರ ಮುಂತಾದುವನ್ನು ಕೊಂಡುಕೊಳ್ಳಲಿಕ್ಕೆ ಹಣ ಸಹಾಯವನ್ನು ರೈತನ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗಿ ಕೊಡುವ ವ್ಯವಸ್ಥೆ ಮಾಡಬೇಕು. ಅಲ್ಲದೆ ಅವನಿಗೆ ಇರುವ ಜಡತ್ವವನ್ನು ಹೋಗಲಾಡಿಸಿ ಆಹಾರೋತ್ಪತ್ತಿಯನ್ನು ಹೆಚ್ಚು ಬೆಳೆಯುವ ಹಾಗೆ ಪ್ರೋತ್ಸಾಹ ಕೊಡಬೇಕು. ಈ ಯೋಜನೆ ಯಶಸ್ವಿಯಾಗಬೇಕಾದರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ತೋರಿಸುತ್ತಿರುವ ಬಹಳ ಉದಾಸೀನ ಮನೋಭಾವ ಕೂಡಲೇ ತೊಲಗಬೇಕು. ಈ ಮಾತನ್ನು ಬಹಳ ವಿಷಾದದಿಂದ ನಾನು ಹೇಳುತ್ತೇನೆ. ಮತ್ತೊಂದು ವಿಷಯ ಈ ಇಲಾಖೆಗೆ ಸಂಬಂಧಪಟ್ಟ ಮುಖ್ಯಾಧಿಕಾರಿಗಳು ಯಾರು ಇದ್ದಾರೋ ಅವರ ಪರಿಚಯ ನನಗಿಲ್ಲ. ವೈಯುಕ್ತಿಕವಾಗಿ ನನಗೆ ಅವರಮೇಲೆ ಏನೂ ದ್ವೇಷವಿಲ್ಲ. ಈ ಯೋಜನೆ ಮುಖ್ಯವಾಗಿ ಒಂದು ಜಿಲ್ಲೆಯ ಜನರ ಭವಿಷ್ಯವನ್ನು ಬದಲಾಯಿಸುವುದು ಆಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ಈ ಜಿಲ್ಲೆಗೆ ಎಷ್ಟು ಹಣವನ್ನು ಸಾಲಕೊಡುತ್ತಿದ್ದೆವೋ ಅದಕ್ಕಿಂತ ಡಬ್ಬಲ್ಲಾಗಿ ಈಗ ಕೊಡುತ್ತಿದ್ದೇವೆ.

ಶ್ರೀ ಜಿ. ಮಾನೇಗೌಡ.—ಪ್ಯಾಕೇಜ್‌ಡೀಲ್ ಪ್ರೋಗ್ರಾಂ ಈ ಜಿಲ್ಲೆಯಲ್ಲಿ ಬಂದ ಅವಧಿಯಲ್ಲಿ ಹೇಳತಕ್ಕ ಮಾತು ಇದು. ಅದನ್ನೇ ನಾನು ಹೇಳುತ್ತೇನೆ. ಒಟ್ಟಿನಲ್ಲಿ ಈ ಯೋಜನೆಯಲ್ಲಿ ಮಂಡ್ಯಾ ಜಿಲ್ಲೆಯಲ್ಲಿ ಆಹಾರೋತ್ಪನ್ನವೇನೂ ಜಾಸ್ತಿಯಾಗುತ್ತಾ ಇಲ್ಲ. ಈ ಯೋಜನೆ ಅನೇಕ ರೈತರನ್ನು ತುಂಬಾ ಸಾಲಗಾರರನ್ನಾಗಿ ಮಾಡಿದೆ ಎಂದು ನಾನು ಹೇಳಬಹುದು. ಏಕೆಂದರೆ ಈ ಯೋಜನೆಯ ಉನ್ನತ ಅಧಿಕಾರಿಗಳ ಉದಾಸೀನ ಮನೋಭಾವನೆಯೇ ಮುಖ್ಯ ಕಾರಣ. ನಾನು ಒಂದು ಸಾರಿ ಈ ಪ್ಯಾಕೇಜ್‌ಡೀಲ್ ಪ್ರೋಗ್ರಾಂನಿಂದ ಈ ಜಿಲ್ಲೆಗೆ ಉಪಯೋಗ ಹೆಚ್ಚಾಗಿದೆ ಎಂಬುದು ಬರೀ ಪೇಪರ್ ನಲ್ಲಿದೆಯೇ ಹೊರತು ಕಾರ್ಯತಃ ಪ್ರಯೋಜನವೇನೂ ಆಗಿಲ್ಲವೆಂದು ಮುಖ್ಯಮಂತ್ರಿಗಳಿಗೆ ಹೇಳಿದೆ. ಅವರು ನಮ್ಮ ಜಿಲ್ಲೆಗೆ ಓಡಿ ಬಂದರು. ವ್ಯವಸಾಯ ಮಂತ್ರಿಗಳೂ ಓಡಿ ಬಂದರು. ಮುಖ್ಯಾಧಿಕಾರಿ ಯಾರು ಇದ್ದಾರೋ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಒಂದು ಜಿಲ್ಲೆಯ ಜನಗಳ ಭವಿಷ್ಯವನ್ನು ನಿರ್ಧರಿಸುವ ಯೋಜನೆ ಮತ್ತು ಜನಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಯೋಜನೆಯನ್ನು ಒಂದು ಜಿಲ್ಲೆಯಲ್ಲಿ ಕೈ ಕೊಂಡಿರುವಾಗ ಒಬ್ಬ ಮುಖ್ಯಾಧಿಕಾರಿ ಇವತ್ತಿನವರೆಗೂ ಅಲ್ಲಿಗೆ ಕಾಲು ಇಟ್ಟಿಲ್ಲವೆಂದರೆ ಬಹಳ ಶೋಚನೀಯವಾದ ಪರಿಸ್ಥಿತಿ ಎಂದು ನಾನು ಹೇಳಬೇಕಾಗಿದೆ. ಈ ವಿಷಯದಲ್ಲಿ ಸರ್ಕಾರದವರು ಒಂದು ನಿಮಿಷ ಕೂಡ ಯೋಚನೆ ಮಾಡಲಿಲ್ಲ. ಎಲ್ಲೋ ತಮ್ಮ ಬುದ್ಧಿಯನ್ನು ಓಡಿಸಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ.

ಈ ಸಂದರ್ಭದಲ್ಲಿ ಮಾನ್ಯ ವ್ಯವಸಾಯ ಮಂತ್ರಿಗಳನ್ನು ಕೇಳುತ್ತೇನೆ, ಈ ಬಗ್ಗೆ ಅವರ ವಿವರಣೆಯನ್ನು ಕೇಳಬೇಕಾಗಿದೆ. ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಎಷ್ಟು ಬೆಳೆಯಬಹುದೆಂದಿದ್ದಾರೆ, ಬೆಳೆಯುವವರಿಗೇನ ಸೌಲಭ್ಯಕೊಟ್ಟಿದ್ದಾರೆ ಎಂಬುದನ್ನು ಹೇಳಬೇಕು. ಆಧುನಿಕ ವ್ಯವಸಾಯೋಪಕರಣಗಳನ್ನು ತಯಾರುಮಾಡುವ ಇಂಪ್ಲಿಮೆಂಟ್ ಫ್ಯಾಕ್ಟರಿಯನ್ನು ಸ್ಥಾಪನೆಮಾಡಲು ಮಂಡ್ಯದಲ್ಲಿ ಅವಕಾಶವಿದೆ. ನಮ್ಮ ರೈತರು ಇನ್ನೂ ಹಳೆಯ ಕಾಲದ ಗುದ್ದಲಿ, ಹಳೆಯ ಕಾಲದ ನೇಗಿಲು ಇಂಥವುಗಳನ್ನೇ ಉಪಯೋಗಿಸುತ್ತಿದ್ದಾರೆ. ಆದಕಾರಣ ಆಧುನಿಕ ಉಪಕರಣಗಳ ಕಾರ್ಖಾನೆಯನ್ನು ಮಾಡಬೇಕೆಂದು ಕೇಳಿದ್ದೇನೆ. ಅವಕ್ಕೆ ಇನ್ನೂ ಜಾಗಸಿಕ್ಕಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಎಂದು ಹೇಳಿದರು. ಇದು ಐದು ವರ್ಷದ ಯೋಜನೆ, ತಲೆತಲಾಂತರದ ಯೋಜನೆಯಲ್ಲವೆಂದು ನಾನು ವ್ಯವಸಾಯ ಸಚಿವರಿಗೆ ಎಚ್ಚರಿಕೆ ಕೊಟ್ಟು ಹೇಳುತ್ತಿದ್ದೇನೆ. ಇನ್ನು ನಾಲ್ಕುವರ್ಷದ ಅವಧಿ ಇದೆ. ಇದು ಅವರ ಮತ್ತು ನಮ್ಮ ಗೌರವವನ್ನು ಕಾಪಾಡತಕ್ಕ ಯೋಜನೆ ದೇಶದ ಭವಿಷ್ಯವನ್ನು, ಇಡೀ ದೇಶದ ಆರ್ಥಿಕಸ್ಥಿತಿಯನ್ನು ಹೆಚ್ಚಿಸತಕ್ಕ ಪ್ರಶ್ನೆಯನ್ನೊಳಗೊಂಡಿರುವ ಪ್ರಶ್ನೆ. ಇದರ ಬಗ್ಗೆ ಉದಾಸೀನ ಮಾಡಬಾರದು. ಯಾವ ಅಧಿಕಾರಿಗಳು ಉದಾಸೀನ ಮಾಡಿದ್ದಾರೋ ಅವರ explanation ಕರೆಯಬೇಕು, ಅವರಿಗೆ ಸರಿಯಾದ ಶಿಕ್ಷೆಯನ್ನು ಕೊಡಬೇಕು. ಇಲ್ಲವಿದ್ದರೆ ಸರ್ಕಾರಕ್ಕಾಗಲೀ ನಮಗಾಗಲೀ ಗೌರವ ಬರುವುದಿಲ್ಲ. ಇಡೀ ದೇಶವೇ ಮಂಡ್ಯ ಜಿಲ್ಲೆಯನ್ನು ನೋಡುತ್ತಿದೆ. ಸರ್ಕಾರದವರು ಏನು ಉದ್ದೇಶದಿಂದ ಪರೀಕ್ಷಾಕೇಂದ್ರವಾಗಿ ಮಾಡಬೇಕೆಂದು ಮಂಡ್ಯ ಜಿಲ್ಲೆಯಲ್ಲಿ ಮಾಡಿದ್ದಾರೆಂದರೆ, ಅದನ್ನು ನೋಡಿ ಪಕ್ಕದ ರೈತರು ಕಲಿತುಕೊಂಡು ಬರಬೇಕೆಂದು ಮಾಡಿದ್ದಾರೆ

(ಶ್ರೀ ಜಿ. ಮಾದೇಗೌಡ)

ನಿಜವಾಗಿಯೂ ಈ ಯೋಜನೆ ಅಲ್ಲ ಅದು ಯಶಸ್ವಿಯಾಗುವುದಿಲ್ಲವೆಂದು ಹೇಳುತ್ತಾರೆ. ಈಗಲಾದರೂ ಕಾಲಮಿಂಚಿಹೋಗಿಲ್ಲ. ಈ ಪ್ರಶ್ನೆ ದೇಶದ ಭವಿಷ್ಯ, ದೇಶದ ಆರ್ಥಿಕ ಸ್ಥಿತಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತೇನೆ.

ಎರಡನೆಯದಾಗಿ, ಸಹಕಾರ ಸಂಘಗಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ Package plan ವ್ಯರ್ಥವೆ ?

ಶ್ರೀ ಜಿ. ನಾರಾಯಣ ಗೌಡ.—ಮಾನ್ಯ ಸದಸ್ಯರು ಹೋದ ವರ್ಷದ ಉತ್ಪತ್ತಿ ಎಷ್ಟು, ಈ ವರ್ಷದ ಉತ್ಪತ್ತಿ ಎಷ್ಟು ಎನ್ನುವುದನ್ನು ಹೇಳಬಲ್ಲರೆ ? ಅವರಲ್ಲ ಅಂಕಿ ಅಂಶಗಳಿವೆಯೆ ?

ಶ್ರೀ ಜಿ. ಮಾದೇ ಗೌಡ.—ನನ್ನಲ್ಲಿಲ್ಲ, ನಿಮಗೇ ಗೊತ್ತಿದೆ.

ಶ್ರೀ ಜಿ. ನಾರಾಯಣ ಗೌಡ.—ಸರಿಯಾಗಿ ತಿಳಿಯದೆ ಹೇಗೆ ಹೇಳುತ್ತಾರೆ.

ಶ್ರೀ ಜಿ. ಮಾದೇ ಗೌಡ.—ನಾನು ರೈತ. ಹೊರಗಿನಿಂದ ಬಂದ ಜನ, ತಣ್ಣೀ ಜಮೀನಿಲ್ಲದಿರುವ ಸ್ಥಳದಿಂದ ಬಂದ ಜನರು ಚೆನ್ನಾಗಿದೆ ಎಂದು ಹೇಳಬಹುದು. ಆದರೆ ಮೂವತ್ತು ವರ್ಷದಿಂದ ವ್ಯವಸಾಯಮಾಡಿರತಕ್ಕ ಜನ ನಾವು ಮಂಡ್ಯ ಜಿಲ್ಲೆಯಲ್ಲಿ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಬೆಳೆ ಹೇಗಿವೆ, ಪ್ಯಾಕೇಜ್‌ಡೀಲ್ ಹೇಗಿದೆ ಎನ್ನುವುದನ್ನು ನೋಡಿಕೊಂಡು ಬಂದಿರುವ ಜನ ನಾವು. ಇದಕ್ಕೆ ಶ್ರೀಮಾನ್ ನಾರಾಯಣ ಗೌಡರು ವಿವರಣೆ ಕೊಡಬೇಕು. ಬಡ್ಜೆಟ್‌ನಲ್ಲಿ ಹಣವನ್ನೊದಗಿಸಿದೆ ಅಧಿಕಾರಿಗಳನ್ನು ಪೋಸ್ಟ್‌ಮಾಡಿಲ್ಲ. Implement Factory ಮಾಡಿಲ್ಲ. ಬುಲ್‌ಡೋಜರ್ಸ್ ಇನ್ನೂ ಕೊಟ್ಟಿಲ್ಲ. ಹೀಗಿರುವಾಗ ಹೇಗೆ ರೈತರನ್ನು ಉದ್ಧಾರ ಮಾಡುತ್ತಾರೆ ? ಅವರು ಉತ್ತರವನ್ನು ನನಗೆ ಹೇಳಬೇಕು.

ಸಹಕಾರ ಸಂಘಗಳ ವಿಷಯದಲ್ಲಿ ಒಂದುಮಾತು ಹೇಳಬೇಕಾಗಿದೆ. ಸಾಧಾರಣವಾಗಿ ಸಹಕಾರ ಸಂಘಗಳ ಮೇಲೆ ದೇಶ ಬೆಳೆಯಬೇಕೆಂಬ ತತ್ವವನ್ನೊಪ್ಪಿದ್ದಾರೆ. ಈ ಸಹಕಾರ ಸಂಘಗಳು ರೈತರಿಗೆ ಧೈರ್ಯವನ್ನು ತಂದುಕೊಟ್ಟಿವೆ, ಉತ್ಸಾಹವನ್ನು ಕೊಟ್ಟಿವೆ. ಹಳ್ಳಿಗಾಡಿನ ಜನರಿಗೆ ಈ ದೇಶದಲ್ಲಿ ನಾವು ಜೀವನ ಮಾಡಬಹುದೆಂಬ ಧೈರ್ಯ ಮತ್ತು ಶಕ್ತಿಯನ್ನು ಕೊಟ್ಟಿವೆ. ಪ್ರತಿಯೊಂದು ಪಂಚಾಯಿತಿಗೂ ಒಂದೊಂದು ಸಹಕಾರ ಸಂಘವಿರಬೇಕೆಂಬ ತತ್ವವನ್ನೊಪ್ಪಿಕೊಂಡಿದ್ದೇವೆ. ಇದರಲ್ಲಿ ಒಂದು ನ್ಯೂನತೆ ನನಗೆ ಕಾಣುತ್ತದೆ. ರೈತರಲ್ಲಿ ಸಾಮಾನ್ಯವಾಗಿ ಈ ಸಹಕಾರ ಸಂಘಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ಅನೇಕಸದಸ್ಯರು ಹೇಳಿದ್ದಾರೆ. ಇದಕ್ಕೆ ಮುಖ್ಯಕಾರಣ ಸೆಕ್ರೆಟರಿಗಳೂ ಡೈರೆಕ್ಟರುಗಳೂ ಸರಿಯಾಗಿರುವುದಿಲ್ಲ. ಸರ್ಕಾರದವರು ಸಂಬಳ ಪಡೆಯುವ ಸೆಕ್ರೆಟರಿ ಎಂದು ಏನು ಮಾಡಿದ್ದಾರೋ ಅವರನ್ನು ಸರ್ಕಾರದ ನೌಕರರಾಗಿ ಮಾಡಿಕೊಳ್ಳಬೇಕು. ನೌಕರರಿಗಿರುವ ರಿಕ್ರೂಟ್‌ಮೆಂಟ್ ರೂಲ್ಸ್ ಇವರಿಗೂ ಅನ್ವಯಿಸಬೇಕು. ಇತರ ಸರ್ಕಾರಿ ನೌಕರರಂತೆ ಇವರನ್ನೂ ಒಂದು ಸಹಕಾರ ಸಂಘದಿಂದ ಇನ್ನೊಂದಕ್ಕೆ ವರ್ಗ ಮಾಡತಕ್ಕ ಅವಕಾಶವಿರಬೇಕು. ಇಲ್ಲದಿದ್ದರೆ ಈ ಸಹಕಾರ ಸಂಘಗಳು ಸರಿಯಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

†ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೆ, ಈ ದಿವಸ ನಮ್ಮ ಮುಂದೆ ಸರ್ಕಾರದವರು ಅತಿಮುಖ್ಯವಾದ ಹಲವು ಬೇಡಿಕೆಗಳನ್ನಿಟ್ಟಿದ್ದಾರೆ. ಅದರಲ್ಲಿಯೂ ವ್ಯವಸಾಯ ಬಹುಮುಖ್ಯವಾದದ್ದು. ದೇಶದಲ್ಲಿ ಶೇಕಡ 70-80 ಜನರು ವ್ಯವಸಾಯ ವೃತ್ತಿಯಿಂದಜೀವನವನ್ನು ಜರುಗಿಸುತ್ತಿದ್ದಾರೆ. ನಮ್ಮ ದೇಶ ಮುಂದುವರಿದಿದೆ,ಪ್ರಗತಿ ಸಾಧಿಸಿದೆ, ಜನತೆಗೆ ಬೇಕಾದ ಜೀವನದ ವಸ್ತುಗಳು ದೊರಕಿವೆ ಎಂದು ಹೇಳುವುದಾದರೆ, ಇವು ಎಷ್ಟರಮಟ್ಟಿಗೆ ದೊರಕಿವೆ ಎಂದು ಅಳತೆ ಮಾಡಬೇಕೆಂದರೆ, ಹಳ್ಳಿಗಳಿಗೆ ಹೋಗಬೇಕು. ಹಣಕಾಸಿನ ಮಂತ್ರಿಗಳು ನಮ್ಮ ಮುಂದೆ ಬಡ್ಜೆಟ್ ಇಟ್ಟಾಗ ದೇಶದಲ್ಲಿ *per capita* income ಹೆಚ್ಚಾಗಿದೆ ಎಂದು ಹೇಳಿದರು. ಇಡೀ ಭಾರತದಲ್ಲಿ ಈ ಹೊತ್ತು ಜಾಸ್ತಿಯಾಗಿರುವ ಉತ್ಪತ್ತಿಯನ್ನು ಗಣನೆಗೆ ತೆಗೆದುಕೊಂಡು ಒಬ್ಬ ವ್ಯಕ್ತಿಗೆ, ಸಂಸಾರಕ್ಕೆ ಇಷ್ಟು ಎಂದುಲೆಕ್ಕಹಾಕಿದ್ದಾರೆ. ಈ ಹೆಚ್ಚಿನ ವರಮಾನ ಯಾವ ವರ್ಗಕ್ಕೆ, ಯಾವ ಜನರಿಗೆ ತಲುಪಿದೆ, ಯಾವ ಕಸುಬನ್ನು ಮಾಡುವ ಜನರಿಗೆ ತಲುಪಿದೆ ಎಂದು ನೋಡಿದರೆ, ಇದು ಹಳ್ಳಿಯವರಿಗೆ ತಲುಪಿಲ್ಲ. ಹಳ್ಳಿಯವರು ಎಷ್ಟು ದುಡಿದರೂ ಅರ್ಧ ಹೊಟ್ಟೆಗೆ ಸಾಲದು, ಜೀವನವನ್ನು ಸಾಗಿಸುವುದಕ್ಕೆ ಶಕ್ಯವಿಲ್ಲವಾಗಿದೆ. ಹಳ್ಳಿಗಳಿಗೆ ಅನೇಕ ಸೌಲಭ್ಯಗಳನ್ನು ಕೊಟ್ಟಿದ್ದೇವೆ, ಕೆರೆಗಳನ್ನು ಬಾವಿಗಳನ್ನು ಕಟ್ಟಿಸಿದ್ದೇವೆ, ಪಂಪ್‌ಸೆಟ್‌ಗಳನ್ನು ಕೊಡುತ್ತಿದ್ದೇವೆ, ಹಾಗೆಯೇ ಅನುಕೂಲಗಳನ್ನು ಸರ್ಕಾರದಿಂದ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ವಾಸ್ತವವಾಗಿ ಖರ್ಚು ಮಾಡುತ್ತಿದ್ದಾರೆ, ದೊಡ್ಡ ದೊಡ್ಡ ಅಣೆಗಳನ್ನು ಕಟ್ಟುತ್ತಿದ್ದಾರೆ, ನೀರಾವರಿ

ಯನ್ನು ಹೆಚ್ಚುಮಾಡಬೇಕೆಂದು ಹೋಗುತ್ತಿದ್ದಾರೆ. ಇಷ್ಟಾದರೂ ಹಳ್ಳಿಗರ ಜೀವನ ಒಂದೇರೀತಿ ಇದೆ. ಓಬೀರಾಯನ ಕಾಲದಲ್ಲಿ ಹೇಗೆ ಕಷ್ಟದಲ್ಲಿ ಜೀವನ ನಡೆಸುತ್ತಿದ್ದರೋ ಹಾಗೆಯೇ ಈಗಲೂ ನಡೆಸುತ್ತಿದ್ದಾರೆ. ಇದಕ್ಕೆ ಕಾರಣ ವ್ಯವಸಾಯದಲ್ಲಿ ಉತ್ಪತ್ತಿ ಕಡಮೆಯಾಗಿದೆ. Extensive cultivation ಆಗಿದೆ. ತುಂಗಭದ್ರ ಮುಂತಾದ ದೊಡ್ಡ ದೊಡ್ಡ ಜಲಾಶಯಗಳ ಕೆಳಗೆ ಹೆಚ್ಚು ವಿಸ್ತೀರ್ಣದಲ್ಲಿ ಬೆಳೆಯಾಗುತ್ತಿದೆ. ಆದರೆ ಒಂದು ಎಕರೆಯಲ್ಲಿ ಎಷ್ಟು ಉತ್ಪತ್ತಿಯಾಗುತ್ತಿದೆ ಎನ್ನುವುದನ್ನು ಲೆಕ್ಕಹಾಕಿದರೆ, ಕಡಮೆಯಾಗಿದೆ. ಹೀಗೆ ಕಡಮೆಯಾಗಲು ಕಾರಣವೇನೆಂದು ತಿಳಿದುಕೊಳ್ಳಬೇಕು.

6-00 P.M.

ಇವತ್ತು ನಮ್ಮಲ್ಲಿ ಅನೇಕರನ್ನು ಜಪಾನಿಗೆ, ಪಾಶ್ಚಾತ್ಯ ದೇಶಗಳಿಗೆ ಕಳುಹಿಸುತ್ತಿದ್ದಾರೆ. ಅವರು ಅಲ್ಲಿ ಹೇಗಿದೆ ಎಂದು ನೋಡಿಕೊಂಡು ಬರುತ್ತಾರೆ. ಆದರೆ ಅವರಿಂದ ನಮಗೆ ಸಾಕಾದಷ್ಟು ಪ್ರಯೋಜನ ಲಭಿಸುತ್ತಿಲ್ಲ. ಈ ದಿವಸ ನಮ್ಮ ದೇಶ ವ್ಯವಸಾಯವನ್ನು ಪ್ರಧಾನವಾಗಿ ಅವಲಂಬಿಸಿರುವುದರಿಂದ ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟು ರೈತರನ್ನು ಉದ್ಧಾರ ಮಾಡಬೇಕು, ಅವರಿಗೆ ನೆರವು ಕೊಡಬೇಕು, ಜನರ ಜೀವನ ಸುಖಮಯವಾಗಿ ಮಾಡಬೇಕು ಎಂಬ ಉದ್ದೇಶ ಸರಕಾರಕ್ಕಿದೆ. ಆದರೆ ಸರ್ಕಾರ ನೀಡುವ ನೆರವು ಯಾವರೀತಿ ಬೇಕಾದವರಿಗೆ, ಅರ್ಹರಿಗೆ ದೊರೆಯುತ್ತಿದೆ ಎಂದು ಯೋಚನೆ ಮಾಡಬೇಕು. ರೈತ ಈ ದಿವಸ ಜಮೀನನ್ನು ಉಳುತ್ತಾನೆ, ಬೆಳೆ ತೆಗೆಯುತ್ತಾನೆ. ಆದರೆ ವ್ಯವಸಾಯದ ಇಲಾಖೆಯವರು ಇಂಥ ಭೂಮಿಯಲ್ಲಿ ಇಂಥ ಬೆಳೆ ತೆಗೆಯಬೇಕು, ಇಂಥ ಸಾಗು ಕಡಮೆ ಅದಕ್ಕೆ ಹೀಗೆ ಮಾಡಬೇಕು ಎಂದು ಹೇಳುತ್ತಿಲ್ಲ. ಈಗ ಕೆಲವರು ಒಂದು ಎಕರೆಯಲ್ಲಿ 4 ಪಲ್ಲ ಬತ್ತ ಬೆಳೆದರೆ ಮತ್ತೆ ಕೆಲವರು 30 ಪಲ್ಲ ಬೆಳೆಯುತ್ತಾರೆ. ಆದರೆ ಅದಕ್ಕೇನು ಕಾರಣ, ಬೆಳೆಯಲು ರೈತನಿಗೆ ಶಕ್ತಿಯಿಲ್ಲವೆ, ಅಥವಾ ಆ ಜಮೀನು ಬತ್ತ ಬೆಳೆಯಲು ಯೋಗ್ಯವಲ್ಲವೆ, ಅಥವಾ ಅದಕ್ಕೇನು ಹಾಕಿದರೆ ಹೆಚ್ಚು ಬೆಳೆಯಬಹುದು ಎಂಬುದನ್ನು ಇಲಾಖೆಯವರು ಪರಿಶೀಲಿಸಿ ತಿಳಿಸಬೇಕು. ಈಗ ಸುಮ್ಮನೆ ಉಪ್ಪು, ಸಲ್ಫೇಟ್ ಮುಂತಾದ್ದನ್ನು ಕೊಡುತ್ತಿದ್ದಾರೆ. ಅದು ಸಾಲದು. ರೈತರಿಗೆ ಯಾವ ಜಮೀನಿನಲ್ಲಿ ಏನು ಬೆಳೆಯುವುದು ಒಳ್ಳೆಯದು, ಹೆಚ್ಚು ಬೆಳೆಯಲು ಏನು ಮಾಡಬೇಕು ಎಂಬ ಬಗ್ಗೆ ತಿಳಿವಳಿಕೆ ಕೊಡಬೇಕಾದ್ದು ಅತ್ಯಾವಶ್ಯಕ. ಸಾಯಿಲ್ ಕನ್ಸರ್ವೇಷನ್ ಕಡೆಗೆ ಹೆಚ್ಚು ಗಮನ ಕೊಟ್ಟು ನಾನು ಸೂಚಿಸಿದಂತೆ ರೈತರಿಗೆ ಸರಿಯಾದ ತಿಳಿವಳಿಕೆಯನ್ನು ಈ ವಿಚಾರದಲ್ಲಿ ನೀಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಇನ್ನೊಂದು ಈ ದಿವಸ ಮುಖ್ಯವಾಗಿ ಸೊಸೈಟಿಯಲ್ಲಿ ಉಪ್ಪು ಸಿಕ್ಕುವುದಿಲ್ಲ, ಸೂಪರ್ ಫಾಸ್ಫೇಟ್ ಸಿಕ್ಕುವುದಿಲ್ಲ ಎಂದು ಅನೇಕರು ಹೇಳಿದ್ದಾರೆ. ಆದರೆ ಸೊಸೈಟಿಯಿಂದ ದೊರೆಯುವ ಉಪ್ಪಿಗೆ ಹೆಚ್ಚು ಪ್ರಾಧಾನ್ಯತೆ ಕೊಡಬಾರದು ಎಂದು ರೈತನಾಗಿ ನಾನು ಹೇಳುತ್ತೇನೆ. ಉಪ್ಪು ಈ ದಿವಸವಿಲ್ಲದಿದ್ದರೆ ನಾಳೆಯಾದರೂ ಸಿಕ್ಕುತ್ತದೆ. ಆದರೆ ನಿಜವಾದ ತೊಂದರೆಯೇನಿದೆ ಎಂಬುದನ್ನು ಮನಗಾಣಬೇಕಾದ್ದು ಅವಶ್ಯಕ. ಸಾವಿರಾರು ವರ್ಷಗಳಿಂದ ಭೂಮಿಯಲ್ಲಿ ಬೆಳೆ ಬೆಳೆಯುತ್ತಿದ್ದಾರೆ. ಸಾಲದ್ದಕ್ಕೆ ಈಚೆಗೆ ಉಪ್ಪು ಹಾಕುತ್ತಿದ್ದೇವೆ. ಆದುದರಿಂದ ಭೂಮಿಯ ಸಾರ ಕಡಮೆಯಾಗಿದೆ. ಅದಕ್ಕಾಗಿ ಆರ್ಗ್ಯಾನಿಕ್ ವಸ್ತುವನ್ನು, ಪಶುಗಳ ಗೊಬ್ಬರವನ್ನು ಹಾಕಬೇಕು. ಅವನ್ನು ಈಗ ಅಷ್ಟಾಗಿ ಉಪಯೋಗಿಸುತ್ತಿಲ್ಲ. ಸಗಣಿಯನ್ನು ಭೂಮಿಗೆ ಹಾಕಬೇಕು. ರಾಗಿ, ಅಕ್ಕಿ ಈ ದಿವಸ ಬೆಳೆಯುವುದು ಸಗಣಿಯಲ್ಲಿ ಎಂದು ಹೇಳುವುದುಂಟು. ಅದರಲ್ಲಿ ಆರ್ಗ್ಯಾನಿಕ್ ವಸ್ತುವಿದೆ. ಅದನ್ನು ಉಪಯೋಗಿಸುವುದು ಒಳ್ಳೆಯದು. ಈಗ ಕೆಮಿಕಲ್ ಮೆನ್ಯೂರ್ ಭೂಮಿಗೆ ಹಾಕುತ್ತಿರುವುದರಿಂದ ಭೂಮಿ ಕೆಡುತ್ತಿದೆ. ಪೈರು ಸರಿಯಾಗಿ ಬೇರು ಬಿಡಲು ಅವಕಾಶವಿಲ್ಲದಂತಾಗಿದೆ. ಇದನ್ನು ವ್ಯವಸಾಯದ ಇಲಾಖೆಯವರು ಪರಿಶೀಲಿಸಿ ರೈತರಿಗೆ ಸರಿಯಾದ ತಿಳುವಳಿಕೆ ಕೊಡಬೇಕು. ನಮ್ಮ ಕಡೆ ಹೊಗೆಸೊಪ್ಪು, ಮೆಣಸಿನಕಾಯಿ, ಕಬ್ಬು ಮುಂತಾದ್ದನ್ನು ಬೆಳೆಯುತ್ತಾರೆ. ಒಂದು ಬೆಳೆ ತೆಗೆದ ಮೇಲೆ ಬೇರೆ ಯಾವ ಬೆಳೆ ಇಡಬೇಕೆಂಬುದನ್ನು ತಿಳಿಸಬೇಕು. ಅಲ್ಲದೆ ಅನೇಕ ರೋಗಗಳು ಈ ದಿವಸ ಬರುತ್ತಿವೆ. ನಮ್ಮ ಕಡೆ ಅಂದರೆ ಗೌರೀಬಿದನೂರು ತಾಲ್ಲೂಕಿನಲ್ಲಿ ವರ್ಜಿನಿಯ ಟೊಬ್ಯಾಕೊ ಬೆಳೆಯುತ್ತಾರೆ. ಅದಕ್ಕೆ ಬೂದಿರೋಗ ಬರುತ್ತದೆ. ವ್ಯವಸಾಯದ ಇಲಾಖೆ ಸಂಶೋಧನೆ ಮಾಡಿ ಆ ರೋಗಕ್ಕೆ ಔಷಧಿ ಕಂಡು ಹಿಡಿದಿಲ್ಲ. ವ್ಯವಸಾಯದ ಇಲಾಖೆಯು ಸಂಶೋಧನೆಗೆ ಹೆಚ್ಚು ಗಮನ ಕೊಡಬೇಕು. ಮೊನ್ನೆ ಮಂತ್ರಿಗಳು ಈ ಸಂಬಂಧದಲ್ಲಿ ಒಂದು ಯೂನಿವರ್ಸಿಟಿ ಸ್ಥಾಪಿಸುತ್ತೇವೆಂದು ಹೇಳಿದರು. ಅಂಥ ಯೂನಿವರ್ಸಿಟಿಯಲ್ಲಿ ಬರೀ ಗೊಬ್ಬರ ಮುಂತಾದುವುಗಳ ಸರಬರಾಜಿಗೆ ಹೆಚ್ಚು ಗಮನ ಕೊಡದೆ ಸಂಶೋಧನೆಗೆ ಅಧಿಕವಾಗಿ ಖರ್ಚು ಮಾಡಬೇಕು. ಹಾಗೆ ಮಾಡಿ ಹೆಚ್ಚು ಬೆಳೆಯಲು ಅವಕಾಶ ಕಲ್ಪಿಸಿ ಕೊಡಬೇಕು.

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಇನ್ನು ಬೀಜ ಸಕಾಲದಲ್ಲಿ ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಸರ್ಕಾರದಿಂದ ಬೀಜ ತೆಗೆದುಕೊಂಡು ಬೆಳೆಯುವುದು ಸರಿಯಾದ ರೈತ ಮಾಡತಕ್ಕ ಕೆಲಸವಲ್ಲ. ಸರ್ಕಾರದವರು ಇಂಥ ಬತ್ತ ಹಾಕಿದರೆ ಇಷ್ಟು ಜಾಸ್ತಿ ಬೆಳೆ ಬರುತ್ತದೆ, ನೀರು ಕಡಮೆಯಾದರೂ ಪರವಾಗಿಲ್ಲ ಎಂದು ಹೊಸ ಸಂಶೋಧನೆ ನಡೆಸಿ ತಿಳಿಸಿದರೆ ಅನುಕೂಲವೇ ಹೊರತು ಬರೀ ಬೀಜ ಕೊಟ್ಟರೆ ಅಷ್ಟು ಪ್ರಯೋಜನವಿಲ್ಲ. ರೈತರಿಗೆ ಬೀಜ ಎಲ್ಲಾದರೂ ಸಿಕ್ಕುತ್ತದೆ. ಇಲಾಖೆ ಬೀಜ ಒದಗಿಸುವುದು ಖಂಡಿತ ಸಾಧ್ಯವಲ್ಲ. ಅದು ಬರೀ ಸಂಶೋಧನೆ ಮಾಡಿ ಹೆಚ್ಚು ಉತ್ಪತ್ತಿ ಮಾಡಲು ಸೂಕ್ತ ಸಲಹೆ ನೀಡಬೇಕು. ಬೀಜ ಒದಗಿಸದಿದ್ದರೆ ನಷ್ಟವಿಲ್ಲ, ಅನಾನುಕೂಲವಿಲ್ಲ.

ಈಗ ಮಾಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಯುವುದಕ್ಕೆ ಎಕ್ಸೈಜ್ ಸುಂಕ ಹಾಕುತ್ತಿದ್ದಾರೆ. ಅದೇ ರೀತಿ ಗೌರೀಬಿದನೂರು ತಾಲ್ಲೂಕಿನಲ್ಲಿ ವರ್ಜಿನಿಯಾ ಟೊಬ್ಯಾಕೊ ಹೆಚ್ಚಾಗಿ ಬೆಳೆಯುವುದಕ್ಕೆ ಅದೊಂದೇ ತಾಲ್ಲೂಕಿಗೆ 30-40 ಲಕ್ಷ ರೂಪಾಯಿಗಳ ಎಕ್ಸೈಜ್ ಡ್ಯೂಟಿ ಕೇಂದ್ರ ಸರ್ಕಾರದವರು ವಿಧಿಸುತ್ತಿದ್ದಾರೆ. ಅದೇ ಮಂಡ್ಯ ಜಿಲ್ಲೆಯಲ್ಲಿ ಕೇಂದ್ರದವರು ಪಡೆಯುವ ಎಕ್ಸೈಜ್ ಡ್ಯೂಟಿಯ ಸ್ವಲ್ಪ ಭಾಗವನ್ನು ಕಬ್ಬು ಬೆಳೆಯುವ ಪ್ರದೇಶದ ರಸ್ತೆ ಮುಂತಾದುವುಗಳ ಅನುಕೂಲಕ್ಕಾಗಿ ಕೊಡುತ್ತಿದ್ದಾರೆ. ಆದರೆ ಹಾಗೆ ನಮಗೆ ಕೊಟ್ಟಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಕೊಡುತ್ತಿರುವುದು ಎಕ್ಸೈಜ್ ಸುಂಕದಿಂದ ಅಲ್ಲ, ಕೇನ್‌ಸೆಸ್‌ನಿಂದ, ಲೋಕಲ್‌ಸೆಸ್‌ನಿಂದ ಕೊಡಲಾಗುತ್ತಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹೇಗಾದರೂ ಇರಲಿ, ನಾವೂ ಹೆಚ್ಚು ತೆರಿಗೆ ಕೊಡುತ್ತೇವೆ. ನಾವು ಕೊಡುವ ತೆರಿಗೆಯಲ್ಲಿ ಸ್ವಲ್ಪ ಭಾಗವನ್ನಾದರೂ ಹೊಗೆಸೊಪ್ಪನ್ನು ಬೆಳೆಯುವ ಪ್ರದೇಶದ ಅನುಕೂಲಕ್ಕೆ ಒದಗಿಸುವುದು ಅವಶ್ಯಕ.

ಇನ್ನೊಂದು ವಿಚಾರ. ಹೊಗೆಸೊಪ್ಪನ್ನು ಬೆಳೆಯುವವನಿಗೆ ಅದರ ಕಷ್ಟ ಸುಖ, ಅದಕ್ಕೆ ನೆರವು ಏನು ಬೇಕೆಂಬುದು, ಅದರ ಕ್ವಾಲಿಟಿ ಮುಂತಾದ್ದೆಲ್ಲಾ ಗೊತ್ತಿರುತ್ತದೆ. ಇದು ಅನುಭವಸ್ಥರ ಮಾತು. ಅಂಥವರನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಹಾಕಿದರೆ ಅನುಕೂಲ. ಹಾಗೆ ಮಾಡದೆ ಜಾತಿ ಮತಗಳಿಗೆ ಪ್ರಾಧಾನ್ಯತೆ ನೀಡಿ ಬೇಕಾದವರಿಗೆ ಅವಕಾಶ ಕೊಟ್ಟರೆ ಅಂಥವರಿಗೆ ಹೊಗೆಸೊಪ್ಪಿನ ವಿಚಾರ ಖಂಡಿತ ಗೊತ್ತಿರುವುದಿಲ್ಲ. ಬಹುಶಃ ಅವರು ಸಿಗರೇಟು ಸೇದಬಹುದು. ಈಗ ಸರಿಯಾಗಿ ವಿಚಾರ ತಿಳಿಯದವರನ್ನು ಅಖಿಲಭಾರತ ಟೊಬ್ಯಾಕೊ ರಿಸರ್ಚ್ ಇನ್ಸ್ಟಿಟ್ಯೂಟಿಗೆ ಕಳುಹಿಸಿದ್ದಾರೆ. ಅವರಿಗೆ ಬಹುಶಃ ಇಂಗ್ಲಿಷ್ ಕೂಡ ಬಾರದಿರಬಹುದು ಅಂಥವರನ್ನು ಆ ಸಂಸ್ಥೆಗಳಿಗೆ ಹಾಕಿದರೆ ಏನು ಪ್ರಯೋಜನ ! ಅದರಿಂದ ಬಹಳ ತೊಂದರೆಯಾಗುತ್ತದೆ. ಇಂಥ ಒಂದು ಅನ್ಯಾಯಕ್ಕೆ, ಅಧರ್ಮಕ್ಕೆ ಅವಕಾಶ ಕೊಡಬಾರದೆಂದು ಪ್ರಾರ್ಥಿಸುತ್ತೇನೆ. ಎಲ್ಲೇ ಆಗಲಿ ರೈತರ ಪರವಾಗಿ ಯಾರನ್ನಾದರೂ ಸಂಸ್ಥೆಗಳಿಗೆ ಹಾಕುವಾಗ ಅನುಭವಸ್ಥರನ್ನು ಮಾತ್ರ ಹಾಕಬೇಕು, ಇಲ್ಲದಿದ್ದರೆ ಬೇಕಾದ ಸೌಲಭ್ಯ ದೊರೆಯುವುದಿಲ್ಲ, ರೈತರಿಗೆ ಸಹಾಯವಾಗುವುದಿಲ್ಲ. ವ್ಯವಸಾಯಕ್ಕೆ ಅನುಕೂಲವಾಗುವಂತೆ, ದೇಶಕ್ಕೆ ಒಳ್ಳೆಯದಾಗುವಂತೆ ಸರಿಯಾದ ಅನುಭವಿಗಳನ್ನು ಮಾತ್ರ ಹಾಕಬೇಕು ಜಾತಿ ಮತ್ತು ಪ್ರಭಾವಗಳಿಗೆ ಅವಕಾಶ ಕೊಡಬಾರದು ಎಂದು ಪ್ರಾರ್ಥಿಸುತ್ತೇನೆ.

ಆಮೇಲೆ ಸಾಮೂಹಿಕ ವ್ಯವಸಾಯ ಎಂದಿದೆ. ನಮ್ಮ ತಾಲ್ಲೂಕಿನಲ್ಲಿ ವಿದುರಾಶ್ವತ್ಥ ಎಂಬ ಗ್ರಾಮವಿದೆ. ಅಲ್ಲಿ ಒಳ್ಳೆಯ ಜಮೀನು, ಬೇಕಾದಷ್ಟು ನೀರಿನ ಸೌಕರ್ಯ ಇದೆ. ಅಲ್ಲಿನ ಭೂಮಿಯನ್ನು ಗಂಡುಭೂಮಿ ಎಂದು ಹೇಳುವುದುಂಟು. ಅಲ್ಲಿ ಸುಮಾರು ಒಂದುಸಾವಿರ ಎಕರೆಗಳಷ್ಟು ಜಮೀನನ್ನು ಸಾಗುವಳಿಗೆ ಕೊಟ್ಟಿದ್ದಾರೆ, ಕೊ-ಆಪರೇಟಿವ್ ಫಾರ್ಮಿಂಗ್‌ಗೆ ವ್ಯವಸ್ಥೆ ಮಾಡಿದ್ದಾರೆ. ಸರ್ಕಾರದವರು ಅದಕ್ಕಾಗಿ ಬಹಳವಾಗಿ ಖರ್ಚುಮಾಡಿರಬಹುದು. ಅಲ್ಲಿ ಒಂದು ಸಂಘ, ಒಕ್ಕೂಟ ಕೂಡಿದ್ದಾರೆ. ಅಲ್ಲಿ ಜಮೀನು ಪಡೆಯಬೇಕೆಂದು ಆಸೆಯಿಂದಿದ್ದವರಿಗೆ, ಜಮೀನಿಲ್ಲದವರಿಗೆ ಭೂಮಿಯನ್ನು ಕೊಟ್ಟಿದ್ದಾರೆ. ಆದರೆ ಲಕ್ಷಗಟ್ಟಲೆ ಅಲ್ಲಿ ಖರ್ಚಾಗುತ್ತಿರುವಾಗ ಯಾವರೀತಿ ಕೆಲಸಕಾರ್ಯ ನಡೆಯುತ್ತಿದೆಯೆಂದು ನೋಡಿದರೆ ನಾಚಿಕೆಯಾಗುತ್ತದೆ. ನಮ್ಮ ವ್ಯವಸಾಯದ ನಾಡಿನಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಬಿಟ್ಟರೆ ಬೇರೆ ಮಾರ್ಗವಿಲ್ಲ, ಅದರಿಂದ ಉದ್ಧಾರವಾಗುತ್ತೇವೆ ಎಂದು ಹೇಳುತ್ತಾರೆ. ಆದರೆ ನಮ್ಮ ಅನುಭವದ ಪ್ರಕಾರ ಅದರಿಂದ ವ್ಯವಸಾಯ ಮುಂದುವರೆಯುವುದಿಲ್ಲ, ನಷ್ಟ ಎಂದು ಗೊತ್ತಾಗಿದೆ. ಅದನ್ನು ಹೇಳಲು ಧೈರ್ಯವಿಲ್ಲದೆ ಕೆಲವರು ಸುಮ್ಮನಿದ್ದಾರೆ. ಹಣವನ್ನು ಸದ್ವಿನಿಯೋಗ ಮಾಡಿದರೆ ಕೀರ್ತಿ ಬರುತ್ತದೆ, ದೇಶಾಭ್ಯುದಯವಾಗುತ್ತದೆ. ಈಗ ನಮ್ಮಲ್ಲಿರುವ ಒಕ್ಕೂಟದಿಂದ ಪ್ರಯೋಜನವಾಗುತ್ತಿಲ್ಲ. ಆದುದರಿಂದ ಕೋ-ಆಪರೇಟಿವ್ ಫಾರ್ಮಿಂಗ್ ಖಂಡಿತ ಮಾಡಬಾರದು, ನಮ್ಮ ತಾಲ್ಲೂಕಿನಲ್ಲಿ ಬಹಳ ಮಟ್ಟಿಗೆ ಜಯಪ್ರದವಾಗಿಲ್ಲ, ಈ ರೀತಿಯ ಅನ್ಯಾಯಕ್ಕೆ ಅವಕಾಶ ಮಾಡಬಾರದು ಎಂದು ಪ್ರಾರ್ಥಿಸುತ್ತೇನೆ.

ಕೋಆಪರೇಷನ್ ಇಲಾಖೆ ವ್ಯವಸಾಯದ ಇಲಾಖೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಎಂದು ಸರ್ಕಾರದವರೂ ಭಾವಿಸಿಕೊಂಡಿದ್ದಾರೆ, ನಾವೂ ತಿಳಿದುಕೊಂಡಿದ್ದೇವೆ. ಪ್ರತಿಯೊಂದು ಹಳ್ಳಿಯಲ್ಲಿ ಸಹಕಾರ ಸಂಘ ಇರಬೇಕು, ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಅದರ ಸದಸ್ಯನಾಗಿರಬೇಕು ಎಂದು ಸರ್ಕಾರದವರು ಒಳ್ಳೆಯ ಸದುದ್ದೇಶವನ್ನು ಇಟ್ಟುಕೊಂಡಿದ್ದಾರೆ. ಆದರೆ ಯಾವ ರೀತಿ ಈ ಸಂಸ್ಥೆಗಳು ನಡೆಯುತ್ತ ಇವೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದರಿಂದ ದೇಶ ಕೆಟ್ಟುಹೋಗುತ್ತದೆ, ಸರ್ಕಾರದ ಸಂಸ್ಥೆ ಹಾಳಾಯಿತು ಎಂದರೆ ಸರ್ಕಾರವೇ ಹಾಳಾದ ಹಾಗೆ, ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ, ಖಂಡಿತವಾಗಿಯೂ ನೀವು ರಾಜ್ಯ ಆಳಲಾರಿರಿ ಎನ್ನುವ ಕೂಗನ್ನು ಇವತ್ತಿನದಿನ ನಾನು ಕೂಗುತ್ತ ಇದ್ದೇನೆ. ಶ್ರೀಮಾನ್ ಮರುಳಪ್ಪನವರು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ, ತಪ್ಪಿದರೆ ಅದು ನಮ್ಮೆಲ್ಲರ ತಪ್ಪಲ್ಲವೇ, ನಾವೂ ನೀವು ಎಲ್ಲರೂ ಐಕ್ಯವಾಗಿ ಹೊಂದಿಕೊಳ್ಳಬೇಕು ಎಂದು ಹೇಳಿದರು. ಅವರಿಗೆ ಇವತ್ತು ಒಂದು ಪ್ರಶ್ನೆ ಕೇಳುತ್ತೇನೆ ಮಂತ್ರಿಗಳು ಯಾರು ಸ್ವಾಮಿ ? ಅವರೂ ನಮ್ಮ ಹಾಗೆಯೇ ಖಾಸಗೀ ಜನರು. ಸುದೈವ ಅಥವಾ ಅದೃಷ್ಟದಿಂದ ಅವರು ಇವತ್ತಿನದಿನ ಮಂತ್ರಿಗಳಾಗಿದ್ದಾರೆ. ಸಹಕಾರಿ ಸಂಸ್ಥೆಗಳಲ್ಲಿ ತಪ್ಪು ಏನಿದೆ ಎಂಬುದನ್ನು ನಮ್ಮ ಸ್ನೇಹಿತರು ಹೇಳಿದರು. ಅವರಿಗೆ ಇವತ್ತು ಹೇಳುತ್ತೇನೆ ಸಹಕಾರ ಸಂಸ್ಥೆ ಉದ್ಧಾರವಾದಷ್ಟೂ ಕೂಡ ಜನಗಳಿಗೆ ವರ್ತಕರಾಗಲಿ ಯಾರೇ ಆಗಲೀ ಶೋಷಣೆ ತಪ್ಪುತ್ತದೆ. ಎಲ್ಲರೂ ಒಗ್ಗಟ್ಟಾಗಿ, ಐಕ್ಯವಾಗಿ ತಮಗಿರತಕ್ಕ ರಿಸೋರ್ಸ್‌ನ್ನು ಕೇಂದ್ರೀಕರಿಸಿಕೊಂಡರೆ ತಮಗೆ ಬರತಕ್ಕ ಲಾಭ ಒರುತ್ತದೆ. ನ್ಯಾಯದೊರಕುತ್ತದೆ, ಸೌಲಭ್ಯ ಸಿಕ್ಕುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನು ಈ ಸಂದರ್ಭದಲ್ಲಿ ವಿಷಾದದಿಂದ ಹೇಳಬೇಕಾಗಿರುವುದೇನೆಂದರೆ ಈ ಸಹಕಾರ ಸಂಸ್ಥೆಯ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಮೊದಲನೆಯದಾಗಿ ಪ್ರತಿ ಸೊಸೈಟಿಯಲ್ಲೂ ಕೂಡ ನಾನ್ ಅಫೀಷಿಯಲ್ ಡೈರೆಕ್ಟರ್ ಆಗಲೀ ಪ್ರೆಸಿಡೆಂಟರಾಗಲೀ ಆಡಳಿತ ನಡೆಸುತ್ತಿದ್ದಾರೆ. ಈ ಜವಾಬ್ದಾರಿಯನ್ನು ಅವರಿಂದ ತಪ್ಪಿಸಬೇಕೆಂದು ಹೇಳುತ್ತೇನೆ. ಸೊಸೈಟಿಯಲ್ಲಿ ಸಾಲ ಕೊಡುವವರು ಅವರು, ಯಾವ ಕುಟುಂಬವೇ ತೆಗೆದುಕೊಳ್ಳಿ ಒಂದಲ್ಲ ಒಂದು ರೀತಿಯಲ್ಲಿ ಅವರಿಗೆ ಅಧೀನವಾಗಿರಬೇಕು. ಸಾಲ ಸಿಕ್ಕಬೇಕಾದರಾಗಲೀ, ಗೊಬ್ಬರ ಸಿಕ್ಕಬೇಕಾದರಾಗಲೀ ಪ್ರತಿಯೊಂದೂ ಸೊಸೈಟಿ ಮೂಲಕ ಪಡೆಯಬೇಕು. ಸೆಕ್ರೆಟರಿಯನ್ನು ಹೊಂದಿಕೊಂಡು ಹೋಗದಿದ್ದರೆ ಅದನ್ನು ಪಡೆಯಲು ಬ್ರಹ್ಮನಕೈಯಿಂದಲೂ ಆಗುವುದಿಲ್ಲ. ಅವನು ಅನ್ಯಾಯ ಮಾಡಿದರೆ ಪ್ರತಿಭಟಿಸುವ ಶಕ್ತಿ ಅವರಿಗೆ ಇರುವುದಿಲ್ಲ. ಇಂಥಾ ಅನ್ಯಾಯ ಮಾಡಿದ್ದೀರಿ ಎಂದರೆ ಸಿಕ್ಕತಕ್ಕ ಸೌಲಭ್ಯ ದೊರೆಯುವುದಿಲ್ಲ. ಆದ್ದರಿಂದ ಜವಾಬ್ದಾರಿ ಮನುಷ್ಯನಾಗಿರತಕ್ಕ ಆ ಡೈರೆಕ್ಟರ್‌ಸ್ಥಾನದಲ್ಲಾಗಲೀ ಪ್ರೆಸಿಡೆಂಟರ ಸ್ಥಾನದಲ್ಲಾಗಲೀ ದಯವಿಟ್ಟು ಈ ಸೊಸೈಟಿಗಳಲ್ಲಿ ನಾನ್ ಅಫಿಷಿಯಲ್‌ನ್ನು ಖಂಡಿತ ಇಡಬೇಡಿ. ಅಫಿಷಿಯಲ್ ಸೆಕ್ರೆಟರಿ ಅಥವಾ ಪ್ರೆಸಿಡೆಂಟ್ ಇಟ್ಟರೂ ಕೂಡ, 4-5 ಫರ್ಲಾಂಗ್‌ನಲ್ಲಿ 5-6 ಸೊಸೈಟಿಗಳು ಇರುತ್ತವೆ. ಅವುಗಳ ಮೇಲ್ವಿಚಾರಣೆ ಮಾಡಲಿಕ್ಕೆ ತಾಲ್ಲೂಕಿಗೆ ಒಬ್ಬ ಇನ್‌ಸ್ಪೆಕ್ಟರನ್ನು ಹಾಕಿದ್ದೀರಿ. 200, 300 ಹಳ್ಳಿಗಳಿಗೆ ಒಬ್ಬ ಇನ್‌ಸ್ಪೆಕ್ಟರು ಹೋಗಿ ಏನುಮಾಡಬಲ್ಲ ? ಆದ್ದರಿಂದ ಅನೇಕ ಸೊಸೈಟಿಗಳಿರುವ ಕಡೆ ಎರಡು ಭಾಗಗಳನ್ನಾಗಿ ಮಾಡಿ. ನಮ್ಮ ತಾಲ್ಲೂಕಿನಲ್ಲಿ ಒಂದು ಸಹಕಾರ ಸಕ್ಕರೆ ಕಂಪೆನಿ ಇದೆ. ಬಹಳ ಅನ್ಯಾಯವಾಗುತ್ತಾ ಇದೆ. ಸಹಕಾರ ಎಂದರೆ ಏನು ? ಏನಾದರೂ ಭಿನ್ನತೆ ಇದ್ದರೆ, ಭೇದಭಾವ ಇದ್ದರೆ, ದ್ವೇಷ ಇದ್ದ ಪಕ್ಷದಲ್ಲಿ ದೊಡ್ಡ ಮನುಷ್ಯರು ಅಥವಾ ಸಮಾಜದಲ್ಲಿ ಒಳ್ಳೆಯ ಸ್ಥಾನದಲ್ಲಿರುವವರು ಯಾರಿದ್ದಾರೆ ಅವರನ್ನೆಲ್ಲಾ ಒಂದುಗೂಡಿಸಿ, ಸಾಮರಸ್ಯವನ್ನುಂಟುಮಾಡುವುದಲ್ಲವೆ ? ಅದನ್ನು ಬಿಟ್ಟು ಒಂದೇ ಪಾರ್ಟಿ ಒಂದೇ ಪಕ್ಷಕ್ಕೆ ಸೇರಿದ ಜನರಿಗೆ ಆಸ್ಥಾನಕ್ಕೆ ಅರ್ಹತೆ ಇದೆಯೋ ಇಲ್ಲವೋ ಎಂಬುದನ್ನೂ ಸಹ ನೋಡದೇ ಜವಾಬ್ದಾರಿ ಕೊಡುವುದರಿಂದ ಆ ಸಂಸ್ಥೆಗೆ ಧಕ್ಕೆ ಬರುತ್ತದೆ. ಒಂದು ಪಾರ್ಟಿಯವರನೇ ಸಂಘ ಕಟ್ಟಬೇಕೆಂದರೆ ಅದು ಸಾಧ್ಯವೇ, ನ್ಯಾಯವೇ; ಈ ರೀತಿಮಾಡುತ್ತ ಹೋದರೆ ಪ್ರಪಂಚದಲ್ಲಿ ಯಾರೂ ಬದುಕುವುದಿಲ್ಲ, ಅಂಥಾ ಸಂಸ್ಥೆ ಚಿರಸ್ಥಾಯಿಯಾಗಿ ಇರುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅದರಲ್ಲಿ ನೀವೂ ಇದ್ದೀರಲ್ಲಾ !

ಶ್ರೀ ಆರ್. ಎಲ್. ಲಕ್ಷ್ಮೀಪತಿ.—ನಾನೂ ಇದ್ದೇನೆ. ಆದರೆ ಅದಕ್ಕೆ ಡೈರೆಕ್ಟರು ಯಾರನ್ನು ನೇಮಕ ಮಾಡಿದ್ದೀರಿ ಎಂಬುದನ್ನು ಹೇಳುತ್ತಾ ಇದ್ದೇನೆ. ನಾನು ಅದಕ್ಕೆ ಸಹಕಾರ ಕೊಡುವುದಿಲ್ಲ ಎಂದು ಹೇಳುತ್ತಿಲ್ಲ ಸಕ್ಕರೆ ಕಂಪೆನಿ ಆಗಬೇಕಾಗಿದ್ದರೆ ಒಬ್ಬರ ದೃಷ್ಟಿಯನ್ನಿಟ್ಟುಕೊಂಡು ಕೆಲಸಮಾಡಿದರೆ ಅದು ಊರ್ಜಿತವಾಗುವುದಿಲ್ಲ. ಇಡೀ ತಾಲ್ಲೂಕಿನ ಶ್ರೇಯಸ್ಸನ್ನು ಗಮನದಲ್ಲಿಟ್ಟುಕೊಂಡು ಆ ಕಂಪೆನಿಗಾಗಿ ನಾವುಗಳೆಲ್ಲರೂ ಸೇರಿ ಭುಜಕ್ಕೆ ಭುಜಕೊಟ್ಟು ಕೆಲಸ ಮಾಡಿದ್ದೇವೆ. ಇವತ್ತು ಹೇಳುತ್ತೇನೆ, ಆಕ್ಷೇಪಣೆ ಮಾಡಬೇಕು, ಆರೋಪ ಮಾಡಬೇಕು ಅದಕ್ಕೆ ಕಳಂಕ ತರಬೇಕು, ಎಂದು ನಾನು ಇದನ್ನು ಹೇಳುತ್ತಿಲ್ಲ. ಪ್ರತಿಯೊಬ್ಬ ಮನುಷ್ಯನೂ ತನ್ನ ತಪ್ಪು ತಿಳಿದುಕೊಂಡು ಕೆಲಸ ಮಾಡಬೇಕು. ತನ್ನ ತಪ್ಪನ್ನು ಒಪ್ಪಿಕೊಳ್ಳಬೇಕಾಗಿದ್ದರೆ He must have courage.

ಶ್ರೀ ಎಂ. ವಿ. ಕೃಷ್ಣಪ್ಪ.—ಅವರೂ ನಿಮ್ಮ ಹಾಗೇ ಯುವಕರಲ್ಲವೇ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅವರಿಗೆ ಸಕ್ಕರೆ ಕಂಪನಿ ಆಡಳಿತದಲ್ಲಿ ಏನು ಅನುಭವವಿದೆ ಎಂದು ಚೇರ್ಮನ್ ಪದವಿ ಕೊಟ್ಟಿರಿ ? ಆ ದಿನ ನನ್ನ ಪಕ್ಕದಲ್ಲೇ ಕುಳಿತುಕೊಂಡು ಮಾತನಾಡುತ್ತಿದ್ದಾಗ ನಿಮ್ಮನ್ನು ಪ್ರಾರ್ಥನೆ ಮಾಡಿದೆ. ಯಾರು ಯಾರಿಗೋ ಅನುಭವವಿಲ್ಲದವರಿಗೆ ಇಂಥಾ ಜವಾಬ್ದಾರಿ ಸ್ಥಾನ ಕೊಡಬೇಡಿ. ಬಹಳ ಅನ್ಯಾಯವಾಗುತ್ತದೆ ಎಂದು ಕೇಳಿಕೊಂಡೆ ಅವರ ಮೇಲೆ ನಾನು ಆಕ್ಷೇಪಣೆ ಮಾಡುತ್ತಿಲ್ಲ. ಅವರಿಗೆ ಸಹಕಾರಕೊಡುತ್ತೇನೆ, ಬೆಂಬಲಕೊಡುತ್ತೇನೆ, ಸಹಕಾರ, ಬೆಂಬಲ ಕೊಡುವುದಿಲ್ಲ ಎನ್ನುವುದರಲ್ಲಿ ಈಗ ಅರ್ಥವಿಲ್ಲ. ಫ್ಯಾಕ್ಟರಿ ಸ್ಥಾಪನೆ ಮಾಡಬೇಕೆಂದು ಪ್ರಯತ್ನ ನಡೆಸಿದಾಗ ಇಡೀ ತಾಲ್ಲೂಕಿನ ದೃಷ್ಟಿ ನಮಗೆ ಇತ್ತೇ ಹೊರತು ಆ ಪಕ್ಷ ಈ ಪಕ್ಷಗಳ ದೃಷ್ಟಿ ಇರಲಿಲ್ಲ. ಕೃಷ್ಣಪ್ಪನವರ ಹೋರಾಟ 20 ವರ್ಷದಿಂದ ಇದೆ. ಇದಕ್ಕೆ ಅವರೇ ಮುಖ್ಯ ಕಾರಣರು. ಒಪ್ಪಿಕೊಳ್ಳುತ್ತೇನೆ......

Mr. SPEAKER.—Please Conclude.

ಶ್ರೀ ಆರ್. ಎನ್. ಲಕ್ಷ್ಮೀಪತಿ— ಅರಣ್ಯದ ವಿಚಾರದಲ್ಲಿ ಒಂದೆರಡು ಮಾತು......

Mr. SPEAKER.—The Hon'ble member's time is over.

ಶ್ರೀ ಆರ್. ಎನ್ ಲಕ್ಷ್ಮೀಪತಿ.—ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).— ಮಾನ್ಯ ಅಧ್ಯಕ್ಷರೇ, ತಮ್ಮ ಮುಂದೆ ಇರತಕ್ಕ ಈ ಬೇಡಿಕೆಗಳ ವಿಷಯದಲ್ಲಿ 4 ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಬೇಡಿಕೆಗಳು ಬಹಳ ಪ್ರಾಮುಖ್ಯವಾದವುಗಳು. ದೇಶದ ಎಲ್ಲಾ ನಾಯಕರ ಕಣ್ಣು ಈ ಒಂದು ಬೇಡಿಕೆಯ ಮೇಲೆ ಬಿದ್ದಿದೆ. ಆದರೆ ದುರ್ದೈವ, ಇದು ಒಂದು ಅರಣ್ಯರೋದನ ಎಂದರೆ ತಪ್ಪಾಗಲಾರದು. ಒಂದೇ ಸಮನೆ ರೈತಾಪಿ ವರ್ಗದ ಜನರು ವ್ಯವಸಾಯಕ್ಕೆ ಸಾಕಾದಷ್ಟು ಸೌಲಭ್ಯವಿಲ್ಲದೆ ಧಾರಣವಾಸಿಗಳು ಸ್ಥಿಮಿತಕ್ಕೆ ಬರುತ್ತಾ ಇಲ್ಲ. ಇದನ್ನು ಸರಿಪಡಿಸುವುದಕ್ಕೆ ಇಲಾಖೆಯವರು Cost of production ಏನಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಿ ಎಂದರೆ ಇವತ್ತಿನವರೆಗೂ ತಿಳಿಸದೆ ಮನಸ್ಸಿಗೆ ಬಂದ ಹಾಗೆ ಬತ್ತ, ರಾಗಿಗಳ ಧಾರಣೆ ಬೀಳುತ್ತಾ ಇದೆ. ಬತ್ತಕ್ಕೆ 21 ರೂಪಾಯಿ ಇದೆ. ಈ ರೀತಿ ರೈತರ ಪರಿಸ್ಥಿತಿ ಯಾವಾಗಲೂ ಅನಿರ್ದಿಷ್ಟವಾಗಿದೆಯೇ ವಿನಾ ಇಂಡಸ್ಟ್ರೀ ಮತ್ತು ಇತರ ಕ್ಷೇತ್ರಗಳಲ್ಲಿ ನಿಖರವಾದ ಬೆಲೆಯನ್ನು ಗೊತ್ತುಮಾಡಿ Cost of production ಇಷ್ಟೇ ಎಂದು ನಿಖರವಾಗಿ ಹೇಳತಕ್ಕ ಧೈರ್ಯ, ಶಕ್ತಿ ಈ ಒಂದು ಕ್ಷೇತ್ರದಲ್ಲಿ ಇಲ್ಲದೇ ಈ ವ್ಯವಸಾಯದ ಕಸುಬೇ ಕುಸಿಯುತ್ತಾ ಇದೆ ಎಂದು ಹೇಳಿದರೂ ತಪ್ಪಾಗಲಾರದು. ಸ್ವಾಮಿ ಈ ದಿವಸ ಮನಸ್ಸುಬಿಚ್ಚಿ ಹೇಳಬೇಕಾಗಿದೆ. ಗ್ರಾಮಾಂತರಗಳಲ್ಲಿ ಇನ್ನು ಮುಂದೆ ಯಾವ ಒಬ್ಬ ವಿದ್ಯಾವಂತನಾಗಲೀ, ಅನುಕೂಲವಾಗಿರತಕ್ಕವನಾಗಲೀ ಶ್ರೀಮಾನ್ ಕೃಷ್ಣಪ್ಪನವರು ಪದೇಪದೇ ಹೇಳುತ್ತಾ ಇದ್ದಾರೆ ದಡ್ಡನು ವ್ಯವಸಾಯಕ್ಕೆ ಹೋಗುತ್ತಾನೆ ಎಂದು. ಅದು ನಿಜವಾಗಿಯೂ ಹಾಗೆಯೇ ಆಗುತ್ತಿದೆ. ಯಾವ ಬುದ್ಧಿವಂತ ಇದರಲ್ಲಿ ಇರುವುದಕ್ಕಾಗುವುದಿಲ್ಲ. ಇರುವುದೂ ಇಲ್ಲ. ಈಗ ಯಾರು ದುಡಿಮೆ ಮಾಡುತ್ತಾ ಇದ್ದಾರೆ. ಯಾವ ರೀತಿಯ ಕಷ್ಟವನ್ನು ಲಕ್ಷಿಸದೇ ವ್ಯವಸಾಯವನ್ನೇ ನಂಬಿ ಕೆಲಸ ಮಾಡುತ್ತಾ ಇದ್ದಾರೆ. ಅವರ ಮನಸ್ಸು ಬದಲಾವಣೆ ಆಗತಕ್ಕ ಕಾಲ ಬಂದಿದೆ. ಇವತ್ತು ಸರ್ಕಾರಿ ಕ್ಷೇತ್ರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಒಬ್ಬ ಮನುಷ್ಯನಿಗೆ ಕನಿಷ್ಠ ವೇತನ 100 ರೂಪಾಯಿ ಕೊಡುತ್ತಾ ಇದ್ದೀರಿ. ನೀವು ರೈತನ ವಿಷಯದಲ್ಲಿ ಬೇಕಾದಷ್ಟು ಹೇಳುತ್ತೀರಿ. ಆದರೆ ಅವನು ಏನು ಉತ್ಪನ್ನ ಮಾಡುತ್ತಾನೆ ಅದಕ್ಕೆ ತಕ್ಕಂಥ ಒಂದು ಬೆಲೆಯನ್ನು ನಿಗದಿಮಾಡಿ ಅವನಿಗಿರತಕ್ಕಂಥ ಒಂದು ಕಷ್ಟವನ್ನು ನಿವಾರಣೆ ಮಾಡಿ ಎಂದರೆ ಇವತ್ತಿನವರೆಗೂ ಮಾಡದೇ ಉದಾಸೀನ ಮಾಡುತ್ತಿರುವುದು ಸರಿಯಲ್ಲ. ಇದನ್ನು ನಮ್ಮ ರಾಜ್ಯ ಸರ್ಕಾರದವರು ಕೇಂದ್ರಸರ್ಕಾರದವರಿಗೆ ತಿಳಿಸಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಅಸಾಧ್ಯವಾದ ಆಶೆಯನ್ನಿಟ್ಟುಕೊಂಡು ವ್ಯವಸಾಯದ ಉತ್ಪನ್ನ ಹೆಚ್ಚುಮಾಡಬೇಕೆಂದು ಏನು ಹೊರಟಿದ್ದೇವೆಯೋ ಅದು ಖಂಡಿತ ಸಾಧ್ಯವಾಗುವುದಿಲ್ಲ. ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳನ್ನು ಪ್ರಾಜೆಕ್ಟುಗಳಮೇಲೆ ಹಾಕಿದ್ದೀರಿ, ನಾಳೆ ದಿವಸ ಮನಸ್ಸಿಗೆ ನೋವು ಆಗತಕ್ಕ ಸಂದರ್ಭ ಬರಬಹುದೇನೋ ಎಂದು ನನಗೆ ಅನಿಸುತ್ತದೆ.

ಸ್ವಾಮಿ ಈ ವ್ಯವಸಾಯದ ಇಲಾಖೆ ಮತ್ತು ವೆಟರಿನರಿ ಇಲಾಖೆಗಳು ಸಣ್ಣ ಇಲಾಖೆಗಳಾದರೂ ಬಹಳ ಮುಖ್ಯವಾದವುಗಳು. ಈ ಇಲಾಖೆಗಳೆರಡೂ ನೇರವಾಗಿ ರೈತರ ಅಭಿವೃದ್ಧಿಗಾಗಿ ಕೆಲಸ ಮಾಡಬೇಕಾಗಿದೆ. ಆದರೆ ಇಲ್ಲಿಗೆ ಐದು-ಆರು ವರ್ಷಗಳಿಂದಲೂ ಈ ಎರಡು ಇಲಾಖೆಗಳಲ್ಲಿಯೂ

ಇರತಕ್ಕ ಆಡಳಿತದ ಮೇಲಧಿಕಾರಿಗಳಿಗೂ ಮತ್ತು ಕೆಳಮಟ್ಟದ ಅಧಿಕಾರಿಗಳಲ್ಲೂ ಒಂದು ಶಿಸ್ತು ಮತ್ತು ಆ ಒಂದು ಹೊಂದಾವಣಿಕೆಯಿಲ್ಲವಿರುವುದರಿಂದ ಈ ಎರಡು ಇಲಾಖೆಗಳಲ್ಲೂ ಅನೇಕ ಲೋಪ ದೋಷಗಳುಂಟಾಗಿವೆ. ಈ ವಿಚಾರ ಮಂತ್ರಿಗಳೂ ಬೇಗ ಮನಗಂಡು ಸರಿಪಡಿಸದೆ ಹೋದರೆ ಈ ಇಲಾಖೆಗಳಿಂದ ರೈತರಿಗೇನೂ ಉಪಕಾರವಾಗುವುದಿಲ್ಲ. ಈ ಎರಡು ಇಲಾಖೆಗಳಲ್ಲೂ ಆಡಳಿತ ಕೆಟ್ಟಿದೆ ಎಂಬುದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಹೀಗೆ ಈ ದಿವಸ ಮಾನ್ಯ ಮಂತ್ರಿಗಳು ಎಷ್ಟೇ ಉಮೇದಿನಿಂದ ಕೆಲಸ ಮಾಡಬೇಕೆಂದು ಹೊರಟರೂ ಅವ್ಯೊಂದೂ ಕಾರ್ಯಗತ ವಾಗುತ್ತಿಲ್ಲ. ಈ ವಿಚಾರ ಜವಾಬ್ದಾರಿಯುತರಾದಂಥ ಜನರ ಮನಸ್ಸಿಗೆಲ್ಲ ಗೊತ್ತಿದೆ. ಇಂಥ ವಿಷಯಗಳೇನಾದರೂ ಇದ್ದರೆ ಇವುಗಳಿಗೆ ಸಂಬಂಧಪಟ್ಟ ಮಂತ್ರಿಗಳಲ್ಲಿ ಜನರ ಕುಂದುಕೊರತೆಗಳನ್ನು ಹೇಳುವುದಕ್ಕಾಗಿ ನಾವು ಮಂತ್ರಿಗಳಲ್ಲಿ ಹೋಗಬೇಕಾಗಿರುತ್ತದೆಯೇ ವಿನಾ ಅವರು ನಮ್ಮ ಸ್ನೇಹಿತರು—ನಮ್ಮ ಖಾಸಗೀ ವಿಷಯ ಹೇಳೋಣ ಎಂತ ಯಾರೂ ಮಂತ್ರಿಗಳ ಹತ್ತಿರ ಹೋಗುವುದಿಲ್ಲ. ಈ ಮಂತ್ರಿ ಗಳಾದರೂ ನಮ್ಮ ಹಾಗೇ ಅವರೂ ಮೊದಲು ಸದಸ್ಯರಾಗಿದ್ದು ಈಗ ಆ ಸ್ಥಾನದಲ್ಲಿರಬಹುದು. ಆದರೆ ಇಂಥಾ ವಿಚಾರಗಳನ್ನು ನಾವು ಸಂಬಂಧಪಟ್ಟ ಮಂತ್ರಿಗಳಲ್ಲಿ ಹೋಗಿ ತಿಳಿಸಿದ ಕೂಡಲೆ ಅವರು ಈ ವಿಚಾರಗಳನ್ನು ತನಿಖೆ ಮಾಡಿಸಿ ನಾವು ಹೇಳುತ್ತಿರುವ ವಿಷಯಗಳಲ್ಲಿ ಸತ್ಯಾಂಶವಿಲ್ಲ—ಅವೆಲ್ಲ ಅಸತ್ಯ ವಾದ ದೂರುಗಳೆಂತ ಹೇಳಲಿ. ಆಗ ನಾವೂ ಸಹ ಸರಿಯಾದ ಅಂಕೀ ಅಂಶಗಳನ್ನು ಶೇಖರಣೆ ಮಾಡಿ ಕೊಳ್ಳದೆ ಇಂಥ ದೂರುಗಳನ್ನು ಹೇಳಬಾರದು ಎಂದು ನಾವೂ ಸಹ ನಮ್ಮ ಲೋಪ ದೋಷಗಳನ್ನು ಸರಿಪಡಿಸಿಕೊಳ್ಳುತ್ತೇವೆ. ಆದರೆ ಹಾಗೇನೂ ಮಾಡದೆ ಸದಸ್ಯರು ತಿಳಿಸಿದ ದೂರುಗಳ ಬಗ್ಗೆ ಉದಾಸೀನತೆ ಮಾಡುತ್ತಾ ಹೋದರೆ ಆಡಳಿತದಲ್ಲಿ ಇರಬೇಕಾದ ಬಿಗಿ ತಪ್ಪಿ ಹೋಗಿ ಜನ ಸಾಮಾನ್ಯ ರಿಗೆ ಈ ಇಲಾಖೆಗಳಿದ್ದರೂ ನಿಷ್ಪ್ರಯೋಜನವಾಗುತ್ತದೆ. ಇಂಥಾದ್ದಕ್ಕೆಲ್ಲ ಅವಕಾಶವಿರಬಾರದು. ಈ ವಿಚಾರಗಳಿಗೆ ಕೂಡಲೆ ಗಮನ ಕೊಡಬೇಕೆಂತ ಅಧ್ಯಕ್ಷರ ಮೂಲಕ ಸರ್ಕಾರದವರಲ್ಲಿ ಪ್ರಾರ್ಥಿಸಿ ಕೊಳ್ಳುತ್ತೇನೆ.

ಇನ್ನು ಈ ಸಾಯಿಲ್ ಕನ್ಸರ್ವೇಷನ್ ಕೆಲಸ ಬಹಳ ವರ್ಷಗಳಿಂದ ಹಾಗೇ ನಿಂತು ಹೋಗಿದೆ. ಇದರಿಂದ ನ್ಯಾಷನಲ್ ವೇಸ್ಟ್ ತುಂಬಾ ಆಗುತ್ತಿದೆ. ನಾವಿನ್ನೂ ಸಹಸ್ರಾರು ವರ್ಷಗಳ ಕಾಲ ಈ ಈ ಭೂಮಿ ಮೇಲೆ ನಿಂತು ಇದರಿಂದ ಜೀವನ ಮಾಡಬೇಕಾಗಿದೆ. ಇಂಥ ಜನಜೀವನಕ್ಕೆ ಅತ್ಯಗತ್ಯ ವಾದ ಭೂಮಿ ಈ ದಿವಸ ಹಳ್ಳ ತಿಟ್ಟಗಳಿಂದ ಕೂಡಿ ಅಲ್ಲಲ್ಲೆ ದೊಂಗರುಗಳುಬಿದ್ದು ಭೂಮಿ ಅನುಕೂಲಕ್ಕೆ ಬಾರದೆ ನಾಶವಾಗುತ್ತಿದೆ. ಈ ಸಾಯಿಲ್ ಕನ್ಸರ್ವೇಷನ್ ಮಾಡದೆ ನಾವು ಈ ದಿವಸ ಎಷ್ಟೇ ಹಣ ಖರ್ಚುಮಾಡಿದರೂ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈಗಲಾದರೂ ನಾವು ಈ ಸಾಯಿಲ್ ಕನ್ಸರ್ವೇಷನ್ ಬಗ್ಗೆ ನಿಗಾ ತೆಗೆದುಕೊಂಡು ಸಾಕಷ್ಟು ಕಾರ್ಯಕ್ರಮಗಳನ್ನು ಕೂಡಲೆ ಕೈಗೊಂಡು ಅಲ್ಲಲ್ಲೆ ಈ ಬಂಡಿಂಗ್ ಹಾಕತಕ್ಕ ಪ್ರೋಗ್ರಾಂ ಮಾಡಿ ಸಾಯಿಲ್ ಕನ್ಸರ್ವೇಷನ್ ಕೆಲಸವನ್ನು ಮಾಡಲೇಬೇಕು. ಸರ್ಕಾರದವರು ಈ ಬಗ್ಗೆ ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಅಗ್ರಿಕಲ್ಚರ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಇಂಜಿನಿಯರಿಂಗ್ ಸೆಕ್ಷನ್ ಇದೆ ಅಂತ ದೊಡ್ಡದಾಗಿ ಹೆಬ್ಬಾಳದಲ್ಲಿ ಮಾಡಿದ್ದಾರೆ. ಆದರೆ ಇದರಿಂದ ರೈತರಿಗೊಂದು ಹೆಚ್ಚಿನ ಸಹಾಯವಾಗಬಹುದೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ಖಾಸಗಿ ಎಂಟರ್‌ಪ್ರೈಜು ಗಳಲ್ಲಿ ಕೆಲಸ ಎಷ್ಟು ಮುತುವರ್ಜಿಯಿಂದ ನಡೆಯುತ್ತಿದೆಯೋ ಅಷ್ಟು ಮುತುವರ್ಜಿಯಿಂದ ಈ ಸರ್ಕಾರಿ ಇಲಾಖೆಗಳಲ್ಲಿ ಕೆಲಸವಾಗುತ್ತಿಲ್ಲ. ಉದಾಹರಣೆಗೆ ಈ ದಿವಸ ಆ ವೆಬ್ಸ್ ಕಂಪನಿಯನ್ನು ತಗೆದು ಕೊಂಡರೆ ಅಲ್ಲಿ ಎಷ್ಟು ಜನ ಕೆಲಸಗಾರರಿದ್ದಾರೋ ಅದರ ನಾಲ್ಕರಷ್ಟು ಜನ ಈ ನಮ್ಮ ಸರ್ಕಾರಿ ಆಡಳಿತದಲ್ಲಿರುವ ವರ್ಕ್‌ಷಾಪುಗಳಲ್ಲಿರುತ್ತಾರೆ. ಆದರೆ ಆ ಪ್ರೈವೇಟ್ ಕಂಪೆನಿಗಳವರು ಎಫಿಷಿ ಯೆಂಟಾಗಿ—ಪ್ರಾಂಪ್ಟಾಗಿ ಕೆಲಸ ಮಾಡುವಂತೆ ಇಲ್ಲಿ ಕೆಲಸವಾಗುತ್ತಿಲ್ಲ. ಆದರೆ ಆ ಖಾಸಗೀ ಕಂಪೆನಿಗಳಲ್ಲಿ ಕೆಲಸಮಾಡತಕ್ಕವರೂ ನಮ್ಮವರೇ. ಇಲ್ಲಿ ಕೆಲಸಮಾಡತಕ್ಕವರೂ ನಮ್ಮವರೇ. ಅಲ್ಲಿ ಅವರು ಕೊಟ್ಟಹಾಗೆ ಇಲ್ಲಿಯೂ ಇವರಿಗೆ ಸಂಬಳ ಸಾರಿಗೆಗಳನ್ನು ಕೊಡಲಾಗುತ್ತಿದೆ. ಆದರೆ ಈ ದಿವಸ ಆ ವೆಬ್ಸ್ ಕಂಪೆನಿಯವರು ಪ್ರಾಂಪ್ಟಾಗಿ ಟ್ರಾಕ್ಟರುಗಳನ್ನು ಡೆಲಿವರಿ ಕೊಡುತ್ತಿರುವಂತೆ ಈ ಸರ್ಕಾರದವರು ಮಾಡುತ್ತಿಲ್ಲ. ಇದಕ್ಕೆ ಕಾರಣವೇನು ! ಈ ದಿವಸ ಸರ್ಕಾರದವರು ಹೀಗೆ ದಕ್ಷತೆಯಿಂದ ಕೆಲಸ ಮಾಡದೆ ಇರುವುದರಿಂದಲೇ ಆ ಪ್ರೈವೇಟ್ ಕಂಪೆನಿಯವರು ಈ ಟ್ರಾಕ್ಟರ್ ಸರ್ವೀಸಿಗೆ ಛಾರ್ಜನ್ನು ಬಹಳ ದುಬಾರಿಮಾಡುತ್ತಿದ್ದಾರೆ, ಬಿಲ್ ಜಾಸ್ತಿ ಹಾಕುತ್ತಾರೆ. ಇದರಿಂದ ಆ ರೈತರ ಕಷ್ಟ ಹೇಳ ತೀರದಾಗಿದೆ. ಆದುದರಿಂದ ಈ ದಿವಸ ಆ ಹೆಬ್ಬಾಳದಲ್ಲಿರತಕ್ಕ ಅಗ್ರಿಕಲ್ಚರ್ ಇಂಜಿನಿಯರಿಂಗ್ ಸೆಕ್ಷನ್ ಏನಿದೆ ಅದನ್ನು ಒಂದು ಸುವ್ಯವಸ್ಥೆಗೆ ತಂದು ಅದರಿಂದ ರೈತರಿಗೆ ಹೆಚ್ಚಿನ ಸೌಲಭ್ಯ ಉಂಟಾಗುವಂತೆ ಸರ್ಕಾರದವರು ಸರ್ವಪ್ರಯತ್ನಗಳನ್ನೂ ನಡೆಸಬೇಕೆಂದು ನಾನು ಸಭಾಪತಿಗಳ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಕೆ. ವಿ. ಬೈರೇಗೌಡ)

ಇನ್ನು ನಮ್ಮ ಅಗ್ರಿಕಲ್‌ಚರ್ ಕಾಲೇಜಿನ ವಿಷಯಕ್ಕೆ ಬಂದರೆ ಇದು ಬಹಳ ಮುಖ್ಯವಾದದ್ದು ಆದರೆ ನಮ್ಮ ನೆರೆ ರಾಜ್ಯದಲ್ಲಿರತಕ್ಕ ಅಗ್ರಿಕಲ್‌ಚರಲ್ ಕಾಲೇಜಿನ ಆಡಳಿತ ಕೇಳಿದರೆ ನಮ್ಮಲ್ಲಿ ಅಂಥ ಆಡಳಿತವಿಲ್ಲವಲ್ಲ ಎಂತ ನನಗೆ ಬಹಳ ದುಃಖವಾಗುತ್ತದೆ. ನಮ್ಮ ಅಧಿಕಾರಿಗಳೇ ಅಲ್ಲಿಗೆ ಹೋಗಿ ಬಂದವರು. ಅಲ್ಲಿಯ ಆಡಳಿತ ಬಹಳ ಚೆನ್ನಾಗಿರುತ್ತೆಂದು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿರತಕ್ಕ ನಮ್ಮ ಅಧಿಕಾರಿಗಳೇ ಹೇಳುತ್ತಿದ್ದಾರೆ. ನಾನೇ ಈ ಮಾತುಗಳನ್ನು ಅವರ ಬಾಯಿಂದ ಕೇಳಿದ್ದೇನೆ. ಆದರೆ ನಮ್ಮ ಅಂಥ ದಕ್ಷರಾದ, ಶಕ್ತರಾದ ಅಧಿಕಾರಿಗಳಿಲ್ಲವೆಂದೂ ಇಲ್ಲ, ಇಲ್ಲಿಯೂ ಇದ್ದಾರೆ. ಆದರೆ ನಮ್ಮ ಮಂತ್ರಿಗಳು ಆಗಾಗ್ಗೆ ಈ ಅಧಿಕಾರಿಗಳೊಡನೆ ಕುಳಿತು ಮಾತನಾಡಿ, ಅವರಲ್ಲಿ ಒಂದು ಸಂಪರ್ಕ ಬೆಳಸಬೇಕು. ಜನರು ಈ ಇಲಾಖೆಯಿಂದ ಏನನ್ನು ನಿರೀಕ್ಷಿಸುತ್ತಿದ್ದಾರೆಂಬುದನ್ನು ಅವರೊಡನೆ ಸಮಾಲೋಚನೆ ಮಾಡಬೇಕು. ಈಗ ದೇಶದಲ್ಲಿ ಅಲ್ಲಲ್ಲೇ ಈ ಲ್ಯಾಂಡ್ಸ್ ಗ್ರಾಂಟ್ ಕಾಲೇಜುಗಳನ್ನು ಸ್ಥಾಪಿಸಲು ಅಮೆರಿಕಾ ದೇಶದವರೂ ಮತ್ತು ನಮ್ಮ ಕೇಂದ್ರ ಸರ್ಕಾರದವರು ಬೇಕಾದಹಾಗೆ ಹಣ ಕೊಡುತ್ತಾರೆ. ಹಾಗಿರುವಾಗ ನಮ್ಮ ಹೆಬ್ಬಾಳದಲ್ಲಿರುವ ಆ ಅಗ್ರಿಕಲ್‌ಚರಲ್ ಮತ್ತು ವೆಟರಿನರಿ ಕಾಲೇಜುಗಳಿಗೆ ಸಂಬಂಧಪಟ್ಟ ಹಾಗೆ ಅಲ್ಲಿ ಒಂದು ಲ್ಯಾಂಡ್ಸ್ ಗ್ರಾಂಟ್ ಕಾಲೇಜನ್ನು ಸ್ಥಾಪನೆ ಮಾಡಿದರೆ ಅದು ಇಡೀ ದಕ್ಷಿಣ ಭಾರತದಲ್ಲೇ ಬಹಳ ಯಶಸ್ವಿಯಾಗುತ್ತದೆಂದು ನಾನು ನಂಬಿದ್ದೇನೆ. ಆದರೆ ಈ ಒಂದು ಇಲಾಖೆಗೂ ಇನ್ನೊಂದು ಇಲಾಖೆಯ ಅಧಿಕಾರಿಗಳಲ್ಲಿ ಒಂದು ವ್ಯತ್ಯಾಸ ಉಂಟಾಗಿ ಆಡಳಿತ ಅವ್ಯವಸ್ಥೆಯಾಗಿರುತ್ತದೆಂಬ ವಿಷಯವನ್ನು ನಾನು ಸ್ವತಃ ಮನಗಂಡ ಮೇಲೆ ಇದನ್ನು ಮಾನ್ಯ ಮಂತ್ರಿಗಳಾದ ಶ್ರೀ ಎಂ. ವಿ. ಕೃಷ್ಣಪ್ಪನವರಿಗೆ ಅನೇಕ ಸಾರ್ತಿ ಹೇಳಿದ್ದೇನೆ. ಆದರೆ ಅವರು ಅವರಿಗಿರತಕ್ಕ ಉತ್ಸಾಹವನ್ನೆಲ್ಲಾ ಕೇವಲ ಭಾಷಣದ ಮೂಲಕ ಮಾಡಲು ಹೊರಟಿದ್ದಾರೆ. ಆದರೆ ಅವರು ಇಲಾಖೆಯ ಆಡಳಿತದಲ್ಲಿರತಕ್ಕ ಅವ್ಯವಸ್ಥೆಯನ್ನು ಸರಿಪಡಿಸದೆ ಹೋದಲ್ಲಿ ಅವರ ಬರಿ ಆ ಒಂದು ಭಾಷಣವಾಗಲೀ ಅವರ ಉತ್ಸಾಹವಾಗಲೀ ಏನೂ ಕೆಲಸ ಮಾಡಲಾರದೆಂದು ಹೇಳುತ್ತೇನೆ. ಈ ದಿವಸ ನಮ್ಮಲ್ಲಿ ಆಹಾರೋತ್ಪತ್ತಿಯನ್ನು ಜಾಸ್ತಿ ಮಾಡಬೇಕಾಗಿದೆ. ಹೀಗೇ ಈ ಕುರಿಗಳ ಅಭಿವೃದ್ಧಿ ವಿಷಯದಲ್ಲಿ ಈ ದಿವಸ ಬಹಳ ಕುಂಠಿತವಾಗಿದೆ. ರೈತಾಪಿ ಕಸುಬುಗಳಲ್ಲಿ ಇದೂ ಸಹ ಒಂದು ಬಹಳ ಮುಖ್ಯವಾದದ್ದು. ಮೈಸೂರು ದೇಶದಲ್ಲೂ ಮೂರು-ನಾಲ್ಕು ಈ ಕುರಿ ಅಭಿವೃದ್ಧಿ ಕೇಂದ್ರಗಳಿರುತ್ತವೆ. ಆದರೆ ಈ ಬೆಂಗಳೂರು ಜಿಲ್ಲೆಯಲ್ಲಿ ಇರತಕ್ಕ ಈ ಕುರಿ ಅಭಿವೃದ್ಧಿ ಕೇಂದ್ರದಲ್ಲಿ ಅಂಥ ಯಾವ ಅಭಿವೃದ್ಧಿಯನ್ನು ಸಾಧಿಸಿರತಕ್ಕದ್ದು ಇಲ್ಲಿಯ ವರೆಗೆ ನಮ್ಮ ಕಣ್ಣಿಗೆ ಬಿದ್ದಿಲ್ಲ. ಆ ಅಸೋಸಿಯೇಷನ್‌ಗಳವರಿಗೆ ಸರಿಯಾಗಿ ಈ ಕ್ಲಿಪ್ಪಿಂಗ್ ಮೆಷೀನ್‌ಗಳೇ ಸಿಕ್ಕದೆ ಬಹಳ ತೊಂದರೆಪಡುತ್ತಿದ್ದಾರೆ. ಅವುಗಳನ್ನು ಇಲ್ಲಿಯ ತನಕ ಪಾಶ್ಚಿಮಾತ್ಯ ರಾಷ್ಟ್ರಗಳಿಂದಲೇ ತರಿಸಲಾಗುತ್ತಿದೆ. ಆದರೆ ಅವುಗಳನ್ನು ನಮ್ಮಲ್ಲೇ ತಯಾರಿಸುವುದಕ್ಕೆ ಅವಕಾಶವಿದ್ದರೆ ಅದನ್ನು ಪರಿಶೀಲಿಸಿ ಅವರಿಗೆ ಬೇಗ ಆ ಕ್ಲಿಪ್ಪಿಂಗ್ ಮೆಷೀನ್‌ಗಳನ್ನೇ ಒದಗಿಸಬೇಕು. ಇನ್ನು ಈ ಇಲಾಖೆಯಲ್ಲಿ ಸಾಕಷ್ಟು ಟ್ರೈನ್ಡ್ ಡಾಕ್ಟರುಗಳಿಲ್ಲದೆ ಬಹಳ ತೊಂದರೆಯಾಗಿದೆ. ಈ ಕೊರತೆಯನ್ನು ನಿವಾರಣೆ ಮಾಡುವ ತನಕ್ಕ ಈಗ ರಿಟೈರ್ ಆಗತಕ್ಕ ಡಾಕ್ಟರುಗಳೇನಿರುತ್ತಾರೆ ಅವರನ್ನೇ ಸ್ವಲ್ಪ ಇನ್ನು ಸರ್ವೀಸಿನಲ್ಲಿರುವಂತೆ ಮುಂದುವರಿಸುವುದು ಅಗತ್ಯವೆಂದು ಸಲಹೆ ಮಾಡಲಿಚ್ಛಿಸುತ್ತೇನೆ. ನಮ್ಮ ಈ ಇಲಾಖೆಗಳಲ್ಲಿ ಪರಿಣತರಿಲ್ಲದೆ ಹೋದರೆ ಯಾವ ಅಭಿವೃದ್ಧಿ ಕೆಲಸಗಳೂ ಆಗುವುದಿಲ್ಲ. ಆದುದರಿಂದ ಈ ಇಲಾಖೆಯ ಆಡಳಿತವನ್ನು ಸ್ವಲ್ಪ ಒಳಹೊಕ್ಕು ಮಾನ್ಯ ಮಂತ್ರಿಗಳು ಪರಿಶೀಲಿಸತಕ್ಕದ್ದು ಅಗತ್ಯ. ಅದಕ್ಕೆ ಹೆಚ್ಚು ಗಮನ ಕೊಡಬೇಕೆಂತ ನಾನು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಹಾರ್ಟಿಕಲ್‌ಚರಲ್ ಇಲಾಖೆಯ ವಿಚಾರ ಹಿಂದೆ ಈ ಇಲಾಖೆ ವ್ಯವಸಾಯದ ಇಲಾಖೆಯ ಆಡಳಿತಕ್ಕೊಳಪಟ್ಟಿತ್ತು. ಈಗ ಇದನ್ನು ಒಂದು ಪ್ರತ್ಯೇಕ ಇಲಾಖೆಯನ್ನಾಗಿ ಮಾಡಲಾಗಿದೆ. ಈ ದಿವಸ ನಮಗೆ ಈ ಆಹಾರದಲ್ಲಿ ಬೀಳತಕ್ಕ ಕೊರತೆಯನ್ನು ಈ ಹಣ್ಣು ಹಂಪಲು-ತರಕಾರಿಗಳಿಂದ ಆ ನಷ್ಟವನ್ನು ಭರ್ತಿ ಮಾಡಿಕೊಳ್ಳಬೇಕಾಗಿದೆ. ಆದುದರಿಂದ ದೇಶಾದ್ಯಂತವೂ ಎಲ್ಲ ಕಡೆಗಳಲ್ಲೂ ಈ ಹಣ್ಣುಗಳನ್ನು ತರಕಾರಿಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯಲು ಅವಕಾಶವಿದೆ. ಆದುದರಿಂದ ಜನರಿಗೆ ಒಳ್ಳೆಯ ಅಂದರೆ ಉತ್ತಮ ಜಾತಿ ಬೀಜಗಳನ್ನೇ ಸರ್ಟಿಫೈಡ್ ಜನರಿಂದ ದೊರೆಯುವಂತೆ ಒಂದು ವ್ಯವಸ್ಥೆ ಮಾಡಬೇಕಾಗಿದೆ. ಹಾಗೇ ಈ ಗ್ರಾಫ್ಟೆಡ್ ಗಿಡಗಳನ್ನು ಸಹ ಸರ್ಟಿಫೈಡ್ ಸೇಲ್ಸ್ ಮ್ಯಾನ್‌ಗಳಿಂದಲೇ ಸರಬರಾಯಾಗುವಂತೆ ಮಾಡಬೇಕು. ಕೆಲವು ಖೋಟಾ ಗ್ರಾಫ್‌ಟೆಡ್ ಗಿಡಗಳನ್ನು ಐದು ವರ್ಷದಲ್ಲೇ ಫಲಬಿಡುತ್ತೆಂದು ಕೊಟ್ಟಿದ್ದವುಗಳಿಂದ ಯಾವ ಫಸಲೂ ಬಾರದೇ ರೈತರು ಬಹಳ ಅನುಮಾನಕ್ಕೀಡಾಗಿದ್ದಾರೆ. ಹೀಗಾಗಿ ಜನರು ಈ ದಿವಸ ಈ ಹಣ್ಣಿನ ಗಿಡ ಬೇಸಾಯಕ್ಕೆ ಹೆಚ್ಚು ಗಮನ ಕೊಡದಂತಾಗಿದೆ.

ಆ ರೀತಿ ಆಗದ ಹಾಗೆ ಸಾಕದಷ್ಟು ಸಿಬ್ಬಂದಿ ಇಟ್ಟು ಈ cultivation ಮಾಡಬೇಕು. ಬೆಂಗಳೂರು ಜಿಲ್ಲೆಯಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚು ಎಕರೆಗಳಲ್ಲಿ ದ್ರಾಕ್ಷಿ ಬೆಳೆದಿದೆ. ಅದಕ್ಕೆ ಕಾರಣ ಕರ್ತರು ಬೆಂಗಳೂರು ಸಿಟಿ ಕೋ-ಆಪರೇಟಿವ್ ಸೊಸೈಟಿಯವರು. ಇವತ್ತಿನ ದಿನ ಅದನ್ನು ಬರೀ ಹಣ್ಣಿನ ರೂಪದಲ್ಲಿ ಬಳಸುವುದಕ್ಕೆ ಸಾಧ್ಯವಿಲ್ಲ; ಅದನ್ನು ಬೇರೆ ರೀತಿಯಲ್ಲಿ ಪರಿವರ್ತನೆ ಮಾಡಬೇಕೆಂದು ಹತ್ತಾರು ಸಾರಿ ಸರ್ಕಾರದವರ ಗಮನಕ್ಕೂ ವ್ಯವಸಾಯ ಮಂತ್ರಿಗಳಾದ ಶ್ರೀ ನಾರಾಯಣ ಗೌಡರ ಗಮನಕ್ಕೂ ತಂದು ಸೊಸೈಟಿ ಮುಖಾಂತರ ಅಥವಾ ಬೇರೆ ಕ್ಷೇತ್ರದಲ್ಲಿ ದ್ರಾಕ್ಷಿ ಹಣ್ಣಿನಿಂದ 'ವೈನ್' ತಯಾರಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಎಂದು ತಿಳಿಸಿದೆವು. ಇಡೀ ಭಾರತದಲ್ಲಿ ಬೆಂಗಳೂರಿನ ಕಪ್ಪು ದ್ರಾಕ್ಷಿ ಉತ್ತಮವಾದ ಹಣ್ಣು, ಅದರಲ್ಲಿ ಉತ್ತಮವಾದ 'ವೈನ್' ಆಗುತ್ತದೆಂದು ಮೈಸೂರಿನ food technological instituteನವರು ಹೇಳಿದ್ದಾರೆ. ಸರ್ಕಾರ ಇದರ ಕಡೆ ಹೆಚ್ಚಿನ ಗಮನವನ್ನು ಕೊಟ್ಟು 10-12 ಸಾವಿರ ಎಕರೆ ಪ್ರದೇಶದಲ್ಲಿರುವ ದ್ರಾಕ್ಷಿ ಬೆಳೆ ಹಾಳಾಗದಂತೆ ನೋಡಿಕೊಳುವುದು ಅವರ ಕರ್ತವ್ಯ. ಈ ಕ್ಷೇತ್ರದಲ್ಲಿ ಪೈಪೋಟಿಗೆ ಸಾಕಾದಷ್ಟು ಅವಕಾಶವಿದೆ. ದ್ರಾಕ್ಷಾರಸ ತೆಗೆಯುವ ಉದ್ಯಮವನ್ನು ಸರ್ಕಾರದವರೂ ಮಾಡದೆ, ಬೇರೆಯವರಿಗೂ ಕೊಡದೆ ನಿಧಾನ ಮಾಡುವುದರಿಂದ ಬಹಳ ನಷ್ಟವಾಗುತ್ತದೆ. ಸರ್ಕಾರದವರು ನಿಧಾನಮಾಡುವುದರಿಂದ ಒಂದೊಂದು seasonನಲ್ಲೂ ಆಗುವ ನಷ್ಟವನ್ನು ತಡೆಯಲಾರದೆ ದ್ರಾಕ್ಷಿಯ ಗಿಡಗಳನ್ನು ತೆಗೆಯುವುದಕ್ಕೆ ಮೊದಲು ಮಾಡಿದ್ದಾರೆ. ಜನರಿಗೆ dicourage ಆಗದ ಹಾಗೆ ದ್ರಾಕ್ಷಾರಸ ತೆಗೆಯುವ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

6–30 P.M.

ಇನ್ನು ಳಿದಿರತಕ್ಕದ್ದು ಸಹಕಾರ ಸಂಘಗಳು. ನಮ್ಮ ಸ್ನೇಹಿತರು ಹೇಳಿದಂತೆ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳುವುದಕ್ಕೆ ಶಕ್ತಿಕೊಟ್ಟಿದೆ, ಪ್ರತಿಯೊಂದು ಪಂಚಾಯಿತಿಗಳಲ್ಲಿಯೂ Service Co-operatives ಮಾಡಬೇಕೆಂದು ಹೊರಟದ್ದಾರೆ. ಅದರ ಆದಳಿತವನ್ನು ಖಾಸಗೀ ಜನಗಳಿಗೇ ಬಿಟ್ಟಿದ್ದಾರೆ. ಒಂದೊಂದು ಪಂಚಾಯಿತಿಯಲ್ಲಿರುವ ಜನ ನಿಸ್ವಾರ್ಥತೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿದೆ ಎಂದು ನೋಡತಕ್ಕ ಕಾಲ ಬಂದಿದೆ. Large Societies ಎಂದು ನಾಲ್ಕೈದು ಪಂಚಾಯಿತಿಗಳಿಗೆ ಒಂದೊಂದು ಸೊಸೈಟಿ ಮಾಡಿ ಉತ್ತಮವಾಗಿ ನಡೆಸುವುದಕ್ಕೆ ಅವರ ವಶಕ್ಕೆ ಕೊಟ್ಟು ಅವು ಚೆನ್ನಾಗಿ ಬೆಳೆದು ಅವುಗಳ ಪ್ರಯೋಜನವಾಗಿದೆ. ನನಗೆ ತಿಳಿದ ಹಾಗೆ ಸರ್ವಿಸ್ ಕೋ-ಆಪರೇಟಿವ್ಸ್‌ನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ, ಸೊಸೈಟಿಗಳು ರಿಜಿಸ್ಟರಾಗಿ ಹಾಗೆಯೇ ಇದೆ.

ಇವುಗಳ supervisionನಲ್ಲಿ ಅಲ್ಲಿ ಇಲ್ಲಿ ಲೋಪದೋಷಗಳು ಬರುತ್ತವೆ. ಇದಕ್ಕೆ ಬಹುಶಃ ಖಾಸಗಿಯವರಿಗೆ ಕೊಟ್ಟಾಗ, ನಿಸ್ವಾರ್ಥತೆ ಇಲ್ಲದಿರುವಾಗ ಅನ್ಯಾಯ ನಡೆದಾಗ ಅದನ್ನು ನೋಡಿಕೊಳ್ಳುವುದಕ್ಕೆ ಸರ್ಕಾರದ ಯಂತ್ರವಿದೆ. 50-60 ಸೊಸೈಟಿಗಳು ರಿಜಿಸ್ಟರಾದರೆ 10-15 ಮಾತ್ರ ಕೆಲಸಮಾಡುತ್ತವೆ. Co-operative Inspectors ಅಥವಾ Co-operative Extension Officers ಸ್ವಲ್ಪ ತ್ವರಿತದಿಂದ ಕೆಲಸ ಮಾಡಿ. ಸಾಕಾದಷ್ಟು ಸೂಪರ್‌ವಿಷನ್ ಇದ್ದರೆ, ಯಾವ ತರಹ ಲೋಪಕ್ಕೂ ಅವಕಾಶವಿರುವುದಿಲ್ಲ. ಸಾಹುಕಾರರ ಕೈತಪ್ಪಿಸಿ ನೇರವಾಗಿ ಅವರ ಶಕ್ತಿಯಿಂದಲೇ ಸಹಾಯಗಳನ್ನು ಪಡೆಯುವುದಕ್ಕೆ ಉತ್ತಮವಾದ ಕಾಲ ಬಂದಿದೆ. ಈಗಿರುವ supervision ಏನೇನೂ ಸಾಲದು. ಮಾನ್ಯ ಮಂತ್ರಿಗಳು ಇದರ ಕಡೆಗೆ ಗಮನಕೊಟ್ಟು ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಮದ್ರಾಸಿನಲ್ಲಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಒಬ್ಬ ಮನುಷ್ಯ ದಸ್ತು ಮಾಡಿದನೆಂದರೆ ಕೂಡಲೇ ಕಾನೂನು ಪ್ರಕಾರ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಾರೆ. ನಮ್ಮಲ್ಲಿ ಸಾಕಾದಷ್ಟು ದಾಕ್ಷಿಣ್ಯಕ್ಕೆ ಪ್ರಭಾವಗಳಿಗೆ ಸಿಕ್ಕಿ ಬೀಳುತ್ತಾರೆ. ಕೆಲವರಂತೂ ಈ ಸೊಸೈಟಿಗಳಿಂದಲೇ ಜೀವನ ಮಾಡುವುದಕ್ಕೆ ಹೋಗಿದ್ದಾರೆ. ಇದಕ್ಕೆಲ್ಲ ಕಾರಣ ಮೇಲ್ಪಟ್ಟ ಅಧಿಕಾರಿಗಳು ಸ್ವಲ್ಪ ಮಟ್ಟಿಗೆ ಅವರನ್ನು ಕಾನೂನು ಪ್ರಕಾರ deal ಮಾಡದೇ ಇರುವುದೇ ಆಗಿದೆ. ಈ ಒಂದು ಧರ್ಮ ಸಂಸ್ಥೆಗಳಲ್ಲಿ ಕೆಲಸ ಮಾಡುವ ಜನ ತಪ್ಪುಮಾಡಿದಾಗ ಅವರು ಯಾರೇ ಆಗಿರಲ್ಲಿ ಶಿಕ್ಷೆಗೆ ಗುರಿಪಡಿಸಿದರೆ ಸಹಕಾರ ಸಂಘಗಳು ಅಭಿವೃದ್ಧಿಯಾಗುತ್ತವೆಂದು ತಿಳಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

Mr. SPEAKER.—Before calling upon the next Member may I know the total time required by the Ministers for their reply ?

Sri G. NARAYANA GOWDA.—I require about 45 minutes.

Sri B. RACHAIAH.—I require 45 minutes.

Sri KONDAJJI BASAPPA.—About half an hour.

Mr. SPEAKER.—Roughly $2\frac{1}{2}$ hours may be needed. We will adjust accordingly. Secondly, I would like to know the sense of the House on the question whether we should reserve tentatively time for clarifications or should we discontinue the custom of asking clarifications?

Sri C. J. MUCKANNAPPA.—Whether clarification should be allowed or not is the Chair's discretion.

Mr. SPEAKER.—But I will have to ascertain the sense of the House. Discretion cannot be arbitrary.

Sri C. J. MUCKANNAPPA.—If one or two members want clarifications, I think the Speaker should not shut it out.

Sri V. M. DEO.—When the Ministers are taking such a long time, I think there is no need for clarifications.

Mr. SPEAKER.—I will consider that.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಇವೊತ್ತು ಎರಡು ವಿಚಾರ ಮಾತನಾಡಬೇಕೆಂದಿದ್ದೇನೆ. ಒಂದು ಅಗ್ರಿಕಲ್ಚರ್ ಇನ್ನೊಂದು ಅನಿಮಲ್ ಹಸ್ಬೆಂಡ್ರಿ. ಮೊದಲು ವ್ಯವಸಾಯವನ್ನು ತೆಗೆದುಕೊಂಡು, ಅದರ ಸಂಬಂಧದಲ್ಲಿ ಕಳಿಸಿರುವ ಜೋತಾ ಸೂಚನೆಯಲ್ಲಿ ಸೂಚಿಸಿರುವ item 18, 30, 35 ಮತ್ತು 44ರ ಬಗ್ಗೆ ಮಾತನಾಡುತ್ತೇನೆ. ಇವು ನಾಲ್ಕು ಒಳ್ಳೆಯ ವಿಷಯಗಳು. ಇವು ಯಾವುವೆಂದರೆ Installation of pumpsets, well boring machines, Research and Mechanisation ಇವು ವ್ಯವಸಾಯವನ್ನು ಜಾಸ್ತಿ ಮಾಡುತ್ತವೆ. ಹಾಗೆಯೇ ಪಶು ಸಂಗೋಪನ ಇಲಾಖೆಯನ್ನು ತೆಗೆದುಕೊಂಡರೆ cross breeding, control of diseases, increase of animal products ಇವುಗಳ ವಿಚಾರವಾಗಿ ಹೇಳಬಯಸುತ್ತೇನೆ.

ನಾನು ಮೊದಲು ಆರಂಭಕ್ಕೆ ಇಳಿದಾಗ ಪಾಪರ್ ಆಗಿಬಿಟ್ಟೆ. ಆಗ ಏನು ಮಾಡಬೇಕೆಂದು ಯೋಚಿಸಿದೆ ನನ್ನ ಹತ್ತಿರ ಹೆಚ್ಚು ದುಡ್ಡಿರಲಿಲ್ಲ. ಸರ್ಕಾರ ನಡೆಸತಕ್ಕ ಪ್ರತಿಯೊಂದು ಬಾಬಿನಲ್ಲಿಯೂ ನಷ್ಟ ಮಾಡಿಕೊಳ್ಳುತ್ತವೆಂದು ಕೇಳಿದ್ದೇನೆ. ಅದರ ಪೈಕಿ ಸರ್ಕಾರಕ್ಕೆ ಕಡಮೆ ನಷ್ಟವಾಗುವ ಇಲಾಖೆ ಯಾವುದಿದೆಯೋ ಆ ಇಲಾಖೆ ಮಾಡುವ ಕೆಲಸವನ್ನು ನಾನೂ ಮಾಡೋಣವೆಂದು ತೀರ್ಮಾನಿಸಿದೆ. ಕೋಳಿ ಸಾಗಾಣಿಕೆಯಲ್ಲಿ ಸ್ವಲ್ಪ ಲಾಭವಿತ್ತು ಈಗ ಅದೂ ಕಡಮೆಯಾಗಿದೆ. ಇದಕ್ಕೆ ಕಾರಣವೇನೆಂದರೆ ಮಾರ್ಕೆಟಿಂಗ್ ಮಾಡುವಾಗ ಅದರಲ್ಲಿರುವ ನ್ಯೂನತೆಗಳು. ನನ್ನ ಮಾನ್ಯ ಸ್ನೇಹಿತರಾದ ಕೃಷ್ಣಪ್ಪನವರು ಯಾವತ್ತಿಗೂ ಮಾರ್ಕೆಟ್ ಇಲ್ಲದೆ ಇದ್ದರೆ ಆ ವೃತ್ತಿ ಹಾಳಾಗುತ್ತದೆ ಎಂದು ಹೇಳುತ್ತಾರೆ. ಆ ವಿಚಾರದಲ್ಲಿ ನನಗೂ ಅವರಿಗೂ ಭಿನ್ನಾಭಿಪ್ರಾಯವಿಲ್ಲ. ಈ animal productsನಲ್ಲಿ ಲಾಭ ಬರುತ್ತಿಲ್ಲವೆಂದು ಅವರೇ ಹೇಳಿದ್ದಾರೆ. ಇದಕ್ಕೆ ಏನೋ ಒಂದು ಕಾರಣವಿರಬೇಕು. ಮಾನ್ಯ ಮಂತ್ರಿಗಳು ಬಹಳ ದೇಶ ತಿರುಗಾಡಿಕೊಂಡು ಬಂದಿದ್ದಾರೆ. ಅಲ್ಲಿ ಯಾವರೀತಿ ವ್ಯವಸ್ಥೆ ಇದೆ, ಯಾವರೀತಿ ಇದರಿಂದ ಲಾಭ ಬರುವಂತೆ ಮಾಡಬಹುದೆಂಬುದು ಅವರಿಗೆ ಗೊತ್ತಿರಬಹುದು. ನಮ್ಮಲ್ಲಿಯೂ ಸಹ ಇತರ ದೇಶಗಳಲ್ಲಿ ಮಾಡುತ್ತಿರುವಂತೆ ಮಾಡಿ ಸರ್ಕಾರಕ್ಕೆ ನಷ್ಟವಾಗದಂತೆಯೂ, ಜನರಿಗೆ ಪ್ರಯೋಜನವಾಗುವಂತೆಯೂ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇಲ್ಲಿ ಒಂದು ವಿಚಾರವನ್ನು ಹೇಳುತ್ತೇನೆ. ನೀವೆಲ್ಲ ಮಂತ್ರಿಗಳು ಟೂರು ಪ್ರೋಗ್ರಾಂ ಹಾಕಿಕೊಂಡು, ಅಲ್ಲಿ ಜೀಪುಗಳಲ್ಲಿ ಹೋಗಿದ್ದೆವು ಇಲ್ಲಿ ಹೋಗಿದ್ದೆವು ಎಂದು ಹೇಳಿ ರಾಜಕೀಯ ಮಾಡುವುದು ಬೇಡ. ಆ ರೀತಿ ಕಾಂಗ್ರೆಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಡಿಸ್ಟ್ರಿಕ್ಟುಗಳಿಗೆ ಟೂರು ಹೋದಾಗ ಎಲ್ಲೆಲ್ಲಿ ಏನೇನು ಕೆಲಸಗಳಾಗಿವೆ, ಸ್ಕೀಮಿನಂತೆ ಜನಕ್ಕೆ ಉಪಯೋಗವಾಗಿದೆಯೋ ಎಂದು ನೋಡುವುದಕ್ಕೆ ಈ ಮಂತ್ರಿಗಳು ಹೋಗುವುದಿಲ್ಲ. ಸುಮ್ಮನೆ ಬಾಯಲ್ಲಿ ಇಲ್ಲಿಗೊಂದು ಪ್ಲಾನನ್ನು ಇಂಪ್ಲಿಮೆಂಟು ಮಾಡುತ್ತೇವೆ ಎಂದು ಹೇಳುತ್ತಾರೆ. They don't inspect villages. ಒಂದೊಂದು ಡಿಪಾರ್ಟುಮೆಂಟಿಗೂ Relativity ನೆಲ ಇರುವುದಿಲ್ಲ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಒಂದಕ್ಕೊಂದು ಕೋಆರ್ಡಿನೇಷನ್ನು ಇಲ್ಲದಿರುವುದು. ಹಿಂದೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಪರದೇಶಗಳಿಗೆ ಟೂರು ಹೋಗಿದ್ದಾಗ ಅಲ್ಲೆಲ್ಲಾ ಡಿಪಾರ್ಟುಮೆಂಟುಗಳು ಸ್ಟೋರಿನ ಮೂಲಕವೇ ಎಲ್ಲ ಉಪಕರಣಗಳನ್ನು ಮಾರು

ತ್ತಿರುವುದನ್ನು ನೋಡಿ ಬಂದಿದ್ದಾರೆ. ಅಂತಹ ಷೋರೂಮುಗಳು ಇಲ್ಲಿಯೂ ಇದ್ದರೆ ಎಷ್ಟು ಚೆನ್ನಾಗಿರುತ್ತದೆ ಎನ್ನುವುದನ್ನು ಬಾಯಲ್ಲಿ ಹೇಳುತ್ತಾರೆ. ಆ ರೀತಿಯಿಂದ ಒಂದೇ ಒಂದು ಷೋ ರೂಂ ನಮ್ಮ ಬೆಂಗಳೂರಿನಲ್ಲಿ ಮಹಾತ್ಮಾ ಗಾಂಧಿ ರೋಡಿನಲ್ಲಿರುವ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಎಂಪೋರಿಯಂ ಅಲ್ಲಿರುವ ಹುಡುಗಿಯರೂ ಸಹ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಿಜವಾಗಿಯೂ ಇಂತಹ ಷೋ ರೂಮುಗಳು ಇದ್ದರೆ ನೋಡುವುದಕ್ಕೂ ಚೆನ್ನಾಗಿರುತ್ತದೆ. ಈರೀತಿ ಇಲಾಖೆಗಳನ್ನು ಡೆವೆಲಪ್ ಮಾಡಬೇಕು. ಆ ರೀತಿ ಮಾಡುವಾಗ ಎಲ್ಲ ಇಲಾಖೆಗಳ ಮೇಲೆಯೂ ಸರಿಯಾದ ಕಂಟ್ರೋಲ್ ಇಟ್ಟು ಚೆಕ್ ಮಾಡಬೇಕು. ಆ ರೀತಿ ಏನನ್ನೂ ಮಾಡದೆ ಸುಮ್ಮನೆ ಎಲ್ಲವನ್ನೂ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ ನಮ್ಮ ರಾಷ್ಟ್ರದಲ್ಲಿ ಎಲ್ಲ ಕತ್ತರಿ ಬೀಳುತ್ತದೆ ಯಾವರೀತಿಯಾಗಿ ದುಡ್ಡನ್ನು ತಿನ್ನಬಹುದು ಎನ್ನುವುದನ್ನೆಲ್ಲಾ ಜನ ತಿಳಿದಿದ್ದಾರೆ. ಬೇಕಾದಷ್ಟು ಡಿಪಾರ್ಟುಮೆಂಟುಗಳನ್ನೂ ಮಾಡುತ್ತಾರೆ. ಆದರೆ ಅದನ್ನು ಸರಿಯಾಗಿ feed ಮಾಡುತ್ತಿಲ್ಲ. ಹಳ್ಳಿಗಳಲ್ಲಿ ಹೆಚ್ಚಿನ ಉತ್ಪತ್ತಿ ಮಾಡಿ ಲಾಭ ಸಂಪಾದನೆ ಮಾಡಬೇಕೆಂದು ಹೇಳುತ್ತಾರೆ. ಇದಕ್ಕೆ ಬೇಕಾದಷ್ಟು ಸಾಲ ಕೊಡುತ್ತಾರೆ, ಬಂಡವಾಳ ಹಾಕುತ್ತಾರೆ, ಎಲ್ಲ ಮಾಡುತ್ತಾರೆ, ಪ್ರತಿವರ್ಷವೂ ರಾಷ್ಟ್ರದ ದುಡ್ಡನ್ನು ಹಾಕಿ ಅದರಿಂದ ಸರಿಯಾದ ಲಾಭ ಬರುತ್ತಿದ್ದರೆ, ಸರಿಯಾಗಿರುತ್ತಿತ್ತು. ಆ ರೀತಿ ಲಾಭ ಬರುವಂತಹ ಯೋಜನೆ ಮಾಡಿದ್ದೀರಾ ಎಂದರೆ ಏನೂ ಇಲ್ಲ. ನಮಗೆ ಬಂದಿರುವ ಬಳುವಳಿ ಏನು ಎನ್ನುವುದನ್ನು ತಿಳಿದುಕೊಳ್ಳಬೇಕು. ಮೈಸೂರು ಸಂಸ್ಥಾನ ಹಿಂದೆ ಎಲ್ಲರಿಗೂ ಮಾದರಿಯಾದ ಸಂಸ್ಥಾನವೆಂದು ಹೆಸರು ಗಳಿಸಿತ್ತು. ಎಲ್ಲ ಕ್ಷೇತ್ರದಲ್ಲಿಯೂ ಪ್ರಗತಿ ಸಾಧಿಸಿತ್ತು. ಆದರೆ ಈಗಿನ ಕಾಲದಲ್ಲಿ ನೋಡಿದರೆ ಹಿಂದೆ ಈ ಸಂಸ್ಥಾನ ಹಾಗಿತ್ತೋ ಇಲ್ಲವೋ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲ ಜನರೂ ಇದನ್ನು ನೋಡಿ ನಗುತ್ತಿದ್ದಾರೆ. ಇದರ ಅರ್ಥವೇನು ಎನ್ನುವುದನ್ನು ತಾವು ಸರಿಯಾಗಿ ತಿಳಿದುಕೊಳ್ಳಬೇಕು. ಅಮೇರಿಕಾದಲ್ಲಿ ಹಿಂದೆ ಇದ್ದ 'ಲಿಂಕನ್' ಎಂಬುವರು ಎಷ್ಟೋ ವರ್ಷಗಳ ಹಿಂದೆ ಒಂದು ಮಾತು ಹೇಳಿದರು, ಅದು 'Government of the People, Government for the People and Government by the People' ಎಂದು. ಕೆಲವರು ಇಲ್ಲಿ ಹೇಳುತ್ತಾರೆ ಇಲ್ಲಿರುವುದು Government of the People ಎನ್ನುವಂತಿದ್ದಾರೆ. ಇದು ಕಾಂಪೊಂಡು ಗೋಡೆಯಂತಾಗುತ್ತಿತ್ತು. ಅದು ಬೇರೆ ವಿಚಾರ. ಸಾರ್ವಜನಿಕರಿಂದ ಹಣ ಎತ್ತಿಟ್ಟು ಸಾರ್ವಜನಿಕರಿಗಾಗಿ ನೀರಾವರಿ ಮಾಡುತ್ತೇವೆನ್ನುತ್ತಾರೆ. ಹಿಂದೆ ನಮ್ಮ ಮಹಾರಾಜರೇ ಭಾವಿ ತೆಗೆಸಿ ಜನಕ್ಕೆ ನೀರಾವರಿಗೆ ಸಹಾಯ ಮಾಡುತ್ತಿದ್ದರು.

It was not by the people. ಹಿಂದೆ ಮಹಾರಾಜರು ಚೆನ್ನಾಗಿ ಅರಿತಂತಹವರನ್ನು ದಿವಾನರನ್ನಾಗಿ ನೇಮಿಸಿಕೊಳ್ಳುತ್ತಿದ್ದರು, ಆಗ ಚೆನ್ನಾಗಿ ಕೆಲಸ ನಡೆಸುತ್ತಿದ್ದರು. ಇದರಲ್ಲಿ ಒಂದು ನೈತಿಕ ಪ್ರಶ್ನೆ ಬರುತ್ತದೆ ಅದೇನೆಂದರೆ ನೀವು ಸಾರ್ವಜನಿಕರಿಂದ ಹಣ ಎತ್ತಿ ಅವರಿಗಾಗಿ ದೇಶಕ್ಕಾಗಿ ಪ್ರೊವೈಡು ಮಾಡುತ್ತಿದ್ದೇವೆ ಎಂದು ಹೇಳುತ್ತ ನೀವು ಹೆಸರು ಸಂಪಾದಿಸಬಹುದು. ಆದರೆ ಯಾವಾಗ ಕೆಲಸಮಾಡುವುದಕ್ಕೆ ಷುರುಮಾಡಿದ್ದೀರಿ ಅದರಿಂದ ಜನರಿಗೆ ಬರುವ ಪ್ರಯೋಜನ ಏನು ಎಂದು ಯಾರೂ ನೋಡುವುದಕ್ಕೆ ಹೋಗುವುದಿಲ್ಲ. ನಿಜವಾಗಿಯೂ ನೋಡಿದರೆ ಎಷ್ಟು ಇಂಚಿನ ಕಾಲುವೆ ಮಾಡಿದ್ದೀರಿ. ಎಷ್ಟು ಕೊಳಚೆ ಪ್ರದೇಶಗಳನ್ನು ನಿರ್ಮೂಲಮಾಡಿದ್ದೀರಿ ಎನ್ನುವುದನ್ನು ಏನೂ ಹೇಳಲಿಲ್ಲ, ಇದಕ್ಕೆಲ್ಲ ಮೂಲದಾರಿ ಯಾವುದೂ ಎಂದು ಹೇಳಿದ್ದರೆ ಒಳ್ಳೆಯದಾಗಿತ್ತು. ಎಷ್ಟೋ ಕಾರಣಗಳನ್ನು ನಾನು ಶಾಂಪಲ್ ಆಗಿ ಎಷ್ಟೋ ಉದಾಹರಣೆಗಳಾಗಿ ಹೇಳಬಹುದು. ಸ್ವಲ್ಪ ನಿಮ್ಮ ಮಂತ್ರಿ ಮಂಡಲವನ್ನೇ ನೋಡಿ, ನೀವೇನೋ ನಿನ್ನೆ ಮೊನ್ನೆ ಬಂದವರು ನಿಮಗಿಂತ ಹಿಂದೆ ಇದ್ದವರು ಹೇಗೆ ಮಾಡಿದ್ದರು ಎನ್ನುವುದನ್ನು ನೋಡಿಕೊಂಡು ನೀವು ಹಾಗೆಯೇ ಮಾಡಿಕೊಂಡು ಹೋಗುತ್ತಿದ್ದೀರೇ ವಿನಾ ಏನೂ ಬದಲಾವಣೆಯಿಲ್ಲ.

Mr. SPEAKER.—The Hon'ble Member has not come to Agriculture as yet. He has got something original in regard to Agriculture.

ಶ್ರೀ ವಿ. ಎಂ. ದೇವ್.—ನಾನು ಹೇಳುವುದು ಇಷ್ಟು. ನೀರಾವರಿಗೆಂದು ಬಾವಿ ಮಾಡಿಸಿ, ಪಂಪ್‌ಸೆಟ್ಟುಗಳನ್ನೇನೋ ಕೊಡುತ್ತಿದ್ದೀರಿ. ಆದರೆ ಈ ನೀರಿಗೆ ಮೂಲ ಎಲ್ಲಿ, ಎಲ್ಲಿಂದ ಬರುತ್ತದೆ ಎನ್ನುವುದನ್ನು ಹೇಳಲಿಲ್ಲ. ಕೆರೆಗಳು ಆಗಬೇಕು, ರಿಸರ್ವಾಯರು ಆಗಬೇಕು, ಅಣೆಕಟ್ಟು ಆಗಬೇಕು. ಅದರಿಂದ ಕಾಲುವೆ ತೆಗೆದು ನೀರನ್ನು ಉಪಯೋಗಮಾಡಿಕೊಳ್ಳಬೇಕು. ಈ ನೀರಿನ ವಿಚಾರವನ್ನು ನಾನು ಪದೇ ಪದೇ ಇಲ್ಲಿ ಹೇಳುತ್ತಲೇ ಇದ್ದೇನೆ. ಸ್ವಲ್ಪ ನೀರು ಉಪಯೋಗಿಸುವಾಗ ಯಾವ ರೀತಿ ಯಾವ ಯೋಜನೆ ಮಾಡಬೇಕು ಎನ್ನುವಾಗ ಈಗಿನ ಪರಿಸ್ಥಿತಿಯನ್ನು ಸರಿಯಾಗಿ ನೋಡಿಕೊಂಡು ಪಂಪುಗಳನ್ನು ಹಾಕುವುದಕ್ಕಾಗಲೀ, ಕೆರೆಗಳನ್ನು ಕಟ್ಟುವುದಕ್ಕಾಗಲೀ ಯೋಚನೆ ಮಾಡಿ ಮಾಡಬೇಕು. ಇದನ್ನು ಮಾಡಬೇಕಾದರೆ ಡಿಪಾರ್ಟುಮೆಂಟಿಗೂ ಕೂಡ ಖರ್ಚು ಕಡಿಮೆಯಾಗುತ್ತದೆ

(ಶ್ರೀ ಪಿ. ಎಂ. ದೇವ್).

ಇದರಿಂದ ಬೇಗ ಕೆಲಸವೂ ಆಗುತ್ತವೆ. ಆಗ ಒಂದು ಕೆರೆಯಾಗಬೇಕಾಗಿದ್ದರೆ, ಮೂರು ತಿಂಗಳಲ್ಲಿ ಆಗುತ್ತದೆ. ಆಮೇಲೆ ಮೂರು ತಿಂಗಳಲ್ಲಿ ಬೆಳೆಯೂ ಬರುತ್ತದೆ. ಬೆಳೆ ಬಂದರೆ ಅದರಿಂದ ಕಂದಾಯ ಬರುತ್ತದೆ. ಹೀಗೆ ಒಂದು fleetನಂತೆ ಕೆಲಸವಾಗುತ್ತದೆ. ಈಗ ನಾವು ನೋಡಿದರೆ ಒಂದು ಕೆರೆಯಾಗಬೇಕಾದರೆ ಹತ್ತು ವರ್ಷಗಳು ಬೇಕಾಗುತ್ತವೆ. ಈ ತರಹ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಈ ಡಿಪಾರ್ಟುಮೆಂಟುಗಳಲ್ಲಿ ನೈತಿಕವಾಗಿ ಜನಗಳಿಗೆ ಪವರು ಎಲ್ಲಿಂದ ಜನರೇಟು ಆಗುತ್ತದೆ ಎನ್ನುವುದನ್ನು ಯಾರೂ ನೋಡಿಲ್ಲ. ಇಂಗ್ಲೀಷಿನಲ್ಲಿ ಹೇಳುವಂತೆ Labour Heroism ಇರಬೇಕು. ಪ್ರತಿಯೊಬ್ಬ ಮನುಷ್ಯನಿಂದ ಅವನಿಗೆ ಕೊಟ್ಟಿರುವ ಕೆಲಸದಿಂದ ಒಳ್ಳೆಯದಾಗುತ್ತಿದೆಯೇ ಎನ್ನುವುದನ್ನು ಯೋಚನೆಮಾಡಬೇಕು. ಇದಕ್ಕೆಲ್ಲಾ ಉತ್ತೇಜನ ಮುಖ್ಯ. ಇಂತಹ ಯೋಚನೆ ಮಾಡಬೇಕಾದರೆ, ಮುಖ್ಯವಾಗಿ ಈ ದೇಶದಲ್ಲಿ ಭೂಸುಧಾರಣೆ ಬೇಗ ಬರಬೇಕು. ಅದು ಹೇಗೆ ಬರಬೇಕೆಂದರೆ ಪಟಾಕಿಸರ ಬಂದ ಹಾಗೆ, ಇದರ ಕೆಲಸವನ್ನು ನಿರ್ವಹಿಸಬೇಕು. ಇದಕ್ಕೆ ವಾತಾವರಣವನ್ನು ಕಲ್ಪಿಸಬೇಕು. ಹಾಗೆ ಮಾಡದೇ ಇದ್ದರೆ, ನಿಮ್ಮ ಐಡಿಯಾಗಳೆಲ್ಲಾ ತಲೆ ಕೆಳಗಾಗುತ್ತದೆ. ಮೊದಲನೆಯದಾಗಿ ನಿಮ್ಮ ನೈತಿಕಬಲ ಕೆಟ್ಟಿದೆ. ಅಗ್ರಿಕಲ್‌ಚರಲ್‌ನಲ್ಲಿ ಕೂಡ ಸ್ವಲ್ಪ ನೈತಿಕವಾಗಿ ನಡೆದರೆ ಬಹು ಉತ್ತಮವಾದ ಕೆಲಸವಾಗುತ್ತದೆ. ಏಕೆಂದರೆ ನೀವು ಡೈರೆಕ್ಟಾಗಿ ಹೋಗುವುದೇ ಕಡಮೆ. ಎಲ್ಲ ಇಂಡೈರೆಕ್ಟ್ ಆಗಿ ರೈತರಮೇಲೆ ಹೊರೆ ಹೊರಿಸುತ್ತಿದ್ದೀರಿ. ನಮ್ಮ ಮಂತ್ರಿಗಳು ಕೆಲವರು ಒಂದೊಂದು ಸಾರಿ ರೈತರಿಗೆ ಸಹಾಯವನ್ನು ಮಾಡೋಣ ಎನ್ನುತ್ತಾರೆ. ಇನ್ನು ಕೆಲವರು ಅರ್ಧ ದುಡ್ಡು ಜನರು ಕೊಟ್ಟರೆ ಆಗ ನೋಡೋಣ ಎನ್ನುತ್ತಾರೆ. ನಮ್ಮ ದೇಶದಲ್ಲಿ ಯೋಜನೆಗಳನ್ನು ತಯಾರು ಮಾಡಬಹುದು. ಆದರೆ ಅದಕ್ಕೆ ಬೇಕಾಗುವ ಕಚ್ಚಾ ಮಾಲುಗಳು ಎಲ್ಲಿಂದ ಬರುತ್ತದೆ ಎನ್ನುವುದನ್ನು ನೋಡಬೇಕು.

ಕೈಗಾರಿಕೆಯ ಕ್ಷೇತ್ರದಲ್ಲಿ ಒಬ್ಬ ಮಂತ್ರಿಗಳು ಒಂದು ತರಹ ಹೇಳಿದರೆ, ಮತ್ತೊಬ್ಬರು ಇನ್ನೊಂದು ತರಹ ಮಾಡಿದರೆ ಇದರಿಂದ ಜನರಿಗೆ ಅನುಕೂಲವಾಗುವುದಿಲ್ಲ.

ಒಟ್ಟಿನಲ್ಲಿ ನಾನು ಹೇಳುವುದು ನಮ್ಮ ರಾಷ್ಟ್ರಕ್ಕೆ ಲಾಭವಾಗುವಂತೆ ಮಾಡಿ; ಕೈಗಾರಿಕೆಯನ್ನು ಮಾಡುತ್ತೇವೆಂದು ಎಲ್ಲೂ ಹೇಳಲಿಲ್ಲ. ಈ ರೀತಿ ಕೈಗಾರಿಕೆ ಮಾಡುವುದು ಬೇಡ. ಎಷ್ಟೋ ದೊಡ್ಡ ದೊಡ್ಡ ಇಂಡಸ್ಟ್ರೀಸುಗಳೆಂದು ಮಾಡಿ ಕೋಟಿಗಟ್ಟಲೆ ಹಣ ಹಾಕಿದ್ದೀರಿ, ಇದರಿಂದ ಜನತೆಗೆ ಮತ್ತು ದೇಶಕ್ಕೆ ಲಾಭ ಬರುವಂತೆ ಮಾಡಿಕೊಂಡು ಜಾಸ್ತಿಮಾಡಿ. ಅದರಂತೆ ನಿಮ್ಮ ಇಲಾಖೆಗಳೂ ಕೆಲಸಮಾಡಲಿ.

ಶ್ರೀಮಾನ್ ಕೃಷ್ಣಪ್ಪನವರ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ನಿಜವಾಗಿಯೂ ಅವರಲ್ಲಿ ನಮ್ಮ ಸಂಸ್ಕೃತಿಯು ದೈವದತ್ತವಾಗಿ ಬಂದಿದೆ. ಅದು ಪ್ರಯತ್ನಪಟ್ಟು ಬೆಳೆಸಿದುದು ಅಲ್ಲ. It is very desirable. ಅದರಿಂದ ಒಳ್ಳೆಯದು ಆಗುತ್ತದೆ. ಅವರು ತಮ್ಮ ಇಲಾಖೆಯ ಮುಖಾಂತರ ಕೆಲವು ಜರ್ಸಿ ಕುದುರೆಗಳನ್ನು ತರಿಸಿದ್ದಾರೆ. ಅದರಲ್ಲಿ ಕೆಲವು ಸತ್ತುಹೋದವು. ಜರ್ಸಿ ಪ್ರಭಾವದಿಂದ ಒಳ್ಳೆಯದಿದ್ದರೆ ಒಳ್ಳೆಯದಾಗುತ್ತದೆ. ಕೆಟ್ಟದಿದ್ದರೆ ಕೆಟ್ಟದು ಆಗುತ್ತದೆ. ಒಟ್ಟಿನಲ್ಲಿ ಹೇಳುವುದು ಇಷ್ಟೇ. ದುಡ್ಡು ಹೆಚ್ಚಾಗಿ ಬರುವ ಬಾಬು ಚೆನ್ನಾಗಿ ಮಾಡಿ ದೇಶವನ್ನು ಮುಂದೆ ತರಬೇಕು. ಸುಮ್ಮನೆ ರೈತರನ್ನು ಸುಲಿದರೆ ಏನೂ ಪ್ರಯೋಜನವಾಗುವದಿಲ್ಲ.

ಅರಣ್ಯ ಇಲಾಖೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಇದರಲ್ಲಿ ಶೇಕಡ 13 ರಷ್ಟು ಅಧಿಕಾರಿಗಳನ್ನು ನೇಮಕ ಮಾಡಿಲ್ಲ. ಸರಕಾರಕ್ಕೆ ಹಾನಿಯಾಗುತ್ತದೆ. ಸಾ ಮಿಲ್ಲುಗಳಿಂದ ಖಾಸಗಿಯವರಿಗೆ ಮರದ ದಿಮ್ಮಿಗಳನ್ನು ಕಳ್ಳ ಸಂತೆಯಲ್ಲಿ ಕಳಿಸುತ್ತಿದ್ದಾರೆ ಶೇಕಡ 13 ರಷ್ಟು ಖರ್ಚು ಏತಕ್ಕೆ ಬರುತ್ತದೆ ಎಂಬುದಕ್ಕೆ ಇದು ಮುಖ್ಯವಾದ ಕಾರಣ. ಮಾನ್ಯ ಸದಸ್ಯರಾದ ಶ್ರೀಮತಿ ಬಸವರಾಜೇಶ್ವರಿಯವರು ಒಂದು ಮಾತು ಹೇಳಿದರು. ಇದರಲ್ಲಿ ಸರಿಯಾಗಿ ಇಟ್ಟುವದಿಲ್ಲ. ಅವರಿಗೆ ಸರಿಯಾಗಿ ಪರಿಹಾರ ಕೊಡಬೇಕೆಂದು ಹೇಳುತ್ತೇನೆ. ನಾವು ಎಲ್ಲರೂ ಹೇಗೆ ಆಗಿದ್ದೇವೆಂದರೆ ಬೋನಿನಲ್ಲಿ ಸುಖವಾಗಿ ಇದ್ದಹಾಗೆ ಇದೆ. ನಾವು ಸುಖ ಕಂಡಿದ್ದೇವೆ ನೀವು ಸುಖ ಕಂಡಿಲ್ಲ ಎಂದಲ್ಲ. ಮೈಸೂರು ರಾಜ್ಯ ಮೊದಲು ಪ್ರಥಮಸ್ಥಾನ ಪಡೆದಿದ್ದಿತು. ಈಗ ಆರನೇ ಸ್ಥಾನಕ್ಕೆ ಬಂದಿದೆ. ಒಳ್ಳೇ ಹೆಸರು ತರಲು ಪ್ರಯತ್ನ ಮಾಡಬೇಕು. ಬಾವಿ ವಿಚಾರದಲ್ಲಿ ಈಗಾಗಲೇ ಅನೇಕ ಸದಸ್ಯರು ಹೇಳಿದ್ದಾರೆ. ಲಿಫ್ಟ್ ಇರಿಗೇಷನ್ ಬಗ್ಗೆ ಹೇಳಿದ್ದಾರೆ. ಡಿಪಾರ್ಟ್‌ಮೆಂಟಿನವರೇ ಎಲ್ಲ ಜವಾಬ್ದಾರಿ ವಹಿಸಿ ಈ ಕೆಲಸ ಮಾಡಿಕೊಡಬೇಕು. ಜನಗಳಿಗೆ ವ್ಯವಸಾಯಕ್ಕೆ ಸಾಕಷ್ಟು ನೀರು ದೊರೆಯುತ್ತಿಲ್ಲ. ಈ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಬೇಕು.

ಮಂತ್ರಿ ಮಂಡಲದವರು ನಿಮ್ಮ ನಿಮ್ಮೊಳಗೆ ಕಚ್ಚಾಡುವದರ ಬದಲು ಈ ರೀತಿ ಸಾಂಸ್ಕೃತಿಕ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕು. ದೇಶಕ್ಕೆ ಒಳ್ಳೆಯದಾಗುತ್ತದೆ. ದೇವರು ನಿಮಗೆ ಒಳ್ಳೆ ಬುದ್ಧಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈಗ ಸಭೆಯ ಮುಂದೆ ಮಂಡಿಸಿರತಕ್ಕ ವ್ಯವಸಾಯ, ಪಶು ಸಂಗೋಪನ, ಅರಣ್ಯ, ಗ್ರಾಮಾಭಿವೃದ್ಧಿ, ಸಾಮುದಾಯಿಕ ಅಭಿವೃದ್ಧಿ ಯೋಜನೆ ಸಹಕಾರ, ಈ ಬೇಡಿಕೆಗಳನ್ನು ಸ್ವಾಗತಿಸುತ್ತೇನೆ ಮತ್ತು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ಇಲಾಖೆಯಲ್ಲಿರುವ ಕೆಲವು ನ್ಯೂನತೆಗಳನ್ನು ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಕೆಲವು ಸಲಹೆಗಳನ್ನು ಮಾಡಲು ಬಯಸುತ್ತೇನೆ. ಈ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ವ್ಯವಸಾಯ ಇಲಾಖೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಒಳ್ಳೇ ಬೀಜದ ಸಲುವಾಗಿ ಸರಕಾರದ ಮೇಲೆ ಆಶ್ರಯ ಮಾಡುವುದು ಸರಿಯಲ್ಲ ಯಾಕೆಂದರೆ ಅನೇಕ ಸಲ ಸರಕಾರಿ ಅಧಿಕಾರಿಗಳು ಬಿತ್ತನೆ ಕಾಲದಲ್ಲಿ ಒಳ್ಳೇ ಬೀಜ ಒದಗಿಸಿಲ್ಲ. ಬಿತ್ತನೆ ಕಾಲ ಆದಮೇಲೆ ಅವರು ಬೀಜ ಒದಗಿಸುತ್ತಾರೆ. ಇದರಿಂದ ಬಹಳ ಅನಾನುಕೂಲವಾಗುತ್ತದೆ. ಅಧಿಕಾರಿಗಳನ್ನು ನಂಬಿಕೊಂಡು ಬಿತ್ತನೆ ಬೀಜ ತರಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಅನೇಕ ರೈತರು ಬಿತ್ತನೆ ಸಲುವಾಗಿ ಮೊದಲೇ ಬೀಜ ಸಿದ್ಧವಾಗಿಟ್ಟುಕೊಂಡಿರುತ್ತಾರೆ. ಆದರೆ ಇದರಲ್ಲಿಯೂ ಒಂದು ಕಷ್ಟ ಇದೆ. ಬಿತ್ತನೆ ಬೀಜ ಸ್ಟಾಕ್ ಮಾಡಿ ಇಟ್ಟುಕೊಳ್ಳಲು ಸರಿಯಾದ ಸ್ಥಳದ ಅನುಕೂಲತೆ ಇಲ್ಲದ ಮೂಲಕ ತೊಂದರೆಯಾಗುತ್ತದೆ. ಇದಕ್ಕೆ ಸರಕಾರ ಸಹಾಯ ಮಾಡಿ, ರೈತರಿಗೆ ಸಾಲ ಕೊಟ್ಟು ಸ್ವಂತ ಕಣಜಗಳನ್ನು ಕಟ್ಟಿಸಿಕೊಳ್ಳುವಂತೆ ಮಾಡಬೇಕು. ಇದಕ್ಕೆ ಸಬ್‌ಸಿಡಿ ಕೊಡಬಹುದು ಇಲ್ಲದಿದ್ದರೆ ಸಾಲ ಕೊಟ್ಟರೆ ಸಾಕು. ಇನ್ನೊಂದು ವಿಚಾರ. ಬಿತ್ತನೆ ಬೀಜಗಳು ಎಷ್ಟು ಬೇಕೋ ಅಷ್ಟು ದೊರಕುತ್ತಿಲ್ಲ. ಆದ್ದರಿಂದ ಅದರ ಪ್ರಮಾಣ ಹೆಚ್ಚಿಸಬೇಕು. ಆಯಾಯ ತಾಲ್ಲೂಕಿನಲ್ಲಿ ಹೋಬಳಿಯಲ್ಲಿ ಬಿತ್ತನೆ ಬೀಜ ಬೆಳೆಯಲು ರೈತರಿಗೆ ಪ್ರೋತ್ಸಾಹ ಕೊಡತಕ್ಕಂಥಾದ್ದು ಸರಕಾರದ ಕರ್ತವ್ಯ. ಜನರೂ ಸಹ ಇದಕ್ಕೆ ಸಹಕರಿಸುತ್ತಾರೆ.

7 P.M.

ಅನೇಕ ಬೆಳೆಗಳಿಗೆ ಎಲ್ಲ ಕಡೆ ರೋಗ ಬಂದು ಬೆಳೆಗಳು ನಾಶವಾಗುತ್ತದೆ. ಇದರಿಂದ ರೈತನಿಗೆ ಬಹಳ ಹಾನಿಯಾಗುತ್ತದೆ. ಎಲ್ಲಿಯಾದರೂ ಬೆಳೆಗೆ ರೋಗ ಬಂದಿದೆ ಎಂದು ತಿಳಿದ ಕೂಡಲೆ, ಕೇಳಿದ ಕೂಡಲೆ ಸಂಬಂಧಪಟ್ಟ ಅಧಿಕಾರಿಗಳು ಜಾಗ್ರತ ಅಲ್ಲಿಗೆ ಹೋಗಿ ರೋಗದ ಲಕ್ಷಣವೇನು, ಅದಕ್ಕೆ ಏನು ಪರಿಹಾರೋಪಾಯವಿದೆ ಎನ್ನುವುದನ್ನು ಕಂಡುಹಿಡಿಯಲು ಶ್ರಮವಹಿಸಬೇಕು. ಇಲಾಖೆ ಮುಖ್ಯಾಧಿಕಾರಿ ಈ ಕೆಲಸ ವಹಿಸಿಕೊಳ್ಳಬೇಕು. ಎಲ್ಲಿ ಯಾವ ಯಾವ ರೋಗ ಬಂದಿದೆ ಎನ್ನುವದನ್ನು ಅಲ್ಲಿಗೆ ಹೋಗಿ ನೋಡುವುದಕ್ಕೆ ಅನುಕೂಲವಾಗಲು ಅವರಿಗೆ ಒಂದು ಜೀಪ್ ಕಾರ್ ಒದಗಿಸಬೇಕು ಎಂದು ಸಲಹೆ ಮಾಡುತ್ತೇನೆ.

ಮಂತ್ರಿಗಳು ಹಳ್ಳಿಗಳಿಗೆ ಹೋಗಿ ರೈತನ ಕಷ್ಟ ಸುಖವನ್ನು ತಿಳಿದುಕೊಂಡು ಬರುತ್ತಾರೆ. ಆದರೆ ಈ ಇಲಾಖೆಯ ಮುಖ್ಯಾಧಿಕಾರಿಗಳು ಹಳ್ಳಿಗೆ ಹೋಗುವದಿಲ್ಲ. ರೈತರು ಅಧಿಕಾರಿಯನ್ನು ನೋಡಿರುವದಿಲ್ಲ ಎಂಬುದು ಆಶ್ಚರ್ಯವಾಗುತ್ತದೆ. ಅಧಿಕಾರಿಗಳು ಅನೇಕ ಗಂಟೆ ಕೆಲಸ ಮಾಡುತ್ತಾರೆ. ಆದರೆ ಅವರನ್ನು ಜನರು ನೋಡಿರುವದಿಲ್ಲ. ಮುಖ್ಯಾಧಿಕಾರಿಗಳು ಜನರನ್ನು ಕಂಡು ಜನರ ಮನಸ್ಸನ್ನು ಸಂತೋಷಪಡಿಸಬೇಕು. ಬೆಳೆಗಳಿಗೆ ಬರತಕ್ಕಂಥ ರೋಗ ತಡೆಗಟ್ಟಲು ಏನೇನು ಮಾಡಬೇಕು ಎಂಬುದನ್ನು ತಾವೇ ಜನಗಳಿಗೆ ತಿಳಿಸುವಂತೆ ಬಹಳ ಪ್ರವಾಸ ಮಾಡಬೇಕು. ಟ್ರ್ಯಾಕ್ಟರ್‌ಗಳನ್ನು ಎಲ್ಲ ತಾಲ್ಲೂಕುಗಳಿಗೆ ಒದಗಿಸಬೇಕು. ಈಗ ಇರತಕ್ಕಂಥ ಡ್ರೈವರ್‌ಗಳು ಟ್ರ್ಯಾಕ್ಟರ್ ನಡೆಸುವುದಕ್ಕೆ ಸಾಕಷ್ಟು ಆಸಕ್ತಿ ವಹಿಸುವದಿಲ್ಲ, ಕೆಲಸ ತಪ್ಪಿಸಿಕೊಳ್ಳುತ್ತಾರೆ. ಆದ್ದರಿಂದ ಇತ್ತಕಡೆ ಸರಕಾರ ಹೆಚ್ಚಾಗಿ ಗಮನ ಕೊಡಬೇಕು.

ವ್ಯವಸಾಯಕ್ಕೆ ಗೊಬ್ಬರ ಬಹಳ ಮುಖ್ಯವಾದುದು. ರಾಸಾಯನಿಕ ಗೊಬ್ಬರ ಅಮೋನಿಯಂ ಸಲ್ಫೇಟ್ ಚೆನ್ನಾಗಿರುತ್ತದೆ. ಅದು ಲಾಭಕರವೆಂದು ವ್ಯವಸಾಯಗಾರರು ತಿಳಿದಂತಿದೆ. ಆದರೆ, ರಾಸಾಯನಿಕ ಗೊಬ್ಬರಕ್ಕಿಂತಲೂ, ಅಗ್ಗವಾಗಿಯೂ ಮತ್ತು ಹೆಚ್ಚಿನ ಫಸಲನ್ನು ಕೊಡುವುದಾಗಿಯೂ ಇರುವ ಗೊಬ್ಬರವಿದೆ. ನನ್ನ ಸ್ನೇಹಿತರೊಬ್ಬರು ಎರಡು ಮೂರು ಸಾರಿ ರಾಸಾಯನಿಕ ಗೊಬ್ಬರ ಉಪಯೋಗಿಸಿ ಪರೀಕ್ಷೆ ಮಾಡಿದ್ದಾರೆ. ಎಲೆ ಗೊಬ್ಬರ ಸಗಣಿ ಗೊಬ್ಬರ ಸಹ ಉಪಯೋಗಿಸಿ

(ಶ್ರೀ ಆರ್. ಮುನಿಸ್ವಾಮಯ್ಯ)

ಪರೀಕ್ಷಿಸಿದ್ದಾರೆ. ಎಲೆ ಗೊಬ್ಬರದಿಂದ ಉತ್ಪತ್ತಿ ಜಾಸ್ತಿಯಾಗುತ್ತದೆಂದು ಅವರು ಕಂಡು ಹಿಡಿದಿದ್ದಾರೆ. ಆದ್ದರಿಂದ ಎಲೆ ಗೊಬ್ಬರವನ್ನು ಹೆಚ್ಚಾಗಿ ಒದಗಿಸುವುದಕ್ಕೆ ವ್ಯವಸಾಯ ಮತ್ತು ಅರಣ್ಯ ಇಲಾಖೆಯವರು ವ್ಯವಸ್ಥೆ ಮಾಡಬೇಕು.

ನಮ್ಮಲ್ಲಿ ಮಲೆನಾಡಿನಲ್ಲ ಬೆಟ್ಟಗುಡ್ಡಗಳಲ್ಲಿ ಬೇಕಾದಷ್ಟು ಅರಣ್ಯ ಇದೆ. ಆ ಅರಣ್ಯಗಳಲ್ಲಿ ಮರಗಳಿಂದ ಎಲೆಗಳು ಉದುರುವ ಕಾಲದಲ್ಲಿ ಅವುಗಳನ್ನು ಗುಡಿಸಿ ವ್ಯವಸಾಯಕ್ಕೆ ಅದರಿಂದ ಹೆಚ್ಚಿಗೆ ಉಪಯೋಗವಾಗುವ ಕಡೆಗೆ ಸಾಗಿಸಬೇಕು. ಸಾಧ್ಯವಾದಷ್ಟು ಸಬ್ಸಿಡಿ ಕೊಟ್ಟು ಅದನ್ನು ರೈತರಿಗೆ ಒದಗಿಸುವ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

Mr. SPEAKER.—Evidently the Hon'ble Member will require more time. Is he going to conclude in a few minutes or would he like to continue to-morrow.

ಶ್ರೀ ಆರ್. ಮುನಿಸ್ವಾಮಯ್ಯ.—ನಾನು ನಾಳೆ ದಿವಸ ಮಾತನಾಡುತ್ತೇನೆ.

Mr. SPEAKER.—The House will now rise to meet again to-morrow at 12 Noon.

The House adjourned at Five Minutes past Seven of the Clock to mee again at 12 *Noon On Friday, the 22nd March* 1963.

WD 384—GPB—900—28-8-63